f prajavani.net prajavani
ಮಂಗಳವಾರ, ಏಪ್ರಿಲ್ 28, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 117 | ಪುಟ 14
www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 77,303 | ನಿಫ್ಟಿ 24,092 | $/₹ 94.15

**ವೋಲ್ವಾರ್ಟ್ ಮಿಂಚು**



ನಾಯಕಿ ಲಾರಾ ವೋಲ್ವಾರ್ಟ್ (ಔಟಾಗದೇ 92;56ಎ) ಅವರ ಬ್ಯಾಟಿಂಗ್ ನೆರವಿನಿಂದ ದಕ್ಷಿಣ ಆಫ್ರಿಕಾ ಮಹಿಳಾ ತಂಡವು ಸೋಮವಾರ ಭಾರತ ವಿರುದ್ಧದ ಟಿ20 ಪಂದ್ಯದಲ್ಲಿ 23 ರನ್‌ಗಳ ಗೆಲುವು ದಾಖಲಿಸಿತು

# ನಿರ್ಬಂಧ ತೆರವಿಗಾಗಿ ಪಟ್ಟು

## ಅಣ್ವಸ್ತ್ರ ಕಾರ್ಯಕ್ರಮ ಕುರಿತು ಒಪ್ಪಂದ ಇಲ್ಲ ● ಹೊರ್ಮುಜ್ ತೆರವಿಗೆ ಸಿದ್ಧ–ಇರಾನ್

ಪ್ರಜಾವಾಣಿ ವಾರ್ತೆ/ಎಪಿ/ಎಎಫ್‌ಪಿ

**ಕೈರೊ/ಟೆಹರಾನ್:** ಅಮೆರಿಕ ತನ್ನ ಮೇಲೆ ವಿಧಿಸಿರುವ ನಿರ್ಬಂಧವನ್ನು ತೆರವುಗೊಳಿಸಬೇಕು ಹಾಗೂ ತನ್ನ ವಿರುದ್ಧ ನಡೆಸುತ್ತಿರುವ ಯುದ್ಧವನ್ನು ನಿಲ್ಲಿಸಬೇಕು. ಆಗ, ಅದಕ್ಕೆ ಪ್ರತಿಯಾಗಿ ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವುದಾಗಿ ಇರಾನ್ ಪ್ರಸ್ತಾವ ಮುಂದಿಟ್ಟಿದೆ.

ಈ ಬೇಡಿಕೆಗಳು ಈಡೇರಿದ ಬಳಿಕ, ಅಣ್ವಸ್ತ್ರ ಕಾರ್ಯಕ್ರಮ ಕುರಿತು ಚರ್ಚೆ ನಡೆಸಲಾಗುವುದು ಎಂಬ ಅಂಶವನ್ನು ಸಹ ಇರಾನ್ ಮುಂದಿಟ್ಟಿರುವ ಪ್ರಸ್ತಾವ ಒಳಗೊಂಡಿದೆ ಎಂದು ಈ ಬೆಳವಣಿಗೆಗಳ ಕುರಿತು ಮಾಹಿತಿ ಇರುವ ಇಬ್ಬರು ಪ್ರಾದೇಶಿಕ ಅಧಿಕಾರಿಗಳು ಹೇಳಿದ್ದಾರೆ.

ಇರಾನ್‌ನ ಈ ಪ್ರಸ್ತಾವವನ್ನು ಅಮೆರಿಕ ಒಪ್ಪುವ ಸಾಧ್ಯತೆ ಕಡಿಮೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

**'ಅಮೆರಿಕ ಕಾರಣ':** ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಫ್ಚಿ ಅವರು ಸೋಮವಾರ ರಷ್ಯಾಕ್ಕೆ ಭೇಟಿ ನೀಡಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವಿನ ಬಿಕ್ಕಟ್ಟು ಕದನ ವಿರಾಮದ ಹೊರತಾಗಿಯೂ ಮುಂದುವರಿದಿದೆ. ಉಭಯ ದೇಶಗಳ ನಡುವೆ ಸ್ಥಗಿತಗೊಂಡಿರುವ ಮಾತುಕತೆಗೆ ಮರುಜೀವ ನೀಡಲು ಪಾಕಿಸ್ತಾನ ನಾಯಕರು ಪ್ರಯತ್ನಿಸುತ್ತಿದ್ದಾರೆ. ಪಾಕಿಸ್ತಾನ, ಒಮಾನ್ ಬಳಿಕ ರಷ್ಯಾಕ್ಕೆ ಅಬ್ಬಾಸ್ ಅರಾಫ್ಚಿ ಭೇಟಿ ನೀಡಿದ್ದು, ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೆ ಮಾತುಕತೆ ನಡೆಸಿದರು.

▶10

### ದಿನದ ಬೆಳವಣಿಗೆ

- ಇರಾನಿನ ಕಚ್ಚಾ ತೈಲ ಖರೀದಿಸಿದ್ದಕ್ಕಾಗಿ ತನ್ನ ಸಂಸ್ಕರಣಾಗಾರವೊಂದರ ಮೇಲೆ ಅಮೆರಿಕ ಹೇರಿದ ನಿರ್ಬಂಧಕ್ಕೆ ಚೀನಾ ಆಕ್ಷೇಪ ವ್ಯಕ್ತಪಡಿಸಿದೆ
- ದಕ್ಷಿಣ ಲೆಬನಾನ್‌ನಲ್ಲಿ ಯುದ್ಧದ ಸಮಯದಲ್ಲಿ ತನ್ನ ಯೋಧ ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಸೇನೆ ತಿಳಿಸಿದೆ

> **ಹೊರ್ಮುಜ್ ಜಲಸಂಧಿ ಮೂಲಕ ಕಚ್ಚಾ ತೈಲ ಹೊತ್ತ ಹಡಗುಗಳ ಸುರಕ್ಷಿತ ಸಂಚಾರ ಸಾಧ್ಯವಾಗಬೇಕು. ಇದು ಪ್ರಮುಖ ಜಾಗತಿಕ ವಿಚಾರವಾಗಿದೆ**
>
> **ಅಬ್ಬಾಸ್ ಅರಾಫ್ಚಿ**, ಇರಾನ್ ವಿದೇಶಾಂಗ ಸಚಿವ



ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ವ್ಲಾದಿಮಿರ್ ಪುಟಿನ್ ಹಾಗೂ ಅಬ್ಬಾಸ್ ಅರಾಫ್ಚಿ ಅವರು ಸೋಮವಾರ ಮಾತುಕತೆ ನಡೆಸಿದರು —ಎಎಫ್‌ಪಿ ಚಿತ್ರ

### ಭಾರತೀಯರಿದ್ದ ಹಡಗಿನತ್ತ ಗುಂಡು

**ನವದೆಹಲಿ:** 'ಹೊರ್ಮುಜ್ ಜಲಸಂಧಿಯ ಆಗ್ನೇಯ ಭಾಗದಲ್ಲಿ ಸಾಗುತ್ತಿದ್ದ ಟೋಗೊ ಬಾವುಟವಿರುವ ತೈಲ ಹೊತ್ತ ಟ್ಯಾಂಕರ್ ಎಂ.ಟಿ ಚಿರಾನ್–7 ಅನ್ನು ಗುರಿಯಾಗಿಸಿ ಏಪ್ರಿಲ್ 25ರಂದು ಇರಾನ್ ಕೋಸ್ಟ್ ಗಾರ್ಡ್ ದಾಳಿ ನಡೆಸಿದೆ. ಈ ಹಡಗಿನಲ್ಲಿ 17 ಜನ ಭಾರತೀಯರಿದ್ದು, ಎಲ್ಲರೂ ಸುರಕ್ಷಿತವಾಗಿದ್ದಾರೆ' ಎಂದು ಬಂದರು ಹಾಗೂ ಜಲಮಾರ್ಗಗಳ ಸಚಿವಾಲಯದ ನಿರ್ದೇಶಕ ಮನ್‌ದೀಪ್ ಸಿಂಗ್ ರಂಧಾವಾ ಸೋಮವಾರ ಹೇಳಿದ್ದಾರೆ.

'ಬಂದರು ಮತ್ತು ಜಲಮಾರ್ಗಗಳ ಸಚಿವಾಲಯವು ವಿದೇಶಾಂಗ ಸಚಿವಾಲಯ, ವಿವಿಧ ದೇಶಗಳಲ್ಲಿನ ಭಾರತದ ರಾಯಭಾರ ಕಚೇರಿಗಳು ಹಾಗೂ ಸಾಗರಯಾನ ಸಂಸ್ಥೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ. ವಿವಿಧ ಹಡಗುಗಳಲ್ಲಿನ ಭಾರತೀಯ ಸಿಬ್ಬಂದಿಯ ಸುರಕ್ಷತೆಯನ್ನು ಖಾತ್ರಿಪಡಿಸುತ್ತಿದೆ' ಎಂದು ಅವರು ತಿಳಿಸಿದ್ದಾರೆ.

'ಕಳೆದ 24 ಗಂಟೆಗಳಲ್ಲಿ, ಭಾರತೀಯರನ್ನು ಒಳಗೊಂಡ ಅಹಿತಕರ ಘಟನೆಗಳು ನಡೆದ ವರದಿಗಳು ಇಲ್ಲ' ಎಂದು ಅವರು ಹೇಳಿದ್ದಾರೆ.

## ಸಬ್ ರಿಜಿಸ್ಟ್ರಾರ್ ವರ್ಗಾವಣೆಗೆ ಕೌನ್ಸೆಲಿಂಗ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉಪ ನೋಂದಣಾಧಿಕಾರಿಗಳ (ಸಬ್ ರಿಜಿಸ್ಟ್ರಾರ್) ವರ್ಗಾವಣೆಯನ್ನು ಕೌನ್ಸೆಲಿಂಗ್ ವ್ಯವಸ್ಥೆಯಡಿ ತರಲು ರಾಜ್ಯ ಸರ್ಕಾರ ಮುಂದಾಗಿದೆ. ಇದಕ್ಕಾಗಿ, ಕರಡು ನಿಯಮ ರೂಪಿಸಿದೆ.

ವಿವಿಧ ಪ್ರಕರಣಗಳು ಅಥವಾ ಆರೋಪ ಎದುರಿಸುತ್ತಿರುವ 'ಕಳಂಕಿತ' ಅಧಿಕಾರಿಗಳಿಗೆ ಬೆಂಗಳೂರಿನಂತಹ 'ಭಾರಿ ಮೌಲ್ಯ'ದ ಕಚೇರಿಗಳಿಗೆ ಬರಲು ಅವಕಾಶ ನೀಡದಿರುವ ಕ್ರಮವನ್ನೂ ಕರಡು ನಿಯಮ ಒಳಗೊಂಡಿದೆ. ಹೊಸ ನಿಯಮದ ಮೂಲಕ ಉಪ ನೋಂದಣಾಧಿಕಾರಿಗಳ ವರ್ಗಾವಣೆ ಪ್ರಕ್ರಿಯೆ ಸಾಂಸ್ಥೀಕರಣಗೊಳ್ಳಲಿದೆ. ಅಪಾರ ಹಣ ತೆತ್ತು, ಬೆಂಗಳೂರಿನಂತಹ ಹೆಚ್ಚು ನೋಂದಣಿ ಮತ್ತು ಮುದ್ರಾಂಕ ಶುಲ್ಕ ಸಂಗ್ರಹವಾಗುವ ಊರುಗಳಲ್ಲಿ ವರ್ಷಗಟ್ಟಲೆ ಬೀಡು ಬಿಡಲು ಇನ್ನು ಸಾಧ್ಯವಿಲ್ಲ.

▶10

# ಉಗ್ರ ಶಾರೀಕ್‌ಗೆ 10 ವರ್ಷ ಜೈಲು

## ಮಂಗಳೂರಿನಲ್ಲಿ ನಡೆದಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ನಡೆದಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಅಪರಾಧಿ ಮೊಹಮ್ಮದ್ ಶಾರೀಕ್‌ಗೆ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯವು 10 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹94 ಸಾವಿರ ದಂಡ ವಿಧಿಸಿ ಸೋಮವಾರ ಆದೇಶಿಸಿದೆ.



ಮೊಹಮ್ಮದ್ ಶಾರೀಕ್

ಮೊಹಮ್ಮದ್ ಶಾರೀಕ್ ಈ ಹಿಂದೆ ಸಲ್ಲಿಸಿದ್ದ ತಪ್ಪೊಪ್ಪಿಗೆ ಅರ್ಜಿಯನ್ನು ಎನ್‌ಐಎ ವಿಶೇಷ ನ್ಯಾಯಾಲಯವು ಮಾರ್ಚ್ 28ರಂದು ಮಾನ್ಯ ಮಾಡಿತ್ತು. ಶಿಕ್ಷೆಯ ಪ್ರಮಾಣವನ್ನು ಶೀಘ್ರದಲ್ಲೇ ಪ್ರಕಟಿಸುವುದಾಗಿ ಹೇಳಿದ್ದ ನ್ಯಾಯಾಧೀಶರು, ಆದೇಶವನ್ನು ಕಾಯ್ದಿರಿಸಿದ್ದರು. ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಹಾಗೂ ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ಶಿಕ್ಷೆ ವಿಧಿಸಿ ಆದೇಶಿಸಲಾಗಿದೆ. 16 ಆರೋಪಗಳಲ್ಲಿ ಶಾರೀಕ್, ಅಪರಾಧಿ ಎಂದು ನ್ಯಾಯಾಲಯ ಹೇಳಿದೆ.

ಶಾರೀಕ್ ಈಗಾಗಲೇ ಮೂರೂವರೆ ವರ್ಷ ಸಜೆ ಅನುಭವಿಸಿದ್ದಾನೆ. ಉಳಿದ ಆರು ವರ್ಷ, ಆರು ತಿಂಗಳು ಜೈಲಿನಲ್ಲಿ ಇರಬೇಕಿದೆ. ಪ್ರಕರಣದ ಎರಡನೇ ಆರೋಪಿ ಸೈಯದ್ ಯಾಸೀನ್‌ನನ್ನು ಬಾಂಬ್ ತಯಾರಿಕೆಗೆ ಅಗತ್ಯ ಸಾಮಗ್ರಿ ಪೂರೈಸಿದ್ದ ಆರೋಪದಡಿ ಬಂಧಿಸಲಾಗಿದೆ.

▶7

### ಐಎಸ್ ನಂಟು: ತನಿಖೆಯಿಂದ ಪತ್ತೆ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಶಾರೀಕ್, ಐಎಸ್ ಹಾಗೂ ಸಿಮಿ ಉಗ್ರ ಸಂಘಟನೆಗಳಿಂದ ಪ್ರೇರಿತನಾಗಿದ್ದ. ಐಎಸ್ ಮಾಡ್ಯುಲ್ ಸದಸ್ಯನಾಗಿದ್ದ. 2020ರಲ್ಲಿ ಮಂಗಳೂರಿನ ಗೋಡೆ ಬರಹ ಹಾಗೂ ಶಿವಮೊಗ್ಗದ ತುಂಗಾ ನದಿ ತೀರದಲ್ಲಿ ನಡೆಸಿದ್ದ ಪ್ರಾಯೋಗಿಕ ಬಾಂಬ್ ಸ್ಫೋಟ ಪ್ರಕರಣಗಳಲ್ಲೂ ಶಾರೀಕ್ ಭಾಗಿಯಾಗಿದ್ದ ಎಂಬುದು ಎನ್‌ಐಎ ತನಿಖೆಯಿಂದ ಪತ್ತೆಯಾಗಿತ್ತು.

ಧರ್ಮಸ್ಥಳ, ಕದ್ರಿ ಮಂಜುನಾಥ ದೇವಾಲಯ ಸೇರಿದಂತೆ ದಕ್ಷಿಣ ಭಾರತದ ದೇವಾಲಯಗಳಲ್ಲಿ ಬಾಂಬ್ ಸ್ಫೋಟಗೊಳಿಸುವುದಕ್ಕೆ ಇಬ್ಬರು ಸಂಚು ರೂಪಿಸಿದ್ದರು. ಕುಕ್ಕರ್‌ನಲ್ಲಿ ಸುಧಾರಿತ ಸ್ಫೋಟಕ ಸಾಧನಗಳನ್ನು ಇಟ್ಟು ದುಷ್ಕೃತ್ಯ ಎಸಗಲು ಮುಂದಾಗಿದ್ದರು. ಆದರೆ, 90 ನಿಮಿಷಗಳ ಬದಲು 9 ನಿಮಿಷಕ್ಕೆ ತಪ್ಪಾಗಿ ಸಮಯ ನಿಗದಿ ಪಡಿಸಿದ್ದರಿಂದ ಆಟೊದಲ್ಲಿ ತೆರಳುವಾಗಲೇ ಬಾಂಬ್ ಸ್ಫೋಟಗೊಂಡಿತ್ತು ಎಂಬುದು ಎನ್‌ಐಎ ತನಿಖೆಯಿಂದ ಗೊತ್ತಾಗಿತ್ತು.

### ಚಿನಕುರುಳಿ — ಪ್ರಕಾಶ್ ಶೆಟ್ಟಿ




# ಭುವಿ, ಜೋಶ್ ಬಿರುಗಾಳಿ



**3-0-5-3** ಭುವನೇಶ್ವರ್ ಕುಮಾರ್

**ನವದೆಹಲಿ:** ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗಿಗಳಾದ ಭುವನೇಶ್ವರ್ ಕುಮಾರ್ ಮತ್ತು ಜೋಶ್ ಹೇಝಲ್‌ವುಡ್ ಅವರು ಸೋಮವಾರ ದೆಹಲಿಯಲ್ಲಿ ಬಿರುಗಾಳಿ ಎಬ್ಬಿಸಿದರು. ಅವರಿಬ್ಬರ ಬಿಗುದಾಳಿಗೆ ಡೆಲ್ಲಿ ಕ್ಯಾಪಿಟಲ್ಸ್ ಬ್ಯಾಟರ್‌ಗಳು ಅಕ್ಷರಶಃ ಪೆವಿಲಿಯನ್ ಪರೇಡ್ ನಡೆಸಿದರು. ಆತಿಥೇಯ ತಂಡವು 16.3 ಓವರ್‌ಗಳಲ್ಲಿ 75 ರನ್‌ಗಳಿಗೆ ಕುಸಿಯಿತು. ಆರ್‌ಸಿಬಿ ತಂಡವು 9 ವಿಕೆಟ್‌ಗಳ ಸುಲಭ ಗೆಲುವು ದಾಖಲಿಸಿತು.



**3.3-0-12-4** ಜೋಶ್ ಹೇಝಲ್‌ವುಡ್

**ಸ್ಕೋರ್**
**75** (16.3 ಓವರ್) ಡೆಲ್ಲಿ ಕ್ಯಾಪಿಟಲ್ಸ್
**1** ವಿಕೆಟ್‌ಗೆ **77** (6.3 ಓವರ್) ರಾಯಲ್ ಚಾಲೆಂಜರ್ಸ್ ಬೆಂಗಳೂರು

**ಫಲಿತಾಂಶ**
ಆರ್‌ಸಿಬಿ ತಂಡಕ್ಕೆ **9** ವಿಕೆಟ್‌ಗಳ ಗೆಲುವು

## ಜಮ್ನಾಲಾಲ್ ಬಜಾಜ್ ಟ್ರಸ್ಟ್ ಮೇಲ್ಮನವಿ ವಜಾಗೊಳಿಸಿದ ಸುಪ್ರೀಂ ಕೋರ್ಟ್

# ಎಪಿಎಂಸಿಗೆ ಭೂಮಿ: ಮಧ್ಯಪ್ರವೇಶ ಇಲ್ಲ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ವತಿಯಿಂದ ಬೆಂಗಳೂರಿನ ಮಾಗಡಿ ಮುಖ್ಯ ರಸ್ತೆಯಲ್ಲಿ 'ಮೆಗಾ ಕೃಷಿ ಮಾರುಕಟ್ಟೆ' ನಿರ್ಮಾಣಕ್ಕಾಗಿ 272 ಎಕರೆಯನ್ನು ಸ್ವಾಧೀನಪಡಿಸಿಕೊಂಡಿದ್ದ ಪ್ರಕರಣದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಜಾಗ ಸ್ವಾಧೀನಪಡಿಸಿಕೊಂಡಿದ್ದ ಕರ್ನಾಟಕ ಸರ್ಕಾರದ ಕ್ರಮವನ್ನು ಹೈಕೋರ್ಟ್ ಜನವರಿಯಲ್ಲಿ ಎತ್ತಿ ಹಿಡಿದಿತ್ತು. ಈ ಆದೇಶವನ್ನು ಪ್ರಶ್ನಿಸಿ ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಹಾಗೂ ಉಜ್ಜಲ್ ಭುಯಾನ್ ಅವರ ಪೀಠವು ವಜಾಗೊಳಿಸಿತು. 'ಹೈಕೋರ್ಟ್ ಆದೇಶದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ' ಎಂದು ಪೀಠ ಸ್ಪಷ್ಟಪಡಿಸಿತು.

'ಸಾರ್ವಜನಿಕ ಧರ್ಮಾರ್ಥಕ್ಕಾಗಿ ರೂಪುಗೊಂಡ ಟ್ರಸ್ಟ್‌ಗಳ ವಶದಲ್ಲಿರುವ ಜಮೀನನ್ನು ಸರ್ಕಾರ ವಶಪಡಿಸಿಕೊಳ್ಳಬಾರದು' ಎಂದು ಅರ್ಜಿದಾರರ ಪರ ಹಿರಿಯ ವಕೀಲ ಚಂದರ್ ಉದಯ್ ಸಿಂಗ್ ವಾದಿಸಿದರು. ರಾಜ್ಯ ಸರ್ಕಾರದ ಪರವಾಗಿ ಹಿರಿಯ ವಕೀಲರಾದ ಅಭಿಷೇಕ್ ಮನು ಸಿಂಘ್ವಿ, ಶ್ಯಾಮ್ ದಿವಾನ್ ವಾದಿಸಿದರು.

'ರಾಜ್ಯ ಸರ್ಕಾರವು ಮೆಗಾ ಕೃಷಿ ಮಾರುಕಟ್ಟೆ ನಿರ್ಮಾಣದ ಉದ್ದೇಶಕ್ಕಾಗಿ ಈ ಪ್ರದೇಶವನ್ನು ವಶಕ್ಕೆ ಪಡೆದಿದೆ. ಇದರಿಂದ ಕೃಷಿ ಮತ್ತು ಕೃಷಿಕರಿಗೆ ಉಪಯೋಗವಾಗಲಿದೆ. ಅಂತೆಯೇ, ರಾಜ್ಯ ಸರ್ಕಾರದ ಈ ಸಂವಿಧಾನಕ್ಕೆ ಪೂರಕವಾಗಿದೆ' ಹೈಕೋರ್ಟ್ ತೀರ್ಪಿನಲ್ಲಿ ತಿಳಿಸಿತ್ತು.



ಮಾಗಡಿ ಮುಖ್ಯ ರಸ್ತೆಯ ಶ್ರೀಗಂಧ ಕಾವಲ್‌ನಲ್ಲಿ 172 ಎಕರೆ 22 ಗುಂಟೆ, ಹೇರೋಹಳ್ಳಿಯ ಎರಡು ಪ್ರದೇಶಗಳಲ್ಲಿ ಕ್ರಮವಾಗಿ 104 ಎಕರೆ 5 ಗುಂಟೆ ಹಾಗೂ 3 ಎಕರೆ 34 ಗುಂಟೆ ಜಮೀನನ್ನು ಸ್ವಾಧೀನಕ್ಕೆ ಪಡೆಯಲು ಕಂದಾಯ ಇಲಾಖೆಯ ಕಾರ್ಯದರ್ಶಿ ಮತ್ತು ಬೆಂಗಳೂರು ಜಿಲ್ಲಾಧಿಕಾರಿ 1999ರ ಏ.13ರಂದು ಅಧಿಸೂಚನೆ ಹೊರಡಿಸಿದ್ದರು. ಈ ಅಧಿಸೂಚನೆ ರದ್ದುಪಡಿಸಬೇಕು ಎಂದು ಕೋರಿ ಅರ್ಜಿದಾರರು ಕೋರ್ಟ್ ಮೆಟ್ಟಿಲೇರಿದ್ದರು. ಇನ್ನೊಂದೆಡೆ, 'ಭೂ ಸುಧಾರಣಾ ಕಾಯ್ದೆಯ ಮಿತಿಗಿಂತಲೂ ಟ್ರಸ್ಟ್ ಹೆಚ್ಚುವರಿ ಜಮೀನು ಹೊಂದಿದೆ. ಇದನ್ನು ಸರ್ಕಾರಕ್ಕೆ ಮರಳಿಸಬೇಕು' ಎಂದು ಭೂ ನ್ಯಾಯಮಂಡಳಿ 2010ರಲ್ಲಿ ಆದೇಶಿಸಿತ್ತು. ಇದನ್ನು ಹೈಕೋರ್ಟ್‌ನಲ್ಲಿ ಟ್ರಸ್ಟ್ ಪ್ರಶ್ನಿಸಿತ್ತು. ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠವು, 'ಉಪವಿಭಾಗಾಧಿಕಾರಿ ಅಧ್ಯಕ್ಷತೆಯ ಭೂ ನ್ಯಾಯ ಮಂಡಳಿಯೇ ಪ್ರಕರಣದ ವಿಚಾರಣೆ ನಡೆಸಿ ಆದೇಶ ನೀಡಬೇಕು' ಎಂದು 2014ರ ಮಾ. 3ರಂದು ಆದೇಶಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ್ದ ಭೂ ನ್ಯಾಯಮಂಡಳಿ, 'ಕಾಯ್ದೆಯ ಮಿತಿಗಿಂತ 354 ಎಕರೆ ಹೆಚ್ಚುವರಿ ಜಮೀನನ್ನು ಟ್ರಸ್ಟ್ ಹೊಂದಿದೆ. ಇದನ್ನು ಸರ್ಕಾರ ಮರಳಿ ತನ್ನ ವಶಕ್ಕೆ ಪಡೆಯಬೇಕು' ಎಂದು 2017ರ ನವೆಂಬರ್ 28ರಂದು ನಿರ್ದೇಶಿಸಿತ್ತು. ಇದನ್ನು ಪ್ರಶ್ನಿಸಿ ಟ್ರಸ್ಟ್ ಪುನಃ ಹೈಕೋರ್ಟ್ ಮೆಟ್ಟಿಲೇರಿತ್ತು. ಈ ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ಭೂ ನ್ಯಾಯಮಂಡಳಿಯ ಆದೇಶ ರದ್ದುಪಡಿಸಿ 2021ರ ಜೂನ್ 30ರಂದು ತೀರ್ಪು ನೀಡಿತ್ತು.

### ಮುಖ್ಯಾಂಶಗಳು

- ಮೆಗಾ ಕೃಷಿ ಮಾರುಕಟ್ಟೆ' ನಿರ್ಮಾಣಕ್ಕಾಗಿ 272 ಎಕರೆ ಸ್ವಾಧೀನ
- ಕರ್ನಾಟಕ ಸರ್ಕಾರದ ಕ್ರಮ ಎತ್ತಿ ಹಿಡಿದಿದ್ದ ಹೈಕೋರ್ಟ್

# ಉಮರ್ ಖಾಲಿದ್ ಕುರಿತ ಪುಸ್ತಕ ಬಿಡುಗಡೆಗೆ ವಿರೋಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನವದೆಹಲಿಯಲ್ಲಿ 2020ರಲ್ಲಿ ನಡೆದ ದಂಗೆ ಪ್ರಕರಣದಲ್ಲಿ ಯುಎಪಿಎ ಕಾಯ್ದೆಯಡಿ ತಿಹಾರ್ ಜೈಲಿನಲ್ಲಿರುವ ಉಮರ್ ಖಾಲಿದ್ ಕುರಿತ ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಬಾರದು' ಎಂದು ಬಿಜೆಪಿ ಸಂಸದ ಪಿ.ಸಿ. ಮೋಹನ್ ಒತ್ತಾಯಿಸಿದ್ದಾರೆ.

ಈ ಕುರಿತು ಅವರು ಬೆಂಗಳೂರು ನಗರ ಪೊಲೀಸ್ ಕಮಿಷನರ್‌ಗೆ ಮನವಿ ಪತ್ರ ಸಲ್ಲಿಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಉಮರ್ ಖಾಲಿದ್ ನವದೆಹಲಿಯಲ್ಲಿ ದಂಗೆ ಎಬ್ಬಿಸಿದ ಪ್ರಮುಖ ಆಪಾದಿತ. ಅಂದು ನಡೆದ ಸ್ಫೋಟದಲ್ಲಿ ಸಾಕಷ್ಟು ಜನರು ಪ್ರಾಣ ಕಳೆದುಕೊಂಡಿದ್ದರು. ಆಸ್ತಿ–ಪಾಸ್ತಿಗೆ ಹಾನಿಯಾಗಿತ್ತು. ಇಂದಿಗೂ ಜೈಲು ಶಿಕ್ಷೆ ಅನುಭವಿಸುತ್ತಿರುವ ಆರೋಪಿಯನ್ನು ಬೆಂಗಳೂರಿಗೆ ಕರೆಯಿಸಿ ವೈಭವೀಕರಿಸುವ ಅಗತ್ಯವೇನು' ಎಂದು ಅವರು ಪ್ರಶ್ನಿಸಿದರು.

'ಕಾರ್ಯಕ್ರಮದ ಆಯೋಜಕರು ಪಾಕಿಸ್ತಾನದ ಭಯೋತ್ಪಾದಕ ಕಸಬ್ ಮತ್ತು ಸಂಸತ್ತಿನ ಮೇಲೆ ದಾಳಿ ನಡೆಸಿದವರನ್ನು ವೈಭವೀಕರಿಸುವ ಕೆಲಸ ಮಾಡುತ್ತಿದ್ದಾರೆ. ಬೇರೆ ರಾಜ್ಯಗಳಲ್ಲಿ ಇಂತಹ ಕಾರ್ಯಕ್ರಮಕ್ಕೆ ಅನುಮತಿ ಸಿಗುವುದಿಲ್ಲ. ಆದರೆ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವು ಇಂತಹ ಭಯೋತ್ಪಾದಕರ ಬಗ್ಗೆ ಮೃದು ಧೋರಣೆ ಹೊಂದಿದೆ. ಆದ್ದರಿಂದಲೇ ಇಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ದೂರಿದರು.

'ಗಾಂಧಿನಗರದ ಗೋಡೆಗಳ ಮೇಲೆ ಬರಹಗಳನ್ನು ಬರೆದಿದ್ದಾರೆ. ಸರ್ಕಾರ ಇಂತಹದ್ದಕ್ಕೆಲ್ಲ ಅವಕಾಶ ನೀಡಬಾರದು. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಜರುಗಿಸಬೇಕು' ಎಂದು ಪಿ.ಸಿ.ಮೋಹನ್ ಆಗ್ರಹಿಸಿದರು.

# ಸ್ಕಾಡಾ ಕೇಂದ್ರ ಉದ್ಘಾಟನೆಗೆ ಸಜ್ಜು

## ಜಲಮಂಡಳಿ ಅಧ್ಯಕ್ಷರಿಂದ ಪರಿಶೀಲನೆ, ಶೀಘ್ರ ಚಾಲನೆ ನೀಡಲಿರುವ ಡಿಸಿಎಂ



ಬೆಂಗಳೂರು ಜಲಮಂಡಳಿ ಜೈಕಾ ನೆರವಿನೊಂದಿಗೆ ರೂಪಿಸಿರುವ ಸ್ಕಾಡಾ ಕೇಂದ್ರವನ್ನು ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್ ವೀಕ್ಷಿಸಿದರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾವೇರಿ 5ನೇ ಹಂತದ ಯೋಜನೆಯ ಪ್ರಮುಖ ಭಾಗವಾಗಿ ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯ(ಜೈಕಾ) ಆರ್ಥಿಕ ನೆರವಿನೊಂದಿಗೆ ಅನುಷ್ಠಾನಗೊಳ್ಳುತ್ತಿರುವ ಅತ್ಯಾಧುನಿಕ 'ಸಮಗ್ರ ಜಲ ಮತ್ತು ಒಳಚರಂಡಿ ನಿರ್ವಹಣಾ ಕೇಂದ್ರ'ವು (ಸ್ಕಾಡಾ) ಉದ್ಘಾಟನೆಗೆ ಸಿದ್ಧವಾಗುತ್ತಿದೆ.

ಜಯನಗರದ ಶಿಂಷಾ ಭವನದಲ್ಲಿ ಸ್ಥಾಪಿಸಲಾಗಿರುವ ಈ ಕಮಾಂಡ್ ಸೆಂಟರ್ ಏಷ್ಯಾದ ಅತಿದೊಡ್ಡ ಕೇಂದ್ರಗಳಲ್ಲಿ ಒಂದಾಗಿದೆ. ಇಡೀ ನಗರದ ಕುಡಿಯುವ ನೀರು ಮತ್ತು ಒಳಚರಂಡಿ ಜಾಲ ಎರಡನ್ನೂ ಒಂದೇ ಸೂರಿನಡಿ ನಿರ್ವಹಿಸುವ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದೆ.

ಬೆಂಗಳೂರು ಸುತ್ತಮುತ್ತಲಿನ 110 ಹಳ್ಳಿಗಳಿಗೆ 775 ಎಂಎಲ್‌ಡಿ ನೀರು ಪೂರೈಸುವ ಸಮಗ್ರ ಕುಡಿಯುವ ನೀರು ಮತ್ತು ಒಳಚರಂಡಿ ಜಾಲದ ಮೇಲೆ ಕಣ್ಗಾವಲಿಟ್ಟು ಇದು ನಿರ್ವಹಣೆ ಮಾಡಲಿದೆ.

> ಸಂಪೂರ್ಣ ಪಾರದರ್ಶಕತೆ ಹಾಗೂ ಅತ್ಯುನ್ನತ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಸ್ಕಾಡಾ ಕೇಂದ್ರವು ಬೆಂಗಳೂರು ಜಲ ಹಾಗೂ ಒಳಚರಂಡಿ ನಿರ್ವಹಣೆಯಲ್ಲಿ ಹೊಸ ಕ್ರಾಂತಿಯನ್ನೇ ಸೃಷ್ಟಿಸಲಿದೆ
>
> **ಡಾ.ರಾಮಪ್ರಸಾತ್ ಮನೋಹರ್,** ಅಧ್ಯಕ್ಷರು, ಜಲಮಂಡಳಿ

ಟಿ.ಕೆ.ಹಳ್ಳಿ, ಹಾರೋಹಳ್ಳಿ, ತಾತಗುಣಿ ಜಲಶುದ್ಧೀಕರಣ ಘಟಕ, ನಗರದಲ್ಲಿನ ನೆಲಮಟ್ಟದ ಎಲ್ಲ ಜಲಾಗಾರಗಳನ್ನು ಈ ಕಮಾಂಡ್ ಸೆಂಟರ್‌ಗೆ ಜೋಡಿಸಲಾಗಿದೆ. ನೀರು ಪೂರೈಕೆ ಆಗುವಾಗಲೇ ಅದರ ಗುಣಮಟ್ಟವನ್ನು ಇಲ್ಲಿ ಪರೀಕ್ಷಿಸಲಾಗುತ್ತದೆ. ನೀರು ಕಲುಷಿತವಾಗಿದ್ದರೆ ತಕ್ಷಣ ಸಂದೇಶ ರವಾನೆಯಾಗಲಿದೆ.

ಕುಡಿಯುವ ನೀರು ಮಾತ್ರವಲ್ಲದೆ, ನಗರದ ಎಲ್ಲ ಒಳಚರಂಡಿ ನೀರು ಸಂಸ್ಕರಣಾ ಘಟಕಗಳನ್ನು ಈ ಕೇಂದ್ರಕ್ಕೆ ಸಂಯೋಜಿಸಲಾಗಿದೆ. ಸಂಸ್ಕರಿಸಿದ ನೀರು ಎನ್‌ಜಿಟಿ ಮಾನದಂಡದ ಪ್ರಕಾರ ಇದೆಯೇ ಎಂದು ಪರಿಶೀಲಿಸಲಾಗುತ್ತದೆ. ಘಟಕಗಳಲ್ಲಿ ಉತ್ಪತ್ತಿಯಾಗುವ 'ಬಯೋ ಗ್ಯಾಸ್' ಪ್ರಮಾಣವನ್ನು ಮೇಲುಸ್ತುವಾರಿ ಮಾಡಲಾಗುತ್ತದೆ.

'ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಯಾವ ಪ್ರದೇಶದಲ್ಲಿ ಎಷ್ಟು ನೀರಿನ ಬೇಡಿಕೆ ಇದೆ ಎಂಬುದನ್ನು ನಿಖರವಾಗಿ ಅಂದಾಜಿಸಲಾಗುತ್ತದೆ. ಪೈಪ್‌ಲೈನ್‌ಗಳಲ್ಲಿ ನೀರು ಸೋರಿಕೆ ಯಾಗುತ್ತಿದ್ದರೆ ತಕ್ಷಣ ಪತ್ತೆಹಚ್ಚಿ ಪೋಲಾಗುವುದನ್ನು ತಡೆಯ ಬಹುದಾಗಿದೆ. ಭವಿಷ್ಯದಲ್ಲಿ ಇಡೀ ಜಾಲದ ಡಿಜಿಟಲ್ ಟ್ವಿನ್ ರಚನೆಗೆ ಈ ಕೇಂದ್ರವೇ ಅಡಿಪಾಯವಾಗಿದೆ' ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

'ಯಾವುದಾದರೂ ಯಂತ್ರ ಕೆಡುವ ಮುನ್ನವೇ ಎಚ್ಚರಿಕೆ ನೀಡುವ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲಾಗಿದ್ದು, ಇದರಿಂದ ಜಲಮಂಡಳಿಯ ಕಾರ್ಯಾಚರಣೆಯ ಆರ್ಥಿಕ ಹೊರೆ ಹಾಗೂ ವಿದ್ಯುತ್ ವೆಚ್ಚ ಉಳಿತಾಯವಾಗಲಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶೀಘ್ರದಲ್ಲೇ ಈ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ' ಎಂದು ಹೇಳಿದ್ದಾರೆ.







# ಪರೀಕ್ಷಾ ಕೇಂದ್ರಕ್ಕೆ ನಿಷೇಧ: ಶಿಫಾರಸು

ಜನಿವಾರ ವಿವಾದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಿಇಟಿ ಕೇಂದ್ರಕ್ಕೆ ಬಂದಿದ್ದ ಕೆಲವು ಅಭ್ಯರ್ಥಿಗಳ ಜನಿವಾರವನ್ನು ತೆಗೆಸಿದ್ದು ದೃಢಪಟ್ಟಿದ್ದು, ಕೋರಮಂಗಲದ ಕೃಪಾನಿಧಿ ಪದವಿಪೂರ್ವ ಕಾಲೇಜಿನಲ್ಲಿ ಭವಿಷ್ಯದ ಯಾವುದೇ ಪರೀಕ್ಷೆಗಳನ್ನು ನಡೆಸಲು ಅವಕಾಶ ನೀಡಬಾರದು ಎಂದು ಬೆಂಗಳೂರು ನಗರ ಜಿಲ್ಲಾಡಳಿತ ಸರ್ಕಾರಕ್ಕೆ ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಶಿಫಾರಸು ಮಾಡಿದೆ.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸಲು ಏ.23 ಮತ್ತು 24ರಂದು ಸಿಇಟಿ ನಡೆದಿತ್ತು. ಮೊದಲ ದಿನ ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ಪರೀಕ್ಷೆ ಬರೆಯಲು ಕೃಪಾನಿಧಿ ಕಾಲೇಜಿಗೆ ಬಂದಿದ್ದವರನ್ನು ಪ್ರವೇಶದ್ವಾರದಲ್ಲಿ ತಪಾಸಣೆ ನಡೆಸಿದ್ದ ಸಿಬ್ಬಂದಿ ಜನಿವಾರವನ್ನು ತೆಗೆಸಿದ್ದಾರೆ ಎಂದು ಕೆಲ ವಿದ್ಯಾರ್ಥಿಗಳು ಆರೋಪಿಸಿದ್ದರು. ಈ ಕುರಿತು ಅವರ ಪೋಷಕರು ಮಡಿವಾಳ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಘಟನೆ ಕುರಿತು ತನಿಖೆ ನಡೆಸಿ, ವರದಿ ನೀಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಪತ್ರ ಬರೆದಿತ್ತು. 'ಜನಿವಾರ ತೆಗೆಸಿದ ಪ್ರಕರಣ ಒಂದು ಸೂಕ್ಷ್ಮ ವಿಚಾರವಾಗಿದೆ. ಇಂತಹ ಯಾವುದೇ ಧಾರ್ಮಿಕ ದಿರಿಸುಗಳನ್ನು ತೆಗೆಸದಂತೆ ಪರೀಕ್ಷಾ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಹಮ್ಮಿಕೊಂಡಿದ್ದ ತರಬೇತಿಯಲ್ಲೇ ಸ್ಪಷ್ಟವಾಗಿ ಹೇಳಲಾಗಿತ್ತು. ಸ್ಪಷ್ಟವಾದ ವಸ್ತ್ರಸಂಹಿತೆಯನ್ನೂ ಬಿಡುಗಡೆ ಮಾಡಿದೆ. ಆದರೂ ಇಂತಹ ಘಟನೆಗಳು ನಡೆದಿದೆ ಎಂದರೆ ಉದ್ದೇಶಪೂರ್ವಕ ಎನ್ನುವ ಅನುಮಾನ ಬರುತ್ತದೆ. ಹಾಗಾಗಿ, ಹಿರಿಯ ಅಧಿಕಾರಿಗಳಿಂದ ತನಿಖೆ ನಡೆಸಿ, ವರದಿ ನೀಡಬೇಕು' ಎಂದು ಪತ್ರದಲ್ಲಿ ಕೋರಿತ್ತು.

ಅದರಂತೆ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು ಬೆಂಗಳೂರು ನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ನಾಲ್ವರ ಸಮಿತಿ ರಚಿಸಿದ್ದರು. ಎರಡು ದಿನಗಳ ಒಳಗೆ ವರದಿ ಸಲ್ಲಿಸಲು ಸೂಚಿಸಿದ್ದರು.

ಘಟನೆಯ ನಂತರ ಕೃಪಾನಿಧಿ ಕಾಲೇಜು ಆಡಳಿತ ಮಂಡಳಿ ಅಮಾನತು ಮಾಡಿರುವ ಕಾಲೇಜಿನ ಡಿ.ಸುಧಾಕರ್, ಆರ್.ಸರಿತಾ ಹಾಗೂ ಗಿರಿಜಮ್ಮ ಅವರು ಕರ್ತವ್ಯಲೋಪ ಎಸಗಿದ್ದಾರೆ. ಕೆಇಎ ವಸ್ತ್ರಸಂಹಿತೆ ನಿಯಮಗಳನ್ನು ಅರ್ಥ ಮಾಡಿಕೊಳ್ಳದೆ ಕೆಇಎ ಹಾಗೂ ಸರ್ಕಾರಕ್ಕೆ ಮುಜುಗರವಾಗುವಂತಹ ಕೆಲಸ ಮಾಡಿದ್ದಾರೆ ಎಂದು ವರದಿ ಹೇಳಿದೆ.

# ಶಿವಮೊಗ್ಗ ಜಿಲ್ಲೆ ವಕೀಲರ ತುರ್ತು ಸಭೆ ಇಂದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆ ಮಾಡಲಾಗುವುದು' ಎಂಬ ಸುದ್ದಿಯ ಹಿನ್ನೆಲೆಯಲ್ಲಿ 'ಶಿವಮೊಗ್ಗ ಜಿಲ್ಲೆಯ ಬೆಂಗಳೂರು ನಿವಾಸಿ ವಕೀಲರ ವೇದಿಕೆ' ಮಂಗಳವಾರ ಸಂಜೆ ತುರ್ತು ಸಭೆ ಕರೆದಿದೆ.

'ಶಿವಮೊಗ್ಗ ಜಿಲ್ಲೆಯನ್ನು ಉದ್ದೇಶಿತ ಮಂಗಳೂರು ಸಂಚಾರಿ ಪೀಠಕ್ಕೆ ಸೇರ್ಪಡೆ ಮಾಡಲಾಗುತ್ತಿದೆ ಎಂಬ ವರದಿಗಳು ಅಘಾತಕಾರಿ. ಈ ಕುರಿತು ಈಗಾಗಲೇ ಎಲ್ಲಡೆ ಚರ್ಚೆ ನಡೆಯುತ್ತಿರುವುದು ಈ ಬಗೆಗಿನ ಕಳವಳವನ್ನು ಮತ್ತಷ್ಟು ಹೆಚ್ಚಿಸಿದೆ' ಎಂದು ವೇದಿಕೆಯ ಸಂಚಾಲಕರೂ ಆದ ವಕೀಲ ಎಂ.ಚಾಮರಾಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಈ ನಿಟ್ಟಿನಲ್ಲಿ ಹೈಕೋರ್ಟ್‌ನ ಪದಾಂಕಿತ ಹಿರಿಯ ವಕೀಲರಾದ ಸುಬ್ರಹ್ಮಣ್ಯ ಜೋಯಿಸ್, ಎಸ್.ದಿವಾಕರ್, ಶ್ರೀರಂಗ ಸುಬ್ಬಣ್ಣ, ಜಿ.ಕೃಷ್ಣಮೂರ್ತಿ, ಕೆ.ಕೆ.ಚೈತನ್ಯ, ಆರ್. ವಿ.ಎಸ್.ನಾಯಕ್ ಸೇರಿದಂತೆ ಇನ್ನಿತರ ಹಿರಿಯ ವಕೀಲರ ಸಮ್ಮುಖದಲ್ಲಿ ಚರ್ಚಿಸಲು ಇದೇ 28ರಂದು (ಮಂಗಳವಾರ) ಸಂಜೆ 4.30ಕ್ಕೆ ಕ್ಯಾಪಿಟಲ್ (ಪರಾಗ್) ಹೋಟೆಲ್‌ನಲ್ಲಿ ತುರ್ತು ಸಭೆ ಕರೆಯಲಾಗಿದೆ. ಆದ್ದರಿಂದ, ಬೆಂಗಳೂರಿನಲ್ಲಿರುವ ಶಿವಮೊಗ್ಗ ಜಿಲ್ಲೆಯ ವಕೀಲರು ಸಭೆಗೆ ಬಂದು ತಮ್ಮ ಸಲಹೆ ಸೂಚನೆ ನೀಡಬೇಕು' ಎಂದು ಅವರು ವಿನಂತಿಸಿದ್ದಾರೆ.

ಸಂಪರ್ಕ ಸಂಖ್ಯೆ: 94482 60350.



# ಸ್ವಾಭಿಮಾನಿ ಪುಸ್ತಕ ಪ್ರಶಸ್ತಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಭಿಮಾನಿ ಕರ್ನಾಟಕ ವೇದಿಕೆ ನೀಡುವ ಸ್ವಾಭಿಮಾನಿ ಪುಸ್ತಕ ಪ್ರಶಸ್ತಿಗೆ 2025ರಲ್ಲಿ ಪ್ರಕಟಗೊಂಡ ವಿವಿಧ ಪ್ರಕಾರದ ಸಾಹಿತ್ಯ ಕೃತಿಗಳನ್ನು ಲೇಖಕರು ಮತ್ತು ಪ್ರಕಾಶಕರಿಂದ ಆಹ್ವಾನಿಸಲಾಗಿದೆ.

ಕಥೆ, ಕಾದಂಬರಿ, ಕವಿತೆ, ಮಕ್ಕಳ ಸಾಹಿತ್ಯ, ನಾಟಕ ಕೃತಿ ಕಳುಹಿಸಲು ಅವಕಾಶವಿದೆ. ಆಯ್ಕೆಯಾದ ನಾಲ್ಕು ಪ್ರಕಾರದ, ನಾಲ್ಕು ಕೃತಿಗಳಿಗೆ ತಲಾ ₹5,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಲಾಗುತ್ತದೆ ಎಂದು ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ತಿಳಿಸಿದ್ದಾರೆ.

ಪುಸ್ತಕದ ಮೂರು ಪ್ರತಿಗಳನ್ನು ಮೇ 30 ರೊಳಗೆ, ದ್ವಾರನಕುಂಟೆ ಪಾತಣ್ಣ, ಅಧ್ಯಕ್ಷರು, ಸ್ವಾಭಿಮಾನಿ ಕರ್ನಾಟಕ ವೇದಿಕೆ, ನಂ.118, ಹೊಂಬೆಳಕು, 5ನೇ ಕ್ರಾಸ್, ಹೆಚ್. ಎಂ.ಟಿ ಲೇಔಟ್, ನಾಗಸಂದ್ರ ಅಂಚೆ, ಬೆಂಗಳೂರು– 560073 ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.ಹೆಚ್ಚಿನ ಮಾಹಿತಿಗೆ ಸಂಪರ್ಕ ಸಂಖ್ಯೆ: 9686073837

# ‘ಎ.ಐ ಶೈಕ್ಷಣಿಕ ದಿಕ್ಸೂಚಿ ಬದಲಾಗಲಿ’

## ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ವಿಶ್ವವಿದ್ಯಾಲಯಗಳು ಬರೀ ಪರೀಕ್ಷೆ ನಡೆಸಿ ಫಲಿತಾಂಶ ನೀಡುವ ಸಂಸ್ಥೆಗಳಾಗದೇ ಜಾಗತಿಕ ಬೇಡಿಕೆಗೆ ಅನುಗುಣವಾಗಿ ಜ್ಞಾನದ ಜತೆಗೆ ನಾವೀನ್ಯ, ಕೌಶಲದ ಶಿಕ್ಷಣಕ್ಕೆ ಒತ್ತು ನೀಡಿ ಭವಿಷ್ಯ ಎದುರಿಸಲು ಶೈಕ್ಷಣಿಕ ದಿಕ್ಸೂಚಿ ರೂಪಿಸಿಕೊಳ್ಳಬೇಕು’ ಎಂದು ಯೋಜನಾ ಆಯೋಗದ ಮಾಜಿ ಸದಸ್ಯ ಬಾಲಚಂದ್ರ ಮುಂಗೇಕರ್ ಸಲಹೆ ನೀಡಿದರು.

ಸೋಮವಾರ ಇಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿಯ ಎರಡನೇ ಘಟಿಕೋತ್ಸವದಲ್ಲಿ ಪ್ರಧಾನ ಭಾಷಣ ಮಾಡಿದ ಅವರು, ‘ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಬದಲಾವಣೆಯಾಗುತ್ತಿದೆ. ಕೃತಕ ಬುದ್ಧಿಮತ್ತೆ, ಡೇಟಾ ವಿಶ್ಲೇಷಣೆ, ಡಿಜಿಟಲ್ ಸಾಧನಗಳು ಮುಂಚೂಣಿಗೆ ಬಂದಿವೆ. ಶಿಕ್ಷಣದ ಜತೆ ಉದ್ಯೋಗ, ನಾವೀನ್ಯ, ಆರ್ಥಿಕ ಸಂಬಂಧವೂ ಇದೆ. ಸಮಸ್ಯೆ ಗುರುತಿಸಿ ಪರಿಹಾರ ನೀಡಬಲ್ಲ, ಸಮಾಜದ ಔನ್ನತ್ಯದ ಕುರಿತು ಚಿಂತಿಸುವ ಜ್ಞಾನವನ್ನು ವಿದ್ಯಾರ್ಥಿಗಳಿಗೆ ನೀಡಬೇಕಾಗಿದೆ’ ಎಂದರು.

‘ಶಿಕ್ಷಣ ವಲಯದಲ್ಲಿ ಚೀನಾ ಮುಂದೆ ಹೋಗಿದೆ. ಜಾಗತಿಕ ನಾವೀನ್ಯ ಸೂಚ್ಯಂಕದಲ್ಲಿ ನಾವಿನ್ನೂ ಹಿಂದೆಯೇ ಇದ್ದೇವೆ. ಭಾರತದಲ್ಲಿ 90ರ ದಶಕಕ್ಕೂ ಮುಂಚೆ, ಆ ನಂತರ ಆಗಿರುವ ಬದಲಾವಣೆಗಳು ಗಮನಾರ್ಹವಾಗಿದ್ದರೂ ನಮ್ಮಲ್ಲಿ ಜ್ಞಾನಕ್ಕಿಂತ ಅಂಕ ಆಧಾರಿತ ವ್ಯವಸ್ಥೆಯೇ ಗಟ್ಟಿಯಾಗಿದೆ. ಎಲ್ಲರೂ ಶೇ 99.50ರಷ್ಟು ಅಂಕ ಪಡೆಯುತ್ತಿದ್ದಾರೆ. ಆದರೆ, ಅಂತರ ಶಿಸ್ತೀಯ ಅಧ್ಯಯನವಿಲ್ಲದೇ ನಾವು ಹಿಂದೆ ಬೀಳುವಂತಾಗಿದೆ. ನಮ್ಮ ಶಿಕ್ಷಣದಲ್ಲಿ ಬದಲಾವಣೆ ಆಗದೇ ಇದ್ದರೆ ಮುಂದಿನ ದಶಕದಲ್ಲಿ ಶೇ 40ರಷ್ಟು ಪದವೀಧರರೂ ಉದ್ಯೋಗ ಪಡೆಯಲು ಅರ್ಹರಾಗುವುದಿಲ್ಲ’ ಎಂದು ಆತಂಕ ವ್ಯಕ್ತಪಡಿಸಿದರು.

‘ಭಾರತದಲ್ಲಿ ಉನ್ನತ ಶಿಕ್ಷಣಕ್ಕೆ 1966ರಲ್ಲಿ ಶೇ 6ರಷ್ಟು ವ್ಯಯಿಸಲಾಗುತ್ತಿತ್ತು. 50 ವರ್ಷದ ನಂತರವೂ ಅದಕ್ಕಿಂತ ಹೆಚ್ಚಾಗಿಲ್ಲ. ಸದ್ಯ ಶೇ 4.2ರಷ್ಟು ಮಾತ್ರ ಬಳಕೆ ಮಾಡುತ್ತಿರುವುದನ್ನು ಗಮನಿಸಿದ್ದೇವೆ. ಇದು ಬರೀ ಶಿಕ್ಷಣ ನೀಡುವ ವಲಯವಲ್ಲ. ಜ್ಞಾನದೊಂದಿಗೆ ಭವಿಷ್ಯದ ಪೀಳಿಗೆ ಸೃಷ್ಟಿಸುವುದರಿಂದ ಹೆಚ್ಚಿನ ಗಮನ ಕೊಡಬೇಕಾಗಿದೆ’ ಎಂದು ತಿಳಿಸಿದರು.

**ಅಂಬೇಡ್ಕರ್ ಆದರ್ಶ ಮುಖ್ಯ:** ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ಅರ್ಥಶಾಸ್ತ್ರದಲ್ಲಿ ಶಿಕ್ಷಣ ಪಡೆದ ಪದವೀಧರರು ದೇಶದ ಆರ್ಥಿಕ ಸುಧಾರಣೆಗೆ ಒತ್ತು ನೀಡಲೆಂದೇ ಡಾ.ಅಂಬೇಡ್ಕರ್ ಅವರ ಹೆಸರಿನಲ್ಲಿ ಆರಂಭಿಸಿರುವ ವಿಶ್ವವಿದ್ಯಾಲಯವು ಗುಣಮಟ್ಟಕ್ಕೆ ಒತ್ತು ನೀಡುತ್ತಿದೆ. ಸಮಾನತೆಗೆ ಸಂವಿಧಾನದ ಮೂಲಕ ಶಕ್ತಿ ತುಂಬಿದ ಅಂಬೇಡ್ಕರ್ ಅವರ ಆದರ್ಶ ರೂಢಿಸಿಕೊಂಡು ವಿದ್ಯಾರ್ಥಿಗಳು ದೇಶದ ಪ್ರಗತಿಗೆ ಶ್ರಮಿಸಬೇಕು’ ಎಂದು ಕಿವಿಮಾತು ಹೇಳಿದರು.

ಕುಲಸಚಿವರಾದ ಜಿ.ಎಸ್. ಮಮತಾದೇವಿ, ಪರೀಕ್ಷಾ ನಿಯಂತ್ರಕ ಕೆ.ಮುಹಮ್ಮದ್ ಶಮೀರ್, ಹಣಕಾಸು ಅಧಿಕಾರಿ ಎಂ.ವಿ.ಪ್ರಶಾಂತ್ ಕುಮಾರ್ ಉಪಸ್ಥಿತರಿದ್ದರು.

### ವಿದ್ಯಾರ್ಥಿನಿಯರ ಚಿನ್ನದ ಸಂಭ್ರಮ

2ನೇ ಘಟಿಕೋತ್ಸವದಲ್ಲಿ 156 ವಿದ್ಯಾರ್ಥಿಗಳು ಪದವಿ ಸ್ವೀಕರಿಸಿದರು. ಮೇಘನಾ ಬಿ.ಪ್ರಶೀದ್, ಜಿ.ಪಾರ್ವತಿ, ಗೌರಿ ಅಗರ್‌ವಾಲ್, ಯು.ದಿವ್ಯಾ, ಎಂ.ನೇಹಾ, ಪ್ರಿಯಾಂಶು ಶೇಖರ್ ಚಿನ್ನದ ಪದಕ, 17 ವಿದ್ಯಾರ್ಥಿಗಳು ರ‍್ಯಾಂಕ್ ಪ್ರಮಾಣಪತ್ರ ಪಡೆದರು. ಐವರು ವಿದ್ಯಾರ್ಥಿನಿಯರು ಚಿನ್ನದ ಪದಕ ಮುಡಿಗೇರಿಸಿಕೊಂಡು ಸಂಭ್ರಮಿಸಿದ್ದು ವಿಶೇಷವಾಗಿತ್ತು.

‘ಮೈಸೂರಿನಲ್ಲಿ ಶಿಕ್ಷಣ ಪಡೆದಿದ್ದ ನನಗೆ ವಿಶ್ವವಿದ್ಯಾಲಯದಲ್ಲಿ ಎಂ.ಎಸ್ಸಿ ಫೈನಾನ್ಶಿಯಲ್ ಎಕನಾಮಿಕ್ಸ್ ಸೀಟು ಸಿಕ್ಕಿತು. ಶಿಕ್ಷಣವೂ ಚೆನ್ನಾಗಿತ್ತು. ಇದರಿಂದ ರ‍್ಯಾಂಕ್ ಪಡೆದು ಒಳ್ಳೆಯ ಕಡೆ ಉದ್ಯೋಗವನ್ನೂ ಪಡೆದುಕೊಂಡಿದ್ದೇನೆ’ ಎಂದು ಚಿನ್ನದ ಪದಕ ಪಡೆದ ಎಂ.ನೇಹಾ ಹೇಳಿದರು.



ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿಯ ಎರಡನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಾದ (ಎಡದಿಂದ) ಗೌರಿ ಅಗರವಾಲ್, ಮೇಘನಾ ಬಿ.ಪ್ರಶೀದ್, ಪ್ರಿಯಾಂಶು ಶೇಖರ್, ಯು.ದಿವ್ಯಾ, ಜಿ.ಪಾರ್ವತಿ, ಎಂ.ನೇಹಾ ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ

> **ಕರ್ನಾಟಕದಲ್ಲಿ ಶಿಕ್ಷಣ, ಉದ್ಯೋಗದ ನಡುವಿನ ಅಂತರ ತಗ್ಗಿಸಲು ಕ್ಯಾಂಪಸ್ ಟು ಕರಿಯರ್ ಚಟುವಟಿಕೆ ಆರಂಭಿಸಲಾಗಿದೆ. ಮೇ 15 ಮತ್ತು 16ರಂದು ಕೌಶಲ, ಉದ್ಯೋಗ, ಉದ್ಯಮಶೀಲತೆ ಕುರಿತು ಜಾಗೃತಿ ಮೂಡಿಸಲು ಸಮ್ಮೇಳನ ಆಯೋಜಿಸಲಾಗುತ್ತಿದೆ**
> **ಡಾ.ಎಂ.ಸಿ.ಸುಧಾಕರ್,** ಉನ್ನತ ಶಿಕ್ಷಣ ಸಚಿವ

> **ಬರುವ ಶೈಕ್ಷಣಿಕ ವರ್ಷದಲ್ಲಿ ಆರು ಹೊಸ ಕೋರ್ಸ್ ಆರಂಭಿಸಲಿದೆ. ಇದರಲ್ಲಿ ಬಿ.ಎಸ್ಸಿ ಹಾಗೂ ಎಂ.ಎಸ್ಸಿ ಡೇಟಾ ಅನಾಲಿಟಿಕ್ಸ್, ಐದು ವರ್ಷದ ಸಂಯೋಜಿತ ಅರ್ಥಶಾಸ್ತ್ರ, ಎಂ.ಎ ಅರ್ಥಶಾಸ್ತ್ರ, ಎಂ.ಎಸ್ಸಿ ಅಭಿವೃದ್ಧಿ ಶಾಸ್ತ್ರ, ಸಾರ್ವಜನಿಕ ನೀತಿ ಕೋರ್ಸ್ ಸೇರಿವೆ. 15ಕ್ಕೂ ಅಧಿಕ ದೇಶ ಹಾಗೂ ವಿದೇಶದ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ**
> **ವಿಶ್ವನಾಥ,** ಕುಲಪತಿ

# ಸಮಯ ಕೋರಿರುವುದು ಸರ್ಕಾರ- ಆಯೋಗ ಸ್ಪಷ್ಟನೆ

## ಜಿಬಿಎ ವ್ಯಾಪ್ತಿಯ ಐದು ನಗರಪಾಲಿಕೆಗಳ ಚುನಾವಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆ ನಡೆಸಲು ನಾವು ಎಲ್ಲ ಸಿದ್ಧತೆ ಮಾಡಿಕೊಂಡಿದ್ದೇವೆ. ಸಮಯಾವಕಾಶ ಕೋರಿರುವುದು ಸರ್ಕಾರವೇ ಹೊರತು ಆಯೋಗವಲ್ಲ’ ಎಂದು ರಾಜ್ಯ ಚುನಾವಣಾ ಆಯೋಗ ಸ್ಪಷ್ಟನೆ ನೀಡಿದೆ.

‘ಸುಪ್ರೀಂ ಕೋರ್ಟ್ ಆದೇಶದಂತೆ ಜಿಬಿಎ ವ್ಯಾಪ್ತಿಯ ನಗರಪಾಲಿಕೆಗಳಿಗೆ ಜೂನ್ 30ರ ಒಳಗೆ ಚುನಾವಣೆ ಪೂರ್ಣಗೊಳಿಸಬೇಕಿದೆ. ಈ ಉದ್ದೇಶದಿಂದ ಈ ನಗರಪಾಲಿಕೆಗಳ 369 ವಾರ್ಡ್‌ಗಳ ಮತದಾರರ ಪಟ್ಟಿಯನ್ನು ಏಪ್ರಿಲ್ 18ರಂದೇ ಪ್ರಕಟಿಸಲಾಗಿದೆ’ ಎಂದು ಆಯೋಗ ಹೇಳಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಏಪ್ರಿಲ್ 15ರ ಪತ್ರದಲ್ಲಿ ‘ಭಾರತ ಸರ್ಕಾರವು ಹೊರಡಿಸಿರುವ ವೇಳಾಪಟ್ಟಿ ಅನ್ವಯ ಏಪ್ರಿಲ್ 16ರಿಂದ ಮೇ 15ರವರೆಗೆ ಜನಗಣತಿ ನಡೆಯಲಿದೆ. ಈ ಅವಧಿಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಿಬ್ಬಂದಿ ಆ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಅಲ್ಲದೆ, ಕೇಂದ್ರ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನೂ (ಎಸ್‌ಐಆರ್) ಕೈಗೊಳ್ಳುವ ನಿರೀಕ್ಷೆಯಿದೆ. ಜೊತೆಗೆ, ಮೇ ಮತ್ತು ಜೂನ್‌ನಲ್ಲಿ ಶೈಕ್ಷಣಿಕ ಪರೀಕ್ಷಾ ಕರ್ತವ್ಯಗಳಿಗೆ ಸಿಬ್ಬಂದಿಯನ್ನು ನಿಯೋಜಿಸುವುದರಿಂದ, ರಾಜ್ಯ ಚುನಾವಣಾ ಆಯೋಗಕ್ಕೆ ಮಾನವ ಸಂಪನ್ಮೂಲ, ಮೂಲಸೌಕರ್ಯವನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಚುನಾವಣೆಗೆ ನಿಗದಿಪಡಿಸಿದ ಅವಧಿಯನ್ನು ಸೆ. 30ರವರೆಗೆ ವಿಸ್ತರಿಸುವಂತೆ ಆಯೋಗಕ್ಕೆ ಕೋರಿದ್ದಾರೆ’ ಎಂದೂ ಆಯೋಗ ತಿಳಿಸಿದೆ.

### ‘ಚುನಾವಣೆ ಮುಂದೂಡಲು ಪ್ರಮಾಣಪತ್ರ ಸಲ್ಲಿಸಿಲ್ಲ’

‘ಸರ್ಕಾರದ ನಿಲುವನ್ನು ಸುಪ್ರೀಂ ಕೋರ್ಟ್‌ನ ಗಮನಕ್ಕೆ ತಂದು, ಕೋರ್ಟ್ ನೀಡುವ ಆದೇಶದಂತೆ ಚುನಾವಣೆಗೆ ಆಯೋಗವು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಚುನಾವಣೆಗೆ ಸಮರ್ಪಕ ಅನುದಾನವನ್ನು ತಕ್ಷಣ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಕೋರಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಲಾಗಿದೆ. ಸುಪ್ರೀಂ ಕೋರ್ಟ್‌ನ ಆದೇಶದಂತೆ ನಿಗದಿತ ಸಮಯದ ಒಳಗೆ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಲು ಆಯೋಗ ಎಲ್ಲ ಸಿದ್ಧತೆಗಳನ್ನು ಕೈಗೊಂಡಿದೆ. ಚುನಾವಣೆ ನಡೆಸಲು ಹೆಚ್ಚಿನ ಸಮಯಾವಕಾಶ ಕೋರಿ ಅಥವಾ ಚುನಾವಣೆ ಮುಂದೂಡಬೇಕೆಂದು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿಲ್ಲ’ ಎಂದೂ ಆಯೋಗವು ಹೇಳಿದೆ.



ಲಯನ್ಸ್ ಜಿಲ್ಲಾ 317ಎ ಸುವರ್ಣ ಮಹೋತ್ಸವದ ಅಂಗವಾಗಿ ವಿಜಯನಗರದಲ್ಲಿರುವ ಬಂಟ್ಸ್ ಸಂಘದಲ್ಲಿ ನಡೆದ ಜಿಲ್ಲಾ ಸಮಾವೇಶದಲ್ಲಿ 25 ಯೋಧರನ್ನು ಗೌರವಿಸಲಾಯಿತು. ಲಯನ್ಸ್ ಜಿಲ್ಲಾ ಗವರ್ನರ್ ಜಿ.ಮೋಹನ್, ಲಯನ್ಸ್ ಇಂಟರ್‌ನ್ಯಾಷನಲ್ ಉಪಾಧ್ಯಕ್ಷ ಮನೋಜ್ ಷಾ, ಲಯನ್ಸ್ ಇಂಟರ್‌ನ್ಯಾಷನಲ್ ಮಾಜಿ ನಿರ್ದೇಶಕ ವಿಜಯ್ ಕುಮಾರ್ ರಾಜು ಉಪಸ್ಥಿತರಿದ್ದರು



ಬಸವ ವೇದಿಕೆ ವತಿಯಿಂದ ಗುರುರಾಜ ಕರಜಗಿ ಅವರಿಗೆ ‘ವಚನ ಸಾಹಿತ್ಯಶ್ರೀ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿ.ಸೋಮಣ್ಣ, ಬಸವರಾಜ ಬೊಮ್ಮಾಯಿ, ಎಸ್.ಷಡಕ್ಷರಿ, ಎಚ್.ಕೆ.ಪಾಟೀಲ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿ.ಸೋಮಶೇಖರ್, ಡಾ.ಸಿ.ಎನ್.ಮಂಜುನಾಥ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

# ‘ವಚನ ಅಳವಡಿಕೆ ಕಡ್ಡಾಯವಾಗಲಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಮಾಜದಲ್ಲಿ ವಚನಗಳನ್ನು ಅಳವಡಿಕೊಳ್ಳುವುದನ್ನು ಕಡ್ಡಾಯಗೊಳಿಸಬೇಕು. ಇದಕ್ಕೆ ಕಾನೂನಿನ ಬಲ ಬೇಕು’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಬಸವ ವೇದಿಕೆ ಸೋಮವಾರ ಆಯೋಜಿಸಿದ್ದ ಬಸವ ಜಯಂತಿ, ಬಸವಶ್ರೀ ಮತ್ತು ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ವಚನ, ಭಗವದ್ಗೀತೆ, ಉಪನಿಷತ್‌ಗಳಿಗೆ ಕಾನೂನಿನ ಬಲ ದೊರೆತು, ಅಳವಡಿಕೆ ಕಡ್ಡಾಯವಾದರೆ ಸಮಾಜದಲ್ಲಿ ಬದಲಾವಣೆ ಆಗಲು ಸಾಧ್ಯ. ಎಲ್ಲರೂ ಒಪ್ಪಿರುವಂತಹದ್ದನ್ನು ಮಾತ್ರ ಕಡ್ಡಾಯ ಮಾಡಬೇಕು’ ಎಂದರು.

‘ಬಸವಣ್ಣನವರ ತತ್ವಗಳನ್ನು ಅಳವಡಿಸಿಕೊಳ್ಳಬೇಕು ಎಂದು ಉನ್ನತ ಸ್ಥಾನದಲ್ಲಿರುವ ಎಲ್ಲರೂ ಮಾತನಾಡುತ್ತಾರೆ. ಅವುಗಳನ್ನು ಬೇರೆಯವರು ಅಳವಡಿಸಿಕೊಳ್ಳಬೇಕು ಎಂದು ಬಯಸುತ್ತಾರೆಯೇ ಹೊರತು, ತಾವು ಅದನ್ನು ಅಳವಡಿಸಿಕೊಳ್ಳುವುದಿಲ್ಲ. ಸಮಾಜದಲ್ಲಿ ಕಡ್ಡಾಯಗೊಳಿಸದ ಹೊರತು ಯಾವುದನ್ನೂ ಅಳವಡಿಸಿಕೊಳ್ಳುವುದಿಲ್ಲ. ಹೀಗಾಗಿ, ಅದಕ್ಕೆ ಕಾನೂನು ಬಲ ಅಗತ್ಯ’ ಎಂದು ಅಭಿಪ್ರಾಯಪಟ್ಟರು.

‘ಗುರುರಾಜ ಕರಜಗಿ ಅವರು ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಜನರನ್ನು ಜಾಗೃತಗೊಳಿಸುತ್ತಿದ್ದಾರೆ. ವಿಶೇಷ ಮೌಲ್ಯಗಳೊಂದಿಗೆ ಬೋಧನೆ ಮಾಡಿ, ಯಾರನ್ನು ಮುಟ್ಟಬೇಕೋ ಅವರಿಗೆ ತಲುಪವವರೆಗೂ ಪ್ರಯತ್ನಪಡುತ್ತಾರೆ. ಅವರದ್ದು ದಣಿವಿಲ್ಲದ ಕೆಲಸ’ ಎಂದು ಹೇಳಿದರು.

ಕೇಂದ್ರದ ಜಲಶಕ್ತಿ ಮತ್ತು ರೈಲ್ವೆಯ ರಾಜ್ಯ ಸಚಿವ ವಿ. ಸೋಮಣ್ಣ, ‘ಬಸವ ಜಯಂತಿಯನ್ನು ರಾಷ್ಟ್ರಮಟ್ಟದಲ್ಲಿ ದೆಹಲಿಯಲ್ಲಿ 2027ರಲ್ಲಿ ಆಚರಿಸಲಾಗುತ್ತದೆ. ದೇಶ–ವಿದೇಶದಲ್ಲಿ ಬಸವಣ್ಣನವರ ವಚನ, ತತ್ವಗಳನ್ನು ಪಸರಿಸುವ ಕಾರ್ಯವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಮಾಡುತ್ತಿದ್ದೇವೆ’ ಎಂದರು.

ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ, ‘ಹುಟ್ಟು ಸಾವಿನ ನಡುವೆ ಸಮಯ ಕಡಿಮೆ ಇರುತ್ತದೆ. ಈ ಸಮಯದಲ್ಲಿ ನಾವು ಮೊದಲು ವಿಕಾಸವಾಗಬೇಕು. ನಿಜವಾದ ಬಸವ ತತ್ವಗಳನ್ನು ಅಳವಡಿಸಿಕೊಳ್ಳುವುದು ಅಸಾಧ್ಯ. ಆದರೆ ಸಾಧನೆ ಬಿಡಬಾರದು. ಬಸವಣ್ಣನನ್ನು 900 ವರ್ಷಗಳಿಂದಲೂ ಅಪ್ರಸ್ತುತ ಮಾಡಲು ಪ್ರಯತ್ನಿಸಲಾಗುತ್ತಿದೆ. ಆದರೆ, ಬಸವಣ್ಣ ಶಾಶ್ವತ’ ಎಂದರು.

ವಚನ ಸಾಹಿತ್ಯಶ್ರೀ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶಿಕ್ಷಣ ತಜ್ಞ ಗುರುರಾಜ ಕರಜಗಿ ‘ಬಸವಣ್ಣ, ಅಕ್ಕಮಹಾದೇವಿ ಹಾಗೂ ವಚನಕಾರರ ಬಗ್ಗೆ ನನ್ನ ಅಜ್ಜ ನನ್ನ ಬಾಲ್ಯದಲ್ಲೇ ಹೇಳುತ್ತಿದ್ದ. ನಾನು ಬೆಳೆದು ದೊಡ್ಡವನಾದಾಗ ಅವುಗಳ ಬಗ್ಗೆ ಅಧ್ಯಯನಕ್ಕೆ ನನ್ನ ಅಜ್ಜನೇ ಕಾರಣ’ ಎಂದು ಹೇಳಿದರು.

### ‘ವಿವೇಕಶಾಲಿಗಳು ಸಿನಿಕರಾಗುತ್ತಿದ್ದಾರೆ’

‘ಇಂದು ಎಲ್ಲ ಕ್ಷೇತ್ರಗಳಲ್ಲೂ ಅಧಃಪತನ ಕಾಣುತ್ತಿದ್ದೇವೆ. ವ್ಯವಸ್ಥೆಯ ಕೆಡಕಿನ ಬಗ್ಗೆ ವಿವೇಕಶಾಲಿಗಳು ಸಿನಿಕರಾಗುತ್ತಿದ್ದಾರೆ. ಜನಪರ ಚಳವಳಿಗಳು ಕ್ಷೀಣವಾಗುತ್ತಿವೆ. ಹಾಗಾಗಿ, ಇಂದು ನಮಗೆ ಅಲ್ಲಮನ ತಾತ್ವಿಕತೆ, ಬಸವಣ್ಣನ ಕ್ರಿಯಾಶೀಲತೆ, ಅಂಬಿಗರ ಚೌಡಯ್ಯನ ಆಕ್ರೋಶ ಬೇಕಾಗಿದೆ. ಇಂದಿನ ಕಾರ್ಯಕ್ರಮಕ್ಕೆ ಗುರುರಾಜ ಕರಜಗಿ ಸೇರಿದಂತೆ ಅನೇಕ ಶರಣರ ಮಾತುಗಳನ್ನು ಕೇಳಲಾದರೂ ಬರಬೇಕು ಎಂದಿದ್ದೆ. ಆದರೆ ನನ್ನ ಆರೋಗ್ಯ ವ್ಯತ್ಯಯದಿಂದ ಬರಲಾಗುತ್ತಿಲ್ಲ’ ಎಂದು ಎಚ್.ಡಿ. ದೇವೇಗೌಡರು ಸಂದೇಶದಲ್ಲಿ ತಿಳಿಸಿದ್ದರು.

ಬಸವಶ್ರೀ ಪ್ರಶಸ್ತಿ ಸ್ವೀಕರಿಸಲು ದೇವೇಗೌಡ ಅವರು ಕಾರ್ಯಕ್ರಮಕ್ಕೆ ಬಂದಿರಲಿಲ್ಲ. ಅವರ ಸಂದೇಶವನ್ನು ಬಸವ ವೇದಿಕೆ ಉಪಾಧ್ಯಕ್ಷ ಎಸ್. ಷಡಕ್ಷರಿ ವಾಚಿಸಿದರು.

> **ಅಮೆರಿಕದಲ್ಲೂ ಬಸವಜಯಂತಿ ನಡೆಯುತ್ತಿದೆ. ಪುತ್ಥಳಿ ಸ್ಥಾಪನೆ ಮಾಡಿ, ಬಸವ ಜಯಂತಿಯನ್ನು ಬಸವ ದಿನ ಎಂದು ಆಚರಿಸಲಾಗುತ್ತಿದೆ. ಬಸವಣ್ಣ ದೇಶ–ವಿದೇಶಗಳಲ್ಲೂ ಪ್ರಸ್ತುತ**
> **ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ,** ಸುತ್ತೂರು ಮಠ

## ನಗರದಲ್ಲಿ ಇಂದು

**ನಿಮಿಷಾಂಬಾದೇವಿ ಜಯಂತಿ:** ಬೆಳಿಗ್ಗೆ 7.30ಕ್ಕೆ ನಿಮಿಷಾಂಬಾದೇವಿಗೆ ಅಭಿಷೇಕ, ಪುಷ್ಪಾಲಂಕಾರ, 8ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಮಧ್ಯಾಹ್ನ 3ಕ್ಕೆ ನಿಮಿಷಾಂಬಾದೇವಿಯ ರಥೋತ್ಸವ, ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾದೇವಿ ದೇವಸ್ಥಾನ, ಒಟಿಸಿ ರಸ್ತೆ, ಕಾಟನ್‌ಪೇಟೆ.

**ನಿಮಿಷಾಂಬಾದೇವಿ ಜಯಂತಿ:** ಬೆಳಿಗ್ಗೆ 9ಕ್ಕೆ ನಿಮಿಷಾಂಬಾದೇವಿಗೆ ಅಭಿಷೇಕ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 5ಕ್ಕೆ ನಿಮಿಷಾಂಬಾದೇವಿಯ ರಥೋತ್ಸವ, ಆಯೋಜನೆ ಮತ್ತು ಸ್ಥಳ: ಸೋಮವಂಶ ಆರ್ಯಕ್ಷತ್ರಿಯ ಸೇವಾ ಸಂಘ, ನಿಮಿಷಾಂಬಾದೇವಿ ಕಲ್ಯಾಣ ಮಂಟಪ, ರಂಗಸ್ವಾಮಿ ಗುಡಿ ರಸ್ತೆ.

**ಕರ್ನಾಟಕದ ಎಸ್‌ಸಿ, ಎಸ್‌ಟಿ ಸಮುದಾಯಗಳ ಕಲ್ಯಾಣಕ್ಕೆ ಸಂಬಂಧಿಸಿದ ಕಾನೂನುಗಳ ಉತ್ತಮ ಅನುಷ್ಠಾನದ ಕಡೆಗೆ–ಸಮಾಲೋಚನಾ ಸಭೆ:** ವರದಿ ಮಂಡನೆ: ಸಿದ್ಧಾರ್ಥ್ ಜೋಶಿ, ಪ್ರತಿಕ್ರಿಯೆಗಳು: ಎಚ್. ಶಶಿಧರ ಶೆಟ್ಟಿ, ಎಚ್.ಪಿ. ಸುಧಾಮದಾಸ್, ಡಿ. ರಂದೀಪ್, ಅರುಣ್ ಜೆ. ಚಕ್ರವರ್ತಿ, ಮಾವಳ್ಳಿ ಶಂಕರ್, ಚಂದ್ರಮ್ಮ, ಕೆ.ಪಿ. ಅಶ್ವಿನಿ, ಆಯೋಜನೆ: ಪರ್ಯಾಯ ಕಾನೂನು ವೇದಿಕೆ, ಸ್ಲಂ ಜನಾಂದೋಲನ ಕರ್ನಾಟಕ, ಸಂವಿಧಾನ ಸಂರಕ್ಷಣಾ ವೇದಿಕೆ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30ರಿಂದ

**‘ಕಳರಿ ಬಡ್ಸ್’ ಕಳರಿ ಕಲೆಯ ಪ್ರದರ್ಶನ:** ಅತಿಥಿಗಳು: ಹಂಸಲೇಖ, ಡಿ. ಶರಣ್ಯಾಮೃತ, ಆಯೋಜನೆ: ಕಳರಿ ಗುರುಕುಲಂ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

**ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–ತ.ರಾ. ಸುಬ್ಬರಾವ್:** ಉಪನ್ಯಾಸ: ಎಸ್.ಎಸ್. ಶ್ರೀನಿವಾಸಮೂರ್ತಿ, ಆಶಯ ನುಡಿ: ರಾ.ನಂ. ಚಂದ್ರಶೇಖರ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿಎಂಶ್ರೀ ಪ್ರತಿಮೆ ಎದುರು, ನ್ಯಾಷನಲ್ ಹೈಸ್ಕೂಲ್ ವೃತ್ತ, ಬಸವನಗುಡಿ, ಬೆಳಿಗ್ಗೆ 11

**‘ಸೂ.ವೆಂ. ಅರಗ ವಿಮರ್ಶಾ ಪ್ರಶಸ್ತಿ’, ‘ಡಾ. ವಿಜಯಾ ಸುಬ್ಬರಾಜ್ ಗಣ್ಯಲೇಖಕಿ’ ಪ್ರಶಸ್ತಿ ಪ್ರದಾನ:** ಬಸವರಾಜ ಕಲ್ಗುಡಿ, ಪ್ರಶಸ್ತಿ ಸ್ವೀಕರಿಸುವವರು: ಎಸ್. ದಿವಾಕರ್, ಎಲ್.ವಿ. ಶಾಂತಕುಮಾರಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಆರ್. ಲಕ್ಷ್ಮೀನಾರಾಯಣ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

**ಸಮ್ಮಿಲನ ಮಿಕ್ಸ್ ಮ್ಯೂಸಿಕ್–20:** ಅತಿಥಿಗಳು: ವೀಣಾ ಭಟ್, ಸುಧೀಂದ್ರ, ಸ್ವಾತಿ ಮಹೇಶ್, ಸಮರ್ಥನ, ಭರತನಾಟ್ಯ ಪ್ರದರ್ಶನ: ಕೆ.ಸಿ. ಮಂದಸ್ಮಿತ, ಆಯೋಜನೆ: ಆರೋಹಣ, ಸ್ಥಳ: ಪ್ರಯೋಗ್ ಸ್ಟುಡಿಯೊ ಥಿಯೇಟರ್, ಮೂರನೇ ಹಂತ, ಬನಶಂಕರಿ, ಸಂಜೆ 6

**‘ನೀರಗನ್ನಡಿ’ ನಾಟಕ ಪ್ರದರ್ಶನ:** ರಚನೆ: ಕೆ.ವೈ. ನಾರಾಯಣಸ್ವಾಮಿ, ನಿರ್ದೇಶನ: ಬಿ. ಸುರೇಶ, ಸಂಗೀತ: ಎಂ.ಡಿ. ಪಲ್ಲವಿ, ರಂಗ ವಿನ್ಯಾಸ: ಶಶಿಧರ ಅಡಪ, ವಸ್ತ್ರ ವಿನ್ಯಾಸ: ಎನ್. ಮಂಗಳ, ಸಂಘಟನೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಆಯೋಜನೆ: ನಟರಂಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

# ‘ಕಚೇರಿಗಳಲ್ಲಿ ಏಜೆಂಟರನ್ನು ದೂರವಿಡಿ’

## ಕೆಎಎಸ್ ಅಧಿಕಾರಿಗಳ ಸಂಘದ ಕಟ್ಟಡ ಉದ್ಘಾಟಿಸಿದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಕಚೇರಿಗಳಲ್ಲಿ ಮಧ್ಯವರ್ತಿಗಳಿಗೆ ಅವಕಾಶ ನೀಡಬೇಡಿ. ತಮ್ಮ ಕರ್ತವ್ಯವನ್ನು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮಾಡಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಎಎಸ್ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘದ ನವೀಕರಣ ಗೊಂಡ ಕಟ್ಟಡ ಹಾಗೂ ನೂತನವಾಗಿ ನಿರ್ಮಿಸಿರುವ ಹೆಚ್ಚುವರಿ ಕೊಠಡಿಗಳನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಅಧಿಕಾರಿಗಳ ಬಳಿ ಮಾತನಾಡಲು ಹಳ್ಳಿಯ ಜನರು ಹೆದರಿ, ಮಧ್ಯವರ್ತಿಗಳನ್ನು ಕರೆದುಕೊಂಡು ಬರುತ್ತಾರೆ. ಕಚೇರಿಗಳಲ್ಲಿ ಈಗಲೂ ಏಜೆಂಟರು ಇದ್ದಾರೆ. ಅವರನ್ನು ದೂರವಿಡಿ. ಗ್ರಾಮೀಣ ಜನರನ್ನು ಪ್ರೀತಿಯಿಂದ ಮಾತನಾಡಿಸಿ ಅವರ ಸಮಸ್ಯೆ ಆಲೈಸಿ ಕೊಂಡು ಬಗೆಹರಿಸಿದರೆ, ಅವರು ನಿಮ್ಮನ್ನು ಮರೆಯುವುದಿಲ್ಲ’ ಎಂದರು.

‘ಮಧ್ಯವರ್ತಿಗಳ ಹಾವಳಿ ತಪ್ಪಿಸುವ ಉದ್ದೇಶದಿಂದಲೇ ಗ್ಯಾರಂಟಿ ಯೋಜನೆ ಜಾರಿಗೆ ತಂದಿದ್ದೇವೆ. ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಜಮೆ ಮಾಡಲಾಗುತ್ತಿದೆ. ನಾವು (ರಾಜಕಾರಣಿಗಳು) ಐದು ವರ್ಷಕ್ಕೊಮ್ಮೆ ಆಯ್ಕೆಯಾಗಬೇಕು. ಆದರೆ, ಒಮ್ಮೆ ಸರ್ಕಾರಿ ಸೇವೆಗೆ ಸೇರಿದರೆ 35 ವರ್ಷ ಕೆಲಸ ಮಾಡಬಹುದು. ಯಾವುದೇ ಕೆಲಸ ವಿಳಂಬವಾದರೆ ಭ್ರಷ್ಟಾಚಾರಕ್ಕೆ ಅಸ್ಪದವಾಗಲಿದೆ. ಕಡತಗಳನ್ನು ಶೀಘ್ರ ವಿಲೇವಾರಿ ಮಾಡಬೇಕು’ ಎಂದು ಸಲಹೆ ನೀಡಿದರು.

ಸ್ವರಣ ಸಂಚಿಕೆ ‘ಅನುಷ್ಠಾನ’ ಬಿಡುಗಡೆ ಮಾಡಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ಅಧಿಕಾರಿಗಳ ಮೇಲೆ ವಿಶ್ವಾಸ, ನಂಬಿಕೆ ಇಟ್ಟುಕೊಂಡು ಜನರು ಬರುತ್ತಾರೆ. ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡುವಂತೆ ಹೇಳುವುದಿಲ್ಲ. ಜನರ ಸಮಯ ವ್ಯರ್ಥ ಮಾಡದೇ ಕೆಲಸ ಮಾಡಿಕೊಡಬೇಕು’ ಎಂದು ತಿಳಿಸಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಿ, ‘ಜನರು ಮತ್ತು ಅಧಿಕಾರಿಗಳ ನಡುವಿನ ಅಂತರ ಕಡಿಮೆ ಆಗುತ್ತಿದೆ. ಜನರ ನಿರೀಕ್ಷೆಗಳನ್ನು ಈಡೇರಿಸಲು ಆಗುವುದಿಲ್ಲ. ಎಲ್ಲ ಸಮಸ್ಯೆಯೂ ನ್ಯಾಯವಾಗಿ ರುವುದಿಲ್ಲ. ಕಾನೂನು ಚೌಕಟ್ಟಿನಲ್ಲಿ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು’ ಎಂದರು.

ಮುಖ್ಯಮಂತ್ರಿ ಕಾರ್ಯದರ್ಶಿ ಬಿ.ಬಿ.ಕಾವೇರಿ, ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘದ ಅಧ್ಯಕ್ಷ ಬಿ.ಶಿವಸ್ವಾಮಿ, ಉಪಾಧ್ಯಕ್ಷ ಚನ್ನಬಸಪ್ಪ, ಕಾರ್ಯದರ್ಶಿ ಸಿ.ಎಲ್. ಶಿವಕುಮಾರ್, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಶಿವಕುಮಾರ್ ಹಾಜರಿದ್ದರು.

### ‘ಆಡಳಿತಕ್ಕೆ ಐಎಎಸ್ ಬೇಕು’

‘ಐಎಎಸ್, ಐಆರ್‌ಎಸ್ ಬೇಡ. ಕರ್ನಾಟಕ ಆಡಳಿತ ಸೇವೆ ಸಾಕು ಎಂದು ಲೋಹಿಯಾ ಹೇಳುತ್ತಿದ್ದರು. ಅವರ ಹೇಳಿಕೆಗೆ ನನ್ನ ಸಹಮತ ಇದೆ. ಅದು ನನ್ನ ವೈಯಕ್ತಿಕ ಅಭಿಪ್ರಾಯ. ಹಾಗೆಂದ ಮಾತ್ರಕ್ಕೆ ಐಎಎಸ್ ಅಧಿಕಾರಿಗಳು ಬೇಡವೆನ್ನುತ್ತಿಲ್ಲ. ಆಡಳಿತಕ್ಕೆ ಐಎಎಸ್ ಬೇಕು’ ಎಂದು ಸಿದ್ದರಾಮಯ್ಯ ಅವರು ಹೇಳಿದರು.



ಕೆ.ಎ.ಎಸ್ ಅಧಿಕಾರಿಗಳ ಸಂಘದ ನವೀಕರಣಗೊಂಡ ಕಟ್ಟಡ ಹಾಗೂ ಹೆಚ್ಚುವರಿ ಕೊಠಡಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಿಮೋಟ್ ಒತ್ತುವ ಮೂಲಕ ಉದ್ಘಾಟಿಸಿದರು. ಡಿ.ಕೆ.ಶಿವಕುಮಾರ್, ಕೃಷ್ಣ ಬೈರೇಗೌಡ ಮತ್ತು ಶಿವಸ್ವಾಮಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

### ಶೇ 33 ಜಿ.ಪಂ ಸಿಇಒ ಹುದ್ದೆ ಮೀಸಲು

ಕೆಎಎಸ್ ಅಧಿಕಾರಿಗಳಿಗೆ ಶೇಕಡ 33ರಷ್ಟು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹುದ್ದೆಯನ್ನು ಮೀಸಲಿಡುವ ಕ್ರಮ ಕೈಗೊಳ್ಳಲಾಗುವುದು. ಹಾಗೆಯೇ ಅಧಿಕಾರಿಗಳ ಪದೋನ್ನತಿ ಬಗ್ಗೆ ಸಚಿವ ಕೃಷ್ಣಬೈರೇಗೌಡರಿಗೆ ಸೂಚನೆ ನೀಡಲಾಗಿದ್ದು, ಈಗಾಗಲೇ ಎರಡು ಬಾರಿ ಸಭೆ ನಡೆಸಲಾಗಿದೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

# ಹೋರಾಟಕ್ಕೆ ನಿರ್ಧಾರ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಟ್ಟ ಭರವಸೆಯಂತೆ ಅಲೆಮಾರಿಗಳಿಗೆ ಶೇ 1 ಒಳ ಮೀಸಲಾತಿಯನ್ನು ನೀಡದೆ ವಂಚಿಸಿದ್ದಾರೆ. ಇದರ ವಿರುದ್ಧ ಹೋರಾಟ ನಡೆಸಲಾಗುವುದು’ ಎಂದು ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ಹೇಳಿದೆ.

‘ಒಳಮೀಸಲಾತಿಗಾಗಿ ನಡೆದ ವಿಶೇಷ ಸಂಪುಟ ಸಭೆಯಲ್ಲಿ ಪರಿಶಿಷ್ಟ ಜಾತಿಯ ಎಲ್ಲ ಬಲಾಢ್ಯರಿಗೂ ಹಂಚಿಕೆ ಮಾಡಿದ್ದಾರೆ. ಆದರೆ, 49 ಅಲೆಮಾರಿ ಸಮುದಾಯಗಳಿಗೆ ವಂಚಿಸಲಾಗಿದೆ. ನ್ಯಾಯೋಚಿತ ಪಾಲನ್ನು ನೀಡದೆಲ್ಲ. ಅನ್ಯಾಯ ಸರಿಪಡಿಸುವಂತೆ ಮಾಡಿದ್ದ ಮನವಿಯನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಮತ್ತೆ ಅನ್ಯಾಯ ಎಸಗಲಾಗಿದೆ’ ಎಂದು ಒಕ್ಕೂಟದ ಅಧ್ಯಕ್ಷ ಲೋಹಿತ್ ಅಂದೋಳು, ಮುಖಂಡರಾದ ಮಂಜುನಾಥ್ ದಾಯತ್ಕರ್, ಬಸವರಾಜ ನಾರಾಯಣಕರ್, ಡಿ.ಆರ್.ಚನ್ನ ಅವರು ದೂರಿದ್ದಾರೆ.

‘49 ಅಲೆಮಾರಿ ಸಮುದಾಯಗಳನ್ನು ಪ್ರವರ್ಗ–ಎನಲ್ಲಿ ಇರಿಸಿ, ಶೇ 1 ಮೀಸಲಾತಿಯನ್ನು ಪದವಿಯಲು ಹಾಗೂ ಸಮುದಾಯಗಳ ಸಬಲೀಕರಣಕ್ಕೆ ವಿಶೇಷ ಅಭಿವೃದ್ಧಿ ಪ್ಯಾಕೇಜನ್ನು ಪಡೆಯುವವರೆಗೆ ಹೋರಾಟವನ್ನು ಮುಂದುವರಿಸಲಾಗುವುದು. ಮೇ ತಿಂಗಳ ಕೊನೆಯ ವಾರದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಲೆಮಾರಿ ಸಮುದಾಯಗಳ ಬೃಹತ್ ಸ್ವಾಭಿಮಾನಿ ಸಮಾವೇಶ ನಡೆಸಲಾಗುವುದು’ ಎಂದು ಅವರು ಹೇಳಿದ್ದಾರೆ.


## ಸುದ್ದಿ 2 ನಿಮಿಷ

### ಅಂಗವಿಕಲರ ಮನೆ ತೆರವು ಕಾರ್ಯಾಚರಣೆಗೆ ತಡೆ

ಬೆಂಗಳೂರು: ಕೆಂಗೇರಿ ಹೋಬಳಿಯ ಚಲ್ಲಘಟ್ಟ ಗ್ರಾಮದ ಸರ್ವೆ ನಂಬರ್ 13ರಲ್ಲಿನ ಐದು ಎಕರೆ ಜಾಗದಲ್ಲಿ ಅಂಗವಿಕಲರು ನಿರ್ಮಿಸಿರುವ ಮನೆ ಮತ್ತು ಶೆಡ್‌ಗಳ ತೆರವು ಕಾರ್ಯಾಚರಣೆಗೆ ಹೈಕೋರ್ಟ್ ತಡೆ ನೀಡಿದೆ.

‘ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಬಿಡಿಎ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನೀಡಿರುವ ನೋಟಿಸ್ ರದ್ದುಪಡಿಸಬೇಕು’ ಎಂದು ಕೋರಿ ‘ಶ್ರೀ ಮಾರುತಿ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘ’ದ ಅಧ್ಯಕ್ಷ ಎಂ.ಜಿ.ರಂಗಸ್ವಾಮಿ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ನೋಟಿಸ್ ಹಿಂಪಡೆಯುವಂತೆ ಕೋರಿ ಅರ್ಜಿದಾರರು ಬಿಡಿಎಗೆ ಸಲ್ಲಿಸಿರುವ ಮನವಿ ಪತ್ರದ ಕುರಿತು ಸೂಕ್ತ ಆದೇಶ ಹೊರಡಿಸುವವರೆಗೆ ಸದರಿ ಜಾಗದ ಸ್ಥಾಧೀನದಿಂದ ಅರ್ಜಿದಾರರನ್ನು ತೆರವುಗೊಳಿಸಬಾರದು’ ಎಂದು ಮಧ್ಯಂತರ ಆದೇಶ ಹೊರಡಿಸಿರುವ



ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಪ್ರತಿವಾದಿ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

### ಹಂಗರಹಳ್ಳಿ ಸ್ವಾಮೀಜಿ ವಿರುದ್ಧದ ಪೋಕ್ಸೊ ರದ್ದು

ಬೆಂಗಳೂರು: ಬಾಲಕಿ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಆರೋಪಿಸಲಾದ ಪ್ರಕರಣದಲ್ಲಿ, ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗ ಹೋಬಳಿ ಹಂಗರಹಳ್ಳಿಯ ಶ್ರೀವಿದ್ಯಾ ಚೌಡೇಶ್ವರಿ ದೇವಸ್ಥಾನದ (ಶ್ರೀಮಠ) ಬಾಲ ಮಂಜುನಾಥ ಸ್ವಾಮೀಜಿ (36) ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ಬಾಲ ಮಂಜುನಾಥ ಸ್ವಾಮೀಜಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಆದೇಶಿಸಿದೆ.

‘ಸ್ವಾಮೀಜಿ ವಿರುದ್ಧ ಹುಲಿಯೂರು ದುರ್ಗ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಕಾನೂನುಬಾಹಿರವಾಗಿದೆ. ಮೇಲ್ನೋಟಕ್ಕೆ ಇದು ದುರುದ್ದೇಶಪೂರಿತ ಮತ್ತು ಸುಳ್ಳು ಅಂಶಗಳಿಂದ ಕೂಡಿದೆ. ಸ್ವಾಮೀಜಿಯ ವ್ಯಕ್ತಿತ್ವಕ್ಕೆ ಮತ್ತು ಕೀರ್ತಿಗೆ ಧಕ್ಕೆ ತರುವಂತಿದೆ’ ಎಂದು ಸ್ವಾಮೀಜಿ ಪರ ಹೈಕೋರ್ಟ್ ವಕೀಲ ಲೀಲಾ ಪಿ.ದೇವಾಡಿಗ ಅವರ ವಾದಾಂಶಗಳನ್ನು ನ್ಯಾಯಪೀಠ ಮನ್ನಿಸಿದೆ.

ಪ್ರಕರಣವೇನು?: ಹುಲಿಯೂರು ದುರ್ಗ–ಮಾಗಡಿ ರಸ್ತೆಯಲ್ಲಿರುವ ಕಾಡು ಶನೈಶ್ವರ ದೇವಸ್ಥಾನದಲ್ಲಿ ಅರ್ಚಕರಾಗಿದ್ದ ಮಂಜುನಾಥ ಸ್ವಾಮೀಜಿ 2016ರಲ್ಲಿ ಹಂಗರಹಳ್ಳಿಯಲ್ಲಿ ಶನೈಶ್ವರ ಪೂಜೆ ಮುಖಾಂತರವೇ ವಿದ್ಯಾ ಚೌಡೇಶ್ವರಿ ದೇವಸ್ಥಾನ ಮತ್ತು ಮಠ ನಿರ್ಮಿಸಿದ್ದಾರೆ. ಇವರ ವಿರುದ್ಧ ಹುಲಿಯೂರು ದುರ್ಗ ಪೊಲೀಸ್ ಠಾಣೆಯಲ್ಲಿ 2024ರ ಮಾರ್ಚ್ 7ರಂದು ಪ್ರಕರಣ ದಾಖಲಾಗಿತ್ತು.

# ಪಾದಚಾರಿ ಮಾರ್ಗ ಒತ್ತುವರಿ: ಸಂಚಾರಕ್ಕೆ ಅಡ್ಡಿ

• ಪ್ರಸನ್ನಕುಮಾರ್ ಯಾದವ್

ಪೀಣ್ಯದಾಸರಹಳ್ಳಿ: ಮಲ್ಲಸಂದ್ರ ಪೈಪ್ ಲೈನ್ ರಸ್ತೆಯ ಉದ್ಯಾನ ಪಕ್ಕದ ಪಾದಚಾರಿ ಮಾರ್ಗ ಅತಿಕ್ರಮಣ ಮಾಡಿಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ಜನರು ಅನಿವಾರ್ಯವಾಗಿ ರಸ್ತೆಯ ಮೇಲೆ ಓಡಾಡುವಂತಹ ಪರಿಸ್ಥಿತಿ ಸೃಷ್ಟಿಯಾಗಿದೆ.

ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸಿ ಕಬ್ಬಿಣದ ಗ್ರಿಲ್ ಹಾಕಲಾಗಿತ್ತು. ಕೆಲವರಂತೂ ಯಾರ ಹೆದರಿಕೆಯೂ ಇಲ್ಲದೇ ಪಾದಚಾರಿ ಮಾರ್ಗದ ಮೇಲೆ ವ್ಯಾಪಾರ ಮಾಡುತ್ತಿದ್ದಾರೆ.

ಗ್ರಾಹಕರು ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಿ ತರಕಾರಿ, ಹಣ್ಣು ಹಾಗೂ ಇತರ ವಸ್ತು ಖರೀದಿಸುತ್ತಿದ್ದು, ಬೆಳಿಗ್ಗೆ– ಸಂಜೆ ತಾಸುಗಟ್ಟಲೇ ಸಂಚಾರ ಸಮಸ್ಯೆ ಆಗಿದೆ.

ಎರಡು ರಸ್ತೆಗಳ ಮಧ್ಯೆ ಉದ್ಯಾನ ಇದೆ. ಚಿಕ್ಕಬಾಣಾವರ ಕಡೆಯಿಂದ ವಾಹನ ಸವಾರರು ನಗರದ ಕಡೆಗೆ ಪೈಪ್ ಲೈನ್ ರಸ್ತೆ ಮೂಲಕ ಹಾದು ಹೋಗುತ್ತಾರೆ. ಹಾಗೆಯೇ ನಗರದ ಕಡೆಯಿಂದ ಬರುವಂತಹ ವಾಹನ ಸವಾರರು ಪೈಪ್‌ಲೈನ್ ಮೂಲಕ ಸಾಗುತ್ತಾರೆ.

ಈ ಮಧ್ಯೆ ಚಿಕ್ಕದಾದ ಪೈಪ್ ಲೈನ್ ರಸ್ತೆಯಲ್ಲಿ ದಟ್ಟಣೆ ಉಂಟಾಗಿ ವಾಹನ ಸವಾರರು ಹೈರಾಣಾಗುತ್ತಿದ್ದಾರೆ. ‘ಇಷ್ಟಾದರೂ ಬಿಬಿಎಂಪಿ ಅಧಿಕಾರಿಗಳು ಪಾದಚಾರಿ ಮಾರ್ಗದಲ್ಲಿ ವ್ಯಾಪಾರಿಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುತ್ತಿಲ್ಲ’ ಎಂಬುದು ಜನರ ಆರೋಪ.

‘ಈಗಾಗಲೇ ವ್ಯಾಪಾರಿಗಳನ್ನು ತೆರವುಗೊಳಿಸಿದರೂ ಮತ್ತೆ ಬಂದು ವ್ಯಾಪಾರ ಮಾಡುತ್ತಿದ್ದಾರೆ. ಇದರಿಂದ ನಿತ್ಯ ಸಂಚಾರ ದಟ್ಟಣೆ ಉಂಟಾಗಿ ಇತರ ವಾಹನ ಸವಾರರಿಗೂ ತೊಂದರೆ ಆಗುತ್ತಿದೆ. ಮಲ್ಲಸಂದ್ರ ವೃತ್ತದಿಂದ ಶನಿ ಮಹಾತ್ಮ ದೇವಸ್ಥಾನದ ಕಂಪೌಂಡ್‌ವರೆಗೆ ವೃತ್ತದವರೆಗೂ ಪಾದಚಾರಿ ಮಾರ್ಗ ಅತಿಕ್ರಮಿಸಲಾಗಿದೆ’ ಎಂದು ಸ್ಥಳೀಯರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಸಂಚಾರ ದಟ್ಟಣೆ ದೂರ ಬಂದಿದ್ದರಿಂದ ವ್ಯಾಪಾರಿಗಳನ್ನು ತೆರವುಗೊಳಿಸಿ ಕಬ್ಬಿಣದ ಗ್ರಿಲ್ ಅಳವಡಿಸಲಾಗಿತ್ತು. ವಾಹನ ಸವಾರರ ಅನುಕೂಲಕ್ಕಾಗಿ, ಪಾದಚಾರಿಗಳು ಸರಾಗವಾಗಿ ಓಡಾಡಲು ಈ ಕ್ರಮ ಕೈಗೊಳ್ಳಲಾಗಿದೆ. ಆದರೂ ಕೆಲವರು ವ್ಯಾಪಾರ ಮಾಡುತ್ತಿದ್ದಾರೆ. ಹಾಗಾಗಿ ಸಂಚಾರ ದಟ್ಟಣೆ ಉಂಟಾಗುತ್ತಿದೆ’ ಎಂದು ಶಾಸಕ ಎಸ್.ಮುನಿರಾಜು ಮಾಹಿತಿ ನೀಡಿದರು.



ಮಲ್ಲಸಂದ್ರ ಪೈಪ್ ಲೈನ್ ರಸ್ತೆಯ ಪಾರ್ಕ್ ಪಕ್ಕದ ಪಾದಚಾರಿ ಮಾರ್ಗದಲ್ಲಿ ಗ್ರಿಲ್ ಹಾಕಿದ್ದರೂ ವ್ಯಾಪಾರ ಮಾಡುತ್ತಿರುವುದು ಟ್ರಾಫಿಕ್ ಸಮಸ್ಯೆಗೆ ಕಾರಣವಾಗಿದೆ

# ಮಹಿಳೆಯರು ಎಲ್ಲೂ ಸುರಕ್ಷಿತವಾಗಿಲ್ಲ ಹೈಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ಮಹಿಳೆಯರ ಹಿಂಭಾಗ ಸೆರೆಹಿಡಿದು ಬಿತ್ತರಿಸಿದ ಆರೋಪ
- ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ನಕಾರ

ಬೆಂಗಳೂರು: ‘ಮಹಿಳೆಯರು ಯಾವ ಸ್ಥಳದಲ್ಲೂ ಸುರಕ್ಷಿತವಾಗಿಲ್ಲ’ ಎಂದು ತೀವ್ರ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ಮೆಟ್ರೊ ರೈಲಿನಲ್ಲಿ ಸಂಚರಿಸುವ ಮಹಿಳೆಯರ ದೇಹದ ಹಿಂಭಾಗಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿದು ಅವುಗಳನ್ನು ಇನ್‌ಸ್ಟಾಗ್ರಾಂನಲ್ಲಿ ಬಿತ್ತರಿಸಿ, ನಂತರ ಅಳಿಸಿಹಾಕಿದ ಆರೋಪಿಯ ವಿರುದ್ಧದ ಪ್ರಕರಣ ರದ್ದುಗೊಳಿಸಲು ನಿರಾಕರಿಸಿದೆ.

‘ನನ್ನ ವಿರುದ್ಧದ ಎಫ್‌ಐಆರ್ ಮತ್ತು ನಗರದ 2ನೇ ಹೆಚ್ಚುವರಿ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿನ ನ್ಯಾಯಿಕ ವಿಚಾರಣೆ ರದ್ದುಪಡಿಸಬೇಕು’ ಎಂದು ಕೋರಿ ಕರಿಹೋಬನಹಳ್ಳಿ ತಿಗಳರಪಾಳ್ಯ ಮುಖ್ಯರಸ್ತೆಯ ನಿವಾಸಿ ವಿ.ಕೆ.ದಿಗಂತ್ (28) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಅರ್ಜಿದಾರರು ಈ ಕೃತ್ಯ ಎಸಗಿಲ್ಲ. ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದರೆ ಗೊತ್ತಾಗುತ್ತದೆ’ ಎಂದು ಪ್ರತಿಪಾದನೆ ಮುಂದಿಟ್ಟರು. ಆದರೆ, ನ್ಯಾಯಮೂರ್ತಿಗಳು ವಕೀಲರ ಈ ಮಾತಿಗೆ ಕಿಡಿಕಿಡಿಯಾದರು.

ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರಲ್ಲದೆ, ‘ಇಂತಹ ಕೃತ್ಯ ಮಾಡಿ ಅದನ್ನು ಇನ್‌ಸ್ಟಾಗ್ರಾಂನಲ್ಲಿ ಮೆಟ್ರೊ ಚಿಕ್ ಎಂಬ ಹೆಸರಿನಲ್ಲಿ ಬಿತ್ತರಿಸಿರುವುದನ್ನು ಏನನ್ನು ಬಿಂಬಿಸುತ್ತದೆ ಗೊತ್ತಾ? ನಿಮ್ಮ ಅರ್ಜಿದಾರ ಮಾಡಿರುವ ಘನಂದಾರಿ ಕೆಲಸವನ್ನು ಅಪರಾಧ ಅಲ್ಲ ಎಂದು ಹೇಗೆ ಹೇಳುತ್ತೀರಿ? ಈ ಅರ್ಜಿಯಲ್ಲಿ ನಾನು ಯಾವುದೇ ತಾಂತ್ರಿಕ ಅಂಶಗಳ ಆಧಾರದಲ್ಲಿ ಆರೋಪಿ ಪಾರಾಗಲು ಬಿಡುವುದಿಲ್ಲ’ ಎಂದು ಎಚ್ಚರಿಸಿ ಅರ್ಜಿ ವಜಾ ಮಾಡಿದರು.



ಏನ್ರೀ ಇದೆಲ್ಲಾ ಅಸಂಬದ್ಧ? ಇಂಥಾದ್ದನ್ನೆಲ್ಲಾ ಮಾಡುವ ಇವರು ಯಾವ ರೀತಿಯ ಗಂಡಸರು? ಮಹಿಳೆಯರು ಎಲ್ಲೂ ಸುರಕ್ಷಿತವಾಗಿಲ್ಲ ಬಿಡುತ್ತಿದ್ದೀರಲ್ಲಾ ನೀವು?
ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಅರ್ಜಿದಾರರ ವಿರುದ್ಧ, ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) ಕಲಂ 78(2) (ಹಿಂಬಾಲಿಸುವುದು), 238(ಎ) (ಅಪರಾಧದ ಪುರಾವೆಯನ್ನು ಕಣ್ಮರೆ ಮಾಡುವುದು) ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ–2000 ಕಲಂ 67 (ಎಲೆಕ್ಟ್ರಾನಿಕ್ ರೂಪದಲ್ಲಿ ಅಶ್ಲೀಲ ವಿಷಯ ಪ್ರಕಟಿಸುವುದು ಅಥವಾ ರವಾನಿಸುವುದು) ಅಡಿಯಲ್ಲಿ ಬನಶಂಕರಿ ಪೊಲೀಸ್ ಠಾಣೆ ಪೊಲೀಸರು ಸ್ವಯಂಪ್ರೇರಿತವಾಗಿ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

### ಪೊಲೀಸರ ಕಾರ್ಯವೈಖರಿಗೆ ಮತ್ತೆ ಗರಂ

‘ಎರಡು ಹನಿ ಕಳವಾಗಿದೆ ಎಂದು ಪ್ರಕರಣ ದಾಖಲಿಸಿಕೊಳ್ಳುವ ಕರ್ನಾಟಕ ಪೊಲೀಸರು, ಗಂಭೀರ ಅಪರಾಧಗಳ ಬಗ್ಗೆ ತಲೆಕೆಡಿಸಿಕೊಳ್ಳುವುದು ಅಷ್ಟರಲ್ಲೇ ಇದೆ’ ಎಂದು ಹೈಕೋರ್ಟ್, ಪೊಲೀಸರ ಕಾರ್ಯವೈಖರಿ ಬಗ್ಗೆ ಮತ್ತೊಮ್ಮೆ ವ್ಯಂಗ್ಯವಾಡಿದೆ.

‘ಚನ್ನಪಟ್ಟಣ ಗ್ರಾಮಾಂತರ ಎಂ.ಕೆ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಮತ್ತು ಸ್ಥಳೀಯ ಜೆಎಂಎಫ್‌ಸಿ ಕೋರ್ಟ್‌ನಲ್ಲಿರುವ ವಿಚಾರಣೆ ರದ್ದುಗೊಳಿಸಬೇಕು’ ಎಂದು ಕೋರಿ ತೊರೆಹಳ್ಳಿಯ ಮಂಗಳಮ್ಮ ಸೇರಿದಂತೆ ಒಟ್ಟು ನಾಲ್ವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ವಿನೋದ್, ‘2024ರಲ್ಲಿ ಎರಡು ಹನಿ ಕಳುವಾಗಿವೆ ಎಂದು ಅರ್ಜಿದಾರರು ಒಂದೇ ಕುಟುಂಬದ ನಾಲ್ವರ ವಿರುದ್ಧ 2026ರಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದು ದೂರಿದರು.

ಇದಕ್ಕೆ ಪ್ರಾಸಿಕ್ಯೂಷನ್ ವಿರುದ್ಧ ಗರಂ ಆದ ನ್ಯಾಯಪೀಠ, ‘ಎರಡು ವರ್ಷಗಳ ಹಿಂದೆ ಎರಡು ಹಸು ನಾಪತ್ತೆಯಾಗಿವೆ ಎಂದು ಆರೋಪಕ್ಕೆ ಈಗ ಪ್ರಕರಣ ದಾಖಲಿಸಿದ್ದೀರಿ. ಆದರೆ, ನೈಜ ಅಪರಾಧ ಪ್ರಕರಣಗಳನ್ನು ನೀವು ದಾಖಲಿಸುವುದೇ ಇಲ್ಲ. ಸಂತ್ರಸ್ತರು ನೂರು ಬಾರಿ ಪೊಲೀಸ್ ಠಾಣೆ ಮೆಟ್ಟಿಲೇರಬೇಕಲ್ಲವೇ’ ಎಂದು ಕುಟುಕಿ ಪ್ರಕರಣದ ವಿಚಾರಣೆಗೆ ತಡೆ ನೀಡಿ ಆದೇಶಿಸಿದೆ.

# ತರಬೇತಿ: ಪ್ರಮಾಣ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೇಕರಿ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯಲ್ಲಿ ಬೇಕರಿ ತಂತ್ರಜ್ಞಾನದ ಕುರಿತು 14 ದಾರ ತರಬೇತಿ ಪಡೆದ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಎನ್. ಶಿವಲಿಂಗಯ್ಯ ಅವರು ಪ್ರಮಾಣ ಪತ್ರಗಳನ್ನು ವಿತರಿಸಿದರು.

ನಂತರ ಮಾತನಾಡಿದ ಅವರು, ‘ಗುಣಮಟ್ಟದ ಬೇಕರಿ ಪದಾರ್ಥಗಳನ್ನು ತಯಾರಿಸಿ, ಗ್ರಾಹಕರಿಗೆ ನೀಡಬೇಕು. ಉದ್ಯಮಿಗಳಲ್ಲಿ ನಿರ್ವಹಣೆ ಮತ್ತು ಮಾರುಕಟ್ಟೆ ಕೌಶಲ ಇರಬೇಕು. ಅದರ ಜೊತೆಗೆ ಸಂವಹನ ಕೌಶಲವಿದ್ದರೆ ಹೆಚ್ಚು ಲಾಭ ಪಡೆದುಕೊಳ್ಳಬಹುದು. ಯುವ ಪೀಳಿಗೆಯು ಇಂತಹ ತರಬೇತಿಗಳನ್ನು ಪಡೆದುಕೊಂಡು, ಜೀವನದಲ್ಲಿ ಯಶಸ್ಸು ಕಾಣಬೇಕು’ ಎಂದು ಕರೆ ನೀಡಿದರು.

















# ಜಲಮಂಡಳಿ ಆದಾಯ ಹೆಚ್ಚಳ

## ನೀರಿನ ದರ ಏರಿಕೆ ಪರಿಣಾಮ: ಬಾಕಿ ವಸೂಲಿ, ಅಕ್ರಮ ತಡೆ, ನೀರು ಸಂಸ್ಕರಣೆಗೆ ಒತ್ತು

• ಉಮೇಶಭಟ್ಟ ಪಿ.ಎಚ್

ಬೆಂಗಳೂರು: ಕಳೆದ ವರ್ಷ ನೀರಿನ ದರ ಏರಿಕೆ ಮಾಡಿದ ಜತೆಗೆ, ಹಳೆಯ ಬಾಕಿ ವಸೂಲಿಗೆ ಬಿಗಿ ಕ್ರಮ ಕೈಗೊಂಡಿದ್ದರಿಂದ ಜಲಮಂಡಳಿಯ ಆದಾಯ ಹೆಚ್ಚಾಗಿದೆ.

ಆದಾಯ ಹಾಗೂ ವೆಚ್ಚವನ್ನು ಸರಿದೂಗಿಸಿಕೊಳ್ಳಲು ಜಲಮಂಡಳಿ, ಹಲವು ವರ್ಷಗಳಿಂದ ನಾನಾ ಕ್ರಮಗಳನ್ನು ಅನುಸರಿಸುತ್ತಿದ್ದರೂ ಅದು ಸಾಧ್ಯವಾಗಿರಲಿಲ್ಲ. ಆದರೆ, ಕಾವೇರಿ 5ನೇ ಹಂತದ ಯೋಜನೆ ಜಾರಿ ನಂತರ ನೀರಿನ ಸಂಪರ್ಕ ಹೆಚ್ಚಳ, ತ್ಯಾಜ್ಯ ನೀರಿನ ಸಂಸ್ಕರಣೆ, ಅನಧಿಕೃತ ನೀರು ಹಾಗೂ ಒಳಚರಂಡಿ ಸಂಪರ್ಕ ತಪ್ಪಿಸುವ ಅಭಿಯಾನ, ತಂತ್ರಜ್ಞಾನ ಆಧಾರಿತ ಹಲವು ಸುಧಾರಣಾ ಕ್ರಮಗಳಿಂದಾಗಿ ಒಂದು ವರ್ಷದಲ್ಲಿ ಆದಾಯವು ಹೆಚ್ಚಾಗಿದೆ.

ಬೆಂಗಳೂರು ಜಲಮಂಡಳಿ 1964ರಲ್ಲಿ ಆರಂಭವಾಗಿದ್ದು ಆರು ದಶಕ ಕಳೆದರೂ ಆದಾಯ, ಖರ್ಚಿನ ಅಂತರ ಹೆಚ್ಚೇ ಇತ್ತು. ಜಲಮಂಡಳಿ ಕೊರತೆಯ ನಡುವೆ ಜನರಿಗೆ ಸೇವೆ ನೀಡುತ್ತಾ ಬಂದಿತ್ತು. ಆದರೆ, ನಾಲ್ಕೈದು ವರ್ಷಗಳಿಂದ ಹೊಸ ಯೋಜನೆ, ಬಾಕಿ ವಸೂಲಿ ಜತೆಗೆ ಆದಾಯ ಮೂಲಗಳನ್ನು ಬಲಪಡಿಸಿಕೊಳ್ಳುವ ಕ್ರಮಗಳನ್ನು ಜಾರಿಗೊಳಿಸುತ್ತಾ ಬಂದಿರುವುದರಿಂದ ಆದಾಯದಲ್ಲಿ ಗಣನೀಯ ಏರಿಕೆಯಾಗಿದೆ.

ವೆಚ್ಚವು ಮಾಸಿಕ ₹200 ಕೋಟಿ ಸಮೀಪಿಸಿದೆ. ಇದರಲ್ಲಿ ವಿದ್ಯುತ್‌ಗಾಗಿ ₹90 ಕೋಟಿ ಖರ್ಚಾಗುತ್ತಿದೆ. ಇನ್ನು ಮಾರ್ಚ್ ಮೂರನೇ ವಾರದ ಅಂತ್ಯಕ್ಕೆ ₹190 ಕೋಟಿ ಆದಾಯ ಸಂಗ್ರಹವಾಗಿದ್ದು ₹200 ಕೋಟಿ ತಲುಪುವ ಅಂದಾಜಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

**ವಿದ್ಯುತ್ ವೆಚ್ಚ ಉಳಿತಾಯ:** ಜಲಮಂಡಳಿ ಮಾಸಿಕ ಆದಾಯದ ಶೇ 50ರಷ್ಟನ್ನು ವಿದ್ಯುತ್ ಬಿಲ್‌ಗೆ ಪಾವತಿಸುತ್ತಿದೆ. ಸದ್ಯ ದಿನಕ್ಕೆ 9 ಕೋಟಿ ಯೂನಿಟ್ ವಿದ್ಯುತ್ ಬಳಕೆ ಮಾಡಲಾಗುತ್ತಿದೆ. ಈ ಪ್ರಮಾಣದಲ್ಲಿ ಶೇ 50ರಷ್ಟನ್ನಾದರೂ ತಗ್ಗಿಸುವ ಗುರಿಯನ್ನು ಜಲಮಂಡಳಿ ಇಟ್ಟುಕೊಂಡಿದೆ.

ಸೌರ ವಿದ್ಯುತ್ ಬಳಕೆ ಪ್ರಮಾಣ ಹೆಚ್ಚಿಸುವುದು ಜಲಮಂಡಳಿಯ ಮುಖ್ಯ ಗುರಿ. ಪ್ರತಿ ಯೂನಿಟ್‌ಗೆ ಸದ್ಯ ₹6.50 ದರ ಪಾವತಿಸಲಾಗುತ್ತಿದೆ. ಸೌರ ವಿದ್ಯುತ್ ಖರೀದಿಸಿದರೆ ಇಲ್ಲವೇ ಜಲಮಂಡಳಿ ಎಸ್‌ಟಿಪಿ ಆವರಣದಲ್ಲಿಯೇ ಸೌರವಿದ್ಯುತ್ ಘಟಕ ಆರಂಭಿಸಿದರೆ ಪ್ರತಿ ಯೂನಿಟ್‌ಗೆ ₹3 ರಷ್ಟು ಖರ್ಚಾಗಲಿದೆ. ಈ ಉಳಿತಾಯದಿಂದ ವೆಚ್ಚದ ಪ್ರಮಾಣದಲ್ಲಿ ಗಣನೀಯ ಇಳಿಕೆಯಾಗಲಿದೆ. ಸದ್ಯದಲ್ಲೇ ಇದು ಆರಂಭವಾಗಲಿದೆ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದರು.

**ಆದಾಯ ಹೆಚ್ಚಳಕ್ಕೆ ಕ್ರಮ:** ಜಲಮಂಡಳಿ ಬರೀ ನೀರು ಸರಬರಾಜು ಮಾಡಿ ಅದರಿಂದ ಬರುವ ಆದಾಯವನ್ನು ನೆಚ್ಚಿಕೊಳ್ಳುವ ಬದಲು ಪರ್ಯಾಯ ಮೂಲಗಳತ್ತಲೂ ಗಮನ ಹರಿಸಿದೆ.

ಇದರಲ್ಲಿ ತ್ಯಾಜ್ಯ ನೀರು ಸಂಸ್ಕರಣೆ ಮಾಡಿ ಅದನ್ನು ಕೈಗಾರಿಕೆಗಳಿಗೆ ಮಾರಾಟ ಮಾಡುವ ಚಟುವಟಿಕೆಯನ್ನು ಆರಂಭಿಸಿದೆ. ಸದ್ಯ ಸಣ್ಣ ಪ್ರಮಾಣದಲ್ಲಿ ಆರಂಭಗೊಂಡಿದ್ದು, 800 ಎಂಎಲ್‌ಡಿವರೆಗೂ ಸಂಸ್ಕರಿಸಿದ ನೀರು ಸರಬರಾಜು ಮಾಡಿ ₹30 ಕೋಟಿ ಆದಾಯ ಗಳಿಸುವ ಉದ್ದೇಶವಿದೆ.

ಕಾವೇರಿ 5ನೇ ಹಂತದ ಯೋಜನೆ ಸಂಪೂರ್ಣ ಜಾರಿಗೊಂಡು 4 ಲಕ್ಷ ನೀರಿನ ಸಂಪರ್ಕ ಪೂರ್ಣಗೊಳಿಸಿದರೂ ಆದಾಯದಲ್ಲಿ ಏರಿಕೆಯಾಗಲಿದೆ. ಯೋಜನೆ ಆರಂಭಗೊಂಡು 16 ತಿಂಗಳ ನಂತರವೂ ಬರೀ 80 ಸಾವಿರ ಸಂಪರ್ಕ ನೀಡಲು ಸಾಧ್ಯವಾಗಿದೆ.

ಅಲ್ಲದೇ ಜಲಮಂಡಳಿ ವ್ಯಾಪ್ತಿಯಲ್ಲಿ 29 ಸಾವಿರ ಅಪಾರ್ಟ್‌ಮೆಂಟ್‌ಗಳಿದ್ದು, ಅವುಗಳಲ್ಲೂ ಶೇ 50ರಷ್ಟು ಕಾವೇರಿ ನೀರಿನ ಸಂಪರ್ಕ ಇಲ್ಲ. ಅಲ್ಲಿಯೂ ಸಂಪರ್ಕ ಅಭಿಯಾನ ಚುರುಕುಗೊಳಿಸಿ ಆದಾಯ ಪ್ರಮಾಣ ಹೆಚ್ಚಿಸುವ ಗುರಿ ಹೊಂದಿದೆ ಎನ್ನುತ್ತಾರೆ ಜಲಮಂಡಳಿ ಅಧಿಕಾರಿಗಳು.

### ಮುಖ್ಯಾಂಶಗಳು

- ಸಂಪರ್ಕಗಳ ಸಂಖ್ಯೆ 10.80 ಲಕ್ಷ
- ₹190 ಕೋಟಿಯಿಂದ ₹200 ಕೋಟಿ ಆದಾಯ
- ₹200 ಕೋಟಿ ವೆಚ್ಚ




ಬೆಂಗಳೂರು ಜಲಮಂಡಳಿ ಕಚೇರಿ

### ಮೊದಲ 3ಂಗಳು ಒಟಿಎಸ್ ನೀರಸ

ಜಲಮಂಡಳಿಯು ಬಾಕಿ ವಸೂಲಿಗೆ ಒಂದು ಬಾರಿ ಪರಿಹಾರ ಯೋಜನೆಯನ್ನು (ಒಟಿಎಸ್) ಜಾರಿಗೊಳಿಸಿ ₹600 ಕೋಟಿ ಆದಾಯ ಸಂಗ್ರಹಿಸುವ ಗುರಿ ಹೊಂದಿದೆ. ಏಪ್ರಿಲ್‌ನಿಂದ ಜೂನ್‌ವರೆಗೂ ಯೋಜನೆ ಜಾರಿಯಲ್ಲಿರಲಿದೆ. ಮೊದಲ ತಿಂಗಳಿನಲ್ಲಿ 15 ಲಕ್ಷ ಗ್ರಾಹಕರಿಗೆ ನೋಟಿಸ್ ಜಾರಿಗೊಳಿಸುವ ಪ್ರಕ್ರಿಯೆ ನಡೆದಿದೆ. ಆದರೂ, ಈ ತಿಂಗಳಿನಲ್ಲಿ ಅಷ್ಟಾಗಿ ಆದಾಯ ಬಂದಿಲ್ಲ.

'ಮೇ ಹಾಗೂ ಜೂನ್ ತಿಂಗಳಲ್ಲಿ ಬಾಕಿ ವಸೂಲಿಯನ್ನು ಪರಿಣಾಮಕಾರಿ ಯಾಗಿ ಮಾಡಲಾಗುವುದು. ಇದರಿಂದ ಆ ಎರಡು ತಿಂಗಳು ಆದಾಯ ವೃದ್ಧಿ ಆಗಬಹುದು ಎಂದು ಜಲಮಂಡಳಿ ಆರ್ಥಿಕ ಶಾಖೆ ಅಧಿಕಾರಿಯೊಬ್ಬರು ತಿಳಿಸಿದರು.



> ಆದಾಯ ಹೆಚ್ಚಿಸಿಕೊಂಡು ವೆಚ್ಚದ ಪ್ರಮಾಣ ತಗ್ಗಿಸುವ ಪ್ರಯತ್ನ ಜಲಮಂಡಳಿಯಲ್ಲಿ ನಿರಂತರವಾಗಿ ನಡೆದಿದೆ. ಇದರಿಂದ ಸಂಸ್ಥೆ ಭವಿಷ್ಯದಲ್ಲಿ ಸ್ವಾವಲಂಬಿಯಾಗಲು ಸಹಕಾರಿಯಾಗಲಿದೆ
>
> **ಡಾ.ರಾಮಪ್ರಸಾತ್ ಮನೋಹರ್,** ಅಧ್ಯಕ್ಷ, ಬೆಂಗಳೂರು ಜಲಮಂಡಳಿ

## ಮಹಾರಾಷ್ಟ್ರ ಸಚಿವ ನಿತೇಶ್ ರಾಣೆಗೆ ಜೈಲು

ಮುಂಬೈ (ಪಿಟಿಐ): ವಿರೋಧ ಪಕ್ಷದಲ್ಲಿದ್ದಾಗ (2019ರಲ್ಲಿ) ಎನ್‌ಎಚ್‌ಎಐ ಎಂಜಿನಿಯರ್ ಮೇಲೆ ಮಣ್ಣು ಸುರಿದ ಪ್ರಕರಣದಲ್ಲಿ ಮಹಾರಾಷ್ಟ್ರದ ಸಚಿವ ನಿತೇಶ್ ರಾಣೆ ಅವರಿಗೆ ಸಿಂಧುದುರ್ಗದ ನ್ಯಾಯಾಲಯವು ಒಂದು ತಿಂಗಳ ಜೈಲು ಶಿಕ್ಷೆಯನ್ನು ಸೋಮವಾರ ವಿಧಿಸಿದೆ.

ಶಾಸಕರು ಕಾನೂನನ್ನು ಕೈಗೆ ತೆಗೆದುಕೊಳ್ಳಬೇಕಾಗಿಲ್ಲ ಎಂದ ನ್ಯಾಯಾಲಯವು ನಂತರ ರಾಣಾ ಅವರ ಶಿಕ್ಷೆಯನ್ನು ಅಮಾನತಿನಲ್ಲಿರಿಸಿ, ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಿದೆ. ಪ್ರಕರಣದ ಇತರ 29 ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆ.

'ಕಳಪೆ ಕಾಮಗಾರಿ ಹಾಗೂ ಜನರು ಎದುರಿಸುತ್ತಿರುವ ಸಮಸ್ಯೆಯ ಪರವಾಗಿ ಧ್ವನಿ ಎತ್ತುವುದು ರಾಣೆ ಅವರ ಉದ್ದೇಶ ವಾಗಿದ್ದರೂ, ಸರ್ಕಾರಿ ನೌಕರರನ್ನು ಸಾರ್ವಜನಿಕವಾಗಿ ಅವಮಾನಿಸ ಬಾರದು' ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ವಿ.ಎಸ್. ದೇಶ್‌ಮುಖ್ ಹೇಳಿದ್ದಾರೆ.

## ಲಡಾಖ್: 5 ಹೊಸ ಜಿಲ್ಲೆಗಳ ರಚನೆಗೆ ಒಪ್ಪಿಗೆ

ಲೇಹ್/ಜಮ್ಮು (ಪಿಟಿಐ): ಕೇಂದ್ರಾಡಳಿತ ಪ್ರದೇಶ ಲಡಾಖ್‌ನಲ್ಲಿ ಐದು ಹೊಸ ಜಿಲ್ಲೆಗಳ ರಚನೆಗೆ ಲಡಾಖ್ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರು ಸೋಮವಾರ ಒಪ್ಪಿಗೆ ನೀಡಿದ್ದಾರೆ. ಇದರೊಂದಿಗೆ ಈ ಪ್ರದೇಶದ ಜನರ ಬಹುಕಾಲದ ಆಕಾಂಕ್ಷೆ ಈಡೇರಿದಂತಾಗಿದೆ.

'ಲಡಾಖ್‌ನಲ್ಲಿ ಐದು ಹೊಸ ಜಿಲ್ಲೆಗಳ ರಚನೆಗೆ ಸಂಬಂಧಿಸಿದ ಅಧಿಸೂಚನೆಗೆ ನಾನು ಒಪ್ಪಿಗೆ ನೀಡಿದ್ದೇನೆ. ಲಡಾಖ್ ಜನರ ದೀರ್ಘ ಕಾಲದ ಬೇಡಿಕೆಯನ್ನು ಈಡೇರಿಸಿದ್ದೇನೆ. ಲಡಾಖ್‌ನ ಜನರಿಗೆ ಇದು ಐತಿಹಾಸಿಕ ದಿನ' ಎಂದು ಸಕ್ಸೇನಾ ಅವರು 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ನುಬ್ರಾ, ಶಾಮ್, ಚಾಂಗ್‌ಥಾಂಗ್, ಜಾನ್ಸ್ಕರ್ ಮತ್ತು ದ್ರಾಸ್– ಈ ಐದು ಹೊಸ ಜಿಲ್ಲೆಗಳ ರಚನೆಯೊಂದಿಗೆ ಲಡಾಖ್‌ನ ಒಟ್ಟು ಜಿಲ್ಲೆಗಳ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ ಎಂದು ಅವರು ಹೇಳಿದ್ದಾರೆ. ಈ ಮೊದಲು ಲಡಾಖ್‌ನಲ್ಲಿ ಎರಡು ಜಿಲ್ಲೆಗಳು (ಲೇಹ್ ಹಾಗೂ ಕಾರ್ಗಿಲ್) ಮಾತ್ರ ಇದ್ದವು.

'ಐದು ಹೊಸ ಜಿಲ್ಲೆಗಳ ರಚನೆಯು ಆಡಳಿತವನ್ನು ಜನರ ಹತ್ತಿರ ತರುವುದರ ಜೊತೆಗೆ ಅಭಿವೃದ್ಧಿ, ಉದ್ಯೋಗಾವಕಾಶ ಮತ್ತು ಉದ್ಯಮ ಶೀಲತೆಗೆ ಹೊಸ ಮಾರ್ಗಗಳನ್ನು ಸೃಷ್ಟಿಸಲಿದೆ' ಎಂದು ಸಕ್ಸೇನಾ ಅವರು ಹೇಳಿದ್ದಾರೆ.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 621 ಅಂಕಗಳಿಸಿದ ಬಾಗಲಗುಂಟೆ ಮಂಜುನಾಥ ನಗರದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ಹರ್ಷಿಣಿಗೆ ಶಾಸಕ ಎಸ್‌ಮುನಿರಾಜು ಅಭಿನಂದಿಸಿ ಉಚಿತ ಲ್ಯಾಪ್‌ಟಾಪ್ ಮತ್ತು ನಗದು ನೀಡಿದರು. ಶಿವರಾಜ್ ಫೌಂಡೇಷನ್ ಅಧ್ಯಕ್ಷೆ ಸುಜಾತ ಮುನಿರಾಜು, ಮುಖ್ಯಶಿಕ್ಷಕ ವೇಣುಗೋಪಾಲ್, ಕಾಯಕಯೋಗಿ ಸಹಕಾರ ಸಂಘದ ಅಧ್ಯಕ್ಷ ಬಸವರಾಜಣ್ಣ, ಹರ್ಷಿಣಿ ಪೋಷಕರು ಉಪಸ್ಥಿತರಿದ್ದರು

### ಚುಟುಕು ಸುದ್ದಿ

## ಎಎಬಿ: ವಕೀಲರ ಸಮಿತಿಗೆ ನೇಮಕ

ಬೆಂಗಳೂರು: ಬೆಂಗಳೂರು ವಕೀಲರ ಸಂಘದ (ಎಎಬಿ) ನಗರ ವಿಭಾಗದ ಉಪಾಧ್ಯಕ್ಷರನ್ನಾಗಿ ವಕೀಲರಾದ ಸಿ.ಎಸ್.ಕಾಂತರಾಜು, ಜಂಟಿ ಕಾರ್ಯದರ್ಶಿಯಾಗಿ ಕೆ.ಮುನಿರಾಜು ಅವರನ್ನು ನೇಮಕ ಮಾಡಲಾಗಿದೆ.

'ಕ್ರೀಡಾ ಸಮಿತಿಗೆ ಕೆ.ಎನ್.ಅಂಬರೀಷ್, ಸಾಂಸ್ಕೃತಿಕ ಸಮಿತಿಗೆ ಎಂ.ಆಶಾ, ಉಪಾಹಾರ ಗೃಹ ಸಮಿತಿಗೆ ಆತ್ಮ ವಿ. ಹಿರೇಮಠ, ಗ್ರಂಥಾಲಯಕ್ಕೆ ಉದಿತಾ ರಮೇಶ್, ಶಿಸ್ತುಪಾಲನಾ ಸಮಿತಿಗೆ ಎಚ್.ಎನ್.ತಮ್ಮಯ್ಯ, ಸದಸ್ಯರ ಕಲ್ಯಾಣ ಸಮಿತಿಗೆ ಜೆ.ಮಮತಾ, ಲಾ ರೀಸರ್ಚ್‌ಗೆ ಬಿ.ಆರ್.ಹರಿಣಿ, ಸಾಮಾಜಿಕ ಮಾಧ್ಯಮಕ್ಕೆ ವೀಣಾರಾವ್ ಮತ್ತು ಕೌಟುಂಬಿಕ ನ್ಯಾಯಾಲಯ ಸಮಿತಿಗೆ ಅಂಜಲಿ ಹಾಗೂ ದೀಕ್ಷಾ ಎನ್.ಅಮೃತೇಶ್ ಅವರನ್ನು ನೇಮಕ ಮಾಡಲಾಗಿದೆ' ಎಂದು ಎಎಬಿ ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲಕ್ಕೂರು: ಸಹಸ್ರ ಕಮಲ ಪುಷ್ಪಯಾಗ ಇಂದು

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಲಕ್ಕೂರು ಗ್ರಾಮದ ಇತಿಹಾಸ ಪ್ರಸಿದ್ಧ ಮಹಾಲಕ್ಷ್ಮೀ ದೇವಾಲಯದಲ್ಲಿ ಏ.28ರಂದು 15ನೇ ವರ್ಷದ ಸಹಸ್ರ ಕಮಲ ಪುಷ್ಪಾರ್ಚನೆ ಹಾಗೂ ಸಹಸ್ರ ಕಮಲ ಪುಷ್ಪಯಾಗ ಮಹೋತ್ಸವ ಮತ್ತು ಮಹಾಲಕ್ಷ್ಮೀಯವರ ಪ್ರಾಕಾರೋತ್ಸವ ನಡೆಯಲಿದೆ.

ಬೆಳಿಗ್ಗೆಯಿಂದ ನೆಲೆ ದೇವರಿಗೆ ಅಭಿಷೇಕ ಪೂಜೆ, ದೇವಾಲಯದ ಮುಂಭಾಗ ಹೋಮ ಹವನಗಳು ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಮಹಾಮಂಗಳಾರತಿ, ಶಾತ್ತುಮೊರೈ ನಂತರ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತಲೂ ಮಂಗಳ ವಾದ್ಯಗಳೊಂದಿಗೆ ಪ್ರದಕ್ಷಿಣೆ ಹಾಕಿಸಲಾಗುವುದು. ನಂತರ ಪ್ರಸಾದ ವಿನಿಯೋಗ ಇರಲಿದೆ ಎಂದು ಅರ್ಚಕ ವೇಣುಗೋಪಾಲ್ ತಿಳಿಸಿದ್ದಾರೆ.

## ಒಳ ಮೀಸಲಾತಿ ಹಂಚಿಕೆಗೆ ಸ್ವಾಗತ

ಬೆಂಗಳೂರು: ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಪ್ರಮಾಣವನ್ನು ಹಂಚಿಕೆ ಮಾಡಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಕರ್ನಾಟಕ ರಾಜ್ಯ ಆದಿಜಾಂಬವ ಸಂಘ ಸ್ವಾಗತಿಸಿದೆ.

ಪರಿಶಿಷ್ಟ ಜಾತಿಯ ಶೇಕಡ 15ರಷ್ಟು ಮೀಸಲಾತಿಯಲ್ಲಿ ಮಾದಿಗ ಸಮುದಾಯ (ಎಡಗೈ), ಛಲವಾದಿ (ಬಲಗೈ) ಸಮುದಾಯಕ್ಕೆ ತಲಾ ಶೇ 5.25ರಷ್ಟು ಹಾಗೂ ಅಲೆಮಾರಿ ಸಮುದಾಯಕ್ಕೆ ಶೇ 4.5ರಷ್ಟು ಒಳ ಮೀಸಲಾತಿ ಹಂಚಿಕೆ ಮಾಡುವ ಮೂಲಕ ಎಲ್ಲ ಸಮುದಾಯಗಳಿಗೆ ನ್ಯಾಯ ಒದಗಿಸಿದೆ ಎಂದು ಸಂಘದ ಕಾರ್ಯಾಧ್ಯಕ್ಷ ಜಂಬೂದ್ವೀಪ ಸಿದ್ಧರಾಜು ತಿಳಿಸಿದ್ದಾರೆ.

## ಯಶವಂತಪುರ ವಾರ್ಡ್ ಅಧ್ಯಕ್ಷರ ನೇಮಕ

ರಾಜರಾಜೇಶ್ವರಿನಗರ: ಯಶವಂತಪುರ ನಗರ ಮಂಡಲ ವ್ಯಾಪ್ತಿಯ ವಿವಿಧ ವಾರ್ಡ್‌ಗಳಿಗೆ ಬಿಜೆಪಿ ಅಧ್ಯಕ್ಷರನ್ನು ನೇಮಕ ಮಾಡಲಾಗಿದೆ.

ಸಾಗರ್(ದೊಡ್ಡಬಿದರಕಲ್ಲು), ಮಲ್ಲೇಶ್ ಮಂಡ್ಯ(ಅಂದ್ರಹಳ್ಳಿ), ಎಸ್.ಮಹೇಶ್(ಕೆಂಗೇರಿ ವಾರ್ಡ್), ಸತ್ಯನಾರಾಯಣ(ಶಿವನಪಾಳ್ಯ), ರಮೇಶ್(ನಾಡಪ್ರಭು ಕೆಂಪೇಗೌಡ), ಶಿವಲಿಂಗೇಗೌಡ(ಹೆರೋಹಳ್ಳಿ), ಶ್ರೀನಿವಾಸಮೂರ್ತಿ(ಬ್ಯಾಡರಹಳ್ಳಿ), ರವಿಕುಮಾರ್.ಎನ್(ಉಲ್ಲಾಳು), ಟಿ.ರಾಮಚಂದ್ರ(ಕೆಂಗೇರಿ ಕೋಟೆ), ಗಿರೀಶ್(ನಾಗದೇವನಹಳ್ಳಿ), ಬಾಲಾಜಿ ಸ್ವಾಮಿನಾಥ(ಕೆಂಗಲ್ ಹನುಮಂತಯ್ಯ ಪಶ್ಚಿಮ), ಶಶಿಕಿರಣ್(ತಲಘಟ್ಟಪುರ ವಾರ್ಡ್) ಅವರನ್ನು ನೇಮಕ ಮಾಡಲಾಗಿದೆ ಎಂದು ಮಂಡಲದ ಅಧ್ಯಕ್ಷ ಜಯರಾಮಗೌಡ ತಿಳಿಸಿದ್ದಾರೆ.

### ನಿಧನ ವಾರ್ತೆ

## ಗುಣಶೇಖರ ಮಾರಿ

ಬೆಂಗಳೂರು: ಮಾಜಿ ರಾಷ್ಟ್ರೀಯ ಅಥ್ಲೀಟ್ ಗುಣಶೇಖರ ಮಾರಿ (68) ಅವರು ಅನಾರೋಗ್ಯದಿಂದ ಬನ್ನೇರುಘಟ್ಟ ರಸ್ತೆಯ ಸ್ವಗೃಹದಲ್ಲಿ ಇತ್ತೀಚೆಗೆ ನಿಧನರಾದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ.



ಗುಣಶೇಖರ ಅವರು ಸ್ಪ್ರಿಂಟ್ (100 ಮೀ, 200 ಮೀ.) ಓಟಗಾರರಾಗಿದ್ದು, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದರು. ಅಖಿಲ ಭಾರತ ಎಂಜಿನಿಯರಿಂಗ್ ಕಾಲೇಜುಗಳ ಅಥ್ಲೆಟಿಕ್ ಕೂಟದಲ್ಲಿ ಚಾಂಪಿಯನ್ ಆಗಿದ್ದರು. 1980ರ ದಶಕದಲ್ಲಿ ಅವರು ಕರ್ನಾಟಕ ತಂಡವನ್ನು ವಿವಿಧ ಕೂಟಗಳಲ್ಲಿ ಪ್ರತಿನಿಧಿಸಿದ್ದರು. ರಾಜ್ಯದ ರಿಲೇ ತಂಡದ ಭಾಗವಾಗಿದ್ದರು. ಐಟಿಐನಲ್ಲಿ ಎಂಜಿನಿಯರ್ ಆಗಿದ್ದ ಅವರು ದೆಹಲಿಯಲ್ಲಿ ನಡೆದ ಪರ್ಮಿಟ್ ಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

### ಆರ್‌ಸಿಬಿ–ಜಿಟಿ ಪಂದ್ಯದ ಟಿಕೆಟ್: ಕಬ್ಬನ್‌ಪಾರ್ಕ್ ಠಾಣೆ ಪೊಲೀಸರಿಂದ ಹತ್ತು ಮಂದಿ ಬಂಧನ

# ಕಾಳಸಂತೆಯಲ್ಲಿ ಟಿಕೆಟ್ ಮಾರಾಟ: ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯಗಳ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ 10 ಆರೋಪಿಗಳನ್ನು ಕಬ್ಬನ್‌ಪಾರ್ಕ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಏಪ್ರಿಲ್ 24ರಂದು ನಡೆದಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಗುಜರಾತ್ ಟೈಟನ್ಸ್ (ಜಿಟಿ) ತಂಡಗಳ ನಡುವಿನ ಪಂದ್ಯದ ಟಿಕೆಟ್‌ಗಳನ್ನು ಆರೋಪಿಗಳು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಈ ಸಂಬಂಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಏಳು ಪ್ರಕರಣಗಳು ದಾಖಲಾಗಿವೆ. ಬಂಧಿತರಿಂದ ಪಿ–3 ಸ್ಟ್ಯಾಂಡ್‌ನ 6 ಮತ್ತು ರೋಜರ್ ಬಿನ್ನಿ ಸ್ಟ್ಯಾಂಡ್‌ನ 6 ಟಿಕೆಟ್ ಸೇರಿದಂತೆ ಒಟ್ಟು 19 ಟಿಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಟಿಕೆಟ್ ಖರೀದಿಸುವ ಸೋಗಿನಲ್ಲಿ ಮಫ್ತಿ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರದೀಪ್, ಸಾಗರ್, ಕಿರಣ್, ಜೀವನ್, ಭರತೇಶ್ ಸೇರಿದಂತೆ 10 ಮಂದಿಯ ವಿಚಾರಣೆ ನಡೆಸಲಾಗುತ್ತಿದೆ. ಕಾಂಪ್ಲಿಮೆಂಟರಿ ಟಿಕೆಟ್‌ಗಳನ್ನೂ ಆರೋಪಿಗಳು ಪಡೆದುಕೊಂಡು ಆ ಟಿಕೆಟ್‌ಗಳನ್ನು ಹಣಕ್ಕೆ ಮಾರಾಟ ಮಾಡುತ್ತಿದ್ದರು. ಆರೋಪಿಗಳಿಗೆ ಕಾಂಪ್ಲಿಮೆಂಟರಿ ಟಿಕೆಟ್‌ಗಳನ್ನು ನೀಡಿದವರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

### ಅಪರಾಧ ಸುದ್ದಿಗಳು

## ವಾಹನಗಳ ಕಳ್ಳತನ: ಆರೋಪಿ ಸೆರೆ

ಬೆಂಗಳೂರು: ಮನೆ ಎದುರು ಹಾಗೂ ರಸ್ತೆಬದಿಯಲ್ಲಿ ಸಾರ್ವಜನಿಕರು ನಿಲುಗಡೆ ಮಾಡುತ್ತಿದ್ದ ಬೈಕ್ ಹಾಗೂ ಸ್ಕೂಟರ್ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಯಲಹಂಕ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯ ಅಡಿಗರ ಕಾಲಹಳ್ಳಿಯ ನಿವಾಸಿ ಚಕ್ರವರ್ತಿ (31) ಬಂಧಿತ. ಆರೋಪಿಯಿಂದ ₹5 ಲಕ್ಷ ಮೌಲ್ಯದ ನಾಲ್ಕು ಸ್ಕೂಟರ್ ಹಾಗೂ ಒಂದು ಬೈಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಯಲಹಂಕ ಬಾಗಲೂರು ರಸ್ತೆಯ ಸಪ್ತಗಿರಿ ಲೇಔಟ್‌ನ ಕಲ್ಪನಾ ನಿಲಯದ ಎದುರು ನಿಲುಗಡೆ ಮಾಡಿದ್ದ ಸ್ಕೂಟರ್ ಅನ್ನು ಆರೋಪಿ ಕಳ್ಳತನ ಮಾಡಿದ್ದ. ಮಾಲೀಕರು ನೀಡಿದ ದೂರಿನ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.



ಚಕ್ರವರ್ತಿ

ಆರೋಪಿಯ ಬಂಧನದಿಂದ ಯಲಹಂಕ, ಸಂಪಿಗೆಹಳ್ಳಿ, ಯಲಹಂಕ ಉಪ ನಗರ, ಅಮೃತಹಳ್ಳಿ ಹಾಗೂ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಐದು ಪ್ರಕರಣಗಳು ಪತ್ತೆ ಆಗಿವೆ.

ಆರೋಪಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ. ನಕಲಿ ಕೀ ಬಳಸಿ, ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದೆ ಎಂಬುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

## ದ್ವಿಚಕ್ರ ವಾಹನದಲ್ಲಿ ಆರು ಮಕ್ಕಳು!

ಬೆಂಗಳೂರು: ಪಾದರಾಯನಪುರ ಬಳಿಯ ಗೋರಿಪಾಳ್ಯದಲ್ಲಿ ಆರು ಮಕ್ಕಳು ದ್ವಿಚಕ್ರ ವಾಹನದಲ್ಲಿ ಸವಾರಿ ಮಾಡುತ್ತಿರುವ ಫೋಟೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಫೋಟೊ ಆಧರಿಸಿ ಸ್ಕೂಟಿಯ ನೋಂದಣಿ ಸಂಖ್ಯೆ ಪತ್ತೆ ಮಾಡಲಾಯಿತು. ಬಳಿಕ, ವಾಹನ ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಮಾಗಡಿ ರಸ್ತೆ ಸಂಚಾರ ಠಾಣೆಯ ಪೊಲೀಸರು ಹೇಳಿದರು.

ಏಪ್ರಿಲ್ 26ರ ಬೆಳಿಗ್ಗೆ ಗೋರಿಪಾಳ್ಯದ ಬಳಿ ಆರು ಮಕ್ಕಳು ಒಂದೇ ದ್ವಿಚಕ್ರ ವಾಹನದಲ್ಲಿ ಹೋಗುತ್ತಿರುವುದನ್ನು ಗಮನಿಸಿದ್ದ ಸ್ಥಳೀಯರೊಬ್ಬರು ಫೋಟೊ ತೆಗೆದಿದ್ದರು. ಆ ಫೋಟೊವನ್ನು ಶ್ರೇಯಸ್ ಹೆಸರಿನ 'ಎಕ್ಸ್' ಖಾತೆಯಿಂದ ನಗರ ಸಂಚಾರ ಪೊಲೀಸರ 'ಎಕ್ಸ್' ಖಾತೆಗೆ ಟ್ಯಾಗ್ ಮಾಡಿ, ಮಕ್ಕಳಿಗೆ ವಾಹನ ನೀಡಿದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಲಾಗಿತ್ತು.

'ದ್ವಿಚಕ್ರ ವಾಹನದ ಮಾಲೀಕ ಬಾಪೂಜಿ ನಗರದ ನಿವಾಸಿ ಅಜ್ವರ್ ಪಾಷಾ ಎಂದು ಗೊತ್ತಾಗಿದೆ. ವಿಳಾಸ ಆಧರಿಸಿ ಅಜ್ವರ್ ಪಾಷಾ ಅವರ ಮನೆ ಬಳಿಗೆ ಹೋದಾಗ ಅವರು ಮನೆಯಲ್ಲಿ ಇರಲಿಲ್ಲ. ಬಳಿಕ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲು ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದ್ವಿಚಕ್ರ ವಾಹನವನ್ನು ಮಕ್ಕಳು ಚಾಲನೆ ಮಾಡುತ್ತಿರುವ ವಿಡಿಯೊ ದೊರೆತಿಲ್ಲ. ಮಕ್ಕಳನ್ನು ದ್ವಿಚಕ್ರ ವಾಹನದಲ್ಲಿ ಕೂರಿಸಿ ಫೋಟೊ ತೆಗೆಯಲು ಈ ರೀತಿ ಮಾಡಿರಬಹುದೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.



ದ್ವಿಚಕ್ರ ವಾಹನದಲ್ಲಿ ಆರು ಮಕ್ಕಳು

## ಬೆದರಿಕೆ: ನೊಂದು ವ್ಯಕ್ತಿ ಆತ್ಮಹತ್ಯೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ ಸುರೇಶ್ ಕುಮಾರ್ ಪುರೋಹಿತ್ (35) ಪ್ರಕರಣದ ತನಿಖೆ ನಡೆಸಿದ್ದ ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು, ಸಾವಿಗೆ ಕಾರಣವನ್ನು ಪತ್ತೆಹಚ್ಚಿದ್ದಾರೆ.

ರಾಜಸ್ಥಾನದ ಸುರೇಶ್ ಅವರು ಏಪ್ರಿಲ್ 2ರಂದು ಮರವೊಂದಕ್ಕೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಅಸಹಜ ಸಾವು ಪ್ರಕರಣ ದಾಖಲು ಮಾಡಿಕೊಂಡಿದ್ದ ಪೊಲೀಸರು ತನಿಖೆ ನಡೆಸಿದ್ದರು.

ಮೃತ ಸುರೇಶ್ ಕುಮಾರ್ ಅವರು ರಾಜಸ್ಥಾನದವರಾಗಿದ್ದು, ಅಲ್ಲಿ ಜಬರರಾಮ್ ಜತೆಗೆ ಜಗಳ ಮಾಡಿಕೊಂಡಿದ್ದರು. ಜಗಳ ವಿಕೋಪಕ್ಕೆ ಹೋಗಿ ಜಬರರಾಮ್ ಮತ್ತು ಸುರೇಶ್ ಪರಸ್ಪರ ಹಲ್ಲೆ ಮಾಡಿಕೊಂಡಿದ್ದರು. ಬಳಿಕ ಬೆಂಗಳೂರಿನ ಸ್ನೇಹಿತರಿಂದ ಪಾಠ ಕಲಿಸುವುದಾಗಿ ಸುರೇಶ್‌ಗೆ ಜಬರರಾಮ್ ಬೆದರಿಕೆ ಹಾಕಿದ್ದರು. ಕೆಲವು ದಿನ ಕಳೆದ ಮೇಲೆ ಸುರೇಶ್ ಬೆಂಗಳೂರಿಗೆ ಬಂದಿದ್ದರು. ಮಾರ್ಚ್ ಕೊನೆಯ ವಾರದಲ್ಲಿ ಜಬರರಾಮ್ ಸಹ ನಗರಕ್ಕೆ ಆಗಮಿಸಿದ್ದರು. ಸುರೇಶ್ ಮೇಲೆ ಹಲ್ಲೆ ನಡೆಸುವಂತೆ ಪ್ರವೀಣ್, ಭಾವೇಶ್, ನಿತೇಶ್ ಮತ್ತು ಮುಖೇಶ್ ಎಂಬುವವರಿಗೆ ಜಬರರಾಮ್ ಸೂಚಿಸಿದ್ದರು. ಹೋಟೆಲ್‌ನಲ್ಲಿ ಊಟ ಮುಗಿಸಿ ಸುರೇಶ್ ಹೊರಟಿದ್ದ ವೇಳೆ ಆರೋಪಿಗಳು ಹಲ್ಲೆ ನಡೆಸಿ, ಬೆದರಿಕೆ ಹಾಕಿದ್ದರು. ಅದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.



ಸುರೇಶ್ ಕುಮಾರ್

## ಹೋಟೆಲ್ ವ್ಯವಸ್ಥಾಪಕ ದುರ್ವರ್ತನೆ: ಎಫ್‌ಐಆರ್

ಬೆಂಗಳೂರು: ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ತಂದೂರ್ ಹೋಟೆಲ್‌ನಲ್ಲಿ ಊಟ ಮಾಡಲು ತೆರಳಿದ್ದಾಗ ಯುವತಿಯ ಜತೆಗೆ ದುರ್ವರ್ತನೆ ತೋರಿದ ಆರೋಪದಡಿ ಹೋಟೆಲ್ ವ್ಯವಸ್ಥಾಕನ ವಿರುದ್ಧ ಹಲಸೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವ್ಯವಸ್ಥಾಪಕ ರವಿ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು. 'ಸೋಮವಾರ ಮಧ್ಯಾಹ್ನ 2.30ರ ಸುಮಾರಿಗೆ ಸ್ನೇಹಿತನ ಜತೆಗೆ ಊಟಕ್ಕೆ ತೆರಳಿದ್ದೆ. ಆಗ ರವಿ ದುರ್ವತನೆ ತೋರಿದ್ದರು. ಉತ್ತಮ ರೀತಿಯಲ್ಲಿ ನಡೆದುಕೊಳ್ಳುವಂತೆ ತಿಳಿಸಿದಾಗ ಅವಾಚ್ಯ ಪದಗಳಿಂದ ನಿಂದನೆ ಮಾಡಿದ್ದರು. ಅಲ್ಲದೇ ಬಟ್ಟೆ ಹರಿಯಲು ಪ್ರಯತ್ನಿಸಿ ಹಲ್ಲೆ ನಡೆಸಿದ್ದಾರೆ' ಎಂದು ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

## ಬಾಡಿಗೆ ಮನೆಯಲ್ಲಿ ಯುವತಿ ಶವ ಪತ್ತೆ

ಬೆಂಗಳೂರು: ಆಡುಗೋಡಿಯ ಬಾಡಿಗೆ ಮನೆಯಲ್ಲಿ ಪೂಜಾ ದತ್ತ ಎಂಬ ಯುವತಿಯ ಮೃತದೇಹ ಪತ್ತೆಯಾಗಿದ್ದು, ಕೊಲೆಯ ಶಂಕೆ ವ್ಯಕ್ತವಾಗಿದೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಜಾರ್ಖಂಡ್‌ನ ಪೂಜಾ ಅವರು ಆಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಾಡಿಗೆಗೆ ಮನೆ ಪಡೆದು ನೆಲಸಿದ್ದರು. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮನೆಯಿಂದ ದುರ್ನಾತ ಬರುತ್ತಿದ್ದರಿಂದ ಅನುಮಾನಗೊಂಡ ಅಕ್ಕಪಕ್ಕದ ಮನೆಯ ನಿವಾಸಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದರು.

ಮೃತದೇಹದ ಮೇಲೆ ಬಟ್ಟೆ ಇರಲಿಲ್ಲ. ಕೊಳೆತ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಸಾವು ಸಂಭವಿಸಿ ಮೂರು ದಿನ ಕಳೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. 'ಇದು ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರ ಸಾವಿಗೆ ನಿಖರ ಕಾರಣ ತಿಳಿಯಲಿದೆ' ಎಂದರು.

## ಅಗ್ನಿ ಅವಘಡ: ಪಿ.ಜಿ ನಿವಾಸಿಗಳ ರಕ್ಷಣೆ

ಬೆಂಗಳೂರು: ನಂದಿನಿ ಲೇಔಟ್‌ನಲ್ಲಿ (ರಾಜಕುಮಾರ್ ಸ್ಮಾರಕದ ಸಮೀಪ) ಬ್ಲೂ–ಲೀಫ್ ಎಲ್‌ಇಡಿ ಗೋದಾಮಿನಲ್ಲಿ ಭಾನುವಾರ ತಡರಾತ್ರಿ ಅಗ್ನಿ ಅವಘಡ ಸಂಭವಿಸಿದ್ದು, ಅಪಾರ ನಷ್ಟ ಉಂಟಾಗಿದೆ.

ಬ್ಯಾನರ್‌ಗಳು ಮತ್ತು ಎಲ್‌ಇಡಿ ಸ್ಕ್ರೀನ್‌ಗಳನ್ನು ಸಂಗ್ರಹಿಸಿ ವಿತರಿಸುತ್ತಿದ್ದ ಗೋದಾಮು ಬೆಂಕಿಗೆ ಆಹುತಿಯಾಗಿದೆ. ಗೋದಾಮಿನ ಎದುರು ನಿಲುಗಡೆ ಮಾಡಿದ್ದ ಬುಲೆಟ್ ಬೈಕ್ ಹಾಗೂ ಸರಕು ಸಾಗಣೆ ಆಟೊ ಬೆಂಕಿಗೆ ಆಹುತಿಯಾಗಿದೆ. ಘಟನೆಗೆ ಶಾರ್ಟ್ ಸರ್ಕಿಟ್ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಅಗ್ನಿ ಅವಘಡದ ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ, ಕಾರ್ಯಪ್ರವೃತ್ತರಾಗಿ ಬೆಂಕಿಯನ್ನು ನಂದಿಸುವ ಕಾರ್ಯಾಚರಣೆ ನಡೆಸಿದರು. ಗೋದಾಮಿನ ಪಕ್ಕದಲ್ಲೇ ಇರುವ ಮಹಿಳಾ ಪೇಯಿಂಗ್ ಗೆಸ್ಟ್ ಹಾಗೂ ಮನೆಗಳಿಗೆ ಬೆಂಕಿ ತಗುಲುವ ಆತಂಕ ಎದುರಾಗಿತ್ತು. ಪಿ.ಜಿಯಲ್ಲಿದ್ದ 40ಕ್ಕೂ ಹೆಚ್ಚು ಯುವತಿಯರನ್ನು ರಕ್ಷಿಸಲಾಯಿತು ಎಂದು ಮೂಲಗಳು ತಿಳಿಸಿವೆ.

## ಅಪಘಾತ: ಬೈಕ್ ಸವಾರ ಸಾವು

ಬೆಂಗಳೂರು: ಹೊರ ವರ್ತುಲ ರಸ್ತೆಯ ಅಂಬೇಡ್ಕರ್ ಕಾಲೇಜಿನ ಗೇಟ್ ಬಳಿ ಸೋಮವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಹರೀಶ್ (28) ಅವರು ಮೃತಪಟ್ಟಿದ್ದಾರೆ. ಹಿಂಬದಿಯ ಸವಾರ ಕೌಶಿಕ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿಜಯನಗರದ ಆರ್‌ಪಿಸಿ ಲೇಔಟ್ ನಿವಾಸಿ ಹರೀಶ್ ಅವರು ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮುದ್ದಿನಪಾಳ್ಯದ ಸ್ನೇಹಿತರ ಮನೆಯಿಂದ ಆರ್‌ಪಿಸಿ ಲೇಔಟ್‌ನ ಮನೆಗೆ ವಾಪಸ್ ಬರುತ್ತಿದ್ದಾಗ ಅಪಘಾತ ಸಂಭವಿಸಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಹರೀಶ್ ಅವರು ಬೈಕ್ ಅನ್ನು ವೇಗವಾಗಿ ಚಾಲನೆ ಮಾಡುತ್ತಿದ್ದರು. ನಿಯಂತ್ರಣ ತಪ್ಪಿ ರಸ್ತೆಯ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಿಂದ ಕೆಳಗೆ ಬಿದ್ದು, ತೀವ್ರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಜ್ಞಾನಭಾರತಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ವಿಶ್ವ ಬೌದ್ಧ ಮಹಾಸಮ್ಮೇಳನದಲ್ಲಿ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಪ್ರಶ್ನೆ

# 'ಬೌದ್ಧ ಧರ್ಮ ಒಪ್ಪಿಕೊಳ್ಳಲು ಹಿಂಜರಿಕೆ ಏಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಜನ ಬೌದ್ಧ ಧರ್ಮವನ್ನು ಒಪ್ಪಿಕೊಳ್ಳುವುದಕ್ಕೆ ಯಾಕೆ ಹಿಂದೆ ಮುಂದೆ ನೋಡುತ್ತಿದ್ದಾರೆ' ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಪ್ರಶ್ನಿಸಿದರು.

ವಿಶ್ವ ಬೌದ್ಧ ಮಹಾಸಮ್ಮೇಳನ ಸಮಿತಿ, ಉಪಾಸಿಕ ಆ್ಯಂಡ್ ಉಪಾಸಕ ಚಾರಿಟಬಲ್ ಟ್ರಸ್ಟ್, ಇಂಟರ್‌ನ್ಯಾಷನಲ್ ಬುದ್ಧಿಸ್ಟ್ ಮಾಂಕ್ಸ್ ಚಾರಿಟಬಲ್ ಟ್ರಸ್ಟ್ ಹಾಗೂ ಚಾಮರಾಜನಗರದ ನಳಂದ ಜ್ಞಾನ ಮತ್ತು ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಸೋಮವಾರ ನಡೆದ ವಿಶ್ವ ಬೌದ್ಧ ಮಹಾಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಬೌದ್ಧ ಧರ್ಮ ವೈಚಾರಿಕ ಹಾಗೂ ವೈಜ್ಞಾನಿಕವಾಗಿದೆ. ಇದು ನಿಮ್ಮ ಜೀವನಮಟ್ಟವನ್ನು ಸುಧಾರಿಸುತ್ತದೆ. ಈ ಧರ್ಮ ನೈತಿಕವಾಗಿ ಒಳ್ಳೆಯ ನೆಲಗಟ್ಟು ಹಾಕಿಕೊಡುತ್ತದೆ. ಆದ್ದರಿಂದ ಈ ಧರ್ಮವನ್ನು ಅನುಸರಿಸಬೇಕು' ಎಂದರು.

ಚಾಮರಾಜನಗರದ ನಳಂದ ಜ್ಞಾನ ಮತ್ತು ಅಧ್ಯಯನ ಕೇಂದ್ರದ ಮುಖ್ಯಸ್ಥ ಭಂತೆ ಬೋಧಿದತ್ತ ಥೇರೋ ಮಾತನಾಡಿ, 'ಜಾತಿ ಹಾಗೂ ಧರ್ಮವನ್ನು ಮುಕ್ತಗೊಳಿಸುವ ಸಮಾಜ ನಿರ್ಮಿಸುವುದೇ ಪಂಚಶೀಲ ಪಾದಯಾತ್ರೆಯ ಉದ್ದೇಶವಾಗಿದೆ. ನಳಂದ ವಿಶ್ವವಿದ್ಯಾಲಯದ ಮಾದರಿಯಲ್ಲಿಯೇ ಚಾಮರಾಜನಗರದ ಪಂಚಶೀಲ ಬೆಟ್ಟದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುತ್ತಿದೆ' ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, 'ನಮ್ಮ ಸಮುದಾಯಗಳ ಜನ ಬುದ್ಧ ವಿಹಾರಗಳಿಗೆ ಭೇಟಿ ನೀಡಬೇಕು. ಬೌದ್ಧ ಬಿಕ್ಕುಗಳನ್ನು ಗೌರವಿಸಬೇಕು. ವಿಹಾರಗಳನ್ನು ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳಬೇಕು. ನಾವು ದೂರ ನಿಂತು ಮಾತನಾಡುವುದರಿಂದ ವಿಹಾರಗಳು ಉದ್ಧಾರ ಆಗುವುದಿಲ್ಲ. ಎಲ್ಲ ಬುದ್ಧ ವಿಹಾರಗಳಲ್ಲಿ ಮಹಾಬೋಧಿ ಸೊಸೈಟಿಯಲ್ಲಿರುವ ವಾತಾವರಣ ನಿರ್ಮಿಸಬೇಕು' ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಗಸೇನಾ ಬುದ್ಧ ವಿಹಾರಕ್ಕೆ ಭೇಟಿ ನೀಡಿ, ಬುದ್ಧನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ಆದರೆ, ಹುಷಾರಿಲ್ಲದ ಕಾರಣ ಉದ್ಘಾಟನಾ ಸಮಾರಂಭದಲ್ಲಿ ಭಾಗಿಯಾಗಲಿಲ್ಲ.

ಇದೇ ಸಂದರ್ಭದಲ್ಲಿ ಪಂಚಶೀಲ ಪಾದಯಾತ್ರೆ ಹಾಗೂ ಚಾಮರಾಜನಗರದ ಪಂಚಶೀಲ ಬೆಟ್ಟದಲ್ಲಿ 888 ಅಡಿ ಎತ್ತರದ ಬುದ್ಧನ ಪ್ರತಿಮೆ ನಿರ್ಮಾಣ ಯೋಜನೆಗೆ ಚಾಲನೆ ನೀಡಲಾಯಿತು.



ನಾಗಸೇನಾ ಬುದ್ಧವಿಹಾರದಲ್ಲಿರುವ ಬುದ್ಧನ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುಷ್ಪಾರ್ಚನೆ ಮಾಡಿದರು. ಎಂ. ವೆಂಕಟಸ್ವಾಮಿ, ಭಂತೆ ಬೋಧಿದತ್ತ ಥೇರೋ ಸೇರಿದಂತೆ ಇತರರು ಉಪಸ್ಥಿತರಿದ್ದರು

## ನೋಡಿ, ಇಲ್ಲಿದೆ ಕಸ!

ನಿಮ್ಮ ಬಡಾವಣೆಯಲ್ಲಿ ಕಸ ವಿಲೇವಾರಿ ಆಗುತ್ತಿಲ್ಲವೇ? ರಸ್ತೆಗಳಲ್ಲಿ ತ್ಯಾಜ್ಯ ಸುರಿಯಲಾಗುತ್ತಿದೆಯೇ? ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ಮಾಹಿತಿಯನ್ನು ನಿಮ್ಮ ಹೆಸರು, ವಿಳಾಸದೊಂದಿಗೆ 'ಪ್ರಜಾವಾಣಿ'ಗೆ ಕಳುಹಿಸಿ. **96060 38256**




ಮಲ್ಲತಹಳ್ಳಿ ಮುಖ್ಯ ರಸ್ತೆಯ ಸಿಮೆಂಟ್ ಅಂಗಡಿ ಹತ್ತಿರ ಬಹಳ ದಿನಗಳಿಂದ ಕಸದ ರಾಶಿ ಬಿದ್ದಿದೆ



ಅರಕೆರೆಯ ಮೈಕೊ ಬಡಾವಣೆ ಎರಡನೇ ಹಂತದ ಐದನೇ ಮುಖ್ಯ ರಸ್ತೆಯ ಬದಿಯಲ್ಲಿ ಕಸ ರಾಶಿ ಹಾಕಲಾಗಿದೆ



ಮಾರಗೊಂಡನಹಳ್ಳಿಯ ಮುಖ್ಯ ರಸ್ತೆಯಲ್ಲಿ ಎಲ್ಲೆಂದರಲ್ಲಿ ತ್ಯಾಜ್ಯದ ರಾಶಿ ಬಿದ್ದಿದ್ದು, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ



ಕೆಂಗೇರಿ ಮೆಟ್ರೊ ನಿಲ್ದಾಣದ ಹತ್ತಿರದ ದೊಡ್ಡಬೇಲೆಯ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದೆ

# ಕಾಲವೇ ಮಹಾವೈದ್ಯ



• ರಘು ವಿ.

ಮಾನುಷಜೀವನ ಕಾಲಮಿತಿಗೆ, ಕಾಲಗತಿಗೆ ಒಳಪಟ್ಟಿರುವುದು. ಇದನ್ನು ಅರಿತಾಗ ಮಾತ್ರ ಜೀವನದ ಕೊರಗುಗಳು ಕಡಿಮೆಯಾಗುವುದು. 'ಅತಿಯಾಗಿ ಕೊರಗಬಾರದು, ಕಾಲವೇ ಪರಿಹಾರ ನೀಡುವುದು' ಎಂಬುದು ಕೇವಲ ಸಮಾಧಾನದ ಮಾತಲ್ಲ—ಜೀವನದ ಆಳವಾದ ಸತ್ಯ. ಮಾನವಜೀವನದಲ್ಲಿ ನೋವು, ವೈಫಲ್ಯ, ನಿರಾಶೆ ಇವೆಲ್ಲವೂ ಅನಿವಾರ್ಯ. ಆದರೆ ಅವುಗಳನ್ನು ನಾವು ಹೇಗೆ ಸ್ವೀಕರಿಸುತ್ತೇವೆ ಎಂಬುದೇ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ. ಒಂದೇ ವಿಚಾರವನ್ನು ಮತ್ತೆ ಮತ್ತೆ ಚಿಂತಿಸುವುದು ಸಮಸ್ಯೆಯನ್ನು ಪರಿಹರಿಸುವುದಿಲ್ಲ; ಬದಲಾಗಿ ಅದು ಮನಸ್ಸಿನ ಶಾಂತಿಯನ್ನು ಕಳೆದುಹೋಗುವಂತೆ ಮಾಡುತ್ತದೆ.

ಕಾಲವು ಜೀವನವನ್ನು ಗುಣಪಡಿಸುವುದು ನೆನಪುಗಳನ್ನು ಅಳಿಸುವುದರಿಂದ ಅಲ್ಲ; ನಮ್ಮ ದೃಷ್ಟಿಕೋನವನ್ನು ಬದಲಿಸುವುದರಿಂದ, ನೋವಿನ ತೀವ್ರತೆಯನ್ನು ಕಡಿಮೆ ಮಾಡುವುದರಿಂದ, ಮತ್ತು ಹೊಸ ಅನುಭವಗಳಿಂದ ಜೀವನದ ಕ್ರಮಗಳನ್ನು ಪುನಾರಚಿಸುವುದರಿಂದ, ಹೊಸ ಆಲೋಚನೆಗಳನ್ನು ಮತ್ತು ರೂಪಿಸಲು ಅವಕಾಶ ನೀಡುವುದರಿಂದ. ಮನಸ್ಸು ತರಂಗವೂ ಹೌದು, ಪದರವೂ ಹೌದು. ಹರಿಯುವಾಗ ತರಂಗ, ನಿಂತಾಗ ಪದರ. ನಡೆದ ಘಟನೆಗಳ ವಿಶ್ಲೇಷಣೆ ಅಧಿಕವಾದಾಗ ಅದರ ಅತಿಯಾದ ಯೋಚನೆಯಿಂದ—ವಿಶ್ಲೇಷಣಾ ಸ್ತಂಭನ (analysis paralysis) ಉಂಟಾಗುತ್ತದೆ—ಇದು ಸ್ವಮರುಕದ, ಒಂದು ಸಂಕಟದ ಚಕ್ರವನ್ನು ಸೃಷ್ಟಿಸಿ, ಅದರಿಂದ ಬಿಡಿಸಿಕೊಳ್ಳುವ ಸಹಜ ಪ್ರಕ್ರಿಯೆಯನ್ನು ತಡೆಯುತ್ತದೆ.

ಇಂದಿನ ಧಾವಂತಯುಗದಲ್ಲಿ ತಕ್ಷಣ ಫಲಿತಾಂಶ ಬೇಕೆಂಬ ಆತುರ ಹೆಚ್ಚಾಗಿದೆ. ಆದರೆ ಪ್ರಕೃತಿಯಂತೆ ಜೀವನವೂ ತನ್ನದೇ ಗತಿಯಲ್ಲೇ ಸಾಗುತ್ತದೆ. ಬೀಜ ಬಿತ್ತಿದ ತಕ್ಷಣ ಮರವಾಗುವುದಿಲ್ಲ; ಹಾಗೆಯೇ ಸಮಸ್ಯೆಗಳಿಗೂ ತಕ್ಷಣ ಪರಿಹಾರ ಸಿಗುವುದಿಲ್ಲ. ಈ ಸತ್ಯವನ್ನು ಅರಿಯುವುದೇ ಜೀವನಜ್ಞಾನ. ಕಗ್ಗ 'ಬಾಳ್ಕೆಯಲಿ ನೂರೆಂಟು ತೊಡಕು ತಿಣುಕುಗಳುಂಟು, ಕೇಳ್ಕೆ ಮಾಣ್ಕೆಗಳಿಗವು ಜಗ್ಗವೊದಿನಿಸುಂ, ಗೋಳ್ಕರೆದರೇನು ಫಲ ಗುದ್ದಾಡಲೇನು ಫಲ, ಪಲ್ಕಿರಿದು ತಾಳಿಕೊಳೊ' ಎನ್ನುತ್ತದೆ. ಹೀಗಾಗಿ ಸಹನೆಯೆ ದೊಡ್ಡ ಶಕ್ತಿ, ಕಾಲವೇ ಪರಿಹಾರ.

ವಿದ್ಯಾರ್ಥಿಯೊಬ್ಬನು ಪರೀಕ್ಷೆಯಲ್ಲಿ ವಿಫಲನಾದಾಗ, ಅಥವಾ ಪ್ರೌಢನೊಬ್ಬ ಉದ್ಯೋಗದಲ್ಲಿ ಅವಕಾಶ ಕಳೆದುಕೊಂಡಾಗ, ಅವನಿಗೆ ಜಗತ್ತೇ ಕುಸಿದಂತೆ ಕಾಣಬಹುದು. ಆದರೆ ಕೆಲವು ತಿಂಗಳುಗಳ ನಂತರ ಅದೇ ಅನುಭವ ಅವನಿಗೆ ಹೊಸ ದಿಕ್ಕು ತೋರಿಸಬಹುದು. ಇದೇ ಸಮಯದ ಚಮತ್ಕಾರ. ಕಾಲ ಮಾಗಿಸುತ್ತದೆ, ಮಾಯಿಸುತ್ತದೆ. ಕವಿ ಖಲೀಲ್ ಗಿಬ್ರಾನ್, 'ನೋವು ನಿನ್ನ ಅರಿವನ್ನು ಮುಚ್ಚಿರುವ ಚಿಪ್ಪಿನ ಮುರಿಯುವಿಕೆ' (Your pain is the breaking of the shell that encloses your understanding) ಎಂದಿದ್ದಾನೆ. ಅಂದರೆ ನೋವೇ ನಮ್ಮ ಒಳಗಿನ ಅರಿವನ್ನು ವಿಸ್ತರಿಸುತ್ತದೆ. ಪರೀಕ್ಷೆಯ ಫಲಿತಾಂಶ, ಉದ್ಯೋಗದ ಏರುಪೇರು; ಅಷ್ಟೇ ಅಲ್ಲದೆ, ನಮ್ಮ ಜೀವನದಲ್ಲಿ ಪ್ರಿಯಜನರನ್ನು ಕಳೆದುಕೊಳ್ಳುವುದು ಅಥವಾ ಸಂಬಂಧಗಳಲ್ಲಿ ಬಿರುಕು ಉದ್ಭವಿಸುವುದು ಅತ್ಯಂತ ನೋವುಂಟುಮಾಡುವ ಸಂಗತಿಗಳು. ಈ ನೋವನ್ನು ತಕ್ಷಣ ಮರೆಯಲು ಸಾಧ್ಯವಿಲ್ಲ. ಆದರೆ ಕಾಲದೊಂದಿಗೆ ಅದು ನಿಧಾನವಾಗಿ ಮೃದುವಾಗುತ್ತದೆ. ಮೊದಲು ಕಣ್ಣೀರು ತಂದ ನೆನಪುಗಳು ನಂತರ ನಗುವಿಗೆ ಕಾರಣವಾಗಬಹುದು. ಇದೇ ಕಾಲದ ಔಷಧೀಯ ಗುಣ.

ಅತಿಯಾಗಿ ಚಿಂತಿಸುವುದು ದೇಹ ಮತ್ತು ಮನಸ್ಸಿನ ಆರೋಗ್ಯದ ಮೇಲೂ ದುಷ್ಪರಿಣಾಮವನ್ನು ಬೀರುತ್ತದೆ. ಆತಂಕ, ಒತ್ತಡ, ನಿದ್ರಾಹೀನತೆ—ಇವೆಲ್ಲವೂ ಅತಿಯಾದ ಚಿಂತನೆಯ ಫಲ. ಕಂಗೆಡದೆ ತಾಳುವುದು ಮತ್ತೊಂದು ಸೂತ್ರ. ಸಮಸ್ಯೆಗಳು ಬಂದಾಗ ಅದನ್ನು ಎದುರಿಸಬೇಕೇ ಹೊರತು ಕೈಚೆಲ್ಲಿ ಕೂರಬಾರದು. ಮನಸ್ಸಿಗೆ ಹೀರಿಕೊಳ್ಳುವ ಗುಣ. ಅದು ನಕಾರಾತ್ಮಕ ಆಲೋಚನೆಗಳನ್ನು ಹೀರಿಕೊಳ್ಳದಂತೆ ಎಚ್ಚರವಹಿಸಬೇಕಾದ್ದು ಮೊದಲ ಕ್ರಮ. ಆದರೆ ಕೆಲವೊಮ್ಮೆ ಅದು ನಮ್ಮ ದಂಡನೆ ಮೀರಿ ಹೀರಿಕೊಂಡಾಗ ಮನಸ್ಸನ್ನು ಹಗುರವಾಗಿಡಲು ಕೆಲವು ಸರಳ ಮಾರ್ಗಗಳಿವೆ. ಕುಟುಂಬದವರೊಂದಿಗೆ ಮನಬಿಚ್ಚಿ ಮಾತನಾಡುವುದು, ಪ್ರಕೃತಿಯ ಒಡನಾಟ, ಸ್ನೇಹಿತರೊಂದಿಗೆ ಹಾಸ್ಯ, ಒಳ್ಳೆಯ ಪುಸ್ತಕದ ಓದು, ಸಂಗೀತ, ಧ್ಯಾನ—ಇವೆಲ್ಲವೂ ಮನಸ್ಸಿಗೆ ಆರಾಮ ಕೊಡುತ್ತವೆ. ಇವು ನಮ್ಮ ಚಿಂತನೆಗೆ ಹೊಸ ದಿಕ್ಕು ನೀಡುತ್ತವೆ ಮತ್ತು ನಮ್ಮನ್ನು ಧನಾತ್ಮಕವಾಗಿ ರೂಪಿಸುತ್ತವೆ.

ಜೀವನದ ಪ್ರತಿಯೊಂದು ಕಷ್ಟವೂ ಒಂದು ಪಾಠವನ್ನು ಕಲಿಸುತ್ತದೆ. ವಿಫಲತೆ ನಮ್ಮನ್ನು ಕುಗ್ಗಿಸುವುದಿಲ್ಲ; ಅದು ನಮ್ಮನ್ನು ಬಲಿಷ್ಠಗೊಳಿಸುತ್ತದೆ—ನಾವು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು ಅಷ್ಟೆ. ಗರಡಿಯಲ್ಲಿ ಸಾಮು ಮಾಡಿದಾಗ ಮೈನೋವು ಬಂದೇ ಬರುತ್ತದೆ. ಆದರೆ ಕ್ರಮೇಣ ಮೈಹುರಿಗಟ್ಟಿ ಜಟ್ಟಿ ಕಾಳಗಕ್ಕೆ ತಯಾರಾಗುತ್ತಾನೆ. ಅವನು ಅನೇಕ ಸಲ ಮಟ್ಟಿಯ ಮಣ್ಣು ಮುಕ್ಕಿಯೇ ಮುಂದೆ ವಿಜಯಶಾಲಿಯಾಗುತ್ತಾನೆ. ಬದುಕಿನ ಸವಾಲುಗಳು ಕೂಡ ಹಾಗೆಯೇ. ಕಾಲದೊಂದಿಗೆ ನಾವು ನಮ್ಮ ಅನುಭವಗಳನ್ನು ಮೌಲ್ಯಮಾಪನ ಮಾಡಿಕೊಳ್ಳುತ್ತ ಸಾಗಿದರೆ ಉತ್ತಮ ವ್ಯಕ್ತಿಗಳಾಗುತ್ತೇವೆ.

ಕಾಲವೇ ಮಹಾವೈದ್ಯ ಎಂಬುದು ಸತ್ಯ. ಅದು ಗಾಯಗಳನ್ನು ಗುಣಪಡಿಸುತ್ತದೆ, ನೋವನ್ನು ಹಗುರಗೊಳಿಸುತ್ತದೆ ಮತ್ತು ಹೊಸ ಆಶೆಯನ್ನು ಮೂಡಿಸುತ್ತದೆ. ಆದ್ದರಿಂದ, ಅತಿಯಾಗಿ ಕೊರಗುವುದನ್ನು ಬಿಟ್ಟು, ಸಾಮರ್ಥ್ಯದ ಮೇಲೆ, ಸುಸಮಯದ ಮೇಲೆ ವಿಶ್ವಾಸವಿಟ್ಟು, ಧೈರ್ಯದಿಂದ ಮುಂದೆ ಸಾಗುವುದು ಜೀವನದ ಮರ್ಮ. ❖





# ಜಾತಕ ಪರೀಕ್ಷೆಗಿಂತ ಅಗತ್ಯ ಜೆನೆಟಿಕ್ ಪರೀಕ್ಷೆ

• ಡಾ.ಕುಶ್ವಂತ್ ಕೋಳಿಬೈಲು

ಭಾರತದಲ್ಲಿ ಹತ್ತಿರದ ಸಂಬಂಧಿಕರನ್ನು ಮದುವೆಯಾಗುವ ಸಂಪ್ರದಾಯವು ಹಲವು ಜಾತಿಗಳಲ್ಲಿ ಇದೆ. ಬಹಳ ಕಡಿಮೆ ಜನಸಂಖ್ಯೆಯಿರುವ ಸಮುದಾಯಗಳು ಮತ್ತು ಸಣ್ಣ ಪ್ರದೇಶಕ್ಕೆ ಸೀಮಿತವಾಗಿರುವ ಸಮುದಾಯಗಳ ಜನರು ತಮ್ಮ ತಮ್ಮೊಳಗೆ ಮದುವೆಯಾಗುವ ಕಾರಣದಿಂದಲೂ ಅವರಲ್ಲಿ ಆನುವಂಶೀಯ ಕಾಯಿಲೆಗಳು ಹೆಚ್ಚಾಗುವ ಸಾಧ್ಯತೆಯಿರುತ್ತದೆ.

ತಂದೆ ಮತ್ತು ತಾಯಿ ಹತ್ತಿರದ ಬಂಧುಗಳಾಗಿದ್ದರೆ ಅವರಲ್ಲಿರುವ ವಂಶವಾಹಿಗಳಲ್ಲಿ ಹೆಚ್ಚಿನ ಸಾಮ್ಯತೆಯಿರುತ್ತದೆ. ಅವರಿಬ್ಬರೂ ಕೆಲವು ಸುಪ್ತ ಹಾನಿಕಾರಕ ವಂಶವಾಹಿಗಳನ್ನು ಹೊಂದಿರುವ ಸಂಭವವಿರುತ್ತದೆ. ಹುಟ್ಟುವ ಮಕ್ಕಳು ತಂದೆ ಮತ್ತು ತಾಯಿ ಇಬ್ಬರ ಕಡೆಯಿಂದಲೂ ಈ ಹಾನಿಕಾರಕ ವಂಶವಾಹಿಗಳನ್ನು ತಮ್ಮದಾಗಿಸಿಕೊಂಡಾಗ ಅವರಲ್ಲಿ ಹಲವು ಕಾಯಿಲೆಗಳ ಲಕ್ಷಣವು ಕಂಡುಬರುತ್ತದೆ. ಈ ಕಾರಣದಿಂದಾಗಿ ಹತ್ತಿರದ ರಕ್ತಸಂಬಂಧಿಗಳಲ್ಲಿ ಮದುವೆಯಾಗುವುದರಿಂದ ಹಲವು ತೊಂದರೆಗಳು ಕಂಡುಬರಬಹುದೆಂದು ವೈದ್ಯರು ಎಚ್ಚರಿಸುತ್ತಾರೆ.

ಹುಟ್ಟುವ ಮಕ್ಕಳಲ್ಲಿ ಹೃದಯದ ತೊಂದರೆಗಳು, ಸೀಳುತುಟಿಯಂಥ ಜನ್ಮಜಾತ ದೋಷಗಳು ಕಂಡುಬರಬಹುದು. ಆನುವಂಶೀಯ ಕಾಯಿಲೆಗಳಾದ ಥಲಸೀಮಿಯಾ, ಸಿಕಲ್‌ಸೆಲ್ ಅನಿಮಿಯಾ ಕಾಯಿಲೆಗಳೂ ಬರಬಹುದು. ಇಂಥ ದಂಪತಿಗಳಲ್ಲಿ ಶಿಶುಮರಣದ ಅಪಾಯ ಮತ್ತು ಹುಟ್ಟುವ ಮಕ್ಕಳಲ್ಲಿ ಬುದ್ಧಿಮಾಂದ್ಯತೆಯೂ ಬರಬಹುದು. ವಂಶವಾಹಿಗಳಲ್ಲಿ ವೈವಿಧ್ಯ ಇಲ್ಲದಿರುವುದರಿಂದ ಇಂತಹ ಮಕ್ಕಳ ರೋಗ ನಿರೋಧಕ ಶಕ್ತಿ ಕಡಿಮೆಯಿರಬಹುದು.

ಒಂದು ವೇಳೆ ಹತ್ತಿರದ ಸಂಬಂಧಿಗಳಲ್ಲಿ ಮದುವೆಯಾಗುವ ಸಂದರ್ಭ ಬಂದರೆ ವಿವಾಹಪೂರ್ವ ಪರೀಕ್ಷೆಗಳನ್ನು ಇಬ್ಬರೂ ಮಾಡಿಸಿಕೊಳ್ಳುವುದು ಸೂಕ್ತ. ತಮ್ಮೊಳಗೆ ಯಾವುದಾದರೂ ಸುಪ್ತ ಹಾನಿಕಾರಕ ವಂಶವಾಹಿ ಇದ್ದಲ್ಲಿ ಅದೇ ರೀತಿಯ ವಂಶವಾಹಿಯು ತಮ್ಮನ್ನು ಮದುವೆಯಾಗುವವರಲ್ಲಿ ಇರಬಾರದು.

ವಿವಾಹಕ್ಕೂ ಮುನ್ನ ಜೆನೆಟಿಕ್ ಕೌನ್ಸೆಲಿಂಗ್ (ಆನುವಂಶಿಕ ಸಮಾಲೋಚನೆ) ಎನ್ನುವುದು ದಂಪತಿಗಳು ತಮ್ಮ ಮತ್ತು ಅವರ ಭವಿಷ್ಯದ ಮಕ್ಕಳ ಆರೋಗ್ಯದ ಬಗ್ಗೆ ತಿಳಿವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುವ ಪ್ರಕ್ರಿಯೆಯಾಗಿದೆ. ಇದು ವಿಶೇಷವಾಗಿ ಒಂದೇ ಕುಟುಂಬದೊಳಗಿಂದ ವಿವಾಹವಾಗುವವರಿಗೆ ಅಥವಾ ಕುಟುಂಬದಲ್ಲಿ ಆನುವಂಶಿಕ ಕಾಯಿಲೆಗಳ ಇತಿಹಾಸವಿರುವವರಿಗೆ ಅತ್ಯಗತ್ಯವಾಗಿರುತ್ತದೆ.

ಆನುವಂಶಿಕ ಸಮಾಲೋಚನೆಯ ಮೂಲಕ ಆನುವಂಶಿಕ ಸಮಸ್ಯೆಗಳನ್ನು ಅಂದಾಜು ಮಾಡಬಹುದು. ಕುಟುಂಬದ ಮೂರು ತಲೆಮಾರುಗಳ ಆರೋಗ್ಯ ಇತಿಹಾಸವನ್ನು ವಿಶ್ಲೇಷಿಸಿ, ಆನುವಂಶಿಕ ಅಸಹಜತೆ ಹೊಂದಿರುವ ಮಗುವನ್ನು ಹೊಂದುವ ಅಪಾಯದ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ ಜೆನಿಟಿಕ್ ಕ್ಯಾರಿಯರ್ ಸ್ಕ್ರೀನಿಂಗ್ ಮೂಲಕ ಥಲಸ್ಸೆಮಿಯಾ, ಸಿಕಲ್‌ಸೆಲ್ ಅನಿಮಿಯಾ, ಸಿಸ್ಟಿಕ್ ಫೈಬ್ರೋಸಿಸ್ ಮುಂತಾದ ಕಾಯಿಲೆಗಳಿಗೆ ಸಂಬಂಧಪಟ್ಟ ಸುಪ್ತ ಹಾನಿಕಾರಕ ವಂಶವಾಹಿಗಳನ್ನು ಹುಡುಕಲಾಗುತ್ತದೆ. ಆನುವಂಶಿಕತೆಯಿಂದ ಬರುವ ಕಾಯಿಲೆಗಳನ್ನು ಹೇಗೆ ತಡೆಗಟ್ಟಬಹುದು ಅಥವಾ ನಿರ್ವಹಿಸಬಹುದು ಎಂಬುದರ ಕುರಿತು ತಜ್ಞರಿಂದ ಮಾರ್ಗದರ್ಶನ ನೀಡಲಾಗುತ್ತದೆ.

ರಕ್ತಸಂಬಂಧಿಗಳಲ್ಲಿ ವಿವಾಹವಾಗುವವರಿಗೆ ಮತ್ತು ಕುಟುಂಬದಲ್ಲಿ ಯಾವುದೇ ಆನುವಂಶಿಕ ಕಾಯಿಲೆಗಳ (ಉದಾಹರಣೆಗೆ ಥಲಸ್ಸೆಮಿಯಾ) ಇತಿಹಾಸವಿದ್ದವರು ಮಕ್ಕಳನ್ನು ಹೊಂದುವ ಮುನ್ನ ಆನುವಂಶಿಕ ಸಮಾಲೋಚನೆ ಮಾಡುವುದು ಅತ್ಯಗತ್ಯವಾಗಿದೆ. ಯಾರಿಗಾದರೂ ನಿರಂತರ ಗರ್ಭಪಾತಗಳಾಗಿದ್ದರೆ ಅದರ ಹಿಂದೆಯು ಆನುವಂಶಿಕ ಕಾರಣಗಳಿರಬಹುದು. ಮಗುವಿಗಾಗಿ ಪ್ರಯತ್ನಿಸುತ್ತಿರುವ ಮಹಿಳೆಯ ವಯಸ್ಸು ಮೂವತ್ತೈದು ವರ್ಷಕ್ಕೂ ಹೆಚ್ಚಾಗಿದ್ದಲ್ಲಿ ಆನುವಂಶಿಕ ಸಮಾಲೋಚನೆ ಮಾಡಿಸಿಕೊಳ್ಳುವುದು ಉತ್ತಮ.

ಜೆನೆಟಿಕ್ ಕೌನ್ಸೆಲಿಂಗ್‌ಗೆ ಹೋಗುವಾಗ ನಿಮ್ಮ ಕುಟುಂಬದ ಮೂರು ತಲೆಮಾರುಗಳ ಆರೋಗ್ಯ ಇತಿಹಾಸ ಮತ್ತು ಲಭ್ಯವಿರುವ ಯಾವುದೇ ವೈದ್ಯಕೀಯ ವರದಿಗಳನ್ನು ಜೊತೆಯಲ್ಲಿಟ್ಟುಕೊಳ್ಳುವುದು ಸಹಕಾರಿಯಾಗುತ್ತದೆ. ವೈದ್ಯಕೀಯ ಸಂಶೋಧನೆಗಳ ಪ್ರಕಾರ, ಅಪರಿಚಿತ ಕುಟುಂಬಗಳ ನಡುವಿನ ಮದುವೆಗೆ ಹೋಲಿಸಿದರೆ ರಕ್ತ ಸಂಬಂಧಿಗಳ ನಡುವಿನ ಮದುವೆಯಲ್ಲಿ ಜನ್ಮಜಾತ ದೋಷಗಳ ಅಪಾಯ ಸುಮಾರು ಎರಡು ಪಟ್ಟು ಹೆಚ್ಚಾಗಿರುತ್ತದೆ.

ಗರ್ಭಧಾರಣೆಯಾದ ನಂತರವೂ ಒಳಗಿರುವ ಮಗುವಿನಲ್ಲಿ ಆನುವಂಶಿಕ ಕಾಯಿಲೆಗಳು ಇರುವುದನ್ನು ಪತ್ತೆಹಚ್ಚುವ ಸೌಲಭ್ಯವಿದೆ. ಒಳಗಿರುವ ಮಗುವಿನಲ್ಲಿ ಯಾವುದಾದರು ಗಂಭೀರವಾದ ಕಾಯಿಲೆಗಳು ಇದ್ದಲ್ಲಿ ವೈದ್ಯಕೀಯ ಗರ್ಭಪಾತ ಮಾಡಿಸಿಕೊಳ್ಳುವ ಆಯ್ಕೆಯೂ ತಂದೆ-ತಾಯಿಯರ ಮುಂದೆ ಲಭ್ಯವಿರುತ್ತದೆ. ತಾಯಿ ರಕ್ತದಲ್ಲಿ ಕೆಲವು ಮಾರ್ಕರ್ ಕಣಗಳನ್ನು ಪರೀಕ್ಷೆ ಮಾಡುವುದರ ಮೂಲಕ ಡೌನ್ ಸಿಂಡ್ರೋಮ್, ಎಡ್ವರ್ಡ್ ಸಿಂಡ್ರೋಮ್ ಕಾಯಿಲೆಗಳು ಮಗುವಿನಲ್ಲಿ ಇರುವ ಸಾಧ್ಯತೆಗಳನ್ನು ಅಂದಾಜಿಸಬಹುದು. ತಾಯಿಯ ರಕ್ತದೊಳಗೆ ಬರುವಿನ ಮಗುವಿನ ಡಿಎನ್‌ಎಗಳನ್ನು ಪರೀಕ್ಷೆ ಮಾಡುವುದರ ಮೂಲಕ ಮತ್ತು ಗರ್ಭಕೋಶದ ದ್ರವವನ್ನು ಪರೀಕ್ಷೆಗೆ ಒಳಪಡಿಸುವುದರ ಮೂಲಕ ಹುಟ್ಟಲಿರುವ ಮಗುವಿನಲ್ಲಿ ಬರಬಹುದಾದ ಗಂಭೀರ ಕಾಯಿಲೆಗಳನ್ನು ಅಂದಾಜಿಸಬಹುದು.

ವೈದ್ಯಕೀಯ ವಿಜ್ಞಾನ ಮುಂದುವರಿದ ಹಾಗೆ ಕಾಯಿಲೆ ಬಂದ ನಂತರ ತಡೆಯುವುದಕ್ಕಿಂತ ಕಾಯಿಲೆಯು ಬರದಂತೆ ತಡೆಯುವುದರತ್ತ ಜನರಿಗೆ ಹೆಚ್ಚಿನ ಆಸಕ್ತಿಯಿದೆ. ಈ ಕಾರಣಗಳಿಂದಾಗಿ ತಂದೆ ತಾಯಿಯಾಗಲು ಬಯಸುವವರಲ್ಲಿ ಜೆನೆಟಿಕ್ ಕೌನ್ಸೆಲಿಂಗ್ ಮಾಡಿಸಿಕೊಳ್ಳವವರ ಸಂಖ್ಯೆಯು ವಿದೇಶಗಳಲ್ಲಿ ಹೆಚ್ಚಾಗುತ್ತಿದೆ. ❖

## ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ | MATHS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾ ರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

### ವಾಸ್ತವ ಸಂಖ್ಯೆಗಳು

ಯೂಕ್ಲಿಡ್‌ನ ಭಾಗಾಕಾರ ಅನುಪ್ರಮೇಯ: ದತ್ತ ಧನ ಪೂರ್ಣಾಂಕಗಳಾದ a ಮತ್ತು b ಗಳಿಗೆ, $a = bq+r$ ಗೆ ಸರಿಹೊಂದುವಂತೆ q ಮತ್ತು r ಎಂಬ ಎರಡು ಅನನ್ಯ ಪೂರ್ಣಾಂಕಗಳಿರುತ್ತವೆ ಮತ್ತು ಇಲ್ಲಿ $0 \le r < b$ ಆಗಿರುತ್ತದೆ

'ಯೂಕ್ಲಿಡ್‌ನ ಭಾಗಾಕಾರ ಕ್ರಮವಿಧಿಯನ್ನು ಸ್ಪಷ್ಟವಾಗಿ ನಿರೂಪಿಸುವುದು. $c > d$ ಆಗಿರುವಂತಹ c ಮತ್ತು d ಎಂಬ ಎರಡು ಧನ ಪೂರ್ಣಾಂಕಗಳ ಮ.ಸಾ.ಅ.ವನ್ನು ಕಂಡುಹಿಡಿಯಲು ನಾವು ಕೆಳಗಿನ ಹಂತಗಳನ್ನು ಅನುಸರಿಸುತ್ತೇವೆ.

ಹಂತ 1: ಯೂಕ್ಲಿಡ್‌ನ ಭಾಗಾಕಾರ ಅನುಪ್ರಮೇಯವನ್ನು c ಮತ್ತು d ಗಳಿಗೆ ಅನ್ವಯಿಸಿದಾಗ, $c= dq+r$ ಆಗುವಂತೆ q ಮತ್ತು r ಎಂಬ ಎರಡು ಪೂರ್ಣ ಸಂಖ್ಯೆಗಳನ್ನು ನಾವು ಪಡೆಯುತ್ತೇವೆ.
ಇಲ್ಲಿ $0 \le r < d$ ಆಗಿರುತ್ತದೆ.

ಹಂತ 2: $r = 0$ ಆದರೆ, dಯು c ಮತ್ತು dಗಳ ಮ.ಸಾ.ಅ. ಆಗಿರುತ್ತದೆ. $r \ne 0$ ಆದರೆ, ಭಾಗಾಕಾರ ಅನುಪ್ರಮೇಯವನ್ನು d ಮತ್ತು r ಗಳಿಗೆ ಅನ್ವಯಿಸಿ.

ಹಂತ 3: ಶೇಷವು ಸೊನ್ನೆಯಾಗುವ ತನಕ ಈ ಪ್ರಕ್ರಿಯೆಯನ್ನು ಮುಂದುವರಿಸಿ. ಈ ಹಂತ (ಶೂನ್ಯ ಶೇಷ) ದಲ್ಲಿನ ಭಾಜಕವು ಅಪೇಕ್ಷಿತ ಮ.ಸಾ.ಅ. ಆಗಿರುತ್ತದೆ.

ಇಲ್ಲಿ ಮ.ಸಾ.ಅ (c,d) = ಮ.ಸಾ.ಅ. (d,r) ಆಗಿರುವುದರಿಂದ, ಈ ಕ್ರಮವಿಧಿಯು ಕಾರ್ಯನಿರ್ವಹಿಸುತ್ತದೆ. ಇಲ್ಲಿ ಮ.ಸಾ.ಅ. (c,d) ಎಂಬ ಸಂಕೇತವು c ಮತ್ತು dಗಳ ಮ.ಸಾ.ಅ.ವನ್ನು ಸೂಚಿಸುತ್ತದೆ.

**ಅಭ್ಯಾಸ 1.1**

1) ಕೆಳಗಿನ ಪ್ರತಿ ಸಂಖ್ಯೆಯ ಅದರ ಅವಿಭಾಜ್ಯ' ಅಪವರ್ತನಗಳನ್ನು ಕಂಡುಹಿಡಿಯಿರಿ
(1) 140 (2)156 (3)3825 (4)5005 (5)7429
ಉತ್ತರ:–

1) 140 =
2|140
2|70
5|35
7|7
1
$=2^2 \times 5 \times 7$

2) 156 =
2|156
2|78
3|39
13|13
1
$= 2^2 \times 3 \times 13$

3) 3825 =
5|3825
5|765
3|153
3|51
17|12
1
= 3 x 3 x5 x5 x 17
$=3^2 \times 5^2 \times 17$

4) 5005 =
5|5005
7|1001
11|143
13|13
1
= 5 x7 x11 x13

4)7429 =
17|7429
19|437
23|23
1
= 17 x19 x23

2) ಕೆಳಗೆ ನೀಡಿರುವ ಜೋಡಿ ಲಸಾಅ ಮತ್ತು ಮಸಾಅ ಕಂಡು ಹಿಡಿದು ಲಸಾಅXಮಸಾಅ = ಆ ಎರಡು ಸಂಖ್ಯೆಗಳ ಗುಣಲಬ್ಧ ಎಂಬುದನ್ನು ತಾಳೆ ನೋಡಿ (1) 26 ಮತ್ತು 91 (2) 510 ಮತ್ತು 92 (3) 336 ಮತ್ತು 54

ಉತ್ತರ:– (1) 26 ಮತ್ತು 91

a = 26
2|26
13|13
1

b = 91
7|91
13|13
1

∴ 26 = 2 x 13
91 = 7 x 13
ಎರಡು ಸಂಖ್ಯೆಗಳ ಮಸಾಅ=13
ಎರಡು ಸಂಖ್ಯೆಗಳ ಲಸಾಅ = 2 x7 x13
= 14 x 13
= 182

ಲಸಾಅ x ಮಸಾಅ = a x b
13x 182 = 26x91
2366 = 2366

ಉತ್ತರ:– (2) 510 ಮತ್ತು 92

a = 510
2|510
5|255
3|51
17|17
1

b = 92
2|92
2|46
23|23
1

∴ 510 = 2 x 5 x3 x 17
= 2 x 3 x5 x17
92 = 2 x 2 x 23
$= 2^2 \times 23$
ಎರಡು ಸಂಖ್ಯೆಗಳ ಮಸಾಅ = 2
ಎರಡು ಸಂಖ್ಯೆಗಳ ಲಸಾಅ = 2 x 2 x 3 x 5 x 17 x 23
= 4 x 3 x 5 x 17 x 23
= 60 x 17 x 23
= 23460

ಲಸಾಅ x ಮಸಾಅ = a x b
(a b) x (a b) = a x b
2 x 23460 = 510x92
46920 = 46920

(ಮುಂದುವರಿಯುವುದು)

### Inverse trigonometric functions

**Muliple Choice Questions**

**1)The principal value branch of $\sin^{-1}x$.**
(A) $\left(-\frac{\pi}{2},\frac{\pi}{2}\right)$ (B) $[0,\pi]$
(C) $\left[-\frac{\pi}{2},\frac{\pi}{2}\right]$ (D) $[-1,1]$
**Ans:- C**

**2. The domain of $f(x)=\sin^{-1}x$.**
(A) $(-1,1)$ (B) $[0,\pi]$
(C) $(-\infty,\infty)$ (D) $[-1,1]$
**Ans:-D**

**3. The principal value branch of $\cos^{-1}x$.**
(A) $[-1,1]$ (B) $(0,\pi)$
(C) $\left[-\frac{\pi}{2},\frac{\pi}{2}\right]$ (D) $[0,\pi]$
**Ans:-D**

**4. The domain of $\cos^{-1}x$**
(A) $(-1,1)$ (B) $[0,\pi]$
(C) $(0,\pi)$ (D) $[-1,1]$
**Ans:-D**

**5. The principal value branch of $\tan^{-1}x$**
(A) $\left(-\frac{\pi}{2},\frac{\pi}{2}\right)$ (B) $(0,\pi)$
(C) $[-\infty,\infty]$ (D) $(-\infty,\infty)$
**Ans:-A**

**Answer the following**

**1. Define inverse sine function.**
**Ans:-** Inverse sine function is defined as –
If $\sin\theta = x, -\frac{\pi}{2} \le x \le \frac{\pi}{2}$,
then $\sin^{-1}x = \theta, -1 \le x \le 1$,
is called inverse sine function.
i.e., $\sin^{-1}x = \theta$
$$\Leftrightarrow \sin\theta = x; \begin{cases} -\frac{\pi}{2} \le \theta \le \frac{\pi}{2} \\ -1 \le x \le 1 \end{cases}$$

**2. Define inverse cosine function.**
**Ans:-** Inverse cosine function is defined as –
If $\cos\theta = x, 0 \le \theta \le \pi$, then,
$\cos^{-1}x = \theta, -1 \le x \le 1$, is called inverse cosine function.
i.e., $\cos^{-1}x = \theta$
$$\Leftrightarrow \cos\theta = x; \begin{cases} 0 \le \theta \le \pi \\ -1 \le x \le 1 \end{cases}$$

**3. Define inverse tangent function.**
**Ans:-** Inverse tangent function is defined as –
If $\tan\theta = x, -\frac{\pi}{2} < \theta < \frac{\pi}{2}$, then,
$\tan^{-1}x = \theta, -\infty < x < \infty$, is called inverse tangent function.
i.e., $\tan^{-1}x = \theta$
$$\Leftrightarrow \tan\theta = x; \begin{cases} -\frac{\pi}{2} < \theta < \frac{\pi}{2} \\ -\infty < x < \infty \end{cases}$$

**4. Define inverse cosecant function.**
**Ans:-** Inverse cosecant function is defined as –
If $\operatorname{cosec}\theta = x, -\frac{\pi}{2} \le \theta \le \frac{\pi}{2}, \theta \ne 0$,
then $\operatorname{cosec}^{-1}x = \theta, x \le -1$ or $x \ge 1$,
is called inverse cosecant function.
ie., $\operatorname{cosec}^{-1}x = \theta$
$$\Leftrightarrow \operatorname{cosec}\theta = x; \begin{cases} -\frac{\pi}{2} \le \theta \le \frac{\pi}{2}, \theta \ne 0 \\ x \le -1 (\text{or}) x \ge 1 \end{cases}$$

5. Define inverse secant function.
Ans:- **Inverse secant function is defined as –**
If $\sec\theta = x, 0 \le \theta \le \pi, \theta \ne \frac{\pi}{2}$;
then, $\sec^{-1}x = \theta, x \le -1 (\text{or}) x \ge 1$,
is called inverse secant function.
i.e., $\sec^{-1}x = \theta$
$$\Leftrightarrow \sec\theta = x; \begin{cases} 0 \le \theta \le \pi, \theta \ne \frac{\pi}{2} \\ x \le -1 (\text{or}) x \ge 1 \end{cases}$$

**6. Define inverse tangent function.**
**Ans:-** Inverse tangent function is defined as –
If $\cot\theta = x, 0 < \theta < \pi$, then,
$\cot^{-1}x = \theta, -\infty < x < \infty$, is called inverse cotangent function.
i.e., $\cot^{-1}x = \theta$
$$\Leftrightarrow \cot\theta = x; \begin{cases} 0 < \theta < \pi \\ -\infty < x < \infty \end{cases}$$

**7. Prove that**
$$\sin^{-1}(-x) = -\sin^{-1}x, -1 \le x \le 1$$
Soln:- Let $\sin^{-1}(-x) = \theta$
$\therefore \sin\theta = -x$; i.e., $-\sin\theta = x$
$\Rightarrow \sin(-\theta) = x$
Hence, $\sin^{-1}x = -\theta$
(or) $\theta = -\sin^{-1}x$
$\therefore \sin^{-1}(-x) = -\sin^{-1}(-x)$

8. Prove that
$$\tan^{-1}(-x) = -\tan^{-1}x, -\infty < x < \infty$$
Soln :- Let $\tan^{-1}(-x) = \theta$;
so that $\tan\theta = -x$
$\therefore -\tan\theta = x$
$\Rightarrow \tan(-\theta) = x$
(or) $-\theta = \tan^{-1}x$
$\therefore \theta = -\sin^{-1}x$;
Hence, $\tan^{-1}(-x) = -\tan^{-1}x$

**9. Prove that**
$$\cos^{-1}(-x) = \pi - \cos^{-1}x, -1 \le x \le 1$$
Soln :- Let $\cos^{-1}(-x) = \theta$;
$\therefore \cos\theta = -x$
i.e., $-\cos\theta = x$
$\Rightarrow \cos(\pi - \theta) = x$

(Contd....)

# ವಿರೋಧದ ನಡುವೆ ಲೆಕ್ಕ ಮಂಡಿಸಿದ ಟ್ರಸ್ಟ್

## ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಲ್ಲಿ ಗೊಂದಲ • ಕಲ್ಲು ತೂರಾಟ, ಚಪ್ಪಲಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

**ಹರಿಹರ (ದಾವಣಗೆರೆ):** ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಲ್ಲಿ ಪದಚ್ಯುತ ವಚನಾನಂದ ಸ್ವಾಮೀಜಿ ಪರ ಭಕ್ತರ ತೀವ್ರ ವಿರೋಧದ ನಡುವೆಯೂ ಟ್ರಸ್ಟ್ ಸದಸ್ಯರು ಲೆಕ್ಕಪತ್ರ ಮಂಡಿಸಿದರು. 'ಲೆಕ್ಕ ಕೊಡಿ' ಚಳವಳಿ ನಡೆಸಿದ್ದವರು ಮಠದಲ್ಲಿದ್ದರೂ ಸಭೆಯಿಂದ ಅಂತರ ಕಾಯ್ದುಕೊಂಡರು. 'ಕಳ್ಳ ಲೆಕ್ಕ ಒಪ್ಪುವುದಿಲ್ಲ' ಎಂದು ಮೂದಲಿಸಿದರು.

ವಚನಾನಂದ ಸ್ವಾಮೀಜಿ ಪದಚ್ಯುತಿ ಬಳಿಕ ವೀರಶೈವ ಲಿಂಗಾಯತ ಪಂಚಮ ಸಾಲಿ ಗುರುಪೀಠದ ಟ್ರಸ್ಟ್ ವಿರುದ್ಧ 'ಲೆಕ್ಕ ಕೊಡಿ' ಚಳವಳಿ ಆರಂಭವಾಗಿತ್ತು. ಇದನ್ನು ಸವಾಲಾಗಿ ಸ್ವೀಕರಿಸಿದ ಟ್ರಸ್ಟ್ ಸದಸ್ಯರು ಮಠದ ಆವರಣದಲ್ಲಿ ಸೋಮವಾರ ಲೆಕ್ಕಪತ್ರ ಮಂಡನೆಗೆ ಬಹಿರಂಗ ಸಭೆ ಆಯೋಜಿಸಿದ್ದರು. ಟ್ರಸ್ಟ್ ಪರ ಬೆಂಬಲಿಗರು ಹಾಗೂ ಸ್ವಾಮೀಜಿ ಪರ ಭಕ್ತರು ಒಂದೆಡೆ ಸೇರಿದ್ದರಿಂದ ಗೊಂದಲದ ಪರಿಸ್ಥಿತಿಗೆ ಮಠ ಸಾಕ್ಷಿಯಾಯಿತು.

ಟ್ರಸ್ಟ್ ಸದಸ್ಯರು ಲೆಕ್ಕಪತ್ರ ಮಂಡನೆಗಾಗಿ ದಾಖಲೆಗಳನ್ನು ತರುತ್ತಿದ್ದಂತೆಯೇ ವಾತಾವರಣ ಕಾವೇರಿತು. 'ಟ್ರಸ್ಟ್ ಸದಸ್ಯರು ಕಳ್ಳರು' ಎಂಬುದಾಗಿ ಸ್ವಾಮೀಜಿ ಪರ ಭಕ್ತರು ಘೋಷಣೆ ಕೂಗಿದರು. ಟ್ರಸ್ಟ್ ಪರ ಬೆಂಬಲಿಗರು 'ಕಳ್ಳ ಸ್ವಾಮೀಜಿ' ಎಂಬ ಘೋಷಣೆ ಮೊಳಗಿಸಿದರು. ಈ ವೇಳೆ ನೂಕಾಟ, ತಳ್ಳಾಟ ನಡೆದು ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

### ₹27 ಕೋಟಿ ಸಂಗ್ರಹ, ₹26 ಕೋಟಿ ವೆಚ್ಚ

'2008ರಿಂದ 2026ರವರೆಗೆ ಗುರುಪೀಠದ ಟ್ರಸ್ಟ್‌ಗೆ ಸರ್ಕಾರ ಮತ್ತು ಭಕ್ತರಿಂದ ₹27.61 ಕೋಟಿ ಸಂದಾಯವಾಗಿದೆ. ಇದರಲ್ಲಿ ₹25.93 ಕೋಟಿ ವೆಚ್ಚವಾಗಿದೆ. ₹1.68 ಕೋಟಿಯನ್ನು ದಾಸೋಹಕ್ಕೆ ಠೇವಣಿ ಇಡಲಾಗಿದೆ' ಎಂದು ಟ್ರಸ್ಟ್‌ನ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಮಾಹಿತಿ ನೀಡಿದರು.

'ರಾಜ್ಯ ಸರ್ಕಾರ ₹12.70 ಕೋಟಿ ಅನುದಾನ ನೀಡಿದೆ. ಸಂಡೂರು ನಾಗನಗೌಡ ₹ 2 ಕೋಟಿ, ಶಾಮನೂರು ಶಿವಶಂಕರಪ್ಪ ₹1 ಕೋಟಿ, ನಾನು ₹1.08 ಕೋಟಿ ಸೇರಿದಂತೆ ಅಪಾರ ಭಕ್ತರು ನಗದು ಹಾಗೂ ವಸ್ತುಗಳ ರೂಪದಲ್ಲಿ ದೇಣಿಗೆ ನೀಡಿದ್ದಾರೆ. 174 ಕೆ.ಜಿ. ಬೆಳ್ಳಿ ದೇಣಿಗೆ ರೂಪದಲ್ಲಿ ಬಂದಿದೆ. 9 ಎಕರೆ 18 ಗುಂಟೆ ಜಮೀನಿನಲ್ಲಿ ಮಠದ ಕಟ್ಟಡ ಕಟ್ಟಲಾಗಿದೆ. ರಾಷ್ಟ್ರೀಯ ಹೆದ್ದಾರಿ ಸಮೀಪ 4 ಎಕರೆ 28 ಗುಂಟೆ, ಶಿಗ್ಗಾವಿ, ಹರಪನಹಳ್ಳಿಯಲ್ಲಿ ತಲಾ 2 ಎಕರೆ ಸೇರಿದಂತೆ ಹಲವೆಡೆ ಭೂಮಿ ಇದೆ' ಎಂದು ವಿವರಿಸಿದರು.

'ಮಠ ಬಾಡಿಗೆ ಕಟ್ಟಡದಲ್ಲಿದ್ದ 51 ತಿಂಗಳಿಗೆ ₹48 ಲಕ್ಷ, ಉಳಿದ 165 ತಿಂಗಳಿಗೆ ₹1.40 ಕೋಟಿ, ಭೂಮಿ ಖರೀದಿಗೆ ₹69 ಲಕ್ಷ, ಭೂಮಿ ಸಮತಟ್ಟು ಮಾಡಿ ಕಟ್ಟಡ ನಿರ್ಮಾಣಕ್ಕೆ ಸಜ್ಜುಗೊಳಿಸಲು ₹1.36 ಕೋಟಿ, ದೇಗುಲ ನಿರ್ಮಾಣಕ್ಕೆ ₹1.05 ಕೋಟಿ, ದಾಸೋಹ ಭವನಕ್ಕೆ ₹2.8 ಕೋಟಿ ವ್ಯಯಿಸ ಲಾಗಿದೆ. ವಚನಾನಂದ ಸ್ವಾಮೀಜಿ ತಾವು ಪಡೆದ ದೇಣಿಗೆ, ಹುಂಡಿಯ ಲೆಕ್ಕವನ್ನು ಬಹಿರಂಗಪಡಿಸಬೇಕು' ಎಂದು ಸವಾಲು ಹಾಕಿದರು.

> **'ಸ್ವಾಮೀಜಿಯನ್ನು ಎಳೆದು ಹೊರ ಹಾಕುತ್ತೇವೆ' ಎಂದಿರುವ ಟ್ರಸ್ಟ್ ಸದಸ್ಯರು ಭದ್ರತೆ ಇಲ್ಲದೆ ಮಠಕ್ಕೆ ಬರಲಿ. ಸ್ವಾಮೀಜಿಯನ್ನು ಹೊರ ಹಾಕುವ ಪ್ರಯತ್ನ ಫಲ ನೀಡದು. ದೇಣಿಗೆ ನೀಡಿದವರ ವಿವರ ಕಲೆಹಾಕುತ್ತೇವೆ**
> **ಎಚ್.ಎಸ್.ಶಿವಶಂಕರ್,** ಮಾಜಿ ಶಾಸಕ

> **ವಾರ್ಷಿಕ ₹30 ಕೋಟಿ ತೆರಿಗೆ ಪಾವತಿ ಮಾಡುತ್ತೇನೆ. ₹900 ಕೋಟಿ ಠೇವಣಿ ಇರುವ ಬ್ಯಾಂಕಿಗೆ ಅಧ್ಯಕ್ಷನಾಗಿದ್ದೇನೆ. ಸಮಾಜಕ್ಕಾಗಿ ಶ್ರಮಿಸಿದ್ದಕ್ಕೆ ಗಂಟು ಕಳ್ಳ ಎಂಬ ಅಪವಾದಕ್ಕೆ ಗುರಿ ಆಗಿದ್ದೇನೆ**
> **ಬಿ.ಸಿ. ಉಮಾಪತಿ,** ಪ್ರಧಾನ ಧರ್ಮದರ್ಶಿ ಪಂಚಮಸಾಲಿ ಗುರುಪೀಠದ ಟ್ರಸ್ಟ್

ಲೆಕ್ಕಪತ್ರ ಮಂಡನೆಗೆ ಸ್ವಾಮೀಜಿ ಪರ ಭಕ್ತರು ವಿರೋಧ ವ್ಯಕ್ತಪಡಿಸಿ ಸಭೆಗೆ ನುಗ್ಗಲು ಪ್ರಯತ್ನಿಸಿದರು. ಇದಕ್ಕೆ ಟ್ರಸ್ಟ್ ಪರ ಬೆಂಬಲಿಗರು ಪ್ರತಿರೋಧ ಒಡ್ಡಿದರು. ಮಧ್ಯ ಪ್ರವೇಶಿಸಿದ ಪೊಲೀಸರು ಎರಡೂ ಬಣಗಳಿಗೆ ಎಚ್ಚರಿಕೆ ನೀಡಿ ಪರಿಸ್ಥಿತಿ ನಿಯಂತ್ರಿಸಿದರು. ಸಭೆ ಮುಕ್ತಾಯದ ಹಂತದಲ್ಲಿ ಸ್ವಾಮೀಜಿ ಪರ ಭಕ್ತರು ಮತ್ತೆ ಧಾವಿಸಿದಾಗ ಕಲ್ಲುತೂರಾಟ ನಡೆಯಿತು. ಕೆಲವರು ಮರಗಳ ಟೊಂಗೆಗಳನ್ನು ಮುರಿದು, ದೊಣ್ಣೆಗಳಂತೆ ಹಿಡಿದು ಸಭೆಗೆ ನುಗ್ಗಲು ಯತ್ನಿಸಿದರು.

'ಲೆಕ್ಕಪತ್ರ ಮಂಡನೆ ಮುಗಿಯುತ್ತಿದ್ದಂತೆಯೇ ಪದಚ್ಯುತ ಸ್ವಾಮೀಜಿ ಮಠ ತೊರೆಯಬೇಕು' ಎಂದು ಟ್ರಸ್ಟ್ ಸದಸ್ಯರು ಬಹಿರಂಗ ಎಚ್ಚರಿಕೆ ನೀಡಿದರು. ಇದರಿಂದ ಕೆರಳಿದ ಮಾಜಿ ಶಾಸಕರಾದ ಎಚ್.ಎಸ್. ಶಿವಶಂಕರ್ ಹಾಗೂ ಅರುಣಕುಮಾರ್ ಪೂಜಾರ ಸೇರಿದಂತೆ ಸ್ವಾಮೀಜಿ ಪರ ಭಕ್ತರು ಬಿಡಾರದ ಸುತ್ತ ಜಮಾಯಿಸಿದರು. 'ವಚನಾನಂದ ಸ್ವಾಮೀಜಿಯನ್ನು ಮಠದಿಂದ ಹೊರ ಹಾಕಲು ಬಿಡುವುದಿಲ್ಲ' ಎಂಬುದಾಗಿ ಪಟ್ಟು ಹಿಡಿದರು. ಸಭೆ ಮುಗಿಸಿದ ಟ್ರಸ್ಟ್ ಸದಸ್ಯರು, ಬೆಂಬಲಿಗರು ಮಠದಿಂದ ನಿರ್ಗಮಿಸಿದ ಬಳಿಕ ವಾತಾವರಣ ತಿಳಿಯಾಯಿತು.

ಮನಗೂಳಿ ಮಠದ ಸಂಗನಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಟ್ರಸ್ಟ್ ಸದಸ್ಯರಾದ ಬಾವಿ ಬೆಟ್ಟಪ್ಪ, ಬಸವರಾಜ ದಿಂಡೂರ ಸೇರಿ ಅನೇಕರು ಹಾಜರಿದ್ದರು.



ಗುರುಪೀಠದಲ್ಲಿ ಲೆಕ್ಕಪತ್ರ ಮಂಡನೆ ಮಾಡುತ್ತಿದ್ದ ಸಭೆ ವಿರೋಧಿಸಿ ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ಹಾಗೂ ಬೆಂಬಲಿಗರು ಪ್ರತಿಭಟನೆ ನಡೆಸಿದರು

### ಕಳ್ಳ ಲೆಕ್ಕ ಒಪ್ಪಲು ಸಾಧ್ಯವಿಲ್ಲ: ಸ್ವಾಮೀಜಿ

'ಟ್ರಸ್ಟ್ ಸದಸ್ಯರು ಕಳ್ಳರಂತೆ ಧಾವಿಸಿ ಕಳ್ಳ ಲೆಕ್ಕಪತ್ರ ಮಂಡಿಸಿದ್ದಾರೆ. ತರಾತುರಿಯಲ್ಲಿ ಕೊಟ್ಟಿರುವ ಈ ಲೆಕ್ಕವನ್ನು ಒಪ್ಪುವುದಿಲ್ಲ' ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಪದಚ್ಯುತ ವಚನಾನಂದ ಸ್ವಾಮೀಜಿ ಹೇಳಿದರು.

'ಬ್ಯಾಂಕ್ ಖಾತೆಗೆ ಜಮೆ ಆಗಿರುವ ಲೆಕ್ಕವನ್ನು ಮಾತ್ರ ಮಂಡಿಸಲಾಗಿದೆ. ಮಠ ಕಟ್ಟಲು ಚಿನ್ನ, ಬೆಳ್ಳಿ, ಅಕ್ಕಿ, ಹಣ, ಮಣ್ಣು, ಮರಳು ಹಾಗೂ ಇಟ್ಟಿಗೆಯನ್ನೂ ಭಕ್ತರು ದೇಣಿಗೆ ರೂಪದಲ್ಲಿ ನೀಡಿದ್ದಾರೆ. ಈ ಲೆಕ್ಕವನ್ನು ಎಲ್ಲಿ ಮಂಡಿಸಿದ್ದೀರಿ? ಪಾರದರ್ಶಕವಾಗಿದ್ದರೆ ಲಿಖಿತ ರೂಪದಲ್ಲಿ ಏಕೆ ನೀಡುತ್ತಿಲ್ಲ? ಇದು ಬಟ್ಟೆ ವ್ಯಾಪಾರ ಮಾಡಿದಂತೆ ಅಲ್ಲ' ಎಂದು ಆಕ್ರೋಶ ಹೊರಹಾಕಿದರು.

### ವಿ. ಸೋಮಣ್ಣ ಜೊತೆ ಮಾತುಕತೆ

ಲೆಕ್ಕಪತ್ರ ಮಂಡಿಸುತ್ತಿದ್ದ ಟ್ರಸ್ಟ್ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಅವರಿಗೆ ಕೇಂದ್ರ ಸಚಿವ ವಿ. ಸೋಮಣ್ಣ ಕರೆ ಮಾಡಿ ಮನವೊಲಿಸಲು ಪ್ರಯತ್ನಿಸಿದರು. ಕೇಂದ್ರ ಸಚಿವರೊಂದಿಗೆ ಉಮಾಪತಿ ಅವರು ಬಹಿರಂಗವಾಗಿಯೇ ಸಂವಾದ ನಡೆಸಿದರು.

'ನಿಮ್ಮ (ಸೋಮಣ್ಣ) ಹಾಗೂ ಮಾಜಿ ಸಚಿವ ಮುರುಗೇಶ ನಿರಾಣಿ ಅವರ ಮಾತಿಗೆ ಬೆಲೆ ಕೊಟ್ಟು ಈ ವಿಚಾರ ಬೀದಿಗೆ ಬರದಂತೆ ಎಚ್ಚರವಹಿಸಿದ್ದೆವು. ಸ್ವಾಮೀಜಿ ದಾರಿತಪ್ಪಿದ್ದರಿಂದ ಸಮುದಾಯ ಬೀದಿಗೆ ಬಂದಿದೆ. ನಾನು ರಾಜಕಾರಣಿಯಲ್ಲ, ಯಾವುದೇ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಯಾರಿಗೂ ಹೆದರುವುದಿಲ್ಲ' ಎಂದು ಉಮಾಪತಿ ಪ್ರತಿಕ್ರಿಯಿಸಿದರು.

# ಒಂಟಿ ಸಲಗ ದಾಂದಲೆ

ಪ್ರಜಾವಾಣಿ ವಾರ್ತೆ

**ಚನ್ನಪಟ್ಟಣ (ರಾಮನಗರ):** ತಾಲ್ಲೂಕಿನ ಕೂಡ್ಲೂರು ಭಾಗದಲ್ಲಿದ್ದ ಒಂಟಿ ಸಲಗವೊಂದು ಸೋಮವಾರ ಬೆಳಿಗ್ಗೆ ಇಲ್ಲಿಯ ಹೌಸಿಂಗ್ ಬೋರ್ಡ್ ಬಡಾವಣೆಗೆ ನುಗ್ಗಿ ಸಂಜೆಯವರೆಗೂ ಭಾರಿ ದಾಂದಲೆ ನಡೆಸಿದೆ.

ಬೆಳಿಗ್ಗೆಯೇ ಹೌಸಿಂಗ್ ಬೋರ್ಡ್ ಬಡಾವಣೆಗೆ ನುಗ್ಗಿದ ಆನೆ ದಿಕ್ಕಾಪಾಲಾಗಿ ಓಡಾಡಿತು. ಕಾಂಪೌಂಡ್ ಹತ್ತಿಳಿಯಿತು. ನೆತ್ತಿ ಸುಡುವ ಬಿಸಿಲಿನಲ್ಲಿ ತಿರುಗಿ ಸುಸ್ತಾದಾಗ ಮನೆಗಳ ಪಕ್ಕದ ನೆರಳಿನಲ್ಲಿ ನಿಂತು ದಣಿವಾರಿಸಿಕೊಂಡಿತು. ಎದುರಿಗೆ ಬಂದ ಜನರನ್ನು ಅಟ್ಟಾಡಿಸಿಕೊಂಡು ಹೋಯಿತು. ಇದರಿಂದಾಗಿ ಬಡಾವಣೆಯಲ್ಲಿ ಭಯದ ವಾತಾವರಣ ನಿರ್ಮಾಣವಾಗಿತ್ತು.

ಮನೆ ಎದುರಿಗೆ ಏಕಾಏಕಿ ಬಂದ ಕಾಡಾನೆ ಕಂಡು ಕುಸಿದು ಬಿದ್ದು ಗಾಯಗೊಂಡ ಗೀತಾ ಎಂಬವರನ್ನು ಚನ್ನಪಟ್ಟಣದ ತಾಲ್ಲೂಕು ಆಸ್ಪತ್ರೆಗೆ ಸೇರಿಸಲಾಗಿದೆ. ಗುಡಿಸಲೊಂದರ ಮೇಲೆ ನುಗ್ಗಿ ಅದನ್ನು ಧ್ವಂಸಗೊಳಿಸಿದ್ದು, ಒಳಗಿದ್ದ ಬಳ್ಳಾರಿಯ ರಾಮಪ್ಪ ಎಂಬವರಿಗೆ ಗಾಯವಾಗಿದೆ.

ಕೊಟ್ಟಿಗೆಯೊಂದಕ್ಕೆ ನುಗ್ಗಿ ಅಲ್ಲಿ ಕಟ್ಟಿ ಹಾಕಿದ್ದ ಹಸುವನ್ನು ಹೊಸಕಿ ಹಾಕಿದೆ. ಇಷ್ಟಕ್ಕೆ ಅದರ ಆಕ್ರೋಶ ತಣಿಯಲಿಲ್ಲ. ಮನೆಯೊಂದರ ಮುಂದೆ ನಿಲ್ಲಿಸಿದ್ದ ಕಾರನ್ನು ಗುದ್ದಿ, ಕಾಲಿನಿಂದ ತುಳಿದು ಜಖಂಗೊಳಿಸಿದೆ. ನಂತರ ಮನೆಯೊಂದರ ಕಾಂಪೌಂಡ್ ಕೆಡವಿ ಹಾಕಿತು.

ಆನೆ ನಗರದತ್ತ ಬಂದ ಕುರಿತು ಅರಣ್ಯ ಇಲಾಖೆ ಮುನ್ನೆಚ್ಚರಿಕೆ ನೀಡಿತ್ತು. ಆನೆ ಬಂದಿರುವ ಬಡಾವಣೆಗಳಲ್ಲಿ ಯಾರೂ ಮನೆಯಿಂದ ಹೊರಬಾರದಂತೆ ಸೂಚನೆ ನೀಡಲಾಗಿತ್ತು.

ಬೆಳಿಗ್ಗೆ ಆನೆ ಹೌಸಿಂಗ್ ಬೋರ್ಡ್ ಬಡಾವಣೆಗೆ ನುಗ್ಗಿ ದಾಂದಲೆ ನಡೆಸಿರುವ ವಿಷಯ ಗೊತ್ತಾಗುತ್ತಿದ್ದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಆನೆ ಸೆರೆಗೆ ಕಾರ್ಯತಂತ್ರ ರೂಪಿಸಿದರು. ಬಡಾವಣೆಯಿಂದ ಸುಣ್ಣಘಟ್ಟದ ಕಡೆಗೆ ತೆರಳಿದ ಕಾಡಾನೆಗೆ ಪಶುವೈದ್ಯ ರಮೇಶ್ ನೇತೃತ್ವದ ತಂಡ ಸಂಜೆ ಅರಿವಳಿಕೆ ಚುಚ್ಚುಮದ್ದು ನೀಡಿ ಪ್ರಜ್ಞೆ ತಪ್ಪಿಸಿತು.


ಪ್ರಜ್ಞೆ ತಪ್ಪಿ ಬಿದ್ದಿದ್ದ ಆನೆಯನ್ನು ರಾತ್ರಿ ಲಾರಿಯಲ್ಲಿ ಬಂಡೀಪುರಕ್ಕೆ ಸಾಗಿಸಲಾಯಿತು. ಕಾರ್ಯಾಚರಣೆಯಲ್ಲಿ ಡಿಸಿಎಫ್ ರಾಮಕೃಷ್ಣಪ್ಪ, ಚನ್ನಪಟ್ಟಣ ಆರ್‌ಎಫ್‌ಒ ಮಲ್ಲೇಶ್, ಆನೆ ಕಾರ್ಯಪಡೆ ಸಿಬ್ಬಂದಿ ಇದ್ದರು.



ಚನ್ನಪಟ್ಟಣದ ಹೌಸಿಂಗ್ ಬೋರ್ಡ್ ಬಡಾವಣೆಗೆ ಸೋಮವಾರ ನುಗ್ಗಿದ ಒಂಟಿ ಸಲಗವನ್ನು ಕಂಡು ವ್ಯಕ್ತಿಯೊಬ್ಬರು ಓಡಿದರು

# ಕ್ಷಮೆ ಯಾಚಿಸಿದ ಸಂಜಯ್ ದತ್

**ನವದೆಹಲಿ (ಪಿಟಿಐ):** 'ಕೆಡಿ: ದಿ ಡೆವಿಲ್' ಚಿತ್ರದಲ್ಲಿದ್ದ ವಿವಾದಿತ ಹಾಡಿಗೆ ಸಂಬಂಧಿಸಿ ರಾಷ್ಟ್ರೀಯ ಮಹಿಳಾ ಆಯೋಗದ ಮುಂದೆ ಸೋಮವಾರ ವಿಚಾರಣೆಗೆ ಹಾಜರಾದ ನಟ ಸಂಜಯ್ ದತ್ ಅವರು ಲಿಖಿತವಾಗಿ ಕ್ಷಮೆ ಯಾಚಿಸಿದ್ದಾರೆ.



ಸಂಜತ್ ದತ್

ಉದ್ದೇಶಪೂರ್ವಕವಲ್ಲದ ತಪ್ಪಿನಿಂದ ಸಮಾಜಕ್ಕೆ ಆಗಿರುವ ಹಾನಿಗೆ ವಿಷಾದ ವ್ಯಕ್ತಪಡಿಸುವುದಾಗಿ ಹೇಳಿರುವ ಸಂಜಯ್ ದತ್, ಬುಡಕಟ್ಟು ಜನಾಂಗದ 50 ಹೆಣ್ಣುಮಕ್ಕಳ ಶಿಕ್ಷಣಕ್ಕೆ ನೆರವಾಗಲು ಒಪ್ಪಿಕೊಂಡಿದ್ದಾರೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ವಿಜಯ ರಾಹಟ್ಕರ್ ಅವರು, ಹಾಡಿನಲ್ಲಿ ಮಹಿಳೆಯರನ್ನು ಅಶ್ಲೀಲ, ಅಸಂಬದ್ಧವಾಗಿ ವರ್ಣಿಸಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು.

ಭವಿಷ್ಯದಲ್ಲಿ ಸಿನಿಮಾ ಮತ್ತು ಸಂಬಂಧಿತ ಕಾರ್ಯಕ್ರಮಗಳಲ್ಲಿ ಮಹಿಳೆ, ಮಕ್ಕಳ ಘನತೆಯನ್ನು ಖಚಿತಪಡಿಸಿಕೊಂಡು ಒಪ್ಪಂದ ಮಾಡಿಕೊಳ್ಳುವುದಾಗಿ ಸಂಜಯ್ ಭರವಸೆ ನೀಡಿದ್ದಾರೆ. ನಟಿ ನೋರಾ ಫತೇಹಿ ಅವರಿಗೂ ಆಯೋಗ ಸಮನ್ಸ್ ನೀಡಿದ್ದು, ಪ್ರಸ್ತುತ ವಿದೇಶದಲ್ಲಿರುವ ಅವರು ವಿಚಾರಣೆಗೆ ಬೇರೆ ದಿನ ನಿಗದಿಪಡಿಸುವಂತೆ ಆಯೋಗಕ್ಕೆ ಮನವಿ ಮಾಡಿದ್ದಾರೆ.

ಚಿತ್ರದ ನಿರ್ದೇಶಕ ಪ್ರೇಮ್ ಅವರು ಏಪ್ರಿಲ್ 6ರಂದು ಆಯೋಗದ ಮುಂದೆ ಹಾಜರಾಗಿ ಕ್ಷಮೆಯಾಚಿಸಿದ್ದರು.

# ಪಲ್ಲಕ್ಕಿ ಉತ್ಸವ

ಪ್ರಜಾವಾಣಿ ಚಿತ್ರ



ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಹುನ್ನೂರ ಗ್ರಾಮದಲ್ಲಿ 12 ವರ್ಷಕ್ಕೊಮ್ಮೆ ನಡೆಯುವ ಕಾಶಿಲಿಂಗೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಭಂಡಾರದಲ್ಲಿ ಪಲ್ಲಕ್ಕಿ ಉತ್ಸವ ಸೋಮವಾರ ನಡೆಯಿತು

# ಅರಣ್ಯ ಇಲಾಖೆ ಹಂಗಾಮಿ ನೌಕರರ ಮುಷ್ಕರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಒಂದು ವರ್ಷದಿಂದ ಮಾತುಕತೆ, ಹೋರಾಟದ ಮೂಲಕ ಬೇಡಿಕೆ ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಅರಣ್ಯ ಇಲಾಖೆಯ ಹಂಗಾಮಿ ನೌಕರರು ಏಪ್ರಿಲ್ 30ರಂದು ಕರ್ತವ್ಯ ನಿರ್ವಹಿಸದೇ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.

10 ವರ್ಷ ಕಾರ್ಯ ನಿರ್ವಹಿಸಿದವರನ್ನು ಕ್ಷೇಮಾಭಿವೃದ್ಧಿ ಅಧಿನಿಯಮಕ್ಕೆ ಒಳಪಡಿಸಬೇಕು. ಏಜೆನ್ಸಿಗಳಿಗೆ ಬದಲಾಗಿ ಹಿಂದೆ ಇದ್ದ ಹಾಗೆಯೇ ಇಲಾಖೆ ಮೂಲಕವೇ ವೇತನ ನೀಡಬೇಕು. ಈಗಾಗಲೇ ಘೋಷಿಸಿರುವ ಚಾಲಕರ ಕಷ್ಟ ಪರಿಹಾರ ಭತ್ಯೆಯನ್ನು ಬಿಡುಗಡೆ ಮಾಡಬೇಕು ಎನ್ನುವುದು ಸೇರಿದಂತೆ ಹಲವು ಬೇಡಿಕೆಗಳೊಂದಿಗೆ ಬಂಡೀಪುರದಲ್ಲಿ 3,800ಕ್ಕೂ ಅಧಿಕ ಹಂಗಾಮಿ ನೌಕರರು ಮುಷ್ಕರ ಆರಂಭಿಸಲಿದ್ದಾರೆ.

2017ರವರೆಗೂ ಅರಣ್ಯ ಇಲಾಖೆಯಿಂದಲೇ ವೇತನ ನೀಡಲಾಗುತ್ತಿತ್ತು. ಈಗ ಹೊರಗುತ್ತಿಗೆ ನೀಡಿದ ಬಳಿಕ ಭವಿಷ್ಯ ನಿಧಿ ಸಹಿತ ಯಾವುದೇ ಸೌಲಭ್ಯವೂ ಸರಿಯಾಗಿ ಸಿಗುತ್ತಿಲ್ಲ. ನಮ್ಮನ್ನು ದಿನಗೂಲಿಯಲ್ಲೇ ಮುಂದುವರಿಸಬೇಕು. ವನ್ಯಜೀವಿ ವಿಭಾಗದವರಿಗೆ ಹಿಂದೆ ಇದ್ದಂತೆ 30 ದಿನಗಳ ಸಂಬಳ, ಭತ್ಯೆ ನೀಡಬೇಕು. ಇಲಾಖೆ ಖಾಲಿ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡಬೇಕು ಎಂಬ ಬೇಡಿಕೆಗಳನ್ನು ಅವರು ಮುಂದಿಟ್ಟಿದ್ದಾರೆ.

'ಕಳೆದ ವರ್ಷ ಹೋರಾಟ ನಡೆಸಿದಾಗ ಅರಣ್ಯ ಸಚಿವರು ಸೂಚನೆ ನೀಡಿದರೂ ಅಧಿಕಾರಿಗಳು ಕ್ರಮ ಕೈಗೊಳ್ಳಲಿಲ್ಲ. ಮಾರ್ಚ್‌ನಲ್ಲಿ ಮುಷ್ಕರ ಪ್ರಕಟಿಸಿದಾಗ ಸಭೆ ನಡೆಸಿದ್ದನ್ನು ಬಿಟ್ಟರೆ ಏನೂ ಆಗಲಿಲ್ಲ. ಒಂಬತ್ತು ವರ್ಷದ ಹಿಂದೆ ದಿನಗೂಲಿಯಿಂದ ಹಂಗಾಮಿಗೆ ಬದಲಾಯಿಸಿದಾಗ ಆರ್ಥಿಕ ಇಲಾಖೆಯ ಅನುಮತಿ ಬಗ್ಗೆ ಏನನ್ನೂ ಹೇಳಲಿಲ್ಲ. ಈಗ ಆರ್ಥಿಕ ಇಲಾಖೆ ಕಾರಣ ನೀಡಿ ಸೌಲಭ್ಯ ನೀಡುತ್ತಿಲ್ಲ. ಹೀಗಾಗಿ, ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುತ್ತಿದ್ದೇವೆ' ಎಂದು ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ವನ್ಯಜೀವಿ ಘಟಕಗಳ ದಿನಗೂಲಿ, ಹೊರಗುತ್ತಿಗೆ ನೌಕರರ ಸಂಘದ ಗೌರವ ಅಧ್ಯಕ್ಷ ಎ.ಎಂ.ನಾಗರಾಜು ತಿಳಿಸಿದರು.

# ಟ್ಯಾಕ್ಸಿ ಉದ್ಯಮದಿಂದ ಏಷ್ಯಾದ ಬೃಹತ್ ಒಳಾಂಗಣ ಕಾರ್ಟಿಂಗ್ ಟ್ರ್ಯಾಕ್ ನಿರ್ಮಾಣದವರೆಗೆ: ಅಥೇನಾ ಮತ್ತು ಟಾರ್ಕ್ 03 ಬೆಳೆದು ಬಂದ ಹಾದಿ

## ಕೇವಲ ಒಂದು ಟ್ಯಾಕ್ಸಿಯಿಂದ ಉದ್ಯಮ ಶುರುಮಾಡಿ, ಇಂದು ವಿಶ್ವದರ್ಜೆಯ ಬೃಹತ್ ಇಂಡೋರ್ ಕಾರ್ಟಿಂಗ್ ಟ್ರ್ಯಾಕ್ ನಿರ್ಮಿಸಿ, ಬೆಂಗಳೂರಿನ ಯಶಸ್ವಿ ಉದ್ಯಮಿಯಾದ ಶ್ರೀಹರ್ಷ ಸ್ಫೂರ್ತಿದಾಯಕ ಕಥೆ



- ಕಾಲ್‌ಸೆಂಟರ್‌ನಲ್ಲಿ ಉದ್ಯೋಗಿಯಾಗಿದ್ದ ವ್ಯಕ್ತಿಯಿಂದು ಬೃಹತ್ ಕಾರ್ಟಿಂಗ್ ಸಂಸ್ಥೆಯ ಒಡೆಯ
- ಮೋಟಾರ್ ಸ್ಪೋರ್ಟ್ಸ್ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸುತ್ತಿರುವ ಶ್ರೀಹರ್ಷ
- ಚಿಕ್ಕಮಗಳೂರಿನ ಸಾಮಾನ್ಯ ವ್ಯಕ್ತಿಯಿಂದು ಜಾಗತಿಕ ಒಡಂಬಡಿಕೆಗಳ ಉದ್ಯಮಿ
- ಅಸಾಧ್ಯವೆಂಬ ಅಲೆಗಳ ನಡುವೆ ಸಾಧ್ಯತೆಯ ಹುಡುಕಿ ಸವಾರಿ ಮಾಡಿದ ಮಾದರಿ ವ್ಯಕ್ತಿ

ಬೆಂಗಳೂರು: ಕನಸುಗಳನ್ನು ಬೆನ್ನಟ್ಟುವ ಛಲವಿದ್ದರೆ ಸಾಧನೆಗೆ ಆಕಾಶವೇ ಮಿತಿ ಎಂಬುದನ್ನು ಬೆಂಗಳೂರಿನ ಯುವ ಉದ್ಯಮಿ ಶ್ರೀಹರ್ಷ.ಎಸ್.ಡಿ ಸಾಬೀತುಪಡಿಸಿದ್ದಾರೆ. ಕೇವಲ ಒಂದು ಕಾರಿನಿಂದ ಆರಂಭವಾದ ಇವರ ವೃತ್ತಿಜೀವನ, ಇಂದು ಏಷ್ಯಾದ ಅತಿದೊಡ್ಡ ಒಳಾಂಗಣ ಕಾರ್ಟಿಂಗ್ ಟ್ರ್ಯಾಕ್ ನಿರ್ಮಿಸುವ ಹಂತಕ್ಕೆ ಬೆಳೆದು ಅನೇಕರಿಗೆ ಸ್ಫೂರ್ತಿದಾಯಕ ಕಥೆಯಾಗಿದೆ.

ಮೂಲತಃ ಚಿಕ್ಕಮಗಳೂರಿನವರಾದ ಶ್ರೀಹರ್ಷ 2004ರಲ್ಲಿ ಉದ್ಯೋಗ ಅರಸಿ ಬೆಂಗಳೂರಿಗೆ ಬಂದರು. ಆರಂಭದಲ್ಲಿ ಕಾಲ್ ಸೆಂಟರ್ ಒಂದರಲ್ಲಿ ವೃತ್ತಿಜೀವನ ಆರಂಭಿಸಿದ ಅವರು, ತಮ್ಮ ಪರಿಶ್ರಮದಿಂದಲೇ ಸ್ವಂತ ಉದ್ದಿಮೆಯ ಕನಸು ಕಂಡರು. ಕೇವಲ ಒಂದೇ ಒಂದು ಬಾಡಿಗೆ ಕಾರಿನೊಂದಿಗೆ ಆರಂಭವಾದ ಅವರ ಪಯಣ 'ಅಥೇನಾ ಕಾರ್ಸ್ ಅಂಡ್ ಟೂರ್ಸ್' ಎಂಬ ಪ್ರತಿಷ್ಠಿತ ಸಂಸ್ಥೆಯ ಸ್ಥಾಪನೆಗೆ ಅಡಿಪಾಯ ಹಾಕಿತು. ಇಂದು ಈ ಸಂಸ್ಥೆಯು ಐಟಿ, ಬ್ಯಾಂಕಿಂಗ್ ಮತ್ತು ಫಾರ್ಮಾ ವಲಯದ ಪ್ರಮುಖ ಕಂಪನಿಗಳಿಗೆ ಸಾರಿಗೆ ಸೇವೆ ನೀಡುತ್ತಿದ್ದು, ಬರೋಬ್ಬರಿ 3,000ಕ್ಕೂ ಹೆಚ್ಚು ಪ್ರೀಮಿಯಂ ವಾಹನಗಳೊಂದಿಗೆ ಬೃಹತ್ ಉದ್ಯಮವಾಗಿ ಬೆಳೆದುನಿಂತಿದೆ. ಕೇವಲ ಸಾರಿಗೆ ಕ್ಷೇತ್ರಕ್ಕೆ ಸೀಮಿತವಾಗದೇ ತಮ್ಮ ಮೋಟಾರ್ ಸ್ಪೋರ್ಟ್ಸ್ ಪ್ರೀತಿಯ ಪರಿಕಲ್ಪನೆಗಳಿಗೆ ವೇದಿಕೆ ಸೃಷ್ಟಿಸುವ ದೂರದೃಷ್ಟಿಯೊಂದಿಗೆ ಹೆಜ್ಜೆ ಹಾಕಿದ ಶ್ರೀಹರ್ಷ ಬೆಂಗಳೂರಿನಲ್ಲೇ ಜಾಗತಿಕ ಮಟ್ಟದ ಕಾರ್ಟಿಂಗ್ ಟ್ರ್ಯಾಕ್ ನಿರ್ಮಿಸುವ ಪಣ ತೊಟ್ಟರು. ಈ ಪರಿಕಲ್ಪನೆಯ ಸಾಕಾರವಾಗಿ ಬೆಂಗಳೂರಿನಲ್ಲಿಂದು ಗೋ ಕಾರ್ಟಿಂಗ್ ಟ್ರ್ಯಾಕ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡಿದೆ. ಜತೆಗೆ, ಜಾಗತಿಕ ಮಟ್ಟದ ಒಡಂಬಡಿಕೆಗಳೊಂದಿಗೆ ಕಾರ್ಟಿಂಗ್ ಉದ್ಯಮದಲ್ಲಿ ಹೊಸ ಭಾಷ್ಯ ಬರೆಯಲು ಸಜ್ಜಾಗಿದೆ.

'ಟಾರ್ಕ್ 03' ಪರಿಕಲ್ಪನೆ: ಮೋಟಾರ್ ಸ್ಪೋರ್ಟ್ಸ್, ಕಾರುಗಳ ಬಗ್ಗೆ ವಿಶೇಷ ಆಸಕ್ತಿ, ಡ್ರೈವಿಂಗ್ ಮೇಲಿನ ಪ್ರತ್ಯೇಕ ಪ್ರೀತಿಯ ಪ್ರತೀಕವಾಗಿ ಸೃಷ್ಟಿಯಾದ ಪರಿಕಲ್ಪನೆಯೇ 'ಟಾರ್ಕ್ 03'. ಕಾರುಗಳ ಮೇಲಿನ ವಿಶೇಷ ಆಸಕ್ತಿಯನ್ನೇ ವ್ಯವಹಾರವನ್ನಾಗಿಸಿಕೊಂಡ ಶ್ರೀಹರ್ಷ, 2008ರಲ್ಲಿ ಮಾರತ್ ಹಳ್ಳಿಯ ಈ-ಜೋನ್ ಕ್ಲಬ್‌ನಲ್ಲಿ 'ಟಾರ್ಕ್ 03' ಎಂಬ ಗೋ-ಕಾರ್ಟಿಂಗ್ ಟ್ರ್ಯಾಕ್ ಆರಂಭಿಸಿದರು. ಆರಂಭದಲ್ಲಿ ಸಣ್ಣ ಮಟ್ಟದಲ್ಲಿ ಶುರುವಾದ ಈ ಕೇಂದ್ರವು ಇಂದು ಕೇವಲ ಕಾರ್ಟಿಂಗ್‌ಗೆ ಸೀಮಿತವಾಗದೆ ಮೋಟೋ ಜಿಪಿ ಸಿಮ್ಯುಲೇಟರ್ ಬೌಲಿಂಗ್, ಲೇಸರ್ ಟ್ಯಾಗ್ ಮತ್ತು ಆರ್ಕೇಡ್ ಗೇಮಿಂಗ್ ಒಳಗೊಂಡ ಬೃಹತ್ ಮನೋರಂಜನಾ ತಾಣವಾಗಿ ಬೆಳೆದಿದೆ. 2024ರಲ್ಲಿ ಶ್ರೀಹರ್ಷ ಜಾಗತಿಕ ಮಟ್ಟದ ಹೊಸ ಮೈಲಿಗಲ್ಲು ಸ್ಥಾಪಿಸಿದರು. ಫ್ರಾನ್ಸ್‌ನ ಖ್ಯಾತ 'ಸೋಡಿಕಾರ್ಟ್' ಮತ್ತು ಸ್ಲೋವೇನಿಯಾದ '360 ಕಾರ್ಟಿಂಗ್' ಸಂಸ್ಥೆಗಳೊಂದಿಗೆ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದರು. ಈ ಸಹಭಾಗಿತ್ವದ ಮೂಲಕ ಭಾರತದಲ್ಲಿ ಮೊದಲ ಬಾರಿಗೆ ಸುಧಾರಿತ ಎಲೆಕ್ಟ್ರಿಕ್ ಕಾರ್ಟ್‌ಗಳು ಮತ್ತು ಮಲ್ಟಿ-ಲೆವೆಲ್ ಕಾರ್ಟಿಂಗ್ ಟ್ರ್ಯಾಕ್ ಪರಿಚಯಿಸಲಾಯಿತು. ಸುಮಾರು 2.5 ಎಕರೆ ಪ್ರದೇಶದಲ್ಲಿ ಹರಡಿರುವ ಈ ಟ್ರ್ಯಾಕ್ ಈಗ ಜಾಗತಿಕ ದರ್ಜೆಯ ಸೌಲಭ್ಯಗಳನ್ನು ಹೊಂದಿದೆ. ಇತ್ತೀಚೆಗೆ ಫ್ರೆಂಚ್ ಕೌನ್ಸಿಲ್ ಜನರಲ್ ಸಮ್ಮುಖದಲ್ಲಿ ನಡೆದ ಈ ಘೋಷಣೆಯು ಭಾರತದ ಮನೋರಂಜನಾ ಮೂಲಸೌಕರ್ಯದ ಮೇಲಿನ ವಿಶ್ವದ ಆಸಕ್ತಿಯನ್ನು ಎತ್ತಿ ತೋರಿಸುತ್ತದೆ.

ಮಾನ್ಯತಾ ಟೆಕ್ ಪಾರ್ಕ್‌ನಲ್ಲೊಂದು ಸಾಹಸ: ಸಿಲಿಕಾನ್ ಸಿಟಿ ಬೆಂಗಳೂರಿನ ಟೆಕ್ಕಿಗಳ ವೀಕೆಂಡ್ ಮನರಂಜನೆಗೆಂದು ಪ್ರತ್ಯೇಕ ವ್ಯವಸ್ಥೆ ಸೃಷ್ಟಿಯಾಗುತ್ತಿದೆ. ವಿಶೇಷವಾಗಿ ಕಾರ್ಟಿಂಗ್ ಕ್ರೀಡಾ ಪ್ರೇಮಿಗಳ ಮನತಣಿಸುವ ನಿಟ್ಟಿನಲ್ಲಿ ಶ್ರೀಹರ್ಷ ವಿಶೇಷ ಯೋಜನೆಯನ್ನು ರೂಪಿಸಿಕೊಂಡಿದ್ದು, ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಸದ್ಯದಲ್ಲೇ ಈ ಪರಿಕಲ್ಪನೆ ಜೀವ ಪಡೆಯಲಿದೆ. ಅತ್ಯಾಧುನಿಕ ತಂತ್ರಜ್ಞಾನದ ಬೃಹತ್ ಇಂಡೋರ್ ಕಾರ್ಟಿಂಗ್ ಸೌಲಭ್ಯವುಳ್ಳ 'ಟಾರ್ಕ್ 03' ಆರಂಭಕ್ಕೆ ವೇದಿಕೆ ಸಜ್ಜಾಗಿದೆ. ಹೀಗೆ, ಕಾರ್ಟಿಂಗ್ ಕ್ಷೇತ್ರದಲ್ಲಿ ತನ್ನದೇ ಆದ ಇತಿಹಾಸ ಸೃಷ್ಟಿಸುವ ಮೂಲಕ ಶ್ರೀಹರ್ಷ ಅನೇಕರಿಗೆ ಮಾದರಿಯಾಗಿದ್ದಾರೆ. ಸಾಮಾನ್ಯ ಕಾಲ್ ಸೆಂಟರ್‌ನಲ್ಲಿ ಜೀವನ ಆರಂಭಿಸಿ ಇಂದು ವಿಶ್ವದರ್ಜೆಯ ಮನೋರಂಜನಾ ಹಬ್ ನಿರ್ಮಿಸಿರುವ ಹಂತಕ್ಕೆ ಬೆಳೆದುನಿಂತಿರುವ ಅವರ ಈ ಪಯಣ ಉದ್ಯಮಿಯಾಗಬಯಸುವ ಪ್ರತಿಯೊಬ್ಬ ಯುವಕನಿಗೂ ದಾರಿದೀಪವಾಗಿದೆ. ಸತತ ಪರಿಶ್ರಮ ಮತ್ತು ದೂರದೃಷ್ಟಿ ಇದ್ದರೆ ಯಾವುದೇ ಕ್ಷೇತ್ರದಲ್ಲಿ ಉನ್ನತ ಸ್ಥಾನಕ್ಕೇರಬಹುದು ಎಂಬುದಕ್ಕೆ ಇವರೇ ಸಾಕ್ಷಿ.





ಬೆಂಗಳೂರಿನ ಟಾರ್ಕ್ 03 ಫ್ರಾನ್ಸ್‌ನ ಸಾಡಿಕಾರ್ಡ್ ಮತ್ತು ಸ್ಲೋವೇನಿಯಾದ 360 ಕಾರ್ಟಿಂಗ್ ಜತೆಗೆ ವಿಶ್ವದರ್ಜೆಯ ಬೃಹತ್ ಮನರಂಜನಾ ಸೌಲಭ್ಯ ಪರಿಚಯಿಸುವ ನಿಟ್ಟಿನಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಈ ವೇಳೆ (ಎಡದಿಂದ ಬಲಕ್ಕೆ) ಸಿಎಸ್‌ಎಮ್‌ಎಲ್ ಇಂಡಿಯಾದ ನಿರ್ದೇಶಕ ರೋಹಿತ್ ಮಾಥುರ್, ಸೋಡಿಕಾರ್ಟ್ ಸಂಸ್ಥೆಯ ಅಧ್ಯಕ್ಷ ಬರ್ಟ್ರಾಂಡ್ ಪಿನೋಲೆಟ್, ಟಾರ್ಕ್03 ಸಂಸ್ಥಾಪಕ ಶ್ರೀಹರ್ಷ, ಬೆಂಗಳೂರಿನಲ್ಲಿರುವ ಫ್ರಾನ್ಸ್‌ನ ಕೌನ್ಸಿಲ್ ಜನರಲ್ ಮಾರ್ಕ್ ಲಾಮಿ ಇದ್ದರು.









# ಸೇಡು: ಸಿ.ಸಿ.ಟಿವಿ ಕ್ಯಾಮೆರಾ ಸಂಪರ್ಕ ಕಡಿತ

## ಐಪಿಎಲ್ ಪಂದ್ಯ ಆರಂಭಕ್ಕೂ ಮುನ್ನ ಆರೋಪಿಗಳ ಕೃತ್ಯ ; ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏಪ್ರಿಲ್ 24ರಂದು ನಡೆದಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಗುಜರಾತ್ ಟೈಟನ್ಸ್ (ಜಿಟಿ) ತಂಡಗಳ ನಡುವಿನ ಐಪಿಎಲ್ ಪಂದ್ಯದ ವೇಳೆ 240 ಸಿ.ಸಿ.ಟಿ.ವಿ ಕ್ಯಾಮೆರಾಗಳ ಸಂಪರ್ಕ ಕಡಿತಗೊಳಿಸಿ ಆತಂಕ ತಂದೊಡ್ಡಿದ್ದ ಐವಿಎಸ್ ಡಿಜಿಟಲ್ ಸಲ್ಯೂಷನ್ ಸಂಸ್ಥೆಯ ಇಬ್ಬರು ಮಾಜಿ ಸಿಬ್ಬಂದಿಯನ್ನು ಕಬ್ಬನ್ ಪಾರ್ಕ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಮಂಜುನಾಥ್ (37) ಹಾಗೂ ಉತ್ತರ ಪ್ರದೇಶದ ಸುಲ್ತಾನ್‌ಪುರದ ಅಬ್ದುಲ್ ಕಲಾಂ (19) ಬಂಧಿತರು.

ಹರಿಯಾಣದ ಎಸ್‌ಟಿಎಕ್ಯೂಯು ಟೆಕ್ನಾಲಜೀಸ್ ಸಂಸ್ಥೆಯ ಆದಿತ್ಯ ಭಟ್ ಅವರು ನೀಡಿದ ದೂರು ಆಧರಿಸಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಕ್ರೀಡಾಂಗಣದ ಭದ್ರತೆಗಾಗಿ ಅಳವಡಿಸಲಾಗಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳ ನಿರ್ವಹಣೆಯ ಹೊಣೆಯನ್ನು ‘ಐವಿಎಸ್ ಡಿಜಿಟಲ್ ಸಲ್ಯೂಷನ್’ ಎಂಬ ಉಪ ವಿತರಕ ಸಂಸ್ಥೆಗೆ ನೀಡಲಾಗಿತ್ತು. ಆ ಸಂಸ್ಥೆಯಲ್ಲಿ ಮಂಜುನಾಥ್ ಹಾಗೂ ಅಬ್ದುಲ್ ಕಲಾಂ ಅವರು ಈ ಹಿಂದೆ ಕೆಲಸ ಮಾಡಿದ್ದರು. ಆರೋಪಿಗಳಿಬ್ಬರಿಗೂ ಕಂಪನಿಯಿಂದ ಬರಬೇಕಿದ್ದ ಸಂಬಳ ಬಾಕಿ ಇತ್ತು. ಎಷ್ಟು ಕೇಳಿದರೂ ಸಂಬಳ ನೀಡದಿದ್ದಕ್ಕೆ ಕೋಪಗೊಂಡಿದ್ದ ಸಿಬ್ಬಂದಿ, ಪಂದ್ಯ ಆರಂಭಕ್ಕೂ ಮುನ್ನ ಕೃತ್ಯ ಎಸಗಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

**ಕ್ರೀಡಾಂಗಣದಲ್ಲಿ ಇರುವ ವ್ಯವಸ್ಥೆ**

**360** ಕ್ರೀಡಾಂಗಣದಲ್ಲಿ ಇರುವ ಸಿಸಿಟಿವಿಗಳ ಸಂಖ್ಯೆ

**240** ಸ್ಥಗಿತಗೊಂಡಿದ್ದ ಸಿಸಿಟಿವಿ ಕ್ಯಾಮೆರಾಗಳ ಸಂಖ್ಯೆ



ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ನೋಟ

> **ಸಿ.ಸಿ.ಟಿವಿ ಫೀಡ್ ಸ್ಥಗಿತಗೊಂಡಿರುವ ಬಗ್ಗೆ ಪರಿಶೀಲನೆ ನಡೆಸಿದಾಗ ತಾಂತ್ರಿಕ ದೋಷವಲ್ಲ, ಬದಲಾಗಿ ವ್ಯವಸ್ಥಿತವಾಗಿ ನಡೆದ ದುಷ್ಕೃತ್ಯ ಎಂಬುದು ಬಯಲಾಯಿತು**
> **ಅಕ್ಷಯ್ ಮಚೀಂದ್ರ,** ಡಿಸಿಪಿ, ಕೇಂದ್ರ ವಿಭಾಗ

‘ಪಂದ್ಯದ ವೇಳೆ ಭದ್ರತೆ ಎಷ್ಟು ಮುಖ್ಯ ಎಂಬುದನ್ನು ಆರೋಪಿಗಳು ಅರಿತುಕೊಂಡಿದ್ದರು. ಯಾರಿಗೂ ಅನುಮಾನ ಬಾರದಂತೆ ಕ್ರೀಡಾಂಗಣಕ್ಕೆ ಪ್ರವೇಶಿಸಿ ಪ್ರಮುಖ ಕೇಬಲ್‌ಗಳನ್ನು ಕತ್ತರಿಸಿದ್ದರು. ಸಂಜೆಯ ಹೊತ್ತಿಗೆ ಸಿ.ಸಿ.ಟಿ.ವಿ ಫೀಡ್ ಸ್ಥಗಿತಗೊಂಡಾಗ ಪೊಲೀಸರು ಹಾಗೂ ಭದ್ರತಾ ಸಿಬ್ಬಂದಿ ಕಂಗಾಲಾಗಿದ್ದರು. ಸಿ.ಸಿ.ಟಿ.ವಿ ನಿಯಂತ್ರಣ ಕೊಠಡಿಯಲ್ಲಿದ್ದ ಪೊಲೀಸರು ತಪಾಸಣೆ ನಡೆಸಿದಾಗ ಕೇಬಲ್‌ಗಳು ತುಂಡಾಗಿರುವುದು ಪತ್ತೆ ಆಗಿತ್ತು’ ಎಂದು ಮೂಲಗಳು ಹೇಳಿವೆ.

**ನಿಷ್ಕ್ರಿಯ ಕಾರ್ಡ್ ಬಳಸಿ ಪ್ರವೇಶ:** ಪಂದ್ಯದ ದಿನ ಬೆಳಿಗ್ಗೆ 11.30ರ ಸುಮಾರಿಗೆ ತಮ್ಮ ಬಳಿಯಿದ್ದ ನಿಷ್ಕ್ರಿಯಗೊಂಡ ಹಳೆಯ ಐ.ಡಿ ಕಾರ್ಡ್‌ಗಳನ್ನು ಬಳಸಿ ಕ್ರೀಡಾಂಗಣದ ಒಳಗೆ ಮಂಜುನಾಥ್ ಹಾಗೂ ಅಬ್ದುಲ್ ಕಲಾಂ ಪ್ರವೇಶಿಸಿದ್ದರು ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ಪ್ರವೇಶಕ್ಕೆ ಮುಂದಾದ ಈ ಇಬ್ಬರನ್ನು ಭದ್ರತಾ ಸಿಬ್ಬಂದಿ ಹಾಗೂ ಪೊಲೀಸರು ಪ್ರಶ್ನಿಸಿದಾಗ, ಸಿ.ಸಿ.ಟಿವಿ ಕ್ಯಾಮೆರಾಗಳ ನಿರ್ವಹಣೆಗೆ ನೇಮಕಗೊಂಡಿರುವುದಾಗಿ ಆರೋಪಿಗಳು ತಿಳಿಸಿದ್ದರು. ಹೀಗಾಗಿ, ಅವರನ್ನೂ ಒಳಗೆ ಬಿಟ್ಟಿದ್ದರು. ನಂತರ, ನೇರವಾಗಿ ಸಿ.ಸಿ.ಟಿ.ವಿ ಸರ್ವರ್ ಕೊಠಡಿಗೆ ತೆರಳಿ ಅಲ್ಲಿನ ಎನ್‌ವಿಆರ್ (ನೆಟ್‌ವರ್ಕ್ ವಿಡಿಯೊ ರೆಕಾರ್ಡರ್) ಮತ್ತು ಫೈಬರ್ ಸಂಪರ್ಕ ಕಡಿತಗೊಳಿಸಿದ್ದರು. ಅದರ ಪರಿಣಾಮ ಪ್ರವೇಶ ದ್ವಾರಗಳ ಕ್ಯಾಮೆರಾಗಳು, ಕ್ರೀಡಾಂಗಣದ ಸುತ್ತಮುತ್ತಲಿನ ಕ್ಯಾಮೆರಾಗಳು, ‘ಡಿ’ ಕಾರ್ಪೊರೇಟ್ ಸ್ಟ್ಯಾಂಡ್ ಮತ್ತಿತರ ಭಾಗಗಳ ದೃಶ್ಯಾವಳಿಗಳ ಫೀಡ್ ಸ್ಥಗಿತವಾಗಿತ್ತು. ಸಿ.ಸಿ.ಟಿ.ವಿ ದೃಶ್ಯಗಳು ಬಂದ್ ಆಗಿದ್ದರಿಂದ ಭದ್ರತಾ ಮೇಲ್ವಿಚಾರಣೆಯಲ್ಲಿ ಭಾರಿ ಹಿನ್ನಡೆ ಎದುರಾಗಿತ್ತು’ ಎಂದು ಮೂಲಗಳು ಹೇಳಿವೆ.

### ಭದ್ರತಾ ವೈಫಲ್ಯದ ಆತಂಕ

‘ಪಂದ್ಯದ ದಿನವೇ ಕ್ರೀಡಾಂಗಣದ ಬಹುತೇಕ ಸಿ.ಸಿ.ಟಿ.ವಿ ಕ್ಯಾಮೆರಾಗಳು ಆಫ್ ಆಗಿದ್ದರಿಂದ ಭದ್ರತಾ ವ್ಯವಸ್ಥೆ ಬಗ್ಗೆ ಆತಂಕ ಎದುರಾಗಿತ್ತು. ಕಳೆದ ಎರಡು ತಿಂಗಳಿನಿಂದ ಕ್ರೀಡಾಂಗಣದ ಭದ್ರತೆ ಮೇಲೆ ಸಾಕಷ್ಟು ನಿಗಾ ವಹಿಸಿದ್ದೆವು. ಹೀಗಿದ್ದರೂ ಕ್ಯಾಮೆರಾಗಳು ಸ್ಥಗಿತಗೊಂಡಿದ್ದು ಹೇಗೆ ಎಂಬ ಪ್ರಶ್ನೆ ಎದುರಾಗಿತ್ತು. ಪಂದ್ಯದ ವೇಳೆ ದುಷ್ಕೃತ್ಯ ಎಸಗಲು ಸಂಚು ಇರಬಹುದೇ ಎಂಬ ಅನುಮಾನವೂ ವ್ಯಕ್ತವಾಗಿತ್ತು. ತಕ್ಷಣ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿತ್ತು. ಅಲ್ಲದೇ ಕ್ಯಾಮೆರಾಗಳ ನಿರ್ವಹಣೆಗೆ ಬದಲಿ ತಾಂತ್ರಿಕ ವ್ಯವಸ್ಥೆ ಮಾಡಿ ಯಾವುದೇ ಲೋಪವಾಗದಂತೆ ಕ್ರಮ ಕೈಗೊಳ್ಳಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.


‘ಕಳೆದ ವರ್ಷ ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತ ಸಂಭವಿಸಿತ್ತು. ಅದಾದ ಮೇಲೆ ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತಮುತ್ತ ಸಿ.ಸಿ.ಟಿ.ವಿ ಕ್ಯಾಮೆರಾಗಳ ಸಂಖ್ಯೆ ಹೆಚ್ಚಿಸಲಾಗಿದೆ. ಏಪ್ರಿಲ್ 24ರಂದು 240 ಸಿ.ಸಿ.ಟಿ.ವಿ ಕ್ಯಾಮೆರಾಗಳು ಏಕಕಾಲದಲ್ಲಿ ಸ್ಥಗಿತಗೊಂಡಿದ್ದವು. ಭದ್ರತಾ ನ್ಯೂನತೆಗಳ ನಡುವೆಯೂ ಪೊಲೀಸರು ಚಾಣಾಕ್ಷತನದಿಂದ ಕಾರ್ಯನಿರ್ವಹಿಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪರಿಸ್ಥಿತಿ ನಿಭಾಯಿಸಿದ್ದಾರೆ. ಘಟನೆ ಸಂಬಂಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

## ಸುದ್ದಿ 2 ನಿಮಿಷ

### ‘ಒಳಮೀಸಲು ತೀರ್ಮಾನ ಅನ್ವಯಿಸಿ ಶೀಘ್ರ 225 ವೈದ್ಯರ ನೇಮಕಾತಿ’

**ಹುಬ್ಬಳ್ಳಿ/ಧಾರವಾಡ:** ‘225 ವೈದ್ಯರ ನೇಮಕಾತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ. ಒಳಮೀಸಲಾತಿ ಅನ್ವಯ ಶೀಘ್ರ ನೇಮಕಾತಿ ನಡೆಯಲಿದೆ’ ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಹೇಳಿದರು.

‘ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 1,300 ಶುಶ್ರೂಷಕರ ನೇಮಕಕ್ಕೂ ಅವಕಾಶವಿದೆ. ತಾಲ್ಲೂಕು ಆಸ್ಪತ್ರೆಗಳು 24 ಗಂಟೆ ಕಾರ್ಯನಿರ್ವಹಿಸುವಂತೆ ಮೂಲಸೌಲಭ್ಯ ಕಲ್ಪಿಸಿ ಮೇಲ್ದರ್ಜೆಗೆ ಏರಿಸಲಿದ್ದೇವೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.



‘ಸರ್ಕಾರಿ ಆಸ್ಪತ್ರೆಗಳ ಬಳಿ ಜೆನರಿಕ್ ಮಳಿಗೆಗಳ ತೆರವು ನಿರ್ಧಾರ ಪ್ರಶ್ನಿಸಿ ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ನಾವೂ ಸಹ ಕ್ರಮವನ್ನು ಸಮರ್ಥಿಸಿಕೊಳ್ಳುತ್ತೇವೆ’ ಎಂದು ತಿಳಿಸಿದರು.

### ಶಾಸಕ ಅಶೋಕ್ ರೈಗೆ ಬೆದರಿಕೆ ಕರೆ

**ಪುತ್ತೂರು (ದಕ್ಷಿಣ ಕನ್ನಡ):** ‘ಹಳೆಯ ಕಟ್ಟಡ ತೆರವು ವಿಚಾರದಲ್ಲಿ ದೆಹಲಿಯಿಂದ ವ್ಯಕ್ತಿಯೊಬ್ಬ ಕರೆ ಮಾಡಿ ತನಗೆ ಬೆದರಿಕೆಯೊಡ್ಡಿದ್ದಾನೆ’ ಎಂದು ಶಾಸಕ ಅಶೋಕ್ ರೈ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪುತ್ತೂರು ಮಹಾಲಿಂಗೇಶ್ವರ ದೇವಳದ ಸಮೀಪ, ಬಲ್ನಾಡು ಕ್ಷೇತ್ರದ ಉಳ್ಳಾಲ್ತಿ ದೈವದ ಕಿರುವಾಳು ಭಂಡಾರ ಬರುವ ದಾರಿಯಲ್ಲಿದ್ದ ಹಳೆಯ ಕಟ್ಟಡವನ್ನು ಭಾಗಶಃ ಕೆಡವಿದ ವಿಚಾರದಲ್ಲಿ ಈ ಬೆದರಿಕೆ ಕರೆ ಬಂದಿದೆ. ಮೊದಲು ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ಕಳುಹಿಸಿ ಬೆದರಿಕೆಯೊಡ್ಡಿದ ವ್ಯಕ್ತಿ, ಬಳಿಕ ಕರೆ ಮಾಡಿ ಹಿಂದಿ ಭಾಷೆಯಲ್ಲಿ ಮಾತನಾಡಿದ್ದಾನೆ. ‘ನೀವು ಖಾಸಗಿಯವರ ಜಾಗಕ್ಕೆ ಪ್ರವೇಶ ಮಾಡಿದ್ದೀರಿ. ನಾನು ದೆಹಲಿಯಿಂದ ಪಿಎಂಒ ಕಚೇರಿ (ಪ್ರಧಾನಿ ಕಾರ್ಯಾಲಯ) ಸಹಾಯದಿಂದ ಈ ಕರೆ ಮಾಡುತ್ತಿದ್ದೇನೆ’ ಎಂದು ಆತ ತಿಳಿಸಿದ್ದಾನೆ. ಕೊನೆಯಲ್ಲಿ ಆತ, ‘ನಾನು ಆದಾಯ ತೆರಿಗೆ ಇಲಾಖೆಯಿಂದ ಮಾತನಾಡುತ್ತಿದ್ದೇನೆ’ ಎಂದಿದ್ದಾನೆ. ನಾನೇನೂ ತಪ್ಪು ಮಾಡಿಲ್ಲ. ಹೀಗಿರುವಾಗ ಆದಾಯ ತೆರಿಗೆ ಇಲಾಖೆಯ ಭಯ ನನಗಿಲ್ಲ ಎಂದು ಹೇಳಿದ್ದೇನೆ’ ಎಂದರು.

‘ಈ ಬಗ್ಗೆ ಯಾಕೆ ದೂರು ನೀಡಿಲ್ಲ’ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಇಂಥ ವಿಚಾರಗಳನ್ನು ನಾನು ಗಂಭೀರವಾಗಿ ಪರಿಗಣಿಸುವುದಿಲ್ಲ. ನನ್ನ ಹಿತಶತ್ರುಗಳು ಕೆಲವರಿದ್ದಾರೆ. ಅಶೋಕ್ ರೈಯನ್ನು ಹೇಗಾದರೂ ಬೀಳಿಸಬೇಕು ಎಂದು ಕಾಯುತ್ತಿದ್ದಾರೆ. ಮಹಾಲಿಂಗೇಶ್ವರ ದೇವರ ಕಾರ್ಯಕ್ಕೆ ಬೇಕಾಗಿ ನಾನು ನೂರು ಪ್ರಕರಣ ಹಾಕಿಸಿಕೊಳ್ಳಲೂ ಸಿದ್ಧ’ ಎಂದರು.

## ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ ಮೇ 9ಕ್ಕೆ

ಪ್ರಜಾವಾಣಿ ವಾರ್ತೆ

**ಚಿತ್ರದುರ್ಗ:** ಸಾರ್ವಜನಿಕ ಬದುಕಿನಲ್ಲಿ 50 ವರ್ಷ ಪೂರೈಸಿರುವ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ ಅವರ ಹಿತೈಷಿಗಳು, ಅಭಿಮಾನಿಗಳು ಮೇ 9ರಂದು ನಗರದ ಮಾದಾರ ಚನ್ನಯ್ಯ ಗುರುಪೀಠ ಪಕ್ಕದ ಮೈದಾನದಲ್ಲಿ ‘ಬಿಎಸ್‌ವೈ ಅಭಿಮಾನೋತ್ಸವ’ ಹಮ್ಮಿಕೊಂಡಿದ್ದಾರೆ.

ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಅಂಗವಾಗಿ ದಾವಣಗೆರೆಯಲ್ಲಿ ನಡೆದಿದ್ದ ‘ಸಿದ್ದರಾಮೋತ್ಸವ’ ಮಾದರಿಯಲ್ಲಿ ‘ಬಿಎಸ್‌ವೈ ಅಭಿಮಾನೋತ್ಸವ’ ನಡೆಯಲಿದ್ದು, ಅಭಿಮಾನಿಗಳು ಮತ್ತು ಪಕ್ಷದ ಕಾರ್ಯಕರ್ತರು ಸೇರಿ ಅಂದಾಜು 5 ಲಕ್ಷಕ್ಕೂ ಹೆಚ್ಚು ಜನರು ಸಮಾರಂಭದಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ.

ಸಮಾರಂಭದಲ್ಲಿ ಕೇಂದ್ರ ಗೃಹಸಚಿವ ಅಮಿತ್ ಶಾ ಸೇರಿ ಬಿಜೆಪಿಯ ಅನೇಕ ಮುಖಂಡರು ಭಾಗವಹಿಸಲಿದ್ದಾರೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ. ಕಾರ್ಯಕ್ರಮದ ಸ್ವಾಗತ ಸಮಿತಿಗೆ ಸಂಸದ ಗೋವಿಂದ ಕಾರಜೋಳ ಅಧ್ಯಕ್ಷ, ಮಾಜಿ ಸಚಿವ ಬಿ.ಶ್ರೀರಾಮುಲು ಉಪಾಧ್ಯಕ್ಷರಾಗಿದ್ದು, ಸಿದ್ಧತೆಗಳು ಭರದಿಂದ ಸಾಗಿವೆ.



ಬಿ.ಎಸ್. ಯಡಿಯೂರಪ್ಪ

ಏ.26ರಂದು ವಿಶಾಲ ಮೈದಾನದಲ್ಲಿ ವೇದಿಕೆ ನಿರ್ಮಿಸಲು ಯಡಿಯೂರಪ್ಪ ಪುತ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಚಾಲನೆ ನೀಡಿದ್ದು, ಮುಖಂಡರಾದ ಜಿ.ಎಂ.ಸಿದ್ದೇಶ್ವರ, ಬಿ.ಸಿ.ಪಾಟೀಲ್, ಎ.ನಾರಾಯಣಸ್ವಾಮಿ, ಎನ್. ರವಿಕುಮಾರ್, ಜಿ.ಎಚ್.ತಿಪ್ಪಾರೆಡ್ಡಿ, ಎಂ.ಪಿ.ರೇಣುಕಾಚಾರ್ಯ, ಎನ್. ಮಹೇಶ್, ಮುನಿರತ್ನ, ಹರತಾಳು ಹಾಲಪ್ಪ, ಕೆ.ಎಸ್. ನವೀನ್, ರೂಪಾಲಿ ನಾಯ್ಕ, ಸಂಜಯ್ ಪಾಟೀಲ್ ಇದ್ದರು.

‘ಇದೊಂದು ಪಕ್ಷಾತೀತ ಕಾರ್ಯಕ್ರಮ. ದೇಶದ ವಿವಿಧೆಡೆಯಿಂದ ರಾಜಕೀಯ ಪಕ್ಷಗಳ ಮುಖಂಡರು, ಮಠಾಧೀಶರು ಹಾಗೂ ಸಾರ್ವಜನಿಕರು ಪಾಲ್ಗೊಳ್ಳಲಿದ್ದಾರೆ’ ಎಂದು ಸ್ವಾಗತ ಸಮಿತಿ ಸದಸ್ಯರು ತಿಳಿಸಿದ್ದಾರೆ.

## ‘ನಾಯಕತ್ವ: ತಿಂಗಳೊಳಗೆ ಬಗೆಹರಿಸಿ’

### ಮುಂದುವರಿದ ಗೊಂದಲ: ಹೈಕಮಾಂಡ್‌ಗೆ ಸಚಿವ ಸತೀಶ ಜಾರಕಿಹೊಳಿ ಮನವಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಸೋಮವಾರ ಇಲ್ಲಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.



ಸತೀಶ ಜಾರಕಿಹೊಳಿ

ನಾಯಕತ್ವ ಬದಲಾವಣೆಗೆ ಪಟ್ಟು ಹಿಡಿದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಅವರ ಸಹೋದರ ಡಿ.ಕೆ. ಸುರೇಶ್ ದೆಹಲಿಯಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಸಚಿವರೂ ದೆಹಲಿಗೆ ದೌಡಾಯಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ನಾಯಕತ್ವ ಗೊಂದಲ, ಸಚಿವ ಸಂಪುಟ ಪುನರ್‌ರಚನೆ ಹಾಗೂ ಉಪ ಚುನಾವಣೆ ಬಗ್ಗೆ ಆಪ್ತ ಸಚಿವರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ವಾರ ಗೋಪ್ಯವಾಗಿ ಸಭೆ ನಡೆಸಿದ್ದರು. ಮುಖ್ಯಮಂತ್ರಿ ಬಣದ ಮುಂದಿನ ಕಾರ್ಯತಂತ್ರದ ಬಗ್ಗೆ ಚರ್ಚಿಸಲಾಗಿತ್ತು.

> **ಮೇ ಎರಡನೇ ಅಥವಾ ಮೂರನೇ ವಾರ ಸಿಹಿಸುದ್ದಿ ಕೊಡುತ್ತೇವೆಂದು ಹೈಕಮಾಂಡ್ ನಾಯಕರು ಹೇಳಿದ್ದಾರೆ. ಅದರ ನಿರೀಕ್ಷೆಯಲ್ಲಿದ್ದೇವೆ**
> **ಅಶೋಕ ಪಟ್ಟಣ,** ವಿಧಾನಸಭೆಯ ಮುಖ್ಯ ಸಚೇತಕ

> **ಮೇ 15ರಂದು ಡಿ.ಕೆ. ಶಿವಕುಮಾರ್ ಅವರ ಜನ್ಮದಿನವಿದೆ. ಅಷ್ಟರೊಳಗೆ ಸಂತೋಷದ ಸುದ್ದಿ ಬರಬಹುದು**
> **ಎಚ್.ಡಿ. ರಂಗನಾಥ್,** ಕುಣಿಗಲ್ ಕ್ಷೇತ್ರದ ಕಾಂಗ್ರೆಸ್ ಶಾಸಕ

> **ಸಂಪುಟದಲ್ಲಿ ಸದ್ಯ ಇರುವ ಎಲ್ಲರೂ ಕಾಯಂ ಸಚಿವರಾಗಿ ಇರಬೇಕು ಎಂದೇನಿಲ್ಲ. ಸಾಕಷ್ಟು ಮಂದಿ ಹಿರಿಯರು, ಅನುಭವಿಗಳಿಗೂ ಅವಕಾಶ ಸಿಗಬೇಕು**
> **ದಿನೇಶ ಗುಂಡೂರಾವ್,** ಸಚಿವ

ಸಕ್ಕರೆ ಕಾರ್ಖಾನೆ ಕೆಲಸದ ನಿಮಿತ್ತ ರಾಷ್ಟ್ರ ರಾಜಧಾನಿಗೆ ಬಂದಿರುವ ಜಾರಕಿಹೊಳಿ ಅವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಚರ್ಚಿಸಿದರು. ‘ಅಧಿಕಾರ ಹಸ್ತಾಂತರ, ನಾಯಕತ್ವ ಗೊಂದಲದಿಂದ ಪಕ್ಷಕ್ಕೆ ಹಾನಿ ಆಗಿದೆ. ಇನ್ನಷ್ಟು ವಿಳಂಬ ಮಾಡಿದರೆ ವ್ಯಾಪಕ ಹಾನಿ ಆಗಲಿದೆ. ರಾಜ್ಯಗಳ ಚುನಾವಣಾ ಫಲಿತಾಂಶ ಬಂದ ಕೂಡಲೇ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರನ್ನು ಕರೆಸಿ ಮಾತುಕತೆ ನಡೆಸಬೇಕು. ಮೇ ಅಂತ್ಯದೊಳಗೆ ಎಲ್ಲ ಗೊಂದಲಗಳನ್ನು ಬಗೆಹರಿಸಬೇಕು’ ಎಂದು ಜಾರಕಿಹೊಳಿ ಒತ್ತಾಯಿಸಿದ್ದಾರೆ.

ಭೇಟಿಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜಾರಕಿಹೊಳಿ, ‘ರಾಜ್ಯದ ಗೊಂದಲಕ್ಕೆ ಹೈಕಮಾಂಡ್ ಪರಿಹಾರ ಹುಡುಕಬೇಕು. ಗೊಂದಲ ಬಗೆಹರಿಸುವಂತೆ ಈ ಹಿಂದೆಯೂ ಮನವಿ ಮಾಡಿದ್ದೆ. ಈಗಲೂ ಹೈಕಮಾಂಡ್‌ಗೆ ಅದನ್ನೇ ಹೇಳಿದ್ದೇನೆ’ ಎಂದರು.

‘ಸಂಪುಟ ವಿಸ್ತರಣೆ ಮಾಡಲಾಗುವುದು ಎಂದು ಪಕ್ಷದ ನಾಯಕರು ಈ ಹಿಂದೆ ಹೇಳಿದ್ದರು. ಸೂಕ್ತ ಸಮಯದಲ್ಲಿ ಈ ಪ್ರಕ್ರಿಯೆ ನಡೆಸಬಹುದು. ಸಂಪುಟ ವಿಸ್ತರಣೆಗಾಗಿ ಹಿರಿಯ ನಾಯಕರು ದೆಹಲಿಗೆ ಬಂದಿದ್ದು ತಪ್ಪಲ್ಲ’ ಎಂದರು. ‘ನಾಯಕತ್ವ ಬದಲಾವಣೆ ಹೈಕಮಾಂಡ್‌ಗೆ ಬಿಟ್ಟಿದ್ದು. ಆದರೆ, ಈ ಚರ್ಚೆ ನಿಲ್ಲಬೇಕು ಎಂಬುದು ನಮ್ಮ ಕಳಕಳಿ’ ಎಂದರು.

### ‘ದೆಹಲಿಗೆ 50 ಕಾಂಗ್ರೆಸ್ ಶಾಸಕರ ಟಿಕೆಟ್ ಬುಕ್’

**ಮಾಲೂರು (ಕೋಲಾರ):** ದೆಹಲಿಗೆ ತೆರಳಲು 40ರಿಂದ 50 ಕಾಂಗ್ರೆಸ್ ಶಾಸಕರ ಟಿಕೆಟ್ ಬುಕ್ಕಿಂಗ್ ನಡೆಯುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೋಮವಾರ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಆಗಬೇಕು, ಮಂತ್ರಿ ಆಗಬೇಕೆಂದು ಕೆಲವರು ಪದೇ ಪದೇ ದೆಹಲಿಗೆ ಹೋಗಿ ಬರುತ್ತಿದ್ದಾರೆ. ಒಂದು ವರ್ಷದಿಂದ ಇದು ನಡೆಯುತ್ತಿದೆ ಎಂದರು.



ಎಚ್.ಡಿ. ಕುಮಾರಸ್ವಾಮಿ


‘ಉಪ ಚುನಾವಣೆ ಫಲಿತಾಂಶದ ಬಳಿಕ ರಾಜ್ಯ ಸರ್ಕಾರದಲ್ಲಿ ಮತ್ತೆ ಕ್ರಾಂತಿ ನಡೆಯುತ್ತದೆ ಎಂಬ ಮಾತು ಕೇಳಿಬರುತ್ತಿದೆ. ಯಾವ ರೀತಿ ಕ್ರಾಂತಿ ಎಂದು ನಾನೂ ಕುತೂಹಲದಿಂದ ಕಾಯುತ್ತಿದ್ದೇನೆ’ ಎಂದು ಮುಗುಳ್ನಕ್ಕರು.

‘ರಾಜ್ಯ ಕಾಂಗ್ರೆಸ್‌ನಲ್ಲಿ ಸಂಕ್ರಾಂತಿ, ಯುಗಾದಿ ಕ್ರಾಂತಿ ಮುಗಿದಿದೆ. ಬಾಕಿ ಉಳಿದಿರುವ ಹೊಸ ಕ್ರಾಂತಿಯ ಬಗ್ಗೆ ನನಗೂ ಕುತೂಹಲ ಇದೆ’ ಎಂದರು.

## ಕುಮಾರಸ್ವಾಮಿಗೆ ಏನೋ ಸಮಸ್ಯೆ ಇದೆ: ಡಿಕೆಶಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ತಮ್ಮ ಅನುಭವದ ಲೆಕ್ಕಾಚಾರದ ಮೇಲೆ ಮಾತನಾಡಿರಬೇಕು. ಅವರಲ್ಲಿ ಏನೋ ಸಮಸ್ಯೆ ಇರಬೇಕು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿರುಗೇಟು ನೀಡಿದರು.



ಶಿವಕುಮಾರ್

‘ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಸಚಿವ ಡಿ.ಸುಧಾಕರ್ ಆರೋಗ್ಯದ ವಿಚಾರ ಮುಚ್ಚಿಡಲಾಗಿದೆ’ ಎಂಬ ಕುಮಾರಸ್ವಾಮಿ ಆರೋಪದ ಬಗ್ಗೆ ಕೇಳಿದಾಗ, ‘ಯಾವ ಹೆಬ್ಬೆಟ್ಟು, ಏನು ಎಂದು ಗೊತ್ತಿದ್ದರೆ ಅವರೇ ಹೇಳಬೇಕು. ಅವರ ಕುಟುಂಬದವರಿಗೆ ಹೇಳಬೇಕು. ರಾಜಕೀಯ ಲಾಭಕ್ಕೆ ಕುಮಾರಸ್ವಾಮಿ ಮಾತನಾಡುತ್ತಿದ್ದು, ಇದರಿಂದ ಅವರ ಘನತೆಗೆ, ಹಿರಿತನಕ್ಕೆ ಗೌರವ ಬರುವುದಿಲ್ಲ’ ಎಂದರು.

## ಎಸ್‌ಟಿ ಪ್ರಮಾಣಪತ್ರಕ್ಕಾಗಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಕಲಬುರಗಿ:** ಜಿಲ್ಲೆಯಲ್ಲೂ ಪರಿಶಿಷ್ಟ ಪಂಗಡ ಪ್ರಮಾಣಪತ್ರ ನೀಡುವಂತೆ ಒತ್ತಾಯಿಸಿ ರಾಜ್ಯ ತಳವಾರ, ಪರಿವಾರ ಎಸ್ಟಿ ಹೋರಾಟ ಸಮಿತಿ ನೇತೃತ್ವದಲ್ಲಿ ಸಮುದಾಯದ ಸಹಸ್ರಾರು ಜನರು ನಗರದ ಜಿಲ್ಲಾಧಿಕಾರಿ ಕಚೇರಿ ಎದುರಿನ ರಸ್ತೆಯನ್ನು ಬಂದ್ ಮಾಡಿ ಸೋಮವಾರ ಪ್ರತಿಭಟಿಸಿದರು.

ಜಗತ್ ವೃತ್ತದಿಂದ ಹೊರಟ ಬೃಹತ್ ಮೆರವಣಿಗೆ ಜಿಲ್ಲಾಧಿಕಾರಿ ಕಚೇರಿ ತಲುಪಿತು. ಪೊಲೀಸರು ಅಡ್ಡಲಾಗಿ ಹಾಕಿದ್ದ ಬ್ಯಾರಿಕೇಡ್‌ಗಳನ್ನು ಪ್ರತಿಭಟನಕಾರರು ಕಿತ್ತೆಸೆದರು. ನಂತರ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ನುಗ್ಗಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ತಡೆದರು. ಕೆಲ ಹೊತ್ತು ಪ್ರತಿಭಟನಕಾರರು–ಪೊಲೀಸರ ಮಧ್ಯೆ ಮಾತಿನ ಚಕಮಕಿ ನಡೆಯಿತು. ಇದೇ ಸಂದರ್ಭದಲ್ಲಿ ರಸ್ತೆ ದಾಟಲು ಯತ್ನಿಸಿದ ಆಂಬುಲೆನ್ಸ್‌ನ ಬಾನೆಟ್ ಮೇಲೆ ಗುದ್ದಿದ ಕೆಲ ಯುವಕರು ಹಿಂದಕ್ಕೆ ಹೋಗುವಂತೆ ಚಾಲಕನೊಂದಿಗೆ ವಾಗ್ವಾದ ನಡೆಸಿದರು. ನಂತರ ಪೊಲೀಸರು ಮತ್ತು ಸಮಾಜದ ಹಿರಿಯರು ಆಂಬುಲೆನ್ಸ್ ಮುಂದೆ ಹೋಗಲು ದಾರಿ ಮಾಡಿಕೊಟ್ಟರು.

ಜಿಲ್ಲಾಧಿಕಾರಿ ಕಚೇರಿಯ ಮುಚ್ಚಿದ ಗೇಟಿನ ಮೇಲೆಯೇ ಬ್ಯಾನರ್ ಕಟ್ಟಿದ ಪ್ರತಿಭಟನಕಾರರು ಅದರ ಮುಂಭಾಗವನ್ನೇ ವೇದಿಕೆಯನ್ನಾಗಿ ಮಾಡಿಕೊಂಡರು. ಬಿಸಿಲಿನ ತಾಪ ಹೆಚ್ಚಾಗಿದ್ದರಿಂದ ಸಂಘಟಕರು ಕೆಲವೇ ನಿಮಿಷಗಳಲ್ಲಿ ರಸ್ತೆಯ ಮಧ್ಯದಲ್ಲೇ ಶಾಮಿಯಾನವನ್ನೂ ಅಳವಡಿಸಿದರು.



ಕಲಬುರಗಿಯಲ್ಲಿ ಸೋಮವಾರ ತಳವಾರ ಸಮುದಾಯದವರು ಪ್ರತಿಭಟಿಸಿದರು

ಸಭೆಯಲ್ಲಿ ಮಾತನಾಡಿದ ರಾಜ್ಯ ತಳವಾರ ಸಮಾಜದ ಅಧ್ಯಕ್ಷ ಸರ್ದಾರ್ ರಾಯಪ್ಪ, ಮುಖಂಡರಾದ ಅವ್ವಣ್ಣ ಮ್ಯಾಕೇರಿ ಹಾಗೂ ಶಿವಕುಮಾರ್ ನಾಟೀಕಾರ, ‘ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದ ನಂತರ ಜಿಲ್ಲೆಯಲ್ಲಿ ಉದ್ದೇಶಪೂರ್ವಕವಾಗಿ ಎಸ್‌ಟಿ ಪ್ರಮಾಣಪತ್ರ ನೀಡುವುದನ್ನು ನಿಲ್ಲಿಸಲಾಗಿದೆ’ ಎಂದು ಆರೋಪಿಸಿದರು.

‘ರಾಜ್ಯದ ಉಳಿದ ಜಿಲ್ಲೆಗಳಲ್ಲಿ ತಳವಾರರಿಗೆ ಎಸ್.ಟಿ ಪ್ರಮಾಣಪತ್ರ ನೀಡಲಾಗುತ್ತಿದೆ. ಆದರೆ, ಕಲಬುರಗಿಯಲ್ಲಿ ಮಾತ್ರ ಏಕೆ ತಡೆ ಹಿಡಿಯಲಾಗಿದೆ? ಅಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಸೂಚನೆಯಂತೆ ಪ್ರಮಾಣಪತ್ರ ವಿತರಣೆ ನಿಲ್ಲಿಸಿದ್ದಾರೆಯೇ’ ಎಂದು ಪ್ರಶ್ನಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರು ಟೋಕರೆ ಕೋಳಿ ಸಮಾಜಕ್ಕೆ ಅನ್ಯಾಯ ಮಾಡಿದರು. ಪ್ರಿಯಾಂಕ್ ಖರ್ಗೆ ಅವರು ತಳವಾರರಿಗೆ ಸಿಗಬೇಕಿದ್ದ ಎಸ್ಟಿ ಪ್ರಮಾಣ ಪತ್ರಕ್ಕೆ ಅಡ್ಡಿಯಾಗಿದ್ದಾರೆ. 2028ರಲ್ಲಿ ನಮ್ಮ ಶಕ್ತಿ ತೋರಿಸುತ್ತೇವೆ ಎಂದು ಹೋರಾಟ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಸರ್ದಾರ್ ರಾಯಪ್ಪ ಎಚ್ಚರಿಸಿದರು.

## ಬಂಟ್ವಾಳ ರೈಲು ನಿಲ್ದಾಣದಲ್ಲೇ ಮಹಿಳೆಗೆ ಸುರಕ್ಷಿತ ಪ್ರಸವ

ಪ್ರಜಾವಾಣಿ ವಾರ್ತೆ

**ಬಂಟ್ವಾಳ:** ಮುರ್ಡೇಶ್ವರ– ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್ ರೈಲಿನಲ್ಲಿ (ಸಂಖ್ಯೆ 16586) ಪ್ರಯಾಣಿಸುತ್ತಿದ್ದ ಮಹಿಳೆಗೆ ಹೆರಿಗೆ ನೋವು ಕಾಣಿಸಿಕೊಂಡಿದ್ದು, ತುರ್ತು ವೈದ್ಯಕೀಯ ನೆರವು ಒದಗಿಸಿ ಬಂಟ್ವಾಳ ರೈಲು ನಿಲ್ದಾಣದಲ್ಲೇ ಭಾನುವಾರ ರಾತ್ರಿ ಸುರಕ್ಷಿತ ಹೆರಿಗೆ ಮಾಡಿಸಲಾಯಿತು. ಶಿಶುವಿನ ಸುರಕ್ಷಿತ ಜನನಕ್ಕೆ ರೈಲಿನಲ್ಲಿದ್ದ ಸಹಪ್ರಯಾಣಿಕ ಮಹಿಳೆಯರು ಹಾಗೂ ರೈಲ್ವೆ ಸಿಬ್ಬಂದಿ ನೆರವಾದರು.



ಬಂಟ್ವಾಳ ರೈಲು ನಿಲ್ದಾಣಕ್ಕೆ ಭಾನುವಾರ ರಾತ್ರಿ 7.22ರ ಸುಮಾರಿಗೆ ರೈಲು ತಲುಪಿತ್ತು. ಆಗ ಸಾಮಾನ್ಯ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದ ಗರ್ಭಿಣಿ ಪೊನ್ನಮ್ಮ ಅವರು ಹೆರಿಗೆ ನೋವು ಹಾಗೂ ಗಂಭೀರ ಸ್ಥಿತಿಯಲ್ಲಿ ರಕ್ತಸ್ರಾವದಿಂದ ಬಳಲುತ್ತಿರುವುದು ಕಂಡುಬಂದಿತು. ತಕ್ಷಣವೇ ರೈಲ್ವೆ ಸಿಬ್ಬಂದಿ ತುರ್ತು ವೈದ್ಯಕೀಯ ಸೇವೆಗಳಿಗೆ ಮಾಹಿತಿ ನೀಡಿ ಆಂಬುಲೆನ್ಸ್ ವ್ಯವಸ್ಥೆ ಮಾಡಿದರು. ಆಂಬುಲೆನ್ಸ್ ಸ್ಥಳಕ್ಕೆ ತಲುಪುವುದಕ್ಕೂ ಮುನ್ನವೇ, ಆ ಮಹಿಳೆ ರೈಲಿನಲ್ಲಿದ್ದ ಇತರ ಮಹಿಳೆಯರ ನೆರವಿನಿಂದ ಗಂಡು ಮಗುವಿಗೆ ಜನ್ಮನೀಡಿದರು.

ರೈಲು ಸಂಖ್ಯೆ 16512ರ ಎಸ್ಕಾರ್ಟಿಂಗ್ ಸಿಬ್ಬಂದಿಯಾದ ಹೆಡ್ ಕಾನ್‌ಸ್ಟೆಬಲ್ ಹಾಸನದ ಅರುಣ ಎಸ್. ಎಸ್., ಕೃಷ್ಣರಾಜನಗರದ ಶಂಕರ ಮೂರ್ತಿ ಸಮಯೋಚಿತ ನೆರವು ನೀಡಿದರು. ಈ ಸೂಕ್ಷ್ಮ ಪರಿಸ್ಥಿತಿಯನ್ನು ಸಮರ್ಥವಾಗಿ ನಿರ್ವಹಿಸಿದ ತನ್ನ ಸಿಬ್ಬಂದಿಯ ತ್ವರಿತ ಸ್ಪಂದನೆ, ವೃತ್ತಿಪರತೆ ಹಾಗೂ ಕರ್ತವ್ಯನಿಷ್ಠೆಗೆ ಇಲಾಖೆ ಮೆಚ್ಚುಗೆ ವ್ಯಕ್ತಪಡಿಸಿದೆ ಎಂದು ರೈಲ್ವೆ ಇಲಾಖೆಯ ಪ್ರಕಟಣೆ ತಿಳಿಸಿದೆ.

ಹೆರಿಗೆಯ ನಂತರ ತಾಯಿ, ಶಿಶುವನ್ನು ಆಂಬುಲೆನ್ಸ್ ಮೂಲಕ ಬಂಟ್ವಾಳದ ಸೋಮಯಾಜಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ತಾಯಿ ಮತ್ತು ಮಗುವಿನ ಆರೋಗ್ಯ ಸ್ಥಿರವಾಗಿದೆ. ಇದು ಅವಧಿಪೂರ್ವ ಪ್ರಸವವಾಗಿದೆ. ತಾಯಿ, ಶಿಶುವನ್ನು ವೈದ್ಯಕೀಯ ಮೇಲ್ವಿಚಾರಣೆಯಲ್ಲಿ ಇರಿಸಲಾಗಿದೆ’ ಎಂದು ಸಾರ್ವಜನಿಕ ಸಂಪರ್ಕ ಅಧಿಕಾರಿ ಪೃಥ್ವಿ ಎಸ್. ಹುಲ್ಲತ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಹಾ ತಂಪು

ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.



ಮೈಸೂರು ಜಿಲ್ಲೆಯ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ದಮ್ಮನಕಟ್ಟೆ ಅರಣ್ಯದಲ್ಲಿ ಹುಲಿ ದಣಿವಾರಿಸಿಕೊಂಡಿದ್ದು ಹೀಗೆ

## ಮಳೆ: ಸಿಡಿಲು ಬಡಿದು ವ್ಯಕ್ತಿ ಸಾವು

**ಕಲಬುರಗಿ:** ಕಲ್ಯಾಣ ಕರ್ನಾಟಕದ ಕೊಪ್ಪಳ, ಯಾದಗಿರಿ, ರಾಯಚೂರು ಜಿಲ್ಲೆಯ ಕೆಲವೆಡೆ ಸೋಮವಾರ ಉತ್ತಮ ಮಳೆಯಾಗಿದೆ. ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಬೆಂಚಮಟ್ಟಿ ಗ್ರಾಮದಲ್ಲಿ ಸಂಜೆ ಸಿಡಿಲು ಬಡಿದು ದೇವರಾಯನಗೌಡ ಪೊಲೀಸ್ ಪಾಟೀಲ (50) ಮೃತಪಟ್ಟಿದ್ದಾರೆ. ಕುಕನೂರಿನಲ್ಲಿ ಆಲಿಕಲ್ಲು ಮಳೆ ಸುರಿದಿದೆ.

ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲ್ಲೂಕಿನ ಹಲವೆಡೆ ಗುಡುಗು–ಸಿಡಿಲು ಸಮೇತ ಜೋರಾಗಿ ಮಳೆಯಾಗಿದ್ದು, ಬೂದೂರು ಗ್ರಾಮದಲ್ಲಿ ಸಿಡಿಲಿಗೆ 66 ಕುರಿಗಳು ಮೃತಪಟ್ಟಿವೆ.

ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನಲ್ಲಿ ಸಂಜೆ ಬಿರುಸಿನಿಂದ ಮಳೆ ಸುರಿದಿದೆ. ಉಸ್ಕಿಹಾಳ, ಮ್ಯಾದ್ರಾಳ, ಮಾರಲದಿನ್ನಿ ಸುತ್ತಮುತ್ತ ಬಿರುಗಾಳಿಗೆ ಮರಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದು ಹಾನಿಯಾಗಿದೆ.

ಕವಿತಾಳದಲ್ಲೂ ಉತ್ತಮವಾಗಿ ಮಳೆಯಾಗಿದ್ದು, ಸಿಡಿಲು ಬಡಿದು 11 ಕುರಿಗಳು ಮೃತಪಟ್ಟಿವೆ. ಕಲಬುರಗಿ ಜಿಲ್ಲೆ ಸೇಡಂನಲ್ಲಿ ಸಿಡಿಲು ಬಡಿದು ತಲಾ ಮೂರು ಕುರಿ, ಮೇಕೆ, ರಾಸುಗಳು ಸತ್ತಿವೆ.

### ಆಲಿಕಲ್ಲು ಮಳೆ

**ಹಳೇಬೀಡು (ಹಾಸನ ಜಿಲ್ಲೆ):** ಪಟ್ಟಣದಲ್ಲಿ ಸೋಮವಾರ ಸಂಜೆ ಅರ್ಧ ಗಂಟೆ ಆಲಿಕಲ್ಲಿನ ಮಳೆ ರಭಸವಾಗಿ ಸುರಿಯಿತು. ಗುಡುಗು ಸಿಡಿಲಿನ ಅರ್ಭಟವೂ ಜೋರಾಗಿತ್ತು. ಕೃಷಿಗೆ ಭೂಮಿ ಹದ ಮಾಡಿಕೊಂಡಿದ್ದ ರೈತರಲ್ಲಿ ಈ ಮಳೆಯಿಂದಾಗಿ ಆಶಾಭಾವ ಮೂಡಿದೆ.

### ನೆಲಕಚ್ಚಿದ ಅಡಿಕೆ, ತೆಂಗು

**(ಶಿವಮೊಗ್ಗ ವರದಿ):** ಶಿವಮೊಗ್ಗ: ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ವಿವಿಧೆಡೆ ಭಾನುವಾರ ಸಂಜೆ ಭಾರಿ ಬಿರುಗಾಳಿ ಸಮೇತ ಸುರಿದ ಆಲಿಕಲ್ಲು ಮಳೆಗೆ ನೂರಾರು ಎಕರೆ ಪ್ರದೇಶದಲ್ಲಿನ ಅಡಿಕೆ ಮತ್ತು ತೆಂಗಿನ ಮರಗಳು ನೆಲಕಚ್ಚಿವೆ.


300ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಕೆಳಗೆ ಬಿದ್ದವು. 10ಕ್ಕೂ ಹೆಚ್ಚು ಟ್ರಾನ್ಸ್‌ಫಾರ್ಮರ್ ಕಂಬಗಳು ನೆಲಕ್ಕುರುಳಿದವು. ಹೊಳೆಹೊನ್ನೂರು ಮತ್ತು ಆನವೇರಿ ಆಸುಪಾಸಿನಲ್ಲಿ ವಿದ್ಯುತ್ ವ್ಯತ್ಯಯಗೊಂಡಿತ್ತು.

## ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

# ಸರ್ಕಾರಿ ಶಾಲೆಗಳ ಬಲವರ್ಧನೆಗೆ ಎಂಟು ‘ಗ್ಯಾರಂಟಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳು ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಬಲವರ್ಧನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಂಟು ಗ್ಯಾರಂಟಿಗಳನ್ನು ಘೋಷಿಸಿದ್ದಾರೆ.



ಸಿದ್ದರಾಮಯ್ಯ

ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಶಿಕ್ಷಕರನ್ನು ತ್ವರಿತ ನೇಮಕಾತಿ ಮಾಡುವ ಮೂಲಕ ಶಿಕ್ಷಕರ ಕೊರತೆ ನೀಗಿಸುವುದು. ಪ್ರತಿ ಶಾಲೆಗೂ ಸುಸಜ್ಜಿತ ಕಟ್ಟಡ, ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಗತ್ಯ ಕೊಠಡಿಗಳು, ಕುಡಿಯುವ ನೀರು, ಶೌಚಾಲಯಗಳ ನಿರ್ಮಾಣ. ಮಕ್ಕಳು ಹಾಗೂ ಪೋಷಕರ ಇಚ್ಛೆಗೆ ಅನುಗುಣವಾಗಿ ಭಾಷಾ ಮಾಧ್ಯಮ ಆಯ್ಕೆ, ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಸುತ್ತಲ ಗ್ರಾಮ, ವಾರ್ಡ್‌ಗಳಿಂದ ಬರುವ ಮಕ್ಕಳಿಗೆ ಉಚಿತ ಸಾರಿಗೆ ವ್ಯವಸ್ಥೆ. ಪ್ರತಿ ಶಾಲೆಗಳಲ್ಲೂ ಆಧುನಿಕ ಶಿಕ್ಷಣಕ್ಕೆ ಅನುಗುಣವಾಗಿ ಡಿಜಿಟಲ್ ಕಲಿಕೆಗೆ ಅವಕಾಶ, ಸ್ಮಾರ್ಟ್ ಕ್ಲಾಸ್‌ಗಳ ನಿರ್ಮಾಣ. ವಿವಿಧ ಕಲೆಗಳು, ಕ್ರೀಡಾ ಚಟುವಟಿಕೆಗಳಿಗೆ ಆದ್ಯತೆ. ಪ್ರತಿ ಶಾಲೆಯಲ್ಲೂ ಶೈಕ್ಷಣಿಕ ಗುಣಮಟ್ಟದ ಮೇಲ್ವಿಚಾರಣೆಗೆ ಪ್ರತ್ಯೇಕ ಸಮಿತಿ ರಚನೆ. ಭವಿಷ್ಯದಲ್ಲಿ ಉದ್ಯೋಗ ಸಿಗುವಂತಹ ಶಿಕ್ಷಣ ಕಲಿಕೆಗೆ ಅವಕಾಶ ನೀಡಲು ಶಾಲಾ ಹಂತದಿಂದಲೇ ಮಕ್ಕಳಿಗೆ ಕೌಶಲಾಧಾರಿತ ತರಬೇತಿಯ ಭರವಸೆ ನೀಡಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ‘ಎಸ್‌ಎಸ್‌ಎಲ್‌ಸಿ, ಪಿಯು ದಾಖಲೆಯ ಫಲಿತಾಂಶ ಹರ್ಷ ತಂದಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಶೇ 94.1 ಹಾಗೂ ಪಿಯುನಲ್ಲಿ ಶೇ 86.48 ಫಲಿತಾಂಶ ನೀಡುವ ಮೂಲಕ ಮಕ್ಕಳು ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. ಅದರಲ್ಲೂ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಸಾಧನೆ ಬೆರಗು ಮೂಡಿಸಿದೆ. ಈ ಸಾಧನೆಗಳು ನಮ್ಮ ಸರ್ಕಾರಿ ಶಾಲಾ ವ್ಯವಸ್ಥೆಯ ಬಲವನ್ನು ತೋರಿಸುತ್ತವೆ. ಇದರಿಂದ ಪ್ರೇರಿತನಾಗಿ ಎಂಟು ಅಂಶಗಳ ಕಾರ್ಯಕ್ರಮವನ್ನು ನೀಡುತ್ತಿದ್ದೇನೆ. ತ್ವರಿತ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುತ್ತೇನೆ’ ಎಂದಿದ್ದಾರೆ.

‘ಸರ್ಕಾರಿ ಶಾಲೆಗಳ ಬಲರ್ಧನೆಗೆ ಕೈಗೊಳ್ಳಲಿರುವ ಸುಧಾರಣೆಗಳು 50 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಪ್ರಯೋಜನಕಾರಿಯಾಗಲಿವೆ. ಈ ಎಲ್ಲ ಬದಲಾವಣೆಗಳು 2026–27ನೇ ಸಾಲಿನಿಂದಲೇ ಆರಂಭವಾಗಲಿವೆ. ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲೇ ಅತ್ಯುತ್ತಮ ಸರ್ಕಾರಿ ಶಾಲಾ ವ್ಯವಸ್ಥೆಯನ್ನು ನಿರ್ಮಿಸುವುದು ಸರ್ಕಾರದ ಗುರಿಯಾಗಿದೆ. ಪೋಷಕರು ಮತ್ತು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಗೆ ಪ್ರವೇಶ ಪಡೆಯುವ ಮೂಲಕ ಈ ಪರಿವರ್ತನಾ ಪ್ರಯಾಣದ ಭಾಗವಾಗಬೇಕು’ ಎಂದು ಕರೆ ನೀಡಿದ್ದಾರೆ.

### ಶಾಲಾ ಗ್ಯಾರಂಟಿಗಳು

- ಶಿಕ್ಷಕರ ಲಭ್ಯತೆ
- ಮೂಲಸೌಕರ್ಯ
- ಭಾಷಾ ಆಯ್ಕೆ
- ಉಚಿತ ಸಾರಿಗೆ
- ಡಿಜಿಟಲ್ ಕಲಿಕೆ
- ಕಲೆ ಮತ್ತು ಕ್ರೀಡಾ ಶಿಕ್ಷಣ
- ಶೈಕ್ಷಣಿಕ ಗುಣಮಟ್ಟದ ಮೇಲ್ವಿಚಾರಣೆ
- ಕೌಶಲಾಧಾರಿತ ತರಬೇತಿ

## ‘108 ಆಂಬುಲೆನ್ಸ್: ಸರ್ಕಾರದಿಂದ ನಿರ್ವಹಣೆ ಶೀಘ್ರ’

ಪ್ರಜಾವಾಣಿ ವಾರ್ತೆ

**ಹಾವೇರಿ:** ‘ರಾಜ್ಯದಲ್ಲಿರುವ 108 ಆಂಬುಲೆನ್ಸ್ ಸೇವೆ ಸರ್ಕಾರವೇ ನಿರ್ವಹಿಸಲು ಸಿದ್ಧತೆ ನಡೆದಿದೆ. ಒಂದು ತಿಂಗಳಲ್ಲಿ ಈ ಪ್ರಕ್ರಿಯೆ ಜಾರಿಗೆ ಬರಲಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

‘ಆಂಬುಲೆನ್ಸ್ ನಿರ್ವಹಣೆಗೆ ಅಗತ್ಯವಿರುವ ಕಂಟ್ರೋಲ್ ರೂಮ್, ಸಲಕರಣೆಗಳ ಅಳವಡಿಕೆ ಪ್ರಗತಿಯಲ್ಲಿದೆ. ಸರ್ಕಾರವೇ ಆಂಬುಲೆನ್ಸ್ ನಿರ್ವಹಿಸುತ್ತಿರುವ ದೇಶದಲ್ಲಿ ಎಲ್ಲಿಯೂ ಇಲ್ಲ’ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ವಿದ್ಯಾರ್ಹತೆ ಇಲ್ಲದೇ ಕ್ಲಿನಿಕ್ ನಡೆಸುತ್ತಿರುವ ನಕಲಿ ವೈದ್ಯರ ಬಗ್ಗೆ ನಿಗಾ ಇರಿಸಿ ಕಠಿಣ ಕ್ರಮ ಕೈಗೊಳ್ಳುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ತಕ್ಷಣವೇ ಕ್ಲಿನಿಕ್ ಬಂದ್ ಮಾಡಲು ಹೇಳಲಾಗಿದೆ’ ಎಂದರು.

## ಅನಿಲ ಸೋರಿಕೆ : ₹29 ಲಕ್ಷ ಪರಿಹಾರಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

**ಹಾಸನ:** ‘ಜಿಲ್ಲೆಯ ಅರಸೀಕೆರೆಯಲ್ಲಿ ಅಡುಗೆ ಅನಿಲ ಸಿಲಿಂಡರ್ ಸೋರಿಕೆಯಿಂದಾದ ಅಗ್ನಿ ಅವಘಡದ ಸಂತ್ರಸ್ತ ಗ್ರಾಹಕರಿಗೆ ವಿಮೆ ಕಂಪನಿ ಹಾಗೂ ಅನಿಲ ಕಂಪನಿಗಳು ₹29 ಲಕ್ಷ ಪರಿಹಾರ ನೀಡಬೇಕು’ ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶ ನೀಡಿದೆ.

ಗ್ರಾಹಕ ಚನ್ನಬಸಪ್ಪ ಅವರ ಮನೆಯಲ್ಲಿ 2023ರ ಅ. 6ರಂದು ಭಾರತ್ ಗ್ಯಾಸ್ ಏಜೆನ್ಸಿಯ ಸಿಲಿಂಡರ್ ಸ್ಫೋಟಿಸಿ ಅವರ ಪತ್ನಿಗೆ ಗಾಯವಾಗಿತ್ತು. ಸಹೋದರ ಎಸ್.ಸಿ.ರಾಮಣ್ಣ ಅವರ ಮನೆಗೂ ಬೆಂಕಿ ವ್ಯಾಪಿಸಿತ್ತು. 15 ಸಾವಿರ ತೆಂಗಿನಕಾಯಿಗಳು, 3 ಅಲ್ಮೇರಾ, ಟಿ.ವಿ., ರೆಫ್ರಿಜಿರೇಟರ್, ಪೀಠೋಪಕರಣ, ಪಾತ್ರೆ, 105 ಗ್ರಾಂ ಚಿನ್ನ, 500 ಗ್ರಾಂ ಬೆಳ್ಳಿ, ₹1 ಲಕ್ಷ ನಗದು ಬೆಂಕಿಗೆ ಆಹುತಿಯಾಗಿ, ಮನೆ ಗೋಡೆಗಳು ಬಿರುಕುಬಿಟ್ಟಿದ್ದವು.

‘ಗ್ಯಾಸ್ ಏಜೆನ್ಸಿ ಪೂರೈಸಿರುವ ಕಳಪೆ ಸಿಲಿಂಡರ್, ರೆಗ್ಯುಲೇಟರ್ ಮತ್ತು ಪೈಪ್‌ನಿಂದ ಅವಘಡ ಸಂಭವಿಸಿದೆ’ ಎಂದು ರಾಮಣ್ಣ ಅವರು ಬಾಣಾವಾರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ‘ಅವಘಡದಲ್ಲಿ ಅಂದಾಜು ₹29 ಲಕ್ಷ ನಷ್ಟವಾಗಿದೆ’ ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ವರದಿ ನೀಡಿದ್ದರು.

ಸೇವಾ ನ್ಯೂನತೆಯಿಂದ ಆದ ಅವಘಡಕ್ಕೆ ಪರಿಹಾರ ನೀಡದ ಗ್ಯಾಸ್ ಏಜೆನ್ಸಿ, ವಿಮೆ ಕಂಪನಿ ಹಾಗೂ ಗ್ಯಾಸ್ ಕಂಪನಿಯಿಂದ ₹49,75,000 ಪರಿಹಾರ ಕೊಡಿಸುವಂತೆ ಕೋರಿ ರಾಮಣ್ಣ ಅವರು 2025 ರ ಮೇ 27 ರಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ದೂರು ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಚಂಚಲಾ ಸಿ.ಎಂ. ಹಾಗೂ ಸದಸ್ಯೆ ಅನುಪಮಾ ಆರ್. ಅವರನ್ನು ಒಳಗೊಂಡ ಪೀಠವು, ಎಸ್.ಬಿ.ಐ. ಜನರಲ್ ಇನ್ಶುರೆನ್ಸ್ ಕಂಪನಿಯು ₹2 ಲಕ್ಷ, ಮತ್ತು ಮೆ. ಮಂಗಳೂರು ಎಲ್.ಪಿ.ಜಿ. ಟೆರಿಟೋರಿಟಿ ಸಂಸ್ಥೆಯು ₹27 ಲಕ್ಷ ಪರಿಹಾರವನ್ನು 2023ರ ಅಕ್ಟೋಬರ್ 6 ರಿಂದ ಪೂರ್ವಾನ್ವಯ ಆಗುವಂತೆ ಶೇ 10ರ ಬಡ್ಡಿಯೊಂದಿಗೆ ನೀಡಬೇಕು’ ಎಂದು ಆದೇಶಿಸಿದೆ.

ಸೇವಾ ನ್ಯೂನತೆಗಾಗಿ ₹5 ಸಾವಿರ, ಮಾನಸಿಕ ಹಿಂಸೆಗಾಗಿ ₹5 ಸಾವಿರ, ಶುಲ್ಕ ₹5 ಸಾವಿರ ಭರಿಸಬೇಕು. ತಪ್ಪಿದರೆ ಈ ಮೊತ್ತದ ಮೇಲೆ ಶೇ 10 ರ ಬಡ್ಡಿಯೊಂದಿಗೆ ಹಣ ಪಾವತಿಸಬೇಕು ಎಂದು ಏಪ್ರಿಲ್ 22ರಂದು ಆದೇಶಿಸಿದೆ.

## ಚಿಟಿಕೆ ಸುದ್ದಿ

### ಪದ್ಮ ಪ್ರಶಸ್ತಿ: ನಾಮನಿರ್ದೇಶನ ಪ್ರಕ್ರಿಯೆ ಆರಂಭ

ನವದೆಹಲಿ (ಪಿಟಿಐ): 2027ರಲ್ಲಿ ಕೊಡಲಾಗುವ ಪದ್ಮ ಪ್ರಶಸ್ತಿಗಳಿಗೆ ನಾಮನಿರ್ದೇಶನ ಹಾಗೂ ಶಿಫಾರಸು ಪ್ರಕ್ರಿಯೆಗೆ ಸೋಮವಾರ ಚಾಲನೆ ನೀಡಲಾಗಿದೆ.

ನಾಮನಿರ್ದೇಶನ ಹಾಗೂ ಶಿಫಾರಸುಗಳ ಸಲ್ಲಿಕೆಗೆ ಜುಲೈ 31 ಕೊನೆ ದಿನಾಂಕವಾಗಿದೆ. ಆನ್‌ಲೈನ್‌ನಲ್ಲಿ ರಾಷ್ಟ್ರೀಯ ಪುರಸ್ಕಾರ್ ಪೋರ್ಟಲ್‌ನಲ್ಲಿ (https://awards.gov.in) ಮಾತ್ರವೇ ಅರ್ಜಿಗಳನ್ನು ಸ್ವೀಕರಿಸಲಾಗುವುದು ಎಂದು ಸರ್ಕಾರವು ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಪದ್ಮ ಪ್ರಶಸ್ತಿಗಳಾದ 'ಪದ್ಮ ವಿಭೂಷಣ, ಪದ್ಮ ಭೂಷಣ ಹಾಗೂ ಪದ್ಮಶ್ರೀ'ಗಳು ದೇಶದ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಗಳಲ್ಲಿ ಸೇರಿವೆ. 1954ರಲ್ಲಿ ಪ್ರಾರಂಭಿಸಲಾದ ಈ ಪ್ರಶಸ್ತಿಗಳನ್ನು ಪ್ರತಿ ಗಣರಾಜ್ಯೋತ್ಸವದ ದಿನ ಘೋಷಿಸಲಾಗುತ್ತದೆ.

ಕಲೆ, ಸಾಹಿತ್ಯ, ವೈದ್ಯಕೀಯ, ಶಿಕ್ಷಣ, ಕ್ರೀಡೆ, ಸಾಮಾಜಿಕ ಕಾರ್ಯ, ವಿಜ್ಞಾನ, ನಾಗರಿಕ ಸೇವೆ, ವ್ಯಾಪಾರ ಮತ್ತು ಕೈಗಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವ್ಯಕ್ತಿಗಳಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

### 'ಧಗೆಯೇ? ಜೇಬಿನಲ್ಲಿ ಈರುಳ್ಳಿ ಇಟ್ಟುಕೊಳ್ಳಿ'

ಗುನಾ (ಪಿಟಿಐ): 'ನಾನು ನನ್ನ ಕಾರಿನಲ್ಲಿ ಎ.ಸಿ ಬಳಸುವುದಿಲ್ಲ ಅಥವಾ ಎ.ಸಿ ಇರುವೆಡೆ ನಾನು ಕೂರುವುದೂ ಇಲ್ಲ. ಯಾಕೆಂದರೆ, ನಾನು ನನ್ನ ಜೇಬಿನಲ್ಲಿ ಈರುಳ್ಳಿ ಇಟ್ಟುಕೊಳ್ಳುತ್ತೇನೆ. ಹೀಗೆ ಮಾಡಿದರೆ, ನಿಮಗೆ ಧಗೆಯೇ ಆಗುವುದಿಲ್ಲ' ಎಂದು ಕೇಂದ್ರ ಸಂವಹನ ಸಚಿವ ಜೋತಿರಾದಿತ್ಯ ಸಿಂಧಿಯಾ ಹೇಳಿದರು.

ಇಲ್ಲಿ ಭಾನುವಾರ ನಡೆದ ಕಾರ್ಯಕ್ರಮವೊಂದರಲ್ಲಿ ಅವರು ಮಾತನಾಡಿದರು. 'ಈರುಳ್ಳಿ ಇಟ್ಟುಕೊಂಡರೆ, 51 ಡಿಗ್ರಿ ಸೆಲ್ಸಿಯಸ್ ತಾಪಮಾನ ಇದ್ದರೂ ನಿಮಗೆ ಏನೂ ಆಗದು' ಎಂದು ಸಿಂಧಿಯಾ ಅವರು ಹೇಳುತ್ತಿದ್ದಂತೆಯೇ ವೇದಿಕೆ ಮುಂಭಾಗ ಕುಳಿತಿದ್ದ ವೃದ್ಧರೊಬ್ಬರು ನಗುತ್ತಾ ತಮ್ಮ ಜೇಬಿನಲ್ಲಿಯೂ ಈರುಳ್ಳಿ ಇರುವುದನ್ನು ತೋರಿಸಿದರು.

'ನಾನು ನೋಡುವುದಕ್ಕೆ ಯುವಕನಂತೆ ಕಾಣಬಹುದು. ಆದರೆ, ನನ್ನ ಆತ್ಮ ಹಳೇ ಕಾಲದ್ದು. ಇಂದು ಎಲ್ಲರೂ ತಮ್ಮ ಜೇಬಿನಲ್ಲಿ ಮೊಬೈಲ್ ಇಟ್ಟುಕೊಳ್ಳುತ್ತಾರೆ. ಆದರೆ, ನಾನು ಈರುಳ್ಳಿ ಇಟ್ಟುಕೊಳ್ಳುತ್ತೇನೆ. ಆಯುರ್ವೇದ ಮುಂದುವರಿದಿರಬಹುದು. ಆದರೆ, ನಮ್ಮ ಹಳೇ ಕಾಲದ ಸಂಪ್ರದಾಯವನ್ನು ಮರೆಯಬಾರದು' ಎಂದರು.

'ತಾಪಮಾನಕ್ಕೂ ಈರುಳ್ಳಿ ಇಟ್ಟುಕೊಳ್ಳುವುದಕ್ಕೂ ಸಂಬಂಧವಿಲ್ಲ' ಎಂಬ ವೈದ್ಯರ ಹೇಳಿಕೆಗಳನ್ನು 'ಎನ್‌ಡಿಟಿವಿ' ವರದಿ ಮಾಡಿದೆ.

### ಲೈಂಗಿಕ ದೌರ್ಜನ್ಯ: ಪೊಲೀಸ್ ವಶಕ್ಕೆ ಖರಾತ್

ನಾಸಿಕ್ (ಪಿಟಿಐ): ಸ್ವಯಂಘೋಷಿತ ದೇವಮಾನವ ಅಶೋಕ್ ಖರಾತ್ ವಿರುದ್ಧ ದಾಖಲಾಗಿರುವ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಏಳನೇ ಪ್ರಕರಣದಲ್ಲಿ ಆತನನ್ನು ಮೂರು ದಿನಗಳ ಪೊಲೀಸ್ ವಶಕ್ಕೆ ಪಡೆಯಲು ಇಲ್ಲಿನ ನ್ಯಾಯಾಲಯವೊಂದು ಸಮ್ಮತಿಸಿದೆ.

ಲೈಂಗಿಕ ಕಿರುಕುಳದ 12 ಪ್ರಕರಣಗಳನ್ನು ಖರಾತ್ ವಿರುದ್ಧ ದಾಖಲಿಸಲಾಗಿದೆ. ಇದೀಗ 7ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಆತನನ್ನು 6 ದಿನ ಪೊಲೀಸ್ ವಶಕ್ಕೆ ನಿಡಬೇಕೆಂದು ಕೋರಿ ವಿಶೇಷ ತನಿಖಾ ತಂಡ (ಎಸ್‌ಐಟಿ) ನ್ಯಾಯಾಲಯಕ್ಕೆ ಮನವಿ ಸಲ್ಲಿಸಿತ್ತು.

ಎಸ್‌ಐಟಿ ಮನವಿಯನ್ನು ನ್ಯಾಯಪೀಠ ಪುರಸ್ಕರಿಸಿ, ಮೂರು ದಿನಗಳ ಅವಧಿಗೆ ಖರಾತ್‌ನನ್ನು ಪೊಲೀಸ್ ವಶಕ್ಕೆ ಒಪ್ಪಿಸಿದೆ.

### ಟ್ರಂಪ್ ಹೇಳಿಕೆ ಖಂಡಿಸಿ ಯುವ ಕಾಂಗ್ರೆಸ್ ಪ್ರತಿಭಟನೆ

ನವದೆಹಲಿ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತವನ್ನು 'ನರಕ ಕೂಪ' ಎಂದು ಹೇಳಿರುವುದನ್ನು ಖಂಡಿಸಿ ಭಾರತೀಯ ಯುವ ಕಾಂಗ್ರೆಸ್ ಸದಸ್ಯರು ಸೋಮವಾರ ದೆಹಲಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ದೆಹಲಿಯಲ್ಲಿನ ಅಮೆರಿಕ ರಾಯಭಾರ ಕಚೇರಿಯ ಕಡೆ ಮೆರವಣಿಗೆಯಲ್ಲಿ ಸಾಗುತ್ತಿದ್ದ ಪ್ರತಿಭಟನಕಾರರನ್ನು ತಡೆದ ಪೊಲೀಸರು 10ರಿಂದ 15 ಜನರನ್ನು ವಶಕ್ಕೆ ಪಡೆದರು.

'ಭಾರತವನ್ನು ನರಕ ಕೂಪವೆಂದು ಕರೆಯುವುದು ಸಮರ್ಥನೀಯವಲ್ಲ. ನಾವು ಇದರ ಬಗ್ಗೆ ಧ್ವನಿ ಎತ್ತುತ್ತೇವೆ' ಎಂದು ಪ್ರತಿಭಟನಕಾರರೊಬ್ಬರು ಹೇಳಿದರು.

'ನಿಗದಿತ ಸ್ಥಳದಲ್ಲಿ ಅವರು ಪ್ರತಿಭಟನೆ ನಡೆಸಿಲ್ಲ. ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಹಲವರನ್ನು ವಶಕ್ಕೆ ಪಡೆದಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

# 'ಶಾರೀಕ್‌ಗೆ ಜೀವಾವಧಿ ಶಿಕ್ಷೆ ವಿಧಿಸಬೇಕಿತ್ತು'

## ಕುಕ್ಕರ್ ಬಾಂಬ್ : ಸಂತ್ರಸ್ತ ರಿಕ್ಷಾ ಚಾಲಕ ಪುರುಷೋತ್ತಮ ಪೂಜಾರಿ ಅಭಿಪ್ರಾಯ

ಪ್ರಜಾವಾಣಿ ವಾರ್ತೆ


ಪುರುಷೋತ್ತಮ ಪೂಜಾರಿ

ಮಂಗಳೂರು: 'ನಗರದ ನಾಗುರಿಯಲ್ಲಿ 2022ರ ನ.19ರಂದು ನಡೆದಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಅಪರಾಧಿ ಮೊಹಮ್ಮದ್ ಶಾರೀಕ್‌ಗೆ ಜೀವಾವಧಿ ಶಿಕ್ಷೆ ಆಗಬೇಕಿತ್ತು' ಎಂದು ಈ ಸ್ಫೋಟದ ಸಂತ್ರಸ್ತ ಆಟೊರಿಕ್ಷಾ ಚಾಲಕ ಪುರುಷೋತ್ತಮ ಪೂಜಾರಿ ಅಭಿಪ್ರಾಯಪಟ್ಟರು.

ಅಪರಾಧಿ ಶಾರೀಕ್‌ಗೆ ಎನ್‌ಐಎ ವಿಶೇಷ ನ್ಯಾಯಾಲಯವು 10 ವರ್ಷ ಕಠಿಣ ಕಾರಾಗೃಹ ವಾಸದ ಶಿಕ್ಷೆ ವಿಧಿಸಿದ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ಶಾರೀಕ್ ಈಗಾಗಲೇ ಮೂರೂವರೆ ವರ್ಷ ಜೈಲಿನಲ್ಲಿ ಕಳೆದಿದ್ದಾನೆ. ಇನ್ನೂ ಆರೂವರೆ ವರ್ಷ ಜೈಲಿನಲ್ಲಿರುವುದು ಆತನಿಗೆ ದೊಡ್ಡ ಶಿಕ್ಷೆ ಎನಿಸದು. ಆತ ಜೈಲಿನಿಂದ ಹೊರಗೆ ಬಂದ ಬಳಿಕ ಇಂತಹದ್ದೇ ಕೃತ್ಯ ನಡೆಸುವುದಿಲ್ಲ ಎನ್ನಲಾಗದು. ನ್ಯಾಯಾಲಯ ಆತನಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದರೆ ಸೂಕ್ತವಾಗುತ್ತಿತ್ತು' ಎಂದರು.

'ಯಾವ ತಪ್ಪೂ ಮಾಡದ ನಾನು, 70 ದಿನ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದು, ಬಳಿಕ ಒಂದು ತಿಂಗಳು ಆಸ್ಪತ್ರೆಯಲ್ಲಿ ವಿಶ್ರಾಂತಿಯಲ್ಲಿದ್ದೆ. ಆಸ್ಪತ್ರೆಯಿಂದ ಬಿಡುಗಡೆಗೊಂಡ ಬಳಿಕವೂ ಮನೆಯಲ್ಲಿ ಸ್ಥಿತಿ ಮರಳಿಲ್ಲ. ಜೀವಮಾನ ಇಡೀ ನರಳಬೇಕಾಗಿದೆ. ನನಗೆ ಮೊದಲಿನ ಹಾಗೆ ಆಟೊ ರಿಕ್ಷಾ ಓಡಿಸಲು ಆಗುತ್ತಿಲ್ಲ. ಎರಡು ಬೆರಳು ಸ್ವಲ್ಪ ಸರಿಯಾಗಿವೆ. ಇನ್ನುಳಿದ ಬೆರಳುಗಳು ಸ್ವಾಧೀನ ಕಳೆದುಕೊಂಡಿವೆ. ಅವುಗಳನ್ನು ಮೊದಲಿನ ಸ್ಥಿತಿಗೆ ತರಲು ₹50 ಸಾವಿರ ವೆಚ್ಚವಾಗುತ್ತದೆ ಎಂದು ವೈದ್ಯರು ಹೇಳಿದ್ದಾರೆ. ನನ್ನ ಬಳಿ ಅಷ್ಟೊಂದು ಹಣ ಇಲ್ಲ' ಎಂದು ಅಳಲು ತೋಡಿಕೊಂಡರು.

'ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ₹9.50 ಲಕ್ಷ ವೆಚ್ಚವಾಗಿದ್ದನ್ನು ನನ್ನ ಮಗಳ ಇಎಸ್‌ಐ ನಿಂದ ಭರಿಸಲಾಗಿದೆ. ಬಿಜೆಪಿ ಸರ್ಕಾರದಿಂದ ನನಗೆ ಯಾವ ಪರಿಹಾರವೂ ಸಿಕ್ಕಿಲ್ಲ. ಶಾಸಕ ವೇದವ್ಯಾಸ ಕಾಮತ್ ಹೊಸ ಆಟೊರಿಕ್ಷಾ ಹಾಗೂ ₹5 ಲಕ್ಷ ನೀಡಿದ್ದರು. ಗುರುಬೆಳದಿಂಗಳು ಟ್ರಸ್ಟ್‌ನ ಪದ್ಮರಾಜ ಪೂಜಾರಿ ಅವರು ಸುಮಾರು ₹6.5 ಲಕ್ಷ ವೆಚ್ಚದಲ್ಲಿ ನನ್ನ ಮನೆ ದುರಸ್ತಿಪಡಿಸಿಕೊಟ್ಟರು. ನಾನು ಈಗಲೂ ಬೆಳಿಗ್ಗೆ ಮತ್ತು ಸಂಜೆ ಹೊತ್ತು ಆಟೊ ಓಡಿಸುತ್ತೇನೆ. ಜಾಸ್ತಿ ಹೊತ್ತು ಓಡಿಸಿದರೆ ಕೈ ನೋವು ಬರುತ್ತದೆ. ಔಷಧಕ್ಕೆ ಪ್ರತಿ 15 ದಿನಗಳಿಗೊಮ್ಮೆ ₹1 ಸಾವಿರ ವೆಚ್ಚವಾಗುತ್ತದೆ' ಎಂದು ಅವರು ತಿಳಿಸಿದರು.

ಕುಕ್ಕರ್ ಬಾಂಬ್ ಸ್ಫೋಟದಿಂದ ಅವರ ಕೈಗಳೆರಡೂ ಸುಟ್ಟು ಹೋಗಿದ್ದವು. ಮುಖದ ಚಹರೆಯೇ ಬದಲಾಗಿತ್ತು.

### ಶಿಕ್ಷೆ ಪ್ರಮಾಣ ಹೆಚ್ಚಿಸಲು ಪ್ರಾರ್ಥಿಸಿ ವಿಎಚ್‌ಪಿ ವಿಶೇಷ ಪೂಜೆ

ಮೊಹಮ್ಮದ್ ಶಾರೀಕ್‌ಗೆ 10 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿದ್ದನ್ನು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಸ್ವಾಗತಿಸಿದೆ. ಕುಕ್ಕರ್ ಬಾಂಬ್ ಸ್ಫೋಟಗೊಂಡ ಸ್ಥಳದ ಸಮೀಪದಲ್ಲೇ ಇರುವ ಕಂಕನಾಡಿ ಗರೋಡಿ ಬ್ರಹ್ಮಬೈದರ್ಕಳ ಕ್ಷೇತ್ರದಲ್ಲಿ ವಿಎಚ್‌ಪಿ ಮುಖಂಡರು ವಿಶೇಷ ಪೂಜೆ ಸಲ್ಲಿಸಿ, 'ಅಪರಾಧಿಗೆ ಶಿಕ್ಷೆಯ ಪ್ರಮಾಣ ಹೆಚ್ಚಾಗಲಿ' ಎಂದು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

'ಕದ್ರಿ ದೇವಸ್ಥಾನವನ್ನು ಸ್ಫೋಟಿಸಿ ಭಕ್ತರನ್ನು ಹತ್ಯೆ ಮಾಡಲು ಶಾರೀಕ್ ಸಂಚು ರೂಪಿಸಿದ್ದ. ಕಂಕನಾಡಿ ಗರೋಡಿ ಬ್ರಹ್ಮಬೈದರ್ಕಳ ಕ್ಷೇತ್ರದ ಬಳಿ ಕುಕ್ಕರ್ ಬಾಂಬ್ ಸ್ಫೋಟಗೊಂಡಿದ್ದರಿಂದ ಆತನ ಸಂಚು ವಿಫಲವಾಯಿತು. ಆತನಿಗೆ ವಿಧಿಸಿದ ಶಿಕ್ಷೆಯ ಪ್ರಮಾಣ ಕಡಿಮೆಯಾಯಿತು. ಶಿಕ್ಷೆಯ ಪ್ರಮಾಣ ಹೆಚ್ಚಿಸಲು ನ್ಯಾಯಾಲಯಕ್ಕೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮೇಲ್ಮನವಿ ಸಲ್ಲಿಸಬೇಕು' ಎಂದು ವಿಎಚ್‌ಪಿ ದಕ್ಷಿಣ ಪ್ರಾಂತ ಸಹ ಕಾರ್ಯವಾಹ ಶರಣ್ ಪಂಪ್‌ವೆಲ್ ಆಗ್ರಹಿಸಿದರು.


ಅಪರಾಧಿ ಮೊಹಮ್ಮದ್ ಶಾರೀಕ್‌ಗೆ ಶಿಕ್ಷೆ ಪ್ರಮಾಣ ಹೆಚ್ಚಬೇಕು ಎಂದು ಪ್ರಾರ್ಥಿಸಿ ವಿಶ್ವ ಹಿಂದೂ ಪರಿಷತ್ ಮುಖಂಡರು ಮಂಗಳೂರಿನ ಕಂಕನಾಡಿ ಗರೋಡಿ ಬ್ರಹ್ಮಬೈದರ್ಕಳ ಕ್ಷೇತ್ರದಲ್ಲಿ ಸೋಮವಾರ ವಿಶೇಷ ಪೂಜೆ ಸಲ್ಲಿಸಿದರು

'ಹಲವು ವರ್ಷಗಳಿಂದ ಕರಾವಳಿಯನ್ನು ಗುರಿಯಾಗಿಸಿ ಪದೇ ಪದೇ ವಿಧ್ವಂಸಕ ಚಟುವಟಿಕೆ ನಡೆಸಲಾಗುತ್ತಿದೆ. ದೇಶದ ಬೇರೆ ಬೇರೆ ಕಡೆ ನಡೆದ ಭಯೋತ್ಪಾದಕ ಚಟುವಟಿಕೆಗೂ ಮಂಗಳೂರಿಗೂ ನಂಟು ಇದ್ದು, ಈ ಸಂಬಂಧ ಹಲವರ ಬಂಧನವೂ ಆಗಿದೆ. ಕುಕ್ಕರ್ ಬಾಂಬ್ ಸ್ಫೋಟ, ಭಯೋತ್ಪಾದನೆ ಬೆಂಬಲಿಸಿ ಗೋಡೆ ಬರಹ, ಸ್ಯಾಟಲೈಟ್ ಫೋನ್ ಬಳಕೆ, ನಿಷೇಧಿತ ಸಂಘಟನೆಗಳ ಸಕ್ರಿಯ ಚಟುವಟಿಕೆ, 'ಲವ್ ಜಿಹಾದ್' ಪ್ರಕರಣಗಳು ಇಲ್ಲಿ ನಡೆಯುತ್ತಿವೆ. ರಾಷ್ಟ್ರೀಯ ಭದ್ರತೆ ಹಾಗೂ ಕರಾವಳಿ ಜನರ ಸುರಕ್ಷತೆಗಾಗಿ ಮಂಗಳೂರಿನಲ್ಲಿ ಎನ್‌ಐಎ ಶಾಶ್ವತ ಕಚೇರಿ ಸ್ಥಾಪಿಸಲು ಕ್ರಮಕೈಗೊಳ್ಳಬೇಕು' ಎಂದರು.

## ಉಗ್ರ ಶಾರೀಕ್‌ಗೆ 10 ವರ್ಷ ಜೈಲು

ಒಂದನೇ ಪುಟದಿಂದ...

2022ರ ನ.19ರಂದು ಸಂಜೆ 4.40ರ ಸುಮಾರಿಗೆ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕುಕ್ಕರ್ ಜತೆ ಆಟೊದಲ್ಲಿ ಶಾರೀಕ್ ತೆರಳುವಾಗ (ಐಇಡಿ) ಬಾಂಬ್ ಸ್ಫೋಟಗೊಂಡಿತ್ತು, ಉಗ್ರನ ಜೊತೆ ಆಟೊ ಚಾಲಕ ಪುರುಷೋತ್ತಮ್ ಪೂಜಾರಿ ಅವರೂ ಗಂಭೀರವಾಗಿ ಗಾಯಗೊಂಡಿದ್ದರು. ಪ್ರಕರಣದ ತನಿಖೆಯನ್ನು ಸ್ಥಳೀಯ ಠಾಣೆಯಿಂದ ಎನ್‌ಐಎಗೆ ವರ್ಗಾವಣೆ ಮಾಡಲಾಗಿತ್ತು.

ಮಂಗಳೂರಿನ ಕಂಕನಾಡಿಗೆ ಭೇಟಿ ನೀಡಿದ್ದ ಎನ್‌ಐಎ ಅಧಿಕಾರಿಗಳು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. 2024ರಲ್ಲಿ ಶಾರೀಕ್ ಹಾಗೂ ಸೈಯದ್ ಯಾಸೀನ್ ವಿರುದ್ಧ ನ್ಯಾಯಾಲಯಕ್ಕೆ ಎನ್‌ಐಎ ಅಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಮೊದಲಿಗೆ 'ತಾನು ನಿರಾಪರಾಧಿ. ಯಾವುದೇ ಸ್ಫೋಟ ಪ್ರಕರಣದಲ್ಲಿ ಭಾಗಿ ಆಗಿಲ್ಲ' ಎಂದಿದ್ದ ಶಾರೀಕ್, ಬಳಿಕ ತಮ್ಮ ವಕೀಲರ ಮೂಲಕ 2025ರಲ್ಲಿ 'ದೋಷಾರೋಪ ಪಟ್ಟಿಯಲ್ಲಿ ನಮೂದಿಸಿರುವ ಆರೋಪಗಳು ಸತ್ಯವಾಗಿದ್ದು, ಕುಕ್ಕರ್‌ನಲ್ಲಿ ಐಇಡಿ ಇಟ್ಟು ಸ್ಫೋಟ ನಡೆಸಿದ್ದೆ. ಘಟನೆಯ ಬಗ್ಗೆ ಪಶ್ಚಾತ್ತಾಪವಾಗಿದೆ. ನಾಲ್ಕು ವರ್ಷದ ಮಗಳಿದ್ದು, ಕಡಿಮೆ ಶಿಕ್ಷೆ ನೀಡುವಂತೆ ಮನವಿ ಮಾಡಿದ್ದ' ಎಂದು ಮೂಲಗಳು ತಿಳಿಸಿವೆ.

# ಒಪ್ಪಿತ ಸಂಬಂಧದಲ್ಲಿ ಲೈಂಗಿಕ ಅಪರಾಧ ಎಲ್ಲಿ ಬಂತು?: 'ಸುಪ್ರೀಂ'

ನವದೆಹಲಿ (ಪಿಟಿಐ): ಮದುವೆಯಾಗುವುದಾಗಿ ನಂಬಿಸಿ ತನ್ನೊಂದಿಗೆ ಸಹಜೀವನ ನಡೆಸುತ್ತಿದ್ದ ವ್ಯಕ್ತಿಯು ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಮಹಿಳೆಯೊಬ್ಬರು ನೀಡಿದ್ದ ದೂರನ್ನು ರದ್ದು ಮಾಡಿದ್ದ ಮಧ್ಯ ಪ್ರದೇಶ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗೆ ಪ್ರತಿಕ್ರಿಯಿಸಿರುವ ಸುಪ್ರೀಂ ಕೋರ್ಟ್, 'ಒಪ್ಪಿಗೆಯಿಂದ ಜೊತೆಗಿದ್ದಾಗ ಅಪರಾಧದ ಪ್ರಶ್ನೆ ಎಲ್ಲಿದೆ?' ಎಂದಿದೆ.

ಮಹಿಳೆ ಮತ್ತು ವ್ಯಕ್ತಿಯು 15 ವರ್ಷ ಸಹಜೀವನ ನಡೆಸಿದ್ದರು. ಈ ವೇಳೆ ಅವರಿಗೆ ಮಗು ಆಗಿತ್ತು. ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರ ಪೀಠವು ಮಹಿಳೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿತು.

'ಅವರಿಬ್ಬರು ಒಪ್ಪಿಗೆಯಿಂದಲೇ ಜೊತೆಗಿದ್ದರು. ಆ ವ್ಯಕ್ತಿಯಿಂದ ಮಗುವನ್ನೂ ಈ ಮಹಿಳೆ ಪಡೆದುಕೊಂಡಿದ್ದಾರೆ. ಆದರೆ, ಬಳಿಕ ಮದುವೆ ಆಗಲಿಲ್ಲ. ಈಗ ಲೈಂಗಿಕ ದೌರ್ಜನ್ಯ ಎಂದು ಹೇಳುತ್ತಿದ್ದಾರೆ' ಎಂದು ನ್ಯಾ. ನಾಗರತ್ನ ಹೇಳಿದರು.

'ಮಹಿಳೆಯು ಈ ಹಿಂದೆಯೇ ತನ್ನ ಪತಿಯನ್ನು ಕಳೆದುಕೊಂಡಿದ್ದರು. ಮೈದುನನಿಂದ ಈ ವ್ಯಕ್ತಿಯ ಪರಿಚಯವಾಗಿತ್ತು. ಮದುವೆಯಾಗುವುದಾಗಿ ನಂಬಿಸಿ, ಈ ವ್ಯಕ್ತಿಯು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ' ಎಂದು ಮಹಿಳೆ ಪರ ವಕೀಲರು ತಿಳಿಸಿದರು.

'ಮದುವೆಗೆ ಮುನ್ನವೇ ಆಕೆ ಏಕೆ ಆತನೊಂದಿಗಿದ್ದಳು? 15 ವರ್ಷ ಜೊತೆಗಿದ್ದು ಮಗುವನ್ನೂ ಪಡೆದುಕೊಂಡು ಬಳಿಕ ಆತ ಮದುವೆಯನ್ನೂ ಆಗದೆ ಹೊರಟುಹೋದ. ಈ ರೀತಿಯ ಜೀವನಕ್ಕೆ ಕಾನೂನಿನ ಅಡಿ ರಕ್ಷಣೆ ಇಲ್ಲ. ಸಹಜೀವನದ ವಿಚಾರದಲ್ಲಿ ಕಾನೂನಿನ ರಕ್ಷಣೆ ಇಲ್ಲದೇ ಇರುವುದೇ ಅಪಾಯ. ಆದ್ದರಿಂದ, ಆತ ಹೊರಟುಹೋದ ಎನ್ನುವುದು ಅಪರಾಧವಾಗದು' ಎಂದು ನ್ಯಾ. ನಾಗರತ್ನ ಹೇಳಿದರು.

'ಆರೋಪಿಗೆ ಅದಾಗಲೇ ಮದುವೆಯಾಗಿತ್ತು. ಈ ವಿಚಾರವನ್ನು ಮಹಿಳೆಯಿಂದ ಆ ವ್ಯಕ್ತಿ ಮುಚ್ಚಿಟ್ಟಿದ್ದರು' ಎಂದು ವಕೀಲರು ತಿಳಿಸಿದರು. 'ಆತ ಈಗ ಜೈಲಿಗೆ ಹೋದರೂ ಈಕೆಗೆ ದೊರಕುವುದೇನು? 7 ವರ್ಷದ ಮಗುವಿಗೆ ತಿಂಗಳಿಗೆ ಇಂತಿಷ್ಟು ನೀಡುವುದರ ಕುರಿತು ನಾವು ಯೋಚಿಸಬಹುದು. ಇಬ್ಬರೂ ಒಮ್ಮತಕ್ಕೆ ಬಂದು ಹಣಕಾಸಿನ ಕುರಿತು ಚರ್ಚೆ ಮಾಡಿ' ಎಂದ ಪೀಠ ಹೇಳಿತು.

**ಮುಖ್ಯಾಂಶಗಳು**


- 15 ವರ್ಷ ಸಹಜೀವನ ನಡೆಸಿದ್ದ ಜೋಡಿ
- ಅದಾಗಲೇ ಹೆಂಡತಿ ಇರುವ ವಿಷಯ ಮುಚ್ಚಿಟ್ಟಿದ್ದ ವ್ಯಕ್ತಿ
- 'ಮದುವೆಯಾಗುವುದಾಗಿ ನಂಬಿಸಿ ಮೋಸ'



**ನೋಡಿ, ಮದುವೆಯಾಗಿದ್ದರೆ, ಆಕೆಗೆ ಹೆಚ್ಚು ಹಕ್ಕುಗಳು ದೊರಕುತ್ತಿದ್ದವು. ಆಗ ದ್ವಿಪತ್ನಿತ್ವದ ಕುರಿತು ಪ್ರಕರಣ ದಾಖಲಿಸಬಹುದಿತ್ತು. ಜೀವನಾಂಶವನ್ನೂ ಪಡೆಯಬಹುದಿತ್ತು. ಈಗ ನಾವೇನು ಮಾಡೋಣ?**
**ಬಿ.ವಿ. ನಾಗರತ್ನ,** ನ್ಯಾಯಮೂರ್ತಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

# ಅಭಿಮತ



## ಸುಭಾಷಿತ

ಬೇರೆಯವರ ಆಲೋಚನೆಗಳನ್ನು ಒಪ್ಪಿಕೊಳ್ಳದಿದ್ದರೂ ಅವರ ಮಾತನ್ನು ತಾಳ್ಮೆಯಿಂದ ಆಲಿಸುವುದು ಸುಶಿಕ್ಷಿತ ಮನಸ್ಸಿನ ಸಂಕೇತ.

–ಅರಿಸ್ಟಾಟಲ್

ಸಂಪಾದಕೀಯ

## ಬೈಕ್ ಟ್ಯಾಕ್ಸಿಗೆ ವಿರೋಧ ಕೈಬಿಡಿ ನಿಯಂತ್ರಣ ಅಗತ್ಯ, ನಿಷೇಧವಲ್ಲ

**ಆ್ಯಪ್** ಆಧಾರಿತ ಬೈಕ್ ಟ್ಯಾಕ್ಸಿಗಳ ಸಂಚಾರ ನಿಷೇಧವನ್ನು ತೆರವುಗೊಳಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ, ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿರುವ ರಾಜ್ಯ ಸರ್ಕಾರದ ಕ್ರಮ ಸಂಕುಚಿತ ಚಿಂತನೆಯದ್ದಾಗಿದೆ. ಬೆಂಗಳೂರು ಮಹಾನಗರದ ಚಲನಶೀಲತೆಯು ಹೊಸ ಸಾಧ್ಯತೆಗಳ ಹುಡುಕಾಟದಲ್ಲಿರುವ ಸಂದರ್ಭದಲ್ಲಿ ಬೈಕ್ ಟ್ಯಾಕ್ಸಿಗಳನ್ನು ವಿರೋಧಿಸುವುದು ಜಾಣತನವಲ್ಲ. ಸರ್ಕಾರ ಕಾನೂನು ಹೋರಾಟವನ್ನು ದೀರ್ಘಗೊಳಿಸುವ ಬದಲು, ಬೈಕ್ ಟ್ಯಾಕ್ಸಿ ಸೇವೆಗಳನ್ನು ಒದಗಿಸುವವರ ಜೀವನೋಪಾಯವನ್ನು ಗಮನದಲ್ಲಿ ಇರಿಸಿಕೊಂಡು ಪ್ರಯಾಣಿಕರ ಸುರಕ್ಷತೆಗೆ ಒತ್ತು ನೀಡುವ ನಿಯಂತ್ರಕ ಚೌಕಟ್ಟುಗಳನ್ನು ರಚಿಸುವುದು ಅಗತ್ಯವಾಗಿದೆ. ಮೋಟಾರು ವಾಹನ ಕಾಯ್ದೆ–1988ರ ಅಡಿಯಲ್ಲಿ ಮೋಟಾರ್ ಸೈಕಲ್‌ಗಳು ಸಾರಿಗೆ ವಾಹನಗಳ ವ್ಯಾಖ್ಯಾನಕ್ಕೆ ಒಳಪಡುವುದಿಲ್ಲ ಎನ್ನುವುದು ಸರ್ಕಾರದ ವಾದವಾಗಿದೆ. ಆದರೆ, ಕೇಂದ್ರ ಸರ್ಕಾರವು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಮೂಲಕ, ಸೆಕ್ಷನ್ 2(7)ರ ಅಡಿಯಲ್ಲಿ ಮೋಟಾರ್ ಸೈಕಲ್‌ಗಳು 'ಒಪ್ಪಂದ ಸಾಗಣೆ'ಯ ವ್ಯಾಖ್ಯಾನದೊಳಗೆ ಬರುತ್ತವೆ ಹಾಗೂ ಅವುಗಳನ್ನು ಬಾಡಿಗೆ ಪಡೆದು ಪ್ರಯಾಣಿಕರನ್ನು ಸಾಗಿಸಲು ಕಾನೂನುಬದ್ಧವಾಗಿ ಬಳಸಬಹುದು ಎಂದು ಸ್ಪಷ್ಟಪಡಿಸಿದೆ. ಹಾಗಾಗಿ, ರಾಜ್ಯ ಸರ್ಕಾರದ ನಿಲುವು ಸಮರ್ಥನೀಯವಲ್ಲ. ಬೈಕ್ ಟ್ಯಾಕ್ಸಿ ಅಗ್ರಿಗೇಟರ್‌ಗಳಿಗೆ ಸಂಬಂಧಿಸಿದ ಪರಿಷ್ಕೃತ ಮಾರ್ಗಸೂಚಿಗಳು ಇನ್ನಷ್ಟು ಮುಂದುವರಿದು, ಬೈಕ್ ಟ್ಯಾಕ್ಸಿಗಳನ್ನು ಸಂಚಾರ ವ್ಯವಸ್ಥೆಯ ಭಾಗವನ್ನಾಗಿ ಮಾಡಿಕೊಳ್ಳಲು ರಾಜ್ಯಗಳನ್ನು ಸ್ಪಷ್ಟವಾಗಿ ಪ್ರೋತ್ಸಾಹಿಸುತ್ತವೆ. ವಸ್ತುಸ್ಥಿತಿ ಹೀಗಿರುವಾಗ, ರಾಜ್ಯ ಸರ್ಕಾರ ನಡೆಸುತ್ತಿರುವ ಕಾನೂನು ಹೋರಾಟವು ವಿಕಸನಗೊಳ್ಳುತ್ತಿರುವ ರಾಷ್ಟ್ರೀಯ ನೀತಿಗೆ ವಿರುದ್ಧವಾಗಿ ನಿಲ್ಲುವ ಅಪಾಯವನ್ನು ಹೊಂದಿದೆ.



> ಬೈಕ್ ಟ್ಯಾಕ್ಸಿಗಳ ನಿಷೇಧಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ನಡೆಸುತ್ತಿರುವ ಕಾನೂನು ಹೋರಾಟ ವೈರುಧ್ಯಗಳಿಂದ ಕೂಡಿದೆ. ಸದ್ಯದ ಅಗತ್ಯ ನಿಯಂತ್ರಣವೇ ಹೊರತು, ನಿಷೇಧವಲ್ಲ.

ಬೈಕ್ ಟ್ಯಾಕ್ಸಿ ಸೇವೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಅಸ್ಥಿರ ನಿಲುವು ಹೊಂದಿರುವಂತಿದೆ. ಒಂದೆಡೆ, ಬೈಕ್ ಟ್ಯಾಕ್ಸಿಗಳ ಸಂಚಾರ ನಿಷೇಧವನ್ನು ತೆರವುಗೊಳಿಸಿರುವ ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿರುವ ಸಂದರ್ಭದಲ್ಲಿಯೇ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ನಡೆಸಿರುವ ಸಂವಾದದಲ್ಲಿ ಈ ವಲಯವನ್ನು ಗುರ್ತಿಸುವ ಅಗತ್ಯ ಮಾರ್ಗಸೂಚಿ ರೂಪಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಈ ವಿರೋಧಾಭಾಸವು ನಿಷೇಧ ಮತ್ತು ಅರೆಮನಸ್ಸಿನ ಸ್ವೀಕಾರದ ನಡುವೆ ಸರ್ಕಾರದ ದೃಷ್ಟಿಕೋನ ತೂಗುಯ್ಯಾಲೆಯಾಡುತ್ತಿರುವುದನ್ನು ಸೂಚಿಸುವಂತಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಉದ್ಯೋಗದ ಆಯಾಮವನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಅಧಿಕೃತ ಮೂಲವೊಂದರ ಪ್ರಕಾರ, ಬೈಕ್ ಟ್ಯಾಕ್ಸಿಗಳನ್ನು ಅವಲಂಬಿಸಿರುವ ಸುಮಾರು 1.5 ಲಕ್ಷ ಗಿಗ್ ಕಾರ್ಮಿಕರು ಕರ್ನಾಟಕದಲ್ಲಿದ್ದು, ಅವರಲ್ಲಿ ಬಹುತೇಕರು ಬೆಂಗಳೂರಿನಲ್ಲಿ ಇದ್ದಾರೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಕೇಂದ್ರಸ್ಥಾನವಾಗಿ ಬಿಂಬಿತವಾಗಿರುವ ರಾಜ್ಯವು, 'ಗಿಗ್' ಆರ್ಥಿಕತೆಯ ಪ್ರಮುಖ ವಲಯವನ್ನು ದುರ್ಬಲಗೊಳಿಸುವುದು ತಪ್ಪು ಸಂದೇಶ ಕೊಡುತ್ತದೆ. ಮೋಟಾರ್ ಸೈಕಲ್‌ಗಳು ಸಾರಿಗೆ ವಾಹನಗಳಾಗಿ ಬಳಸಲು ಸೂಕ್ತವಲ್ಲ ಎನ್ನುವುದಾದರೆ, ಇ–ಕಾಮರ್ಸ್ ಮತ್ತು ಆಹಾರ ವಿತರಣೆ ಪ್ಲಾಟ್‌ಫಾರ್ಮ್‌ಗಳ ವಿತರಣಾ ಪಾಲುದಾರರು ಬೈಕ್‌ಗಳನ್ನು ಯಾವ ಆಧಾರದ ಮೇಲೆ ಬಳಸುತ್ತಿದ್ದಾರೆ ಎನ್ನುವ ಪ್ರಶ್ನೆ ಸಹಜವಾಗಿಯೇ ಎದುರಾಗುತ್ತದೆ. ಆಯ್ದ ನಿರ್ಬಂಧಗಳು ನಿಯಂತ್ರಕ ವ್ಯವಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ಉಂಟುಮಾಡುವಂತಿವೆ.

ಸರ್ಕಾರ ಮತ್ತೆ ಮತ್ತೆ ವ್ಯಕ್ತಪಡಿಸುವ ಸುರಕ್ಷತೆಯ ಬಗೆಗಿನ ಕಾಳಜಿಯು ಸಮಂಜಸ ಎಂದು ಹೇಳಬಹುದಾದರೂ, ಅದು ನಿರ್ಬಂಧಕ್ಕೆ ಕಾರಣ ಆಗಬಾರದು. ಸರ್ಕಾರದ ಕಾಳಜಿಯು ಸಮರ್ಪಕ ನಿಯಂತ್ರಣದ ಅಗತ್ಯವನ್ನು ಒತ್ತಿಹೇಳುತ್ತಿದೆ. ಸವಾರ ಮತ್ತು ಪ್ರಯಾಣಿಕ ಇಬ್ಬರಿಗೂ ಹೆಲ್ಮೆಟ್, ಕಡ್ಡಾಯ ವಿಮೆ, ಜಿಪಿಎಸ್ ಟ್ರ್ಯಾಕಿಂಗ್ ಹಾಗೂ ಸೇವಾಪೂರೈಕೆದಾರರ ಪಾರದರ್ಶಕತೆಯು ಜಾರಿಗೊಳಿಸಬಹುದಾದ ಕೆಲವು ಸುರಕ್ಷತಾ ಕ್ರಮಗಳಾಗಿವೆ. ವ್ಯವಸ್ಥಿತ ಹಾಗೂ ಜವಾಬ್ದಾರಿಯುತ ಚೌಕಟ್ಟಿನಲ್ಲಿ ಬೈಕ್ ಟ್ಯಾಕ್ಸಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸಬಹುದು ಎನ್ನುವುದಕ್ಕೆ ಹಲವು ರಾಜ್ಯಗಳ ಉದಾಹರಣೆಗಳು ನಮ್ಮೆದುರಿವೆ. ಮಹಾನಗರದ ಸಂಚಾರ ದಟ್ಟಣೆ ಪ್ರಸ್ತುತ ಸವಾಲಿನ ಹಂತ ತಲುಪಿದೆ. ಸಂಚಾರ ದಟ್ಟಣೆ, ಕೊನೆಯ ಹಂತದವರೆಗಿನ ಸಂಪರ್ಕದ ಕೊರತೆ ಮತ್ತು ಹೆಚ್ಚುತ್ತಲೇ ಇರುವ ಪ್ರಯಾಣದ ವೆಚ್ಚಗಳು ಪರ್ಯಾಯಗಳ ಹುಡುಕಾಟಕ್ಕೆ ಒತ್ತಾಯಿಸುವಂತಿವೆ. ಪರಿಣಾಮಕಾರಿ ನಿಯಂತ್ರಣದೊಂದಿಗೆ ಬೈಕ್ ಟ್ಯಾಕ್ಸಿಗಳು ಜನಸಾಮಾನ್ಯರ ಕೈಗೆಟಕುವ ಪರ್ಯಾಯ ಸಂಚಾರ ವ್ಯವಸ್ಥೆಯನ್ನು ಒದಗಿಸಬಲ್ಲವು. ಈ ವಾಸ್ತವವನ್ನು ಹೈಕೋರ್ಟ್ ಗಮನಿಸಿದೆ. ರಾಜ್ಯ ಸರ್ಕಾರವೂ ವಸ್ತುಸ್ಥಿತಿ ಅರಿತುಕೊಳ್ಳಬೇಕಾದುದು ಅನಿವಾರ್ಯ. ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರ ಸಲ್ಲಿಸಿರುವ ವಿಶೇಷ ಮೇಲ್ಮನವಿಯು ಕಾರ್ಮಿಕರು ಮತ್ತು ಪ್ರಯಾಣಿಕರನ್ನು ಅನಿಶ್ಚಿತ ಸ್ಥಿತಿಯಲ್ಲಿ ಉಳಿಸುವ ಕ್ರಮ. ಕಾನೂನು ಹೋರಾಟವನ್ನು ಕೈಬಿಟ್ಟು, ನೀತಿ ನಿರೂಪಣೆಯತ್ತ ಸರ್ಕಾರ ಗಮನಹರಿಸುವುದು ಅಗತ್ಯ. ಆಯ್ಕೆ ಸ್ಪಷ್ಟವಾಗಿದೆ: ನಿಯಂತ್ರಣ ಅತ್ಯಗತ್ಯ, ವಿರೋಧ ಅನಗತ್ಯ.

ಚಾಟಿ



### ಮರಗಳ ಹನನ ತಪ್ಪಿಸಿ

ಅಪಾಯದ ಮರಗಳನ್ನಷ್ಟೇ ಗುರ್ತಿಸಿ, ರೆಂಬೆಗಳನ್ನು ತೆಗೆಯುವಂತೆ ಅರಣ್ಯ ಇಲಾಖೆಗೆ ಆದೇಶಿಸಿ. ಪುಣ್ಯಾತ್ಮರು ಕೊಂಬೆರೆಂಬೆಗಳ ಬದಲು, ಇಡೀ ಮರವನ್ನು ತೆರವು ಮಾಡಿ ಹೋಗುತ್ತಾರೆ. ಇತ್ತೀಚೆಗೆ ಸೌದೆಯ ಬೆಲೆ ಏರಿಕೆಯಾಗಿದೆ. ಆ ಕಾರಣಕ್ಕೇನಾದರೂ ಮರ ಕಡಿಯುತ್ತಿದ್ದಾರೆಯೆ?

**ಜಗ್ಗೇಶ್,** ನಟ, 'ಎಕ್ಸ್'ನಿಂದ

ಕಿಡಿನುಡಿ



ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿದಂತೆ ಸಂಕ್ರಾಂತಿ, ಯುಗಾದಿ ಕ್ರಾಂತಿ ಮಾತು ಮುಗಿದಿದೆ. ಈಗ ಚುನಾವಣೆ ಫಲಿತಾಂಶದ ಬಳಿಕ ಕ್ರಾಂತಿ ಆಗುವ ಬಗ್ಗೆ ಮಾತುಗಳು ಕೇಳಿಬರುತ್ತಿವೆ. ಯಾವ ರೀತಿ ಕ್ರಾಂತಿ ನಡೆಯಬಹುದೆಂದು ಕುತೂಹಲದಿಂದ ಕಾಯುತ್ತಿದ್ದೇನೆ.

**ಎಚ್.ಡಿ. ಕುಮಾರಸ್ವಾಮಿ,** ಕೇಂದ್ರ ಬೃಹತ್ ಕೈಗಾರಿಕೆ ಸಚಿವ

### 25 ವರ್ಷಗಳ ಹಿಂದೆ

ಶನಿವಾರ, 28-4-2001

**• ಕಲ್ಬುರ್ಗಿಯಲ್ಲಿ 370 ಹೆಣ್ಣು ಶಿಶು ವಿದೇಶಿಯರಿಗೆ ದತ್ತು**

ಕಲ್ಬುರ್ಗಿ, ಏ. 27– ಹೈದರಾಬಾದಿನ ಸನತ್ ನಗರದಲ್ಲಿರುವ ಸೇಂಟ್ ಥೆರೇಸಾ ಅನಾಥಾಶ್ರಯದಿಂದ ಸುಮಾರು 370 ಹೆಣ್ಣು ಶಿಶುಗಳನ್ನು ವಿದೇಶಿಯರಿಗೆ ದತ್ತು ಸ್ವೀಕಾರಕ್ಕಾಗಿ ನೀಡಲಾಗಿದೆ ಎಂದು ತಿಳಿದು ಬಂದಿರುವುದಾಗಿ ಕಲ್ಬುರ್ಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಲೋಕ್ ಕುಮಾರ್ ಅವರು ತಿಳಿಸಿದ್ದಾರೆ.

ಇತ್ತೀಚೆಗೆ ತಾವು ಹೈದರಾಬಾದ್‌ಗೆ ತೆರಳಿ ಈ ಆಶ್ರಮದ ದಾಖಲೆಗಳನ್ನು ಪರಿಶೀಲಿಸಿದಾಗ ಅವುಗಳು ಸಮರ್ಪಕವಾಗಿಲ್ಲದಿರುವುದು ಕಂಡು ಬಂದಿತು ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಈ ಆಶ್ರಯದಲ್ಲಿ ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಹೋಬಳಿಯ ಲಂಬಾಣಿ ತಾಂಡಾಕ್ಕೆ ಸೇರಿದ ಚಾಂಗಿಬಾಯಿ ಎಂಬ ಮಹಿಳೆಯ ಪುತ್ರಿ ಸಹ ಇರುವುದು ಪತ್ತೆಯಾಗಿದೆ ಎಂದು ಮಾಹಿತಿ ನೀಡಿದರು.

### 75 ವರ್ಷಗಳ ಹಿಂದೆ

ಶನಿವಾರ, 28-4-1951

**• 2 ತಾಲ್ಲೂಕುಗಳಲ್ಲಿ ಪಾನನಿರೋಧ**

ಬೆಂಗಳೂರು, ಏ. 27– ಜುಲೈ 1ನೇ ತಾರೀಕಿನಿಂದ ಹಾಸನ ಜಿಲ್ಲೆಯ ಬೇಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಪಾನನಿರೋಧ ಜಾರಿಗೆ ಬರುವುದು.

ಈ ಸಂದರ್ಭದಲ್ಲಿ ಇಂದು ಹೊರಟ ಸರ್ಕಾರೀ ಪ್ರಕಟಣೆ ಸರ್ಕಾರದ ಪಾನ ನಿರೋಧ ನೀತಿಗನುಗುಣವಾಗಿ ಎಲ್ಲ ವಿಷಯಗಳನ್ನು ಜಾಗರೂಕತೆಯಿಂದ ಪರಿಶೀಲಿಸಿ, ಹಾಸನ ಜಿಲ್ಲೆಯ ಬೇಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಪಾನನಿರೋಧ ಜಾರಿಗೆ ತರಲು ನಿರ್ಧರಿಸಲಾಗಿದೆ.

ಅದರಿಂದಾಗಿ ಜುಲೈ 1ರಿಂದ ಆ ಎರಡು ತಾಲ್ಲೂಕುಗಳಲ್ಲಿ ಎಲ್ಲಾ ಮದ್ಯಪಾನದ ಅಂಗಡಿಗಳನ್ನು ಮುಚ್ಚಲು ಸೂಚನೆ ಕೊಡಲಾಗಿದೆ. ಅಂದಿನಿಂದ ಆ ತಾಲ್ಲೂಕುಗಳಿಗೆ 1948ರ ಪಾನನಿರೋಧ ಶಾಸನ ಅನ್ವಯಿಸುವುದು ಎಂದು ತಿಳಿಸುತ್ತದೆ.

## ರಾಘವ ಭಾಜಪಾಭಿಗಮನ ಪುರಾಣ



ಅನುರಣನ

ನಾರಾಯಣ ಎ.

> ಆಮ್ ಆದ್ಮಿಯ ಏಳು ರಾಜ್ಯಸಭಾ ಸದಸ್ಯರು ಬಿಜೆಪಿಗೆ ಸೇರ್ಪಡೆ ಆಗಿರುವ ವಿದ್ಯಮಾನ ಅಪಾಯಕಾರಿಯಾದುದು. ಇದು ವಿರೋಧ ಪಕ್ಷಗಳನ್ನು ಇಲ್ಲವಾಗಿಸಿ ಏಕಚಕ್ರಾಧಿಪತ್ಯ ಸ್ಥಾಪಿಸುವ ಪ್ರಯತ್ನವನ್ನು ಸಂಕೇತಿಸುವಂತಹದ್ದು. ಆದರೆ, ಈ ಅನೈತಿಕ ರಾಜಕಾರಣದ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ವ್ಯಕ್ತವಾಗಿರುವ ಯುವಜನರ ಪ್ರತಿರೋಧವು ದೂರದ ಸಾಧ್ಯತೆಯೊಂದರ ಸೂಚನೆಯಂತಿದೆ.

**ರಾ**ಘವ್ ಚಡ್ಡಾ ಹೆಸರಿನ ರಾಜ್ಯಸಭಾ ಸದಸ್ಯ ಆಮ್ ಆದ್ಮಿ ಪಕ್ಷವನ್ನು ತೊರೆದು ಬಿಜೆಪಿಗೆ ಸೇರಿದ್ದು ದೊಡ್ಡ ಸುದ್ದಿಯಾಯಿತು. ಒಬ್ಬನೇ ಪಕ್ಷಾಂತರ ಮಾಡಿದ್ದರೆ ರಾಜ್ಯಸಭಾ ಸದಸ್ಯತ್ವ ರದ್ದಾಗುತ್ತಿತ್ತು. ಅದರಿಂದ ತಪ್ಪಿಸಿಕೊಳ್ಳಲು ಆಮ್ ಆದ್ಮಿ ಪಕ್ಷದ ಇತರ ಆರು ಮಂದಿ ರಾಜ್ಯಸಭಾ ಸದಸ್ಯರ ಮಂದೆಯೊಂದಿಗೆ ಚಡ್ಡಾ ಪಕ್ಷಾಂತರ ನಡೆದಿದೆ. ಪಕ್ಷಾಂತರ ನಿಷೇಧ ಕಾಯ್ದೆಯ ಪ್ರಕಾರ, ಪಕ್ಷಾಂತರ ಮಾಡುವ ಜನಪ್ರತಿನಿಧಿಗಳಲ್ಲಿ ಪಕ್ಷದ ಒಟ್ಟು ಸದಸ್ಯರ ಮೂರನೇ ಎರಡರಷ್ಟು ಮಂದಿ ಇದ್ದರೆ ಸದಸ್ಯತ್ವ ಕಳೆದುಕೊಳ್ಳುವುದಿಲ್ಲ. ಸಂವಿಧಾನದ ತೊಂಬತ್ತೊಂದನೆಯ ತಿದ್ದುಪಡಿ ಹೇಳುವ ಪ್ರಕಾರ, ಒಂದು ರಾಜಕೀಯ ಪಕ್ಷ ಇನ್ನೊಂದು ರಾಜಕೀಯ ಪಕ್ಷದ ಜತೆಗೆ ವಿಲೀನಗೊಳ್ಳುವಾಗ ಮೂರನೇ ಎರಡರಷ್ಟು ಸದಸ್ಯರ ಬೆಂಬಲ ವಿಲೀನದ ಪ್ರಸ್ತಾಪಕ್ಕೆ ಇದ್ದರೆ, ಆಗ ಸದಸ್ಯತ್ವ ರದ್ದಾಗುವುದಿಲ್ಲ. ಪ್ರಸ್ತುತ ಆಮ್ ಆದ್ಮಿ ಪಕ್ಷವು, ಪಕ್ಷಾಂತರ ಮಾಡಿರುವ ಏಳು ಸದಸ್ಯರನ್ನು ಅನರ್ಹಗೊಳಿಸಬೇಕೆಂದು ರಾಜ್ಯಸಭೆಯ ಸಭಾಪತಿಗಳಿಗೆ ಮನವಿ ಮಾಡಿಕೊಂಡಿದೆ. ಸದಸ್ಯರ ಅನರ್ಹತೆಗೆ ಸಂಬಂಧಿಸಿದಂತೆ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಆಯಾ ಸದನದ ಸಭಾಪತಿಗಳಿಗೆ ಇರುತ್ತದೆ. ಆದರೆ, ಆಮ್ ಆದ್ಮಿಯ ಒತ್ತಾಯ ಜಾರಿಗೊಳ್ಳುತ್ತದೆಂದು ನಿರೀಕ್ಷಿಸಲಾಗದು. ಪಕ್ಷಾಂತರ ಮಾಡುವವರು ಯಾವ ಪಕ್ಷಕ್ಕೆ ಸೇರುತ್ತಾರೆ ಎನ್ನುವುದರ ಮೇಲೆ ಈಗ ಕಾಯ್ದೆಯನ್ನು ವಿಶ್ಲೇಷಣೆ ನಡೆಸಬೇಕಾಗಿದೆ. ಪ್ರಸ್ತುತ ಈ ಪಕ್ಷಾಂತರಿಗಳು ಸೇರ್ಪಡೆ ಆಗಿರುವುದು ಬಿಜೆಪಿ ಎಂಬ ಪಕ್ಷವನ್ನು ಎನ್ನುವುದೇ ಎಲ್ಲ ಕಥೆ ಹೇಳುವಂತಿದೆ. ಬಿಜೆಪಿಗೆ ಸೇರುವವರಿಗೆ ಈ ದೇಶದಲ್ಲಿ ಯಾವುದೇ ಕಾನೂನು ಅನ್ವಯ ಆಗುವುದಿಲ್ಲ ಎನ್ನುವುದು ಹೊಸ ಕಾನೂನು. ಹಾಗಾಗಿ, ಸಂವಿಧಾನ, ಕಾನೂನು, ನ್ಯಾಯಾಂಗ ಇತ್ಯಾದಿಗಳೆಲ್ಲ ಈ ವಿಚಾರದಲ್ಲಿ ನಗಣ್ಯ. ಇದರ ಬಗ್ಗೆ ಮುಂದೆ ಇನ್ನಷ್ಟು ಹೇಳುವುದಿದೆ. ಈಗ ಈ ತಾಂತ್ರಿಕ-ಕಾನೂನಾತ್ಮಕ ವಿಚಾರಗಳಾಚೆಗಿನ ರಾಜಕೀಯವನ್ನು ಚರ್ಚಿಸೋಣ.

ಈ ಚಡ್ಡಾ ಎನ್ನುವ ಯುವಕ ಆಮ್ ಆದ್ಮಿ ಪಕ್ಷ ಆವಿಷ್ಕರಿಸಿದ ಒಂದು ಹೊಸ ಮಾದರಿ. ಆಲೂಗೆಡ್ಡೆಯ ಚಿಪ್ಸ್ ಮುರಿದಂತೆ ಆಂಗ್ಲ ಭಾಷೆ ಮಾತಾಡಬಲ್ಲವ. ಚುನಾವಣೆಯನ್ನು ಗೆಲ್ಲಬಲ್ಲ ರಾಜಕಾರಣಿಗಳ ಪೈಕಿ ನಿರರ್ಗಳವಾಗಿ ಇಂಗ್ಲಿಷ್‌ನಲ್ಲಿ ಮಾತನಾಡಬಲ್ಲ ನಾಯಕರ ಭಾರೀ ಕೊರತೆಯಿದೆ. ಈ ಚಡ್ಡಾ ಚುನಾವಣೆಯನ್ನು ಗೆದ್ದಾತ. ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷವನ್ನು ಗೆಲ್ಲಿಸಿ ಸರ್ಕಾರ ರಚಿಸುವಂತೆ ಮಾಡಿದಾತ ಎಂಬ ನೆಗಳ್ತೆ ಬೇರೆ ಆತನಿಗಿದೆ. ಮೂವತ್ತು ವರ್ಷ ತುಂಬುತ್ತಲೇ ಆತನನ್ನು ಆಮ್ ಆದ್ಮಿ ಪಕ್ಷ ರಾಜ್ಯಸಭಾ ಸದಸ್ಯನನ್ನಾಗಿ ಮಾಡಿತು. ರಾಜ್ಯಸಭೆಯಲ್ಲಿ ಆತನ ಮಾತಿನ ಮಾದಕತೆ ಮಧ್ಯಮವರ್ಗದ ಯುವ ಸಮೂಹವನ್ನು ಸೆಳೆಯಿತು. ಮುಖ್ಯವಾಗಿ, ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತು ಮತದಾನದ ಪ್ರಾಯಕ್ಕೆ ಬಂದಿರುವ ಯುವ ಸಮುದಾಯಕ್ಕೆ ಈತ ಕಣ್ಮಣಿ. 'ನಾಳಿನ ಪ್ರಧಾನಿ' ಎಂಬುದಾಗಿ ಆತನನ್ನು ಈ ಯುವ ಸಮುದಾಯ ಸಾಮಾಜಿಕ ಮಾಧ್ಯಮಗಳಲ್ಲಿ ಹೊಗಳಿ ಅಟ್ಟಕ್ಕೇರಿಸಿತು.

ಸಮಕಾಲೀನ ಸಮಪ್ರಾಯದ ಇತರ ಯಾವ ನಾಯಕರಿಗೂ ಇಲ್ಲದಷ್ಟು ಸಂಖ್ಯೆಯ ಯುವಜನರು ಸಾಮಾಜಿಕ ಮಾಧ್ಯಮಗಳಲ್ಲಿ ಆತನ ಫಾಲೋವರ್ಸ್ ಆದರು. ಯುವಜನರೇ ಹೆಚ್ಚಾಗಿರುವ ಸಾಮಾಜಿಕ ಮಾಧ್ಯಮವಾದ ಇನ್‌ಸ್ಟಾಗ್ರಾಂನಲ್ಲಿ 14.6 ಮಿಲಿಯನ್ (ಒಂದು ಕೋಟಿ ನಲವತ್ತಾರು ಲಕ್ಷ) ಜನ ಆತನ ಫಾಲೋವರ್ಸ್. ಆದರೆ, ಯಾವಾಗ ಆತ ಆಮ್ ಆದ್ಮಿ ಪಕ್ಷ ತೊರೆದು ಬಿಜೆಪಿ ಸೇರುತ್ತೇನೆ ಎಂದು ಘೋಷಿಸಿದನೋ ಆಗ ಸಾಮಾಜಿಕ ಮಾಧ್ಯಮದಲ್ಲಿ ದೊಡ್ಡ ಪ್ರತಿಭಟನೆ ಕಾಣಿಸಿತು. 'ಈತನೂ ನಂಬಲರ್ಹನಲ್ಲ. ಈತನನ್ನು ಫಾಲೋ ಮಾಡುವುದನ್ನು ನಿಲ್ಲಿಸಿ' ಎಂದು ಕೆಲವರು ಕರೆ ನೀಡಿದರು. ಆ ಕರೆಗೆ ದೊಡ್ಡ ಸ್ಪಂದನ ವ್ಯಕ್ತವಾಯಿತು. ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಸುಮಾರು 2 ಮಿಲಿಯನ್ (20 ಲಕ್ಷ) ಜನ ಆತನ್ನು ಫಾಲೋ ಮಾಡುವುದನ್ನು ನಿಲ್ಲಿಸಿದರು, ಅರ್ಥಾತ್ ಆತನ ಇನ್‌ಸ್ಟಾಗ್ರಾಂ ಖಾತೆ ಬಿಟ್ಟು ಹೊರ ನಡೆದರು. ಅಷ್ಟು ಮಂದಿ ಹೋದ ನಂತರವೂ ಒಂದು ಕೋಟಿಗೂ ಹೆಚ್ಚು ಜನ ಉಳಿದುಕೊಂಡಿದ್ದಾರಲ್ಲ ಎಂದು ಯಾರಾದರೂ ಹೇಳಬಹುದು. ಆದರೆ, ಅಷ್ಟೊಂದು ಸುಲಭದ ಲೆಕ್ಕಾಚಾರ ಅಲ್ಲ ಇದು. ಅತ್ತ ಚಡ್ಡಾನ ಖಾತೆಯಿಂದ ಜನ ಹೊರನಡೆಯುತ್ತಿರುವಾಗಲೇ ಈ ಕಡೆಯಿಂದ ಆತ ಹೊಸದಾಗಿ ಆಲಿಂಗಿಸಿಕೊಂಡಿರುವ ಬಿಜೆಪಿಯ ಐಟಿ ಸೆಲ್ ಲಕ್ಷಾಂತರ ಜನರನ್ನು ಹೊಸದಾಗಿ ಖಾತೆಗೆ ಸೇರಿಸಿಕೊಂಡಿರಲೂಬಹುದು. ಇಷ್ಟಾದರೂ ಬಿಟ್ಟು ಹೋದವರ ಸಂಖ್ಯೆ ಎರಡೇ ದಿನಗಳಲ್ಲಿ 20 ಲಕ್ಷ ದಾಟಿದೆ.

ಭಾರತದ ರಾಜಕಾರಣದಲ್ಲಿ ಪಕ್ಷಾಂತರ ನಿಷೇಧ ಕಾಯ್ದೆಯಡಿ ಕಣ್ಣಿಗೆ ಮಂಕುಬೂದಿ ಎರಚಿ, ಪ್ರಜಾತಂತ್ರ ವ್ಯವಸ್ಥೆಯನ್ನು ಅಸ್ಥಿರಗೊಳಿಸುವ ವಿದ್ಯಮಾನ ನಡೆದದ್ದು ಇದೇನೂ ಹೊಸತಲ್ಲ. ಹಾಗೆಯೇ ಎಲ್ಲ ಪಕ್ಷಾಂತರಗಳೂ ತಪ್ಪು ಎನ್ನುವ ಹಾಗೂ ಇಲ್ಲ. ಅದೇನೇ ಇರಲಿ, ಈ ಬಾರಿ ರಾಘವ್ ಚಡ್ಡಾ ಪ್ರಕರಣಕ್ಕೆ ದೇಶದ ಯುವಜನತೆ ಪ್ರತಿಕ್ರಿಯಿಸಿದ ಪರಿ ಒಂದಷ್ಟು ವಿಚಾರಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ.


ಇಡೀ ಪ್ರಕರಣದಲ್ಲಿ ಕಾಣಿಸುವುದು ಬರೀ ಪಕ್ಷಾಂತರದ ವಿಷಯ ಮಾತ್ರವಲ್ಲ. ಅಷ್ಟೇ ಆಗಿದ್ದರೆ ಅದರ ಬಗ್ಗೆ ತುಂಬಾ ತಲೆಕೆಡಿಸಿಕೊಳ್ಳಬೇಕಾಗಿಯೂ ಇರಲಿಲ್ಲ. ಈ ಪ್ರಕರಣದ ಸುತ್ತಮುತ್ತ ಸೂಕ್ಷ್ಮವಾಗಿ ಗಮನಿಸಿದರೆ, ಬಿಜೆಪಿಯ 'ಆಪರೇಷನ್ ಕಮಲ'ದ ವಾಸನೆ ಬಡಿಯುತ್ತದೆ. ಇಲ್ಲಿ ಬಿಜೆಪಿ ಈಗ ಸಾಂಸ್ಥೀಕರಿಸಿಕೊಂಡಿರುವ 'ಬ್ಲಾಕ್‌ಮೇಲ್ ರಾಜಕಾರಣ'ದ ಹೊಲಸು ಗೋಚರಿಸುತ್ತದೆ. 'ಒಂದು ದೇಶ ಒಂದು ಪಕ್ಷ' ಎಂಬ ಗುರಿಯನ್ನು ಸಾಧಿಸುವ ಬಿಜೆಪಿಯ ದುಸ್ಸಾಹಸದ ಭಾಗವಾಗಿಯೂ ಇದು ಕಾಣಿಸುತ್ತದೆ. ಇತ್ತೀಚೆಗಷ್ಟೇ ಮಹಿಳಾ ಮೀಸಲಾತಿಯ ಮರೆಯಲ್ಲಿ ನಿಂತು ಕ್ಷೇತ್ರ ಮರುವಿಂಗಡಣಾ ವಿಧೇಯಕಕ್ಕೆ ಸಂಸತ್ತಿನ ಅಂಗೀಕಾರ ಪಡೆಯುವ ಬಿಜೆಪಿಯ ಪ್ರಯತ್ನ ಮೂರನೇ ಎರಡರಷ್ಟು ಬಹುಮತ ಇಲ್ಲದ ಕಾರಣಕ್ಕೆ ವಿಫಲವಾಗಿತ್ತು. ಆ ಅವಮಾನ ಅನುಭವಿಸಿದ ನಂತರ ಶತಾಯಗತಾಯ ತನ್ನ ಸಂಖ್ಯೆಯನ್ನು ಸಂಸತ್ತಿನಲ್ಲಿ ಹೆಚ್ಚಿಸುವ ಬಿಜೆಪಿಯ ತವಕವೂ ಇದರ ಹಿಂದೆ ಕೆಲಸ ಮಾಡಿದಂತಿದೆ.

ಚಡ್ಡಾ ಜತೆಗೆ ಬಿಜೆಪಿ ಸೇರಿದ ಇನ್ನೋರ್ವ ರಾಜ್ಯಸಭಾ ಸದಸ್ಯ ಅಶೋಕ್ ಮಿತ್ತಲ್ ಮನೆಯ ಮೇಲೆ ಏಪ್ರಿಲ್ 14 ರಂದು ಇ.ಡಿ. ದಾಳಿ ನಡೆದಿದೆ. ಅದಾದ ಆರು ದಿನಗಳ ನಂತರ ಮಿತ್ತಲ್, ಚಡ್ಡಾ ಮತ್ತಿತರರು ಬಿಜೆಪಿ ಸೇರಿದ್ದಾರೆ. ಇದೇ ಚಡ್ಡಾ ಮೇಲೂ ಆಮ್ ಆದ್ಮಿ ಪಕ್ಷದ ವಿರುದ್ಧ ಇರುವ ಅಬಕಾರಿ ಲೈಸೆನ್ಸ್ ಕೇಸ್‌ನ ಕರಿನೆರಳಿದೆ. ಇಷ್ಟು ಸಾಕಲ್ಲವೇ, ಈ ಪಕ್ಷಾಂತರದ ಹಿಂದಿನ ಚಮತ್ಕಾರ ಏನೇನಿರಬಹುದು ಎಂದು ಒಂದು ತೀರ್ಮಾನಕ್ಕೆ ಬರಲು.

2024 ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಕಣಕ್ಕಿಳಿಸಿದ ಅಭ್ಯರ್ಥಿಗಳಲ್ಲಿ ಶೇ 25ರಷ್ಟು ಮಂದಿ, ಅಂದರೆ ಪ್ರತಿ 4 ಅಭ್ಯರ್ಥಿಗಳಲ್ಲಿ ಒಬ್ಬರು ಬೇರೆ ಪಕ್ಷದಿಂದ ಬಂದವರಾಗಿದ್ದರು. ಇವರಲ್ಲಿ ಕೆಲವರು ತಾವಾಗಿಯೇ ಬಂದವರು, ಕೆಲವರು ಬಿಜೆಪಿಯಿಂದ ಖರೀದಿಗೊಳಗಾದವರು. ಇನ್ನೂ ಕೆಲವರು ಬ್ಲಾಕ್‌ಮೇಲ್‌ಗೆ ಗುರಿಯಾಗಿ ಅಥವಾ ತನಿಖಾ ಸಂಸ್ಥೆಗಳ ಕಾಟದಿಂದ ತಪ್ಪಿಸಿಕೊಳ್ಳಲು ಬಿಜೆಪಿ ಸೇರಿದವರು.

ಶಾಸಕರನ್ನು, ಸಂಸದರನ್ನು 'ಆಪರೇಷನ್ ಕಮಲ'ದ ಮೂಲಕ ಖರೀದಿಸುವುದು; ಐಟಿ, ಇಡಿ, ಸಿಬಿಐಗಳನ್ನು ಬಳಸಿಕೊಂಡು ವಿಪಕ್ಷಗಳ ನಾಯಕರ ಮೇಲೆ ದಾಳಿ ನಡೆಸುವುದು; ಅಕ್ರಮಗಳಾಗಿವೆ ತನಿಖೆ ನಡೆಸಬೇಕೆಂದು ಬೆದರಿಸುವುದು; ದಾಳಿಗೊಳಗಾದ ನಾಯಕರನ್ನು ಬಿಜೆಪಿಗೆ ಸೇರಿಸಿಕೊಂಡು ಕೇಸುಗಳನ್ನು ಹಾಗೇ ಮರೆತುಬಿಡುವುದು; ಆ ಮೂಲಕ ತನ್ನ ಸಂಘಟನಾಬಲವನ್ನು ಮತ್ತು ಸಂಸದೀಯ ಬಲವನ್ನು ಹೆಚ್ಚಿಸಿಕೊಳ್ಳುವುದು – ಇದು, ಬಿಜೆಪಿ ಯಾವುದೇ ಲಜ್ಜೆ ಇಲ್ಲದೆ ಮತ್ತು ಯಾವ ಅಳುಕೂ ಇಲ್ಲದೆ ಮತ್ತೆ ಮತ್ತೆ ಬಹಿರಂಗವಾಗಿಯೇ ಅನುಸರಿಸುತ್ತಾ ಬಂದಿರುವ ಕಾರ್ಯತಂತ್ರ. ಹೀಗೆ ವಿವಿಧ ಪಕ್ಷಗಳ ನೂರಾರು ನಾಯಕರನ್ನು ಮತ್ತು ಅವರ ಅನುಯಾಯಿಗಳನ್ನು ಬಿಜೆಪಿ ತನ್ನ ಖೆಡ್ಡಾಕ್ಕೆ ಬೀಳಿಸಿಕೊಂಡು ಪಳಗಿಸಿದೆ. ಈ ತನಕ ಜನರಿಂದ ಚುನಾಯಿತರಾದ ಪ್ರತಿನಿಧಿಗಳನ್ನು ಮಾತ್ರ ಹೀಗೆ ಬಲೆಗೆ ಬೀಳಿಸಿಕೊಳ್ಳಲಾಗುತಿತ್ತು. ಇದೇ ಮೊದಲ ಬಾರಿಗೆ ಈ ಪಿಡುಗು ರಾಜ್ಯಸಭಾ ಸದಸ್ಯರನ್ನೂ ಸೋಂಕಿದೆ. ಹೀಗಾದರೆ ಈ ದೇಶದಲ್ಲಿ ಯಾವ ವಿರೋಧ ಪಕ್ಷಕ್ಕೂ ಉಳಿಗಾಲವಿಲ್ಲ. ಇವೆಲ್ಲವೂ ಹೀಗೆ ಅಬಾಧಿತವಾಗಿ ಮುಂದುವರಿಯುತ್ತಿದ್ದರೆ, ದೇಶದಲ್ಲಿ ಏಕಪಕ್ಷಾಧಿಪತ್ಯ ಸ್ಥಾಪನೆಯಾಗುವ ಕಾಲ ದೂರವಿಲ್ಲ. ಶಾಸಕಾಂಗ, ನ್ಯಾಯಾಂಗ, ಪತ್ರಿಕಾರಂಗ ಮಾತ್ರವಲ್ಲ, ಸಮಸ್ತ ನಾಗರಿಕ ಸಮಾಜ ಈ ವಿಷಯದಲ್ಲಿ ಏನೂ ಮಾಡಲಾಗದೆ ಅಸಹಾಯಕತೆಯಿಂದ ನೋಡುತ್ತಿದೆ.

ಚಡ್ಡಾ ಪ್ರಕರಣದಲ್ಲಿ ಲಕ್ಷಾಂತರ ಮಂದಿ ಅವರ ಇನ್‌ಸ್ಟಾ ಖಾತೆಯನ್ನು ಬಿಟ್ಟುಹೋದದ್ದನ್ನು ಈ ಹಿನ್ನೆಲೆಯಲ್ಲಿ ನೋಡಬೇಕಿದೆ. ಅವರೆಲ್ಲ ಹಾಗೆ ಮಾಡಿದ್ದಕ್ಕೆ ಕಾರಣ, ಚಡ್ಡಾ ಕುರಿತು ತಾವಿರಿಸಿಕೊಂಡಿದ್ದ ಭರವಸೆ ಹುಸಿಯಾಯಿತು ಎನ್ನುವುದಷ್ಟೇ ಅಲ್ಲ. ಈ ಒಂದು ಬಹಿಷ್ಕಾರದ ಮೂಲಕ ಮೊಟ್ಟಮೊದಲಿಗೆ ಈ ದೇಶದ ದೊಡ್ಡ ಸಂಖ್ಯೆಯ ಯುವಜನರು ಬಿಜೆಪಿಯ 'ಆಪರೇಷನ್ ಕಮಲ', ಬ್ಲಾಕ್‌ಮೇಲ್ ರಾಜಕಾರಣ ಮತ್ತು 'ಒಂದು ದೇಶ ಒಂದು ಪಕ್ಷ' ಎಂಬ ಹುಚ್ಚು ಸಂಕಲ್ಪದ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸಿದ್ದಾರೆ ಅನ್ನಿಸುತ್ತದೆ. ಈ ಪ್ರತಿರೋಧವನ್ನು ಭಾರತದ ಪ್ರಜಾತಂತ್ರವನ್ನು ಉಳಿಸುವ ಚಳವಳಿಯನ್ನಾಗಿ ರೂಪಿಸಬಲ್ಲ ನಾಯಕತ್ವಕ್ಕೆ ದೇಶ ಎದುರು ನೋಡುತ್ತಿದೆ.





## ವಾಚಕರ ವಾಣಿ

### ಪತ್ರಿಕೆ ಓದು: ಮನೋವಿಕಾಸಕ್ಕೆ ಸಹಕಾರಿ

**ಸರ್ಕಾರಿ,** ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಪ್ರತಿದಿನ ಪ್ರಾರ್ಥನೆ ನಂತರ 10 ನಿಮಿಷ ಕನ್ನಡ ಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಿರುವ ಶಾಲಾ ಶಿಕ್ಷಣ ಇಲಾಖೆಯ ಕಾರ್ಯ ಶ್ಲಾಘನೀಯ. ಇಂದಿನ ವಿದ್ಯಾರ್ಥಿ ಸಮೂಹವು ಪತ್ರಿಕೆ, ಪುಸ್ತಕ, ಸಾಹಿತ್ಯ ಓದುವುದನ್ನು ಬಹುತೇಕ ಮರೆಯುವ ಹಂತ ತಲಪಿದೆ. ಪಠ್ಯ ಪುಸ್ತಕದ ಓದು, ಅಂಕಗಳಿಕೆಯ ಧಾವಂತದಲ್ಲಿ ಇತರೆ ಓದು ಕಳೆದುಹೋಗುತ್ತಿದೆ. ವಿದ್ಯಾರ್ಥಿಗಳಿಗೆ ಭಾಷಾ ಶುದ್ಧತೆ, ಬರವಣಿಗೆ ಕೌಶಲ, ಸಾಮಾನ್ಯ ಜ್ಞಾನದ ವೃದ್ಧಿಗೆ ಪತ್ರಿಕೆಗಳ ಓದು ಸಹಕಾರಿ. ಪೋಷಕರು ಕೂಡ ಮನೆಗೆ ದಿನಪತ್ರಿಕೆ ತರಿಸಬೇಕು. ಇದು ಮಕ್ಕಳ ಮನೋವಿಕಾಸಕ್ಕೆ ನೆರವಾಗಲಿದೆ.

**ಯಲುವಹಳ್ಳಿ ಸೊಣ್ಣೇಗೌಡ,** ಚಿಕ್ಕಬಳ್ಳಾಪುರ

### ತಂಬಾಕು ರೈತರಿಗೆ ಸಮಗ್ರ ಕೃಷಿ ವರದಾನ

**ಬೆಲೆ** ಕುಸಿತದಿಂದಾಗಿ ರಾಜ್ಯದ ತಂಬಾಕು ಬೆಳೆಗಾರರು ಸಂಕ್ರಮಣ ಸ್ಥಿತಿಯಲ್ಲಿದ್ದಾರೆ. ಬೆಳೆಗಾರರ ಸಮಸ್ಯೆಗೆ ಉತ್ತಮ ಪರಿಹಾರವೆಂದರೆ ಸಮಗ್ರ ಕೃಷಿ ಪದ್ಧತಿಯಾಗಿದೆ. ಈ ಕೃಷಿಯಡಿ ಹಣ್ಣಿನ ಗಿಡ, ಆಹಾರ, ಮೇವು, ತರಕಾರಿ ಹಾಗೂ ಹೂವು ಬೆಳೆಯಬಹುದು; ಪಶು ಸಂಗೋಪನೆಯನ್ನೂ ಮಾಡಬಹುದು. ಇದರಿಂದ ವರ್ಷವಿಡೀ ಉದ್ಯೋಗ ದೊರೆಯುತ್ತದೆ. ಒಂದು ಹೆಕ್ಟೇರ್ ಭೂಮಿಯಲ್ಲಿ ಮಾಸಿಕ ₹23 ಸಾವಿರ ಆದಾಯ ಗಳಿಸಬಹುದೆಂದು ತೋಟಗಾರಿಕೆ ಸಂಶೋಧನಾ ಅಧ್ಯಯನಗಳು ದಾಖಲಿಸಿವೆ. ಈ ಕೃಷಿ ಪದ್ಧತಿಯಿಂದ ಉದ್ಯೋಗ ಲಭಿಸುವ ಜೊತೆಗೆ ಆರ್ಥಿಕ ಭದ್ರತೆಯೂ ಸಿಗುತ್ತದೆ. ಗ್ರಾಮೀಣಾಭಿವೃದ್ಧಿ, ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನಾ ಇಲಾಖೆಗಳು ಒಟ್ಟಾಗಿ ಕಾರ್ಯ ನಿರ್ವಹಿಸುವ ಮೂಲಕ ರೈತರಿಗೆ ಸಮಗ್ರ ಕೃಷಿ ಪದ್ಧತಿ ಅಳವಡಿಕೆಗೆ ನೆರವಾಗಬೇಕು.

**ಎಚ್.ಆರ್. ಪ್ರಕಾಶ್,** ಮಂಡ್ಯ

### ಸಮಾನತೆ: ಸ್ತ್ರೀಯರ ಪ್ರತ್ಯೇಕತೆ ಸಲ್ಲದು

**ಶಬರಿಮಲೆ** ದೇಗುಲಕ್ಕೆ ಮಹಿಳೆಯರ ಪ್ರವೇಶ ಕುರಿತಂತೆ ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠದ ಮುಂದೆ ವಿಚಾರಣೆ ನಡೆಯುತ್ತಿದೆ. 'ಯಾವುದೇ ದೇವಸ್ಥಾನದಲ್ಲಿ ಪಾಲಿಸಿಕೊಂಡು ಬರುತ್ತಿರುವ ಧರ್ಮದ ಆಚರಣೆಗಳ ಸ್ವರೂಪವು ಧರ್ಮದ ಅವಿಭಾಜ್ಯ ಅಂಗ; ಅವು ಧಾರ್ಮಿಕ ಆಚರಣೆಯೇ ಆಗಿರುತ್ತವೆ. ಅಂತಹ ಆಚರಣೆಗಳ ಮುಂದುವರಿಕೆ ಅತ್ಯಗತ್ಯ'ವೆಂದು ದೇಗುಲದ ಪರ ವಕೀಲರು ಸಮರ್ಥಿಸಿಕೊಂಡಿದ್ದಾರೆ. ಹಾಗಿದ್ದರೆ ಈ ಹಿಂದೆ ದೇವಸ್ಥಾನಗಳಲ್ಲಿ ಪಾಲಿಸಿಕೊಂಡು ಬರುತ್ತಿದ್ದ ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಮಡೆಸ್ನಾನ, ಮತ್ತು ಸಿಡಿ ಆಚರಣೆಯಂತಹ ಅನಿಷ್ಟ ಪದ್ಧತಿಗಳನ್ನು ಧರ್ಮದ ಸ್ವರೂಪ ಎನ್ನಲು ಸಾಧ್ಯವೇ? ಅವುಗಳನ್ನು ಧರ್ಮದ ಅವಿಭಾಜ್ಯ ಅಂಗವೆಂದು ಪರಿಭಾವಿಸಬಹುದೇ? ಸಾಮಾಜಿಕ ಸಮಾನತೆಯಿಂದ ಮಹಿಳೆಯರನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ.

**ಆರ್. ಕುಮಾರ್,** ಬೆಂಗಳೂರು

### ಬೈಂದೂರು ಶಾಸಕರ ನಡೆ ಅನುಕರಣೀಯ

**ಈ ಬಾರಿಯ** ಎಸ್‌ಎಸ್‌ಎಲ್‌ಸಿ ಫಲಿತಾಂಶದ ವಿಚಾರವಾಗಿ ಮಂಗಳೂರಿನ ಬೈಂದೂರು ಶಾಲೆಯು ಮಾನವೀಯ ಸಂಸ್ಕಾರದ ಕ್ಷಣಗಳಿಗೆ ಸಾಕ್ಷಿಯಾಗಿದೆ. ಕಳೆದ ಬಾರಿ ಅತ್ಯಂತ ಕಡಿಮೆ ಫಲಿತಾಂಶ ಪಡೆದಿದ್ದರಿಂದ ಅಲ್ಲಿನ ಶಾಸಕರು ಪ್ರಾಂಶುಪಾಲರು ಮತ್ತು ಶಿಕ್ಷಕರನ್ನು ಕಟುವಾಗಿ ಟೀಕಿಸಿದ್ದರಂತೆ. ಈ ಸಾಲಿನಲ್ಲಿ ಉತ್ತಮ ಫಲಿತಾಂಶ ಗಳಿಸಿದ್ದರಿಂದ, ಶಾಸಕರು ಶಾಲೆಗೆ ಭೇಟಿ ನೀಡಿ 'ಸೋತಾಗ ಎಚ್ಚರಿಸಿದ್ದೆ; ಬದಲಾವಣೆಯ ಉದ್ದೇಶಕ್ಕಾಗಿ ಟೀಕಿಸಿದ್ದೆ' ಎಂದು ಪ್ರಾಂಶುಪಾಲರ ಕಾಲಿಗೆರಗಿ ವಂದಿಸಿ, ಅಭಿನಂದಿಸಿ ಅಲ್ಲೊಂದು ಭಾವುಕ ಕ್ಷಣ ಸೃಷ್ಟಿಸಿದ್ದಾರೆ. ಅಧಿಕಾರಿಗಳ ಮೇಲೆ ದರ್ಪ ತೋರಿಸುವ ಹಲವು ಶಾಸಕರು, ಸಚಿವರ ನಡುವೆ ಬೈಂದೂರು ಶಾಸಕರ ಈ ನಡೆ ಅಭಿನಂದನಾರ್ಹ. ಇಂತಹವರ ಸಂಖ್ಯೆ ವೃದ್ಧಿಸಲಿ.

**ಆರ್.ಟಿ. ವೆಂಕಟೇಶ್ ಬಾಬು,** ತುಮಕೂರು

### ಮಾದರಿ ಶಿಕ್ಷಣಕ್ಕೆ ಲಿಂಕನ್ ತೋರಿದ ದಾರಿ

**ಅಮೆರಿಕದ** ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ತಮ್ಮ ಮಗನನ್ನು ಶಾಲೆಗೆ ಸೇರಿಸುವಾಗ, 'ದಯವಿಟ್ಟು ನನ್ನ ಮಗನಿಗೆ ಅಂಕಗಳ ಹುಚ್ಚು ಹಿಡಿಸಬೇಡಿ. ಒಂದು ಉನ್ನತ ಹುದ್ದೆ ಹಿಡಿಯಲಿಕ್ಕಾಗಿಯೇ ಓದಲು ಬಂದಿರುವೆ ಎಂದು ದಯವಿಟ್ಟು ಹೇಳಿಕೊಡಬೇಡಿ. ಅವನಿಗೆ ಭಯದಿಂದ ನಡುಗುವ ಬದಲು ಖುಷಿಯಿಂದ ಶಿಸ್ತಿಗೆ ಒಗ್ಗಿಕೊಳ್ಳುವುದನ್ನು ಹೇಳಿಕೊಡಿ. ಅವನಿಗೆ ಬದುಕು ಕಲಿಸಿ; ಬದುಕಿನಲ್ಲಿ ಮೋಸ ಮಾಡಿ ಗೆಲ್ಲುವುದಕ್ಕಿಂತ ಪ್ರಾಮಾಣಿಕವಾಗಿ ಸೋಲುವುದನ್ನು ಕಲಿಸಿ' ಎಂದು ಶಿಕ್ಷಕರಿಗೆ ಕಳಕಳಿಯ ಪತ್ರ ಬರೆದಿದ್ದರು. ಲಿಂಕನ್‌ರ ಈ ಮಾತುಗಳಿಂದ ಭಾರತ, ಕರ್ನಾಟಕದ ಇಂದಿನ ಶಿಕ್ಷಣ ಕ್ರಮವು ಬಹಳಷ್ಟು ಕಲಿಯುವುದಿದೆ. ಗೆಲ್ಲು ಎನ್ನುವುದೊಂದೇ ಮಂತ್ರ ಜಪಿಸುವ ಶಾಲೆಗಳು, ಪಾಲಕರು ಹಾಗೂ ಸಮಾಜ ಅಪಾರ ನೈತಿಕ ಅಧಃಪತನದತ್ತ ಸಾಗುತ್ತವೆ. ಹಾಗಾಗಿ, ಎಲ್ಲರನ್ನೂ ಒಪ್ಪಿಕೊಳ್ಳುವ, ಅಪ್ಪಿಕೊಳ್ಳುವ ಶಿಕ್ಷಣದ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿದೆ.

**ಶಿವನಕೆರೆ ಬಸವಲಿಂಗಪ್ಪ,** ದಾವಣಗೆರೆ

### ಪರೀಕ್ಷಾ ಅವಾಂತರ: ಬಿಗಿ ನಿಯಮ ರೂಪಿಸಿ

**ಬೆಂಗಳೂರಿನ** ಕೋರಮಂಗಲದ ಕೃಪಾನಿಧಿ ಪದವಿಪೂರ್ವ ಕಾಲೇಜಿನಲ್ಲಿ ಸಿಇಟಿ ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಗಳ ಜನಿವಾರ ತೆಗೆಸಿರುವುದು ಅಕ್ಷಮ್ಯ. ಇದು ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನ ಉಲ್ಲಂಘನೆ. ಈ ಹಿಂದೆ ನೀಟ್, ಪಿಎಸ್‌ಸಿ ಪರೀಕ್ಷೆಯಲ್ಲೂ ಇಂತಹದ್ದೇ ಅತಾಚುರ್ಯ ನಡೆದಿತ್ತು. ಹಾಗೆಯೇ, ಹೆಣ್ಣುಮಕ್ಕಳು ಮಾಂಗಲ್ಯ, ಮೂಗುತಿ, ಹಿಜಾಬ್ ಧರಿಸುವುದು ಅಪರಾಧವೇ? ಈ ಪ್ರಕರಣ ಸಂಬಂಧ ಮೂವರು ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಮಂಬರುವ ಪರೀಕ್ಷೆಗಳಲ್ಲಿ ಇಂತಹ ಅವಾಂತರಗಳು ನಡೆಯದಂತೆ ನಿಯಮಾವಳಿ ರೂಪಿಸಲು ಸರ್ಕಾರ ಕ್ರಮವಹಿಸಬೇಕಿದೆ.

**ಬಿ.ಎಸ್. ಮುಳ್ಳೂರ,** ಹಲಗತ್ತಿ

ಚುರುಮುರಿ



### ಲೋನ್ ಪೊಲಿಟಿಷಿಯನ್

• ಡಿ.ಎಸ್. ಲಿಂಗರಾಜು

**'ಅಣ್ಣೈ,** ಮರ್ಯಾದೆ, ಗೌರವ ಅಂದ್ರೆ ಏನು?' ಅಂತ ತುರೇಮಣೆಗೆ ಕೇಳಿದೆ.

'ಎರಡೂ ಒಂದೇ ಅಲ್ವೇನ್ಲಾ. ವ್ಯಾಕರಣ ಮರೆತೋಗಿಬುಟ್ಟೇನೋ?' ಅಂತಂದ್ರು.

'ಇಲ್ಲ ಕನಣ್ಣೈ, ಕಂಪನಿಗಳು 'ಮರ್ಯಾದೆಯಿಂದ ನಿಮ್ಮ ಚಿನ್ನ ನಮಗೇ ಮಾರಬಕು' ಅಂತ ಜುಲುಮೆ ಮಾಡ್ತವ್ರೆ. ಅದುಕ್ಕೇ ಕೇಳಿದೆ' ಅಂತಂದೆ.

'ದಿಟ. ಫೈನಾನ್ಸಿನೋರು, ಬ್ಯಾಂಕಿನೋರೇನು ಕಮ್ಮಿ ಇಲ್ಲಕನೇಳೋ. ಚಿನ್ನ ಅಡ ಮಡಗಿ ಸಾಲ ತಕ್ಕಂದು ಮಜಾ ಮಾಡಿ ಅಂತ ಬೋಧನೆ ಮಾಡ್ತರೆ' ತುರೇಮಣೆ ಸಮಾಧಾನ ಮಾಡಿದರು.

'ಹೂ ಕಪ್ಪ, ಈಗ ನಾನ್ ಬ್ಯಾಂಕಿಂಗ್ ಫೈನಾನ್ಸ್ ಕಂಪನಿಗಳು ನಮಗೆ ಸಾಲ ಕೊಟ್ಟು ನಮ್ಮ ಜಲ್ಮ ಜಾಲಾಡ್ತವೆ' ತಿಪ್ಪಣ್ಣ ಜಾಗರೂಕತೆ ಮಾಡಿದ.

'ಮನ್ನೆ ಜಿನ ಪೇಪರಲ್ಲಿ ಐಪಿಎಲ್ಲಿನೋರು ಇನ್ನೊಂದು ಟೀಮಿನಿಂದ ಪ್ಲೇಯರುಗಳನ್ನ ಲೋನು ಮ್ಯಾಲೆ ತಕ್ಕಬೈದು ಅಂತ ಬಂದುತ್ತಲ್ಲ. ಪ್ಲೇಯರುಗಳೂ ಲೋನು ಮೇಲೆ ಹೋತರಾ?' ಯಂಟಪ್ಪಣ್ಣ ಅನುಮಾನದಲ್ಲಿ ಕೇಳಿತು.

'ದಿಲ್ಲೀಲಿ ಏಳೇಳು ಆಮ್‌ಆದ್ಮಿಗಳು ಆಪರೇಷನ್ ಮಾಡ್ಸಿಕಂದು ಬದಲಾದ್ರಲ್ಲ ಅದು ಯಾವ ಪ್ರಕಾರ?' ಅಂತ ಕೇಳಿದೆ.

'ಇದು ಪೊಲಿಟಿಷಿಯನ್ ಲೋನು ಸಿಸ್ಟಂ ಕಯ್ಯಾ. ಬಿಹಾರದಲ್ಲಿ ನಿತೀಶಣ್ಣನ್ನ, ಇಲ್ಲಿ ಕುಮಾರಣ್ಣನ್ನ, ಮಂಜಣ್ಣ ಡಾಕ್ರುನ್ನ ಲೋನು ಮ್ಯಾಲೆ ತಗಂಡವ್ರಲ್ಲ' ತುರೇಮಣೆ ವಿಶದಪಡಿಸಿದರು.

'ಅದ್ನೇ ಏನೋ ಡಿಕೆಶಿ ಅಣ್ಣ ವಡಪಾಕಿ ಬಂದುದ್ದು. 'ಅಧ್ಯಕ್ಸರೇ ನಾನು ಇಲ್ಲಿಗೆ ಗಾಳಿ ಕುಡಿಯಕ್ಕೆ ಬಂದುಲ್ಲ. ನೀವು ಕುರ್ಚಿ ಇಚಾರ ಬಿರ್‍ನೆ ಪೈಸಲ್ ಮಾಡದಿದ್ರೆ ಕಮಲದೋರು ನನ್ನ ಲೋನು ಮ್ಯಾಲೆ ತಗಂದು ಸಿಎಂ ಮಾಡಕ್ಕೆ ತುದಿಗಾಲಲ್ಲಿ ನಿಂತವರೆ ಅಂದದಂತೆ' ಅಂದ ತಿಪ್ಪಣ್ಣ ಭವಿಷ್ಯ ನುಡಿದ.

'ಅದ್ಕೇ ಏನೋ, ಇಲ್ಲಿದ್ರೆ ಓಕಳಿ ಇಟ್ಟಾಡುಸ್ತರೆ ಅಂತ ರಾವುಲಣ್ಣ ಪ್ರವಾಸ ಹೋಗಿರದು' ಯಂಟಪ್ಪಣ್ಣ ಜಯ ಮಂಗಳ ಹಾಡಿತು. 'ಹಂಗಾದ್ರೆ ಹನಿ ಆಡಕ್ಕೆ ಸುರುವಾಗ್ಯದೆ ಅನ್ನಪ್ಪ' ತುರೇಮಣೆ ಷರಾ ಬರೆದರು.

ಸಂಗತ

## ದಾಖಲೆ ಮತದಾನ ಯಾವುದರ ಸಂಕೇತ?

ಮತದಾನ ಪ್ರಮಾಣದಲ್ಲಿನ ಭಾರೀ ಹೆಚ್ಚಳವು ಆಡಳಿತದಲ್ಲಿ ಇರುವ ಪಕ್ಷಕ್ಕೆ ಎಲ್ಲ ಸಂದರ್ಭಗಳಲ್ಲೂ ಮುಳುವು ಆಗಲಾರದು, ಅನುಕೂಲಕರವೂ ಆಗಬಹುದು!


• ಬಿ.ಎಸ್. ಅರುಣ್

**ಪಶ್ಚಿಮ ಬಂಗಾಳ** (ಮೊದಲ ಹಂತ) ಮತ್ತು ತಮಿಳುನಾಡು ವಿಧಾನಸಭಾ ಚುನಾವಣೆಗಳಲ್ಲಿನ ಮತದಾನದ ಪ್ರಮಾಣದಲ್ಲಿನ ಹೆಚ್ಚಳವು, ಆಡಳಿತಾರೂಢ ಪಕ್ಷದ ಸೋಲನ್ನು ಸೂಚಿಸುತ್ತದೆ ಎಂಬ ಕೆಲವು ವಿಶ್ಲೇಷಣೆಗಳು, ವಿಶೇಷವಾಗಿ ಬಿಜೆಪಿಯ ಅಬ್ಬರದ ವಾದವು ಹೇಳುತ್ತಿದೆ. ಕೆಲವು ದಶಕಗಳ ಫಲಿತಾಂಶಗಳನ್ನು ಗಮನಿಸಿದರೆ ಈ ತರ್ಕ ಅರ್ಥಹೀನವಾದುದು. ಪಶ್ಚಿಮ ಬಂಗಾಳದ ಮೊದಲ ಹಂತದ ಮತದಾನದ ನಂತರ ಪ್ರಧಾನಿ ನರೇಂದ್ರ ಮೋದಿಯವರು ಕೂಡ, ಮತದಾನದ ಹೆಚ್ಚಳವು 'ಬದಲಾವಣೆಗಾಗಿ ನೀಡಿದ ಅಭೂತಪೂರ್ವ ಜನಾದೇಶ' ಎಂದಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ, ಆಡಳಿತಾರೂಢ ಪಕ್ಷಗಳು ದಾಖಲೆ ಮಟ್ಟದ ಮತದಾನದ ಅಲೆಯ ಮೇಲೇರಿ ಅಧಿಕಾರಕ್ಕೆ ಮರಳಿದ ನಿದರ್ಶನಗಳಿವೆ.

ವಿವಾದಾತ್ಮಕ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಂತರ ಚುನಾವಣೆ ನಡೆದ ಮೊದಲ ರಾಜ್ಯ ಬಿಹಾರ. ಬಿಹಾರದಲ್ಲಿ 2025ರಲ್ಲಿ ನಡೆದ ಚುನಾವಣೆಯಲ್ಲಿ ಶೇ 67.13ರಷ್ಟು ಮತದಾನವಾಗಿತ್ತು. ರಾಜ್ಯದ ಇತಿಹಾಸದಲ್ಲೇ ಅತಿ ಹೆಚ್ಚಿನ ಮತದಾನ ನಡೆದ ಆ ಚುನಾವಣೆಯಲ್ಲಿ ಆಡಳಿತ ಪಕ್ಷವೇ ಗೆಲುವು ಸಾಧಿಸಿತು. ಮುಖ್ಯಮಂತ್ರಿ ನಿತೀಶ್ ಕುಮಾರ್ ಸತತ ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾದರು. 2025ರ ಮತದಾನದ ಪ್ರಮಾಣವು 2020ರ ಶೇ 57.29 ಕ್ಕಿಂತ ಸುಮಾರು ಶೇ 10ರಷ್ಟು ಹೆಚ್ಚಾಗಿತ್ತು.

ಪಶ್ಚಿಮ ಬಂಗಾಳಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಗಮನಿಸೋಣ. 1977ರಲ್ಲಿದ್ದ ಶೇ 56.15 ಮತದಾನದ ಪ್ರಮಾಣ 1982ರಲ್ಲಿ ಶೇ 20ಕ್ಕಿಂತ ಹೆಚ್ಚು ಏರಿಕೆಯಾಗಿ ಶೇ 76.96ಕ್ಕೆ ತಲಪಿತು; ಆಗ ಆಡಳಿತದಲ್ಲಿದ್ದ ಎಡರಂಗವೇ ಗೆಲುವು ಸಾಧಿಸಿತು. 1991ರಲ್ಲಿ ಮತದಾನದ ಪ್ರಮಾಣ ಶೇ 76.8ರಷ್ಟಿತ್ತು. 1996ರಲ್ಲಿ ಶೇ 82.80ಕ್ಕೆ ಏರಿಕೆಯಾಯಿತು. ಆಗಲೂ ಎಡರಂಗವೇ ಜಯಗಳಿಸಿತು. 2001ರಲ್ಲಿ ಶೇ 75.29ರಷ್ಟಿದ್ದ ಮತದಾನದ ಪ್ರಮಾಣ, 2006ರಲ್ಲಿ ಶೇ 81.97ಕ್ಕೆ ಜಿಗಿಯಿತು. ಆ ಬಾರಿಯೂ ಎಡರಂಗವೇ ಗೆಲುವು ಸಾಧಿಸಿತ್ತು. 2011ರಲ್ಲಿ ಮಮತಾ ಬ್ಯಾನರ್ಜಿ ಅವರು ಎಡರಂಗದ ಸರ್ಕಾರವನ್ನು ಸೋಲಿಸಿ ಅಧಿಕಾರಕ್ಕೇರಿದಾಗ ಮತದಾನದ ಪ್ರಮಾಣವು ಶೇ 84.33 ರಷ್ಟಿತ್ತು, ಅದು 2006ರ ಚುನಾವಣೆಗಿಂತ ಶೇ 2.36ರಷ್ಟು ಹೆಚ್ಚಾಗಿತ್ತು. 2016 ಮತ್ತು 2021ರಲ್ಲಿ ನಡೆದ ಚುನಾವಣೆಗಳಲ್ಲಿ ಒಟ್ಟು ಮತದಾನದ ಪ್ರಮಾಣವು ಸ್ವಲ್ಪ ಕಡಿಮೆಯಾಗಿತ್ತು.

ತಮಿಳುನಾಡಿನಲ್ಲಿ ಅತಿ ಹೆಚ್ಚು ಮತದಾನದ ಪ್ರಮಾಣವು ಅಸ್ತಿತ್ವದಲ್ಲಿರುವ ಸರ್ಕಾರಗಳ ಮುಂದುವರಿಕೆ ಮತ್ತು ಸೋಲಿಗೆ ಸಂಬಂಧಿಸಿದಂತೆ ಮಿಶ್ರ ಫಲಿತಾಂಶಗಳನ್ನು ನೀಡಿದೆ. 1977ರಲ್ಲಿ ಎಂ.ಜಿ. ರಾಮಚಂದ್ರನ್ ನಾಯಕತ್ವದ ಎಐಎಡಿಎಂಕೆ ಅಧಿಕಾರಕ್ಕೆ ಬಂದಾಗ, ಮತದಾನದ ಪ್ರಮಾಣವು ಶೇ 61.58ರಷ್ಟಿತ್ತು. ಅಂದರೆ 1971ರ ಶೇ 71.32ಕ್ಕಿಂತ ಶೇ 10ರಷ್ಟು ಕಡಿಮೆಯಾಗಿತ್ತು. 1980 ಮತ್ತು 1984ರಲ್ಲಿ ಎಂಜಿಆರ್ ಅವರು ದಾಖಲೆ ಮತದಾನದ ನಂತರವೇ ಅಧಿಕಾರವನ್ನು ಉಳಿಸಿಕೊಂಡರು! 1989ರಲ್ಲಿ ಡಿಎಂಕೆ ಪಕ್ಷವು ಎಐಎಡಿಎಂಕೆಯನ್ನು ಸೋಲಿಸಿದಾಗ ಮತದಾನದ ಪ್ರಮಾಣವು 1984ಕ್ಕಿಂತ ಸುಮಾರು ಶೇ 5ರಷ್ಟು ಕಡಿಮೆಯಿತ್ತು.



ಪಶ್ಚಿಮ ಬಂಗಾಳದ ಮೊದಲ ಹಂತದ ಚುನಾವಣೆಯಲ್ಲಿ ಶೇ 92.28ರಷ್ಟು ಮತದಾನ ಆಗಿದೆ. ಈ ಬಾರಿ 3.1 ಕೋಟಿ ಮತದಾರರು (2021ರಲ್ಲಿ 3.35 ಕೋಟಿ) ಮತ ಚಲಾಯಿಸಿದ್ದಾರೆ. ಮೊದಲ ಹಂತದ ಚುನಾವಣೆ ನಡೆದ 16 ಜಿಲ್ಲೆಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ 18 ಲಕ್ಷ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಿತ್ತು. ಈ ಪ್ರಕ್ರಿಯೆಯ ನಂತರ, ಈ ಜಿಲ್ಲೆಗಳ ಒಟ್ಟು ಮತದಾರರ ಸಂಖ್ಯೆ 3.8 ಕೋಟಿಯಿಂದ 3.6 ಕೋಟಿಗೆ ಇಳಿದಿದೆ.

ಮುಂದಿನ ಬಾರಿ ತಮ್ಮ ಹೆಸರನ್ನೂ ಪಟ್ಟಿಯಿಂದ ಕೈಬಿಡಬಹುದು ಮತ್ತು ಪೌರತ್ವದ ಪ್ರಶ್ನೆಯಲ್ಲದೆ ಸಾಮಾಜಿಕ ಸೌಲಭ್ಯಗಳಿಂದ ವಂಚಿತರಾಗಬಹುದು ಎಂಬ ಭಯದಿಂದ ಬೇರೆ ರಾಜ್ಯಗಳಿಗೆ ವಲಸೆ ಹೋಗಿದ್ದ ಮತದಾರರು ತವರಿಗೆ ಮರಳಿ ಹಕ್ಕು ಚಲಾಯಿಸಿರುವುದು ಹೆಚ್ಚಿನ ಮತದಾನಕ್ಕೆ ಮತ್ತೊಂದು ಕಾರಣವಾಗಿದೆ.

ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ಎರಡರಲ್ಲೂ ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಬರುತ್ತಿರುವುದು ಮತದಾನ ಹೆಚ್ಚಳಕ್ಕೆ ಇನ್ನೊಂದು ಕಾರಣ ಎನ್ನಲಾಗಿದೆ. ರಾಜಕೀಯ ಪಕ್ಷಗಳು ಮಹಿಳಾಪರ ನಗದು ವರ್ಗಾವಣೆ ಯೋಜನೆಗಳನ್ನು ಜಾರಿಗೆ ತಂದಿರುವ ಕಾರಣ, ಕಳೆದ ಕೆಲವು ವರ್ಷಗಳಿಂದ ಹಲವಾರು ರಾಜ್ಯಗಳಲ್ಲಿ ಮಹಿಳಾ ಮತದಾರರ ಜಾಗೃತಿ ಕಂಡುಬರುತ್ತಿದೆ. ತಮಿಳುನಾಡಿನಲ್ಲಿ ಯುವಜನತೆ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿರುವುದೂ ಮತದಾನದ ಪ್ರಮಾಣ ಹೆಚ್ಚಳಕ್ಕೆ ಕಾರಣ ಆಗಿರಬಹುದು. ದಕ್ಷಿಣದ ಈ ರಾಜ್ಯದಲ್ಲಿ ಸುಮಾರು 73 ಲಕ್ಷ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಯಿತು. ಬಂಗಾಳದಲ್ಲಿ ಭಾರೀ ವಿವಾದಕ್ಕೆ ಕಾರಣವಾದ ಎಸ್‌ಐಆರ್ ತಮಿಳುನಾಡಿನಲ್ಲಿ ಸದ್ದು ಮಾಡಲಿಲ್ಲ.

ವಸ್ತುನಿಷ್ಠವಾದ ಮತದಾರರ ಪಟ್ಟಿಯನ್ನು ಯಾರೂ ವಿರೋಧಿಸುವುದಿಲ್ಲ. ಸ್ಥಳಾಂತರಗೊಂಡವರ, ಮರಣ ಹೊಂದಿದವರ ಮತ್ತು ನಕಲಿ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆಯುವುದು ಸ್ವಾಗತಾರ್ಹ. ಆದರೆ, ಲಕ್ಷಗಟ್ಟಲೆ ನಿಜವಾದ ಮತದಾರರನ್ನು ಪಟ್ಟಿಯಿಂದ ಹೊರಗಿಡಲಾಗಿದೆ; ಬಂಗಾಳದಲ್ಲಿ ಇನ್ನೂ 27 ಲಕ್ಷ ನೈಜ ಮತದಾರರ ಅರ್ಜಿಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕಿದೆ ಮತ್ತು ಅವರು ಮತದಾನದಿಂದ ವಂಚಿತರಾಗಿದ್ದಾರೆ ಎನ್ನುವುದು ಕಳವಳಕಾರಿ ಸಂಗತಿ. ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಆತಂಕ ಉಂಟುಮಾಡುವಂತಹದ್ದು.

**ಲೇಖಕ:** ಹಿರಿಯ ಪತ್ರಕರ್ತ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

## ಮೇ ತಿಂಗಳಲ್ಲಿ ಇನ್ನಷ್ಟು ತೀವ್ರ: ಹವಾಮಾನ ಇಲಾಖೆ ಮುನ್ಸೂಚನೆ

# ಬಿಸಿಗಾಳಿ: ಬಸವಳಿದ ಭಾರತ

ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಬಿಸಿಗಾಳಿ ತನ್ನ ಪ್ರತಾಪ ತೋರುತ್ತಿದೆ. ಮಹಾರಾಷ್ಟ್ರದಲ್ಲಿ ದೇಶದಲ್ಲಿಯೇ ಅತ್ಯಧಿಕ ತಾಪಮಾನ ದಾಖಲಾಗಿದ್ದರೆ, ಉತ್ತರ ಪ್ರದೇಶ, ದೆಹಲಿ, ಒಡಿಶಾ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಲ್ಲಿ ಜನ ಬಿಸಿಗಾಳಿಯಿಂದ ಬಸವಳಿಯುತ್ತಿದ್ದಾರೆ. ಈಶಾನ್ಯ ರಾಜ್ಯಗಳೂ ಈ ಪಟ್ಟಿಯಲ್ಲಿ ಮುಂದಿವೆ. ಹಲವು ರಾಜ್ಯಗಳಲ್ಲಿ ಸಾವುಗಳೂ ಸಂಭವಿಸಿವೆ. ಅತ್ಯಂತ ಹೆಚ್ಚು ತಾಪಮಾನದ ಜಗತ್ತಿನ 100 ನಗರಗಳಲ್ಲಿ 95 ಭಾರತಲ್ಲಿಯೇ ಇವೆ ಎಂದು ವರದಿಯಾಗಿದೆ. ರಾಷ್ಟ್ರೀಯ ಹವಾಮಾನ ಮುನ್ಸೂಚನಾ ಕೇಂದ್ರವು ಎಚ್ಚರಿಕೆ ವಹಿಸುವಂತೆ ಜನರಿಗೆ ಸೂಚಿಸಿದೆ




ಬಳ್ಳಾರಿಯ ಉರಿಬಿಸಿಲಲ್ಲೇ ಕಾರ್ಮಿಕರೊಬ್ಬರು ಎತ್ತಿನ ಬಂಡಿಯಲ್ಲಿ ಮೂಟೆಗಳನ್ನು ಸಾಗಿಸಿದರು ಪ್ರಜಾವಾಣಿ ಚಿತ್ರ: ಮುರಳಿಕಾಂತ ರಾವ್

ಪ್ರಜಾವಾಣಿ ವಾರ್ತೆ

ಭಾರತದಲ್ಲಿ ಈ ಬಾರಿಯ ಬೇಸಿಗೆ ಹಿಂದೆಂದಿಗಿಂತಲೂ ತೀವ್ರವಾಗಿದೆ. ದೇಶದ ಹಲವು ನಗರ ಪ್ರದೇಶಗಳಲ್ಲಿ ತಾಪಮಾನವು ದಾಖಲೆಯ ಮಟ್ಟ ಮುಟ್ಟಿದೆ. ಹಲವು ಭಾಗಗಳಲ್ಲಿ ಬಿಸಿಗಾಳಿ ಬೀಸುತ್ತಿದ್ದು, ಬಹುತೇಕ ಪ್ರದೇಶಗಳಲ್ಲಿ ತಾಪಮಾನವು 36 ಡಿಗ್ರಿಗಳಿಗಿಂತಲೂ ಹೆಚ್ಚಾಗಿದೆ. ಭಾನುವಾರ ಮಹಾರಾಷ್ಟ್ರದ ವಿದರ್ಭ ಜಿಲ್ಲೆಯ ಅಕೋಲಾದಲ್ಲಿ ಅತಿ ಹೆಚ್ಚು ತಾಪಮಾನ (46.9 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.

ದೇಶದ ಬಹುತೇಕ ಭಾಗಗಳಲ್ಲಿ ತಾಪಮಾನವು ಸಾಮಾನ್ಯಕ್ಕಿಂತ 5 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿದೆ. ಇದು ಬಿಸಿಗಾಳಿಯ ಪರಿಸ್ಥಿತಿ ಉಂಟುಮಾಡಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ.

ಜಮ್ಮು–ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬ್, ಹರಿಯಾಣ, ಚಂಡೀಗಢ, ದೆಹಲಿ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಕೇಂದ್ರಭಾಗದ ಹಲವು ರಾಜ್ಯಗಳಲ್ಲಿ ಬಿಸಿಗಾಳಿ ಮತ್ತು ರಾತ್ರಿ ವೇಳೆಯೂ ತೀವ್ರ ತಾಪಮಾನ ಕಂಡುಬರುತ್ತಿದೆ.

ದೇಶದ ರಾಜಧಾನಿ ದೆಹಲಿಯಲ್ಲಿ ಶನಿವಾರ ಈ ವರ್ಷದ ಗರಿಷ್ಠ ಉಷ್ಣಾಂಶ 42.8 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ನಾಲ್ಕು ವರ್ಷಗಳಲ್ಲಿ ದಾಖಲಾದ ಅತಿಹೆಚ್ಚು ತಾಪಮಾನವಾಗಿದೆ. 2022ರ ಏ.28ರಂದು ನಗರದಲ್ಲಿ 43.5 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು.

ಉತ್ತರ ಪ್ರದೇಶದಲ್ಲಿಯೂ ತಾಪಮಾನ ತನ್ನ ವಿರಾಟ್ ರೂಪ ತೋರಿಸುತ್ತಿದೆ. ಬಂಡಾದಲ್ಲಿ ಶನಿವಾರ ಅತಿ ಹೆಚ್ಚು (47.4 ಡಿಗ್ರಿ ಸೆಲ್ಸಿಯಸ್) ದಾಖಲಾಗಿದ್ದರೆ, ಪ್ರಯಾಗರಾಜ್‌ನಲ್ಲಿ 45.5 ಡಿಗ್ರಿ ಸೆಲ್ಸಿಯಸ್ ಮತ್ತು ವಾರಾಣಸಿಯಲ್ಲಿ 45 ಡಿಗ್ರಿ ಸೆಲ್ಸಿಯಸ್ ನಮೂದಾಗಿದೆ.

ಹರಿಯಾಣ ಮತ್ತು ಪಂಜಾಬ್ ರಾಜ್ಯಗಳೂ ಅಕ್ಷರಶಃ ಉಷ್ಣಹವೆಯಲ್ಲಿ ಬೇಯುತ್ತಿವೆ. ಎರಡೂ ರಾಜ್ಯಗಳಲ್ಲಿ ಸಾಮಾನ್ಯಕ್ಕಿಂತ 6 ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚು ತಾಪಮಾನ ಕಂಡುಬಂದಿದೆ. ಪಂಜಾಬ್‌ನ ಫರೀದ್‌ಕೋಟ್‌ನಲ್ಲಿ 45.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಹರಿಯಾಣದ ರೋಹ್ಟಕ್‌ನಲ್ಲಿ 44.6 ಡಿಗ್ರಿ ಸೆಲ್ಸಿಯಸ್ ನಮೂದಾಗಿದೆ. ರಾಜಸ್ಥಾನದಲ್ಲಿಯೂ ಇಂಥದ್ದೇ ವಾತಾವರಣ ಇದ್ದು, ಬಾಡ್ಮೇರ್‌ನಲ್ಲಿ 45.7 ಡಿಗ್ರಿ ಸೆಲ್ಸಿಯಸ್ ತಾಪಮಾನ ಕಂಡುಬಂದಿದೆ. ಹಿಮಾಚಲ ಪ್ರದೇಶದಲ್ಲಿ ಬಿಸಿಗಾಳಿ ಇದ್ದು, ಏಪ್ರಿಲ್ 30ರ ನಂತರ ತಾಪಮಾನ ಕಡಿಮೆಯಾಗಲಿದೆ ಎಂದು ಶಿಮ್ಲಾ ಹವಾಮಾನ ಕಚೇರಿ ಮಾಹಿತಿ ನೀಡಿದೆ. ಕಾಶ್ಮೀರದಲ್ಲಿ ಮಾತ್ರ ಭಿನ್ನ ಸ್ಥಿತಿ ಇದ್ದು, ಮಳೆಯಿಂದಾಗಿ ತಾಪಮಾನ ಸಾಮಾನ್ಯಕ್ಕಿಂತ ಕಡಿಮೆ ಮಟ್ಟ ತಲುಪಿದೆ. ಆದರೆ, ಜಮ್ಮುವಿನಲ್ಲಿಯೂ ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನವಿದ್ದು, ಗರಿಷ್ಠ 39.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ದಕ್ಷಿಣದ ರಾಜ್ಯಗಳಲ್ಲಿಯೂ ಬಿಸಿಲು ತೀವ್ರ ಸ್ವರೂಪ ಪಡೆದಿದೆ. ಕೇರಳದಲ್ಲಿ ಅತಿನೇರಳೆ ಕಿರಣಗಳು (ಯುವಿ) ಹೆಚ್ಚಿನ ಮಟ್ಟದಲ್ಲಿರುವುದು ವರದಿಯಾಗಿದೆ. ಅಲ್ಲಿ ತಾಪಮಾನವು 37ರಿಂದ 40 ಡಿಗ್ರಿ ಸೆಲ್ಸಿಯಸ್‌ವರೆಗೆ ಇದೆ. ಬಿಸಿಗಾಳಿಯ ಪರಿಸ್ಥಿತಿ ಎದುರಿಸುವ ಸಂಬಂಧ ಶನಿವಾರ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ವಿಶೇಷ ಸಭೆ ನಡೆಸಿ, ಪರಿಸ್ಥಿತಿ ಎದುರಿಸುವ ಸಂಬಂಧ ಅಧಿಕಾರಿಗಳಿಗೆ ಹಲವು ಸೂಚನೆಗಳನ್ನು ನೀಡಿದ್ದಾರೆ.

ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿಯೂ ಬಿಸಿಲಿನ ಪ್ರಖರತೆ ಹೆಚ್ಚಾಗಿದೆ. ಆಂಧ್ರಪ್ರದೇಶದಲ್ಲಿ ತಾಪಮಾನವು 42 ಡಿಗ್ರಿ ಸೆಲ್ಸಿಯಸ್ ದಾಟಿದೆ. ಹಲವು ಮಂಡಲ್‌ಗಳಲ್ಲಿ ಬಿಸಿಗಾಳಿಯ ವಾತಾವರಣ ಇದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರವು ಎಚ್ಚರಿಕೆ ನೀಡಿದೆ.

ಮೇ ತಿಂಗಳಲ್ಲಿ ದೇಶದ ಹಲವೆಡೆ ತಾಪಮಾನ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಮಳೆ ಸುರಿದರೆ ಮಾತ್ರ ತಾಪಮಾನದಲ್ಲಿ ಇಳಿಕೆಯಾಗಲಿದೆ.

**ಆಧಾರ:** ಪಿಟಿಐ, ಭಾರತೀಯ ಹವಾಮಾನ ಇಲಾಖೆ, ಹೀಟ್‌ವಾಚ್.ಇನ್, ಸಂಸತ್‌ನಲ್ಲಿ ಸಚಿವರ ಉತ್ತರ

## ರಾಜ್ಯದಲ್ಲೂ ಬಿಸಿಲಿನ ಝಳ ತೀವ್ರ



ಬೆಳಗಾವಿಯ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ಬಿಸಿಲಿನ ತಾಪದಿಂದ ರಕ್ಷಿಸಿಕೊಳ್ಳಲು ಸೋಲಾರ್ ಫ್ಯಾನ್ ಅಳವಡಿಸಿದ ಕ್ಯಾಪ್ ಧರಿಸಿದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ರಾಜ್ಯದ ಹಲವು ಜಿಲ್ಲೆಗಳಲ್ಲಿ ಕೆಲವು ದಿನಗಳಿಂದೀಚೆಗೆ ಬಿಸಿಲಿನ ತೀವ್ರತೆ ಹೆಚ್ಚಾಗಿದೆ. ಉತ್ತರ ಕರ್ನಾಟಕದಾದ್ಯಂತ ಜನರು ಬಿಸಿಲಿಗೆ ಬಸವಳಿಯುತ್ತಿದ್ದಾರೆ. ಬೀದರ್, ವಿಜಯಪುರ, ಕಲಬುರಗಿ, ರಾಯಚೂರು ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 41 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚು ದಾಖಲಾಗುತ್ತಿದೆ.

ಹವಾಮಾನ ಇಲಾಖೆಯ ವರದಿಯ ಪ್ರಕಾರ, ಭಾನುವಾರ ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಗರಿಷ್ಠ 41.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು.

ರಾಯಚೂರಿನಲ್ಲಿ 41, ಕೊಪ್ಪಳದಲ್ಲಿ 40.6 ಡಿಗ್ರಿ ಸೆಲ್ಸಿಯಸ್‌ನಷ್ಟು ಗರಿಷ್ಠ ತಾಪಮಾನ ದಾಖಲಾಗಿತ್ತು. ಗದಗ ಜಿಲ್ಲೆಯಲ್ಲಿ 39.6, ಬಾಗಲಕೋಟೆ ಜಿಲ್ಲೆಯಲ್ಲಿ 38.1 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ವಿಜಯನಗರ ಜಿಲ್ಲೆಯಲ್ಲಿ ಕೆಲವು ದಿನಗಳಿಂದ 40ರಿಂದ 41 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶ ದಾಖಲಾಗುತ್ತಿದ್ದು, ಹಂಪಿಗೆ ಬರುವ ಪ್ರವಾಸಿಗರ ಪ್ರಮಾಣ ತೀರಾ ಇಳಿಕೆಯಾಗಿದೆ.

ವಿಜಯಪುರ ಜಿಲ್ಲೆಯಲ್ಲೂ ಬಿಸಿಗಾಳಿ ಜನಜೀವನದ ಮೇಲೆ ಪ್ರಭಾವ ಬೀರಿದೆ. ಏಪ್ರಿಲ್ ಎರಡನೇ ವಾರದಲ್ಲಿದ್ದ ತಾಪಮಾನಕ್ಕೆ ಹೋಲಿಸಿದರೆ (42–43 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿತ್ತು), ಈಗ ಸ್ವಲ್ಪ ಕಡಿಮೆ ತಾಪಮಾನ ದಾಖಲಾಗುತ್ತಿದ್ದರೂ, ಬಿಸಿಲಿನ ಝಳ ಜನರನ್ನು ಹೈರಾಣು ಮಾಡಿದೆ. ಜಿಲ್ಲೆಯ ಪ್ರವಾಸಿ ತಾಣಗಳಿಗೆ ಭೇಟಿ ನೀಡುತ್ತಿರುವ ಪ್ರವಾಸಿಗರ ಸಂಖ್ಯೆ ಕುಸಿದಿದೆ.

ದಕ್ಷಿಣ ಒಳನಾಡಿನ ಚಿತ್ರದುರ್ಗ, ದಾವಣಗೆರೆಗಳಲ್ಲಿ ಉಷ್ಣತೆ 37–38 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿ ದಾಖಲಾಗುತ್ತಿದೆ.

ರಾಜಧಾನಿ ಬೆಂಗಳೂರಿನಲ್ಲಿ ವಾತಾವರಣದ ಉಷ್ಣತೆ 36–37 ಡಿಗ್ರಿ ಸೆಲ್ಸಿಯಸ್‌ನ ಆಸುಪಾಸಿನಲ್ಲಿದೆ.

ಬಿಸಿಲಿನ ಝಳ ಹೆಚ್ಚಿರುವ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಬಿಸಿಲಾಘಾತ ಹಾಗೂ ಬಿಸಿಲಿನ ಕಾರಣದಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವುದಕ್ಕಾಗಿ ಪ್ರತ್ಯೇಕ ವಾರ್ಡ್‌ಗಳನ್ನು ತೆರೆಯಲಾಗಿದೆ.

### ಬಿಸಿಗಾಳಿ ಎಂದರೆ...

ನಿರ್ದಿಷ್ಟ ಪ್ರದೇಶದ ಉಷ್ಣತೆಯು ಸಾಮಾನ್ಯ ತಾಪಮಾನಕ್ಕಿಂತ ಗಣನೀಯವಾಗಿ ಹೆಚ್ಚಾದಲ್ಲಿ ಅದನ್ನು ಬಿಸಿಗಾಳಿ ಎಂದು ಕರೆಯಲಾಗುತ್ತದೆ. ಭಾರತೀಯ ಹವಾಮಾನ ಇಲಾಖೆಯು ನಿಗದಿತ ಪ್ರದೇಶದಲ್ಲಿ ಬಿಸಿಗಾಳಿ ಇದೆ ಎಂಬುದನ್ನು ಘೋಷಿಸಲು ಕೆಲವು ಮಾನದಂಡಗಳನ್ನು ಅನುಸರಿಸುತ್ತದೆ. ಈ ಮಾನದಂಡಗಳಲ್ಲಿ ಪ್ರದೇಶವಾರು ವ್ಯತ್ಯಾಸಗಳಿವೆ.

- ಬಯಲು ಪ್ರದೇಶದಲ್ಲಿ ವಾತಾವರಣದ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಜಾಸ್ತಿ ದಾಖಲಾದರೆ ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ. ಅದೇ ರೀತಿ ಗಿರಿಶಿಖರಗಳಲ್ಲಿ ಬಿಸಿಗಾಳಿ ಇದೆ ಎಂದು ಘೋಷಿಸಬೇಕಾದರೆ ಅಲ್ಲಿನ ಉಷ್ಣತೆ 30 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚು ಇರಬೇಕು.

  ಎ) ನಿರ್ದಿಷ್ಟ ಪ್ರದೇಶದ ತಾಪಮಾನವು ಆ ಪ್ರದೇಶದ ಸಾಮಾನ್ಯ ಉಷ್ಣತೆಗಿಂತ 4.5ರಿಂದ 6.4 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಿದ್ದರೆ, ‘ಬಿಸಿಗಾಳಿ’ ಎಂದೂ, 6.4 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿದ್ದರೆ ‘ತೀವ್ರ ಬಿಸಿಗಾಳಿ’ ಎಂದು ಕರೆಯಲಾಗುತ್ತದೆ.

  ಬಿ) ನಿರ್ದಿಷ್ಟ ಪ್ರದೇಶದ ಸಾಮಾನ್ಯ ಗರಿಷ್ಠ ತಾಪಮಾನ 45ರಿಂದ 47 ಡಿಗ್ರಿ ಸೆಲ್ಸಿಯಸ್‌ವರೆಗೆ ಇದ್ದರೆ ‘ಬಿಸಿಗಾಳಿ’ ಮತ್ತು 47 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚಿದ್ದರೆ ‘ತೀವ್ರ ಬಿಸಿಗಾಳಿ’ ಎನ್ನಲಾಗುತ್ತದೆ.
- ಕರಾವಳಿ ಪ್ರದೇಶಗಳಲ್ಲಿ ಗರಿಷ್ಠ ತಾಪಮಾನ 37 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚಿದ್ದರೆ ಬಿಸಿಗಾಳಿ ಎಂದು ಘೋಷಿಸಲಾಗುತ್ತದೆ.

### ದೇಶದಲ್ಲಿ ಬಿಸಿಲಾಘಾತದ ಹೊಡೆತ

(ಆವರಣದಲ್ಲಿರುವುದು ಶಂಕಿತ ಬಿಸಿಲಾಘಾತದ ಪ್ರಕರಣಗಳು)

| | |
|---|---|
| 2022 | 33 (4,481) |
| 2023 | 189 (19,402) |
| 2024 | 185 (43,384) |
| 2025 | 84* (7,192) |

*ಹೀಟ್‌ವಾಚ್.ಇನ್ ನಡೆಸಿರುವ ವಿಶ್ಲೇಷಣೆ ಪ್ರಕಾರ ಕಳೆದ ವರ್ಷ 84 ಮಂದಿ ಬಿಸಿಲಾಘಾತದಿಂದ ಮೃತಪಟ್ಟಿದ್ದಾರೆ

### ತಂಪು ನಗರಗಳೂ ಬಿಸಿ

ತಂಪಾದ ಹವಾಗುಣದಿಂದಾಗಿಯೇ ಖ್ಯಾತಿ ಪಡೆದಿದ್ದ ಬೆಂಗಳೂರು, ಶಿಮ್ಲಾ, ಉತ್ತರಾಖಂಡ–ಹಿಮಾಚಲ ಪ್ರದೇಶದ ಹಲವು ನಗರಗಳಲ್ಲಿಯೂ ಈ ಬಾರಿ ಬಿಸಿಲಿನ ಝಳ ವಿಪರೀತ ಎನ್ನುವಷ್ಟಿದೆ.

ಭಾರತದ ನಗರ–ಹಳ್ಳಿಗಳಲ್ಲಿ ಬಿಸಿಲಿನ ತೀವ್ರತೆ ಹೆಚ್ಚಿದೆ. ಎಕ್ಯುಐ.ಇನ್ ದತ್ತಾಂಶದ ಪ್ರಕಾರ ಜಗತ್ತಿನ 100 ಅತ್ಯಂತ ಹೆಚ್ಚು ತಾಪಮಾನದ ನಗರಗಳಲ್ಲಿ 95 ಭಾರತಲ್ಲಿಯೇ ಇವೆ ಎಂದು ವರದಿಯಾಗಿದೆ.



ಪ್ರಯಾಗರಾಜ್‌ನಲ್ಲಿ ಜನರು ಟವೆಲ್‌ಗಳನ್ನು ತಲೆಗೆ ಸುತ್ತಿಕೊಂಡು ಬಿಸಿಲಿನಿಂದ ರಕ್ಷಣೆ ಪಡೆದರು – ಪಿಟಿಐ ಚಿತ್ರ

### ವಿದ್ಯುತ್ ಬೇಡಿಕೆ ದಾಖಲೆ ಮಟ್ಟಕ್ಕೆ

ಬೇಸಿಗೆಯಲ್ಲಿ ಸಾಮಾನ್ಯವಾಗಿ ವಿದ್ಯುತ್ ಬೇಡಿಕೆ ಹೆಚ್ಚಾಗುತ್ತದೆ. ಏರ್ ಕಂಡೀಷನ್ ಸಾಧನಗಳು, ಕೂಲರ್‌ಗಳು ಇತ್ಯಾದಿ ಬಳಸುವುದು ಅದಕ್ಕೆ ಕಾರಣ. 2024ರ ಮೇನಲ್ಲಿ ದೇಶದಲ್ಲಿ ದಿನವೊಂದಕ್ಕೆ 250 ಗಿಗಾ ವಾಟ್ ವಿದ್ಯುತ್‌ಗೆ ಬೇಡಿಕೆ ಬಂದಿತ್ತು. ಅದು ಇದುವರೆಗಿನ ಗರಿಷ್ಠ ಬೇಡಿಕೆಯ ಮಟ್ಟವಾಗಿತ್ತು. ಈ ಬಾರಿ ಹೊಸ ದಾಖಲೆ ಸೃಷ್ಟಿಯಾಗಿದ್ದು ಇದೇ 24ರಂದು 252.07 ಗಿಗಾ ವಾಟ್ ವಿದ್ಯುತ್‌ಗೆ ಬೇಡಿಕೆ ಸೃಷ್ಟಿಯಾಗಿತ್ತು. ಅದರ ಹಿಂದಿನ ದಿನ, ಬೇಡಿಕೆ ಪ್ರಮಾಣ 240.1 ಗಿಗಾ ವಾಟ್ ಆಗಿತ್ತು.



ಬೆಂಗಳೂರಿನಲ್ಲಿ ತಾಪಮಾನ ಹೆಚ್ಚು ಇರುವ ಕಾರಣ ವ್ಯಕ್ತಿಯೊಬ್ಬರು ಶರ್ಟ್ ಅನ್ನು ತೆಗೆದು ಕುಳಿತಿದ್ದ ದೃಶ್ಯ ಸೋಮವಾರ ಕಂಡುಬಂತು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

### ಆರೋಗ್ಯ: ಇರಲಿ ಗಮನ

ಬೇಸಿಗೆಯಲ್ಲಿ ನಿರ್ಜಲೀಕರಣ, ಹೃದ್ರೋಗ, ಚರ್ಮರೋಗ, ಮಲಬದ್ಧತೆ, ವಾಂತಿಭೇದಿಯಂತಹ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಬಿಸಿಲಾಘಾತದಿಂದ ಸಾವುಗಳೂ ಸಂಭವಿಸುತ್ತಿವೆ. ಹೆಚ್ಚು ನೀರು ಕುಡಿಯಬೇಕು, ಬಿಸಿಲು ಹೆಚ್ಚಾಗಿರುವಾಗ ದೈಹಿಕ ಶ್ರಮದ ಕೆಲಸ ಮಾಡಬಾರದು, ನಿಂಬೆ ಷರಬತ್ತು, ಮಜ್ಜಿಗೆ ಮುಂತಾದ ಪಾನೀಯಗಳು, ಒಆರ್‌ಎಸ್ ಬಳಸಬೇಕು. ಈ ಪಾನೀಯಗಳನ್ನು ಮನೆಯಲ್ಲೇ ತಯಾರಿಸಿದರೆ ಉತ್ತಮ. ಸಾಧ್ಯವಾದಷ್ಟೂ ಬಿಸಿ ಆಹಾರ ಸೇವಿಸಬೇಕು. ಅಶಕ್ತರು, ವೃದ್ಧರು, ಮಕ್ಕಳು, ವಿವಿಧ ರೀತಿಯ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವವರು ಬಿಸಿಲಾಘಾತಕ್ಕೆ ಒಳಗಾಗುವ ಅಪಾಯ ಹೆಚ್ಚಾಗಿರುತ್ತದೆ. ತಲೆಸುತ್ತು, ಮೂರ್ಛೆ ಅಥವಾ ಅನಾರೋಗ್ಯದ ಸೂಚನೆ ಕಂಡುಬಂದರೆ ತಕ್ಷಣವೇ ವೈದ್ಯರನ್ನು ಕಾಣಬೇಕು.



ರಾಜಸ್ಥಾನದ ಬಿಕಾನೇರ್‌ನಲ್ಲಿ ಬಿಸಿಲಿನ ತೀವ್ರತೆಯಿಂದ ಬಸವಳಿದ ವ್ಯಕ್ತಿಯೊಬ್ಬರು ಮುಖಕ್ಕೆ ನೀರು ಚುಮುಕಿಸಿ ಕೊಂಡರು –ಪಿಟಿಐ ಚಿತ್ರ

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತೀಯ ಸೇನಾ ಮುಖ್ಯಸ್ಥ (ಸಿಡಿಎಸ್) ಅನಿಲ್ ಚೌಹಾಣ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ವ್ಯಂಗ್ಯವಾಡುತ್ತಿರುವ ಹಾಗೂ ಮತ್ತೊಬ್ಬ ಸೇನಾ ಅಧಿಕಾರಿ ಪಹಲ್ಗಾಮ್ ದಾಳಿಗೆ ಸಂಬಂಧಿಸಿದಂತೆ ಭಾರತವನ್ನು ಟೀಕಿಸುತ್ತಿರುವ ವಿಡಿಯೊ ತುಣುಕುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗಿದೆ. ಒಂದು ವಿಡಿಯೊದಲ್ಲಿ 75 (ಸ್ವತಂತ್ರ) ಇನ್‌ಫೆಂಟ್ರಿ ಬ್ರಿಗೇಡ್‌ನ ನೀರಜ್ ಖಜುರಿಯಾ ಅವರು ಪಹಲ್ಗಾಮ್ ದಾಳಿಯನ್ನು ಸಂಭ್ರಮಿಸುವುದನ್ನು ಪ್ರಶ್ನಿಸುವುದು ಕಾಣಿಸುತ್ತದೆ. ಮತ್ತೊಂದು ವಿಡಿಯೊದಲ್ಲಿ ಸಿಡಿಎಸ್ ಅನಿಲ್ ಚೌಹಾಣ್ ಅವರು, ಟ್ರಂಪ್ ಅವರನ್ನು ಟೀಕಿಸುತ್ತಾ, ಅಮೆರಿಕದ ನಿಜವಾದ ಆಡಳಿತಗಾರ ಎಂದರೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಂದು ಹೇಳುತ್ತಾರೆ. ಆದರೆ, ಈ ಎರಡೂ ವಿಡಿಯೊಗಳಲ್ಲಿರುವ ಮಾಹಿತಿ ಸುಳ್ಳು.

ನೀರಜ್ ಖಜುರಿಯಾ ಮಾತಾಡಿದ್ದಾರೆ ಎನ್ನಲಾದ ವಿಡಿಯೊ ತುಣುಕಿನ ಕೀಫ್ರೇಮ್ ಅನ್ನು ರಿವರ್ಸ್ ಸರ್ಚ್ ವಿಧಾನದಲ್ಲಿ ಗೂಗಲ್‌ಲೆನ್ಸ್‌ನಲ್ಲಿ ಹಾಕಿ ಹುಡುಕಾಡಿದಾಗ ಇದೇ 22ರಂದು ಖಜುರಿಯಾ ಅವರು ಆಪರೇಷನ್ ಸಿಂಧೂರದ ಬಗ್ಗೆ ಮಾತನಾಡಿದ ಮೂಲ ವಿಡಿಯೊ ಸಿಕ್ಕಿತು. ರಣ್ ವಲಯದಲ್ಲಿ ಸೇನೆಯು ವೈರಿ ರಾಷ್ಟ್ರದ ಡ್ರೋನ್ ದಾಳಿಯನ್ನು ಹೇಗೆ ಹತ್ತಿಕ್ಕಿತ್ತು ಎಂಬುದರ ಬಗ್ಗೆ ಅದರಲ್ಲಿ ಅವರು ವಿವರಣೆ ನೀಡಿದ್ದರು. ಪಹಲ್ಗಾಮ್ ದಾಳಿ ಕುರಿತಾಗಿ ಕೇಂದ್ರ ಸರ್ಕಾರದ ವಿರುದ್ಧ ಯಾವ ಹೇಳಿಕೆಯೂ ಅದರಲ್ಲಿ ಇರಲಿಲ್ಲ. ಸಿಡಿಎಸ್ ಚೌಹಾಣ್ ಅವರ ವಿಡಿಯೊದ ಬಗ್ಗೆಯೂ ಹುಡುಕಾಟ ನಡೆಸಿದಾಗ ಇದೇ ತಿಂಗಳ 18ರಂದು ಇಂಡಿಯಾ ಟುಡೇಗೆ ಚೌಹಾಣ್ ಅವರು ನೀಡಿದ ಸಂದರ್ಶನದ ವಿಡಿಯೊ ಸಿಕ್ಕಿತು. ಅದರಲ್ಲಿ ಭಾರತ ಸೇನೆಯ ಯುದ್ಧ ಸನ್ನದ್ಧತೆ ಮತ್ತು ಭವಿಷ್ಯದ ಭದ್ರತಾ ಸವಾಲುಗಳ ಬಗ್ಗೆ ಮಾತನಾಡಿದ್ದಾರೆಯೇ ವಿನಾ, ಟ್ರಂಪ್ ಅವರ ಹೆಸರು ಪ್ರಸ್ತಾಪಿಸಿರಲಿಲ್ಲ. ಅನುಮಾನ ಬಂದು ಎರಡೂ ವಿಡಿಯೊಗಳನ್ನು ಹಿಯಾ ಡೀಪ್‌ಫೇಕ್ ಧ್ವನಿ ಪತ್ತೆ ಮತ್ತು ಡೀಪ್‌ಫೇಕ್–ಒ–ಮೀಟರ್ ಟೂಲ್‌ಗಳ ಮೂಲಕ ಪರಿಶೀಲಿಸಿದಾಗ, ಅವುಗಳಲ್ಲಿರುವ ಧ್ವನಿ ಡೀಪ್‌ಫೇಕ್ ಎಂಬುದು ದೃಢಪಟ್ಟಿತು ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

## ನುಡಿ ಬೆಳಗು

### ಯಾರೂ ಅಪ್ರಯೋಜಕರಲ್ಲ



ದೀಪಾ ಹಿರೇಗುತ್ತಿ

ಒಬ್ಬ ಬಡಗಿ ಕೆಲಸ ಮಾಡುವ ಜಾಗದಲ್ಲಿ ಹಲವಾರು ಉಪಕರಣಗಳಿದ್ದವು. ಸುತ್ತಿಗೆ, ಸಾದಾ ಮೊಳೆಗಳು, ತಿರುಪು ಮೊಳೆಗಳು, ಅಂಟು, ಗರಗಸ ಎಲ್ಲವೂ ಇದ್ದವು. ಮೊಳೆಗಳ ಜಾಗದಲ್ಲಿ ಮರಗೆಲಸಕ್ಕೆ ಇತ್ತೀಚೆಗೆ ತಿರುಪು ಮೊಳೆಗಳನ್ನು (ಸ್ಕ್ರೂಗಳು) ಉಪಯೋಗಿಸಲಾಗುತ್ತಿತ್ತು. ಹಾಗಾಗಿ ಹೊಳೆಯುವ ಹೊಚ್ಚ ಹೊಸ ತಿರುಪು ಮೊಳೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು. ಸಹಜವಾಗಿಯೇ ತಿರುಪುಗಳಿಗೆ ಅಹಂಕಾರ ಬೆಳೆಯಿತು. ‘ನಾವು ಬಹಳ ಗಟ್ಟಿಗರು, ಆಧುನಿಕರು ಕೂಡ. ಹಲಗೆಯನ್ನು ಬಹಳ ಚೆನ್ನಾಗಿ ಜೋಡಿಸುತ್ತೇವೆ’ ಅಂದಿತು ಒಂದು ತಿರುಪು ಮೊಳೆ.

‘ಸರಿ, ನಾನು ಇಲ್ಲದೆ ಇದ್ದರೆ ಕೂಡ ಈ ಮರಗೆಲಸ ನಡೆಯುವುದಿಲ್ಲ’ ಅಂದಿತು ಸುತ್ತಿಗೆ ಜಂಭದಿಂದ.

‘ನಾನು ಮರವನ್ನು ಕತ್ತರಿಸಿದ ಮೇಲೆ ತಾನೇ ನಿಮ್ಮ ಕೆಲಸ’ ಅಂದಿತು ಗರಗಸ.

ಆ ಉಪಕರಣಗಳ ರಾಶಿಯ ಮಧ್ಯೆ ಒಂದು ಮೊಳೆ ಬಿದ್ದಿತ್ತು. ಸ್ವಲ್ಪ ಸೊಟ್ಟಗಾಗಿದ್ದ ಅದು ಇವುಗಳ ಮಾತು ಕೇಳುತ್ತ ಸುಮ್ಮನಿತ್ತು.

ಅದೇ ವೇಳೆಗೆ ಬಡಗಿ ಹಳೆಯದೊಂದು ಮರದ ಕುರ್ಚಿಯನ್ನು ಸರಿಪಡಿಸಲು ತೊಡಗಿದರು. ತಿರುಪು ಮೊಳೆಗಳನ್ನು ತೆಗೆದುಕೊಂಡು ಜೋಡಿಸಲು ನೋಡಿದರೆ ಅವು ಬಹಳ ದೊಡ್ಡದಾಗಿದ್ದವು. ಯಾವುದೂ ಸರಿಯಾಗಿ ಕೂರಲಿಲ್ಲ. ಅಷ್ಟು ಹೊತ್ತಿಗೆ ಈ ಬದಿಯಲ್ಲಿದ್ದ ಮೊಳೆಯ ಮೇಲೆ ಬಡಗಿಯ ಗಮನ ಹರಿಯಿತು. ಇದು ಸರಿಯಾಗಬಹುದು ಎಂದವರೇ ಮೊಳೆಯನ್ನು ಬಡಿದು ನೇರಗೊಳಿಸಿದರು. ನಂತರ ಎರಡು ತೆಳುವಾದ ಮರದ ಹಲಗೆಗಳನ್ನು ಜೋಡಿಸಿ ಆ ಮೊಳೆಯನ್ನಿಟ್ಟು ಮೆಲ್ಲಗೆ ಬಡಿದರು. ತೆಳು ಹಲಗೆಗಳನ್ನು ಗಾಸಿಗೊಳಿಸದೇ ಸರಿಯಾಗಿ ಕುಳಿತಿತು ಮೊಳೆ.

ಉಳಿದ ತಿರುಪು ಮೊಳೆಗಳು ಅಚ್ಚರಿಯಿಂದ ನೋಡಿದವು. ‘ಅರೆ! ನಾವು ಇಷ್ಟು ಸಂಖ್ಯೆಯಲ್ಲಿದ್ದರೂ ಈ ಸೊಟ್ಟ ಮೊಳೆ ಯಶಸ್ವಿಯಾಯಿತಲ್ಲ, ಅದು ಹೇಗೆ ಸಾಧ್ಯ?’ ಅಂದವು.

ಆಗ ಮೊಳೆ ಮೃದುವಾಗಿ ಹೇಳಿತು: ‘ನಾನು ಪರಿಪೂರ್ಣನಲ್ಲದೇ ಇರಬಹುದು. ಆದರೆ ನನ್ನ ಅವಶ್ಯಕತೆ ಇದ್ದಲ್ಲಿ ನಾನು ಕೆಲಸಕ್ಕೆ ಬಂದೆ ಅಷ್ಟೆ.’

ಮರಗೆಲಸ ಮಾಡುತ್ತಿದ್ದ ಬಡಗಿ ಮುಗುಳ್ನಕ್ಕರು. ಅತ್ಯಂತ ಸಣ್ಣ ವಸ್ತುಗಳೂ ಉಪಯೋಗಕ್ಕೆ ಬರುತ್ತವೆ, ಅವಶ್ಯಕತೆ ಬಿದ್ದಾಗ ಬೇಕಾಗುತ್ತವೆ ಎಂಬುದು ಅವರಿಗೆ ಮೊದಲೇ ಗೊತ್ತಿತ್ತು. ಆ ನಂತರ ಅಲ್ಲಿನ ಯಾವ ಉಪಕರಣವೂ ಜಂಬ ಪಡಲಿಲ್ಲ, ತಾನು ಅಪ್ರಯೋಜಕ ಎಂದು ಕೊರಗಲಿಲ್ಲ.

ನಾವು ಬಹಳ ಸಂದರ್ಭಗಳಲ್ಲಿ ವ್ಯಕ್ತಿಗಳು ಪರಿಪೂರ್ಣರಾಗಿದ್ದರೆ ಮಾತ್ರ ಅವರು ಉಪಯುಕ್ತರು, ಇಲ್ಲದಿದ್ದರೆ ಅಪ್ರಯೋಜಕರು ಅಂದುಕೊಂಡಿರುತ್ತೇವೆ. ಆದರೆ ವಾಸ್ತವದಲ್ಲಿ ಹಾಗೇನೂ ಇರುವುದಿಲ್ಲ. ಆಧುನಿಕರು, ಬಹಳ ಬುದ್ಧಿವಂತರು, ನಗರ ಪ್ರದೇಶದವರು, ಚೆನ್ನಾಗಿ ಇಂಗ್ಲಿಷ್ ಮಾತಾಡುವವರು, ಶ್ರೀಮಂತರು ಮಾತ್ರ ಸಮಾಜ ನಿರ್ಮಾಣದಲ್ಲಿ ಕೈಜೋಡಿಸುವವರು ಎಂದುಕೊಂಡಿರುತ್ತೇವೆ. ಆದರೆ ಈ ಸಮಾಜದ ಚಕ್ರ ಸರಾಗವಾಗಿ ತಿರುಗಲು ಪ್ರತಿಯೊಬ್ಬರೂ ಬೇಕು.

ಹೀಗಾಗಿ ಮನುಷ್ಯರ ರೂಪ, ವೇಷ ಭೂಷಣ, ಅಂತಸ್ತಿನ ಮೇಲೆ ಅವರ ಮೌಲ್ಯ ನಿರ್ಧಾರವಾಗುವುದಿಲ್ಲ. ಪ್ರತಿಯೊಬ್ಬರಿಗೂ ಅವರು ಮಾತ್ರ ಮಾಡಬಹುದಾದ ಕೆಲಸಗಳಿರುತ್ತವೆ. ಸಮಾಜಕ್ಕೆ, ಕುಟುಂಬಕ್ಕೆ ಉಪಕಾರಿಯಾಗಿ ಅವಶ್ಯಕತೆ ಬಿದ್ದಾಗ ಸ್ಪಂದಿಸುವ ಮನುಷ್ಯರ ಮಹತ್ವಕ್ಕೆ ಬೆಲೆ ಕಟ್ಟಲಾಗದು. ಹೊಳೆವ ತಿರುಪು ಮೊಳೆಗಳೇ ಮಿಂಚಿದರೂ ಸೊಟ್ಟ ಮೊಳೆ ಕುರ್ಚಿಯನ್ನು ಜೋಡಿಸಿದ ಹಾಗೆ ಎಲ್ಲರ ಮೌಲ್ಯವೂ ಅವಶ್ಯಕತೆ ಬಂದಾಗ ಅರಿವಿಗೆ ಬರುತ್ತದೆ. ಪರಸ್ಪರ ಹೋಲಿಕೆಯನ್ನು ಬಿಟ್ಟು ನಮ್ಮ ನಮ್ಮ ಕೆಲಸದ ಕಡೆಗೆ ಗಮನ ಕೊಟ್ಟರೆ ಬದುಕು ಅರ್ಥಪೂರ್ಣ. ❖

## ಗುಂಡಣ್ಣ




## ಪದಬಂಧ 6387


ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಸುತ್ತಲಿನ ಜನ (4)
3.ನಟಿಕೆ ಮುರಿಯುತ್ತಾ ನೀಡಿದ ಆಟದ ಸಾಮಾನು (3)
5.ಆರತಿ ಎತ್ತುವಾಗ ಮನ್ಮಥನ ಪತ್ನಿ ಕಾಣಿಸಿದಲ್ಲಾ! (2)
7.ಮಗನಿಗೆ ಕಲಿಸಿದ ವೇದ (3)
8.ತಿರುಗಿ ನಿಂತು ದಾಯಾದಿಯ ಬೀಳ್ಕೊಡುವಿಕೆ (3)
10.ಗುಡಾರದೊಳಗಿಟ್ಟಿರುವ ದೊಡ್ಡಹಾರೆ (3)
11.ತಮಾಷೆ ಈ ವಿಧವಾಗಿ ಬಂದಿದೆ (3)
12.ಅಡಿಗಡಿಗೆ ಕಾಣಿಸುತ್ತಿರುವ ಮಣ್ಣಿನ ಪಾತ್ರೆ (3)
14.ಕ್ಷೌರಿಕನ ಸಲಕರಣೆಗಳನ್ನಿಡುವ ಚೀಲ (3)
16.ಪತ್ರವನ್ನು ಓದಿ ತಿರುಗಿದ ಗೆಳೆಯ! (2)
18.ಕಾವು ಏರಿದಾಗಲೇ ತೋರಿದ ಡೌಲು (3)
19.ನಿಧಾನವಾಗಿ ನೋಡಿದರೆ ಕಾಣದಂತಾಗುವಿಕೆ! (4)

**ಮೇಲಿಂದ ಕೆಳಕ್ಕೆ**

1.ಈ ಪರಿ ನಡೆದಿರುವ ವಿವಾಹ (4)
2.ದನಿ ಬಂದತ್ತ ಹೆಜ್ಜೆ ಹಾಕಿದ ಆನೆ (3)
3.ಸಂಧಿಯಲ್ಲಿ ಒಂದು ವರ್ಣ ಹೊಸದಾಗಿ ಸೇರುವುದು (3)
4.ಕೆರಳಿದವನು ಎಸೆದ ಮೆಟ್ಟು! (2)
6.ಬೆಲೆಬಾಳುವ ಸಾಮಾನುಗಳನ್ನಿರಿಸುವ ಕಬ್ಬಿಣದ ಪೆಟ್ಟಿಗೆ (3)
9.ವಿಷಯ ತಿಳಿಸಿದಾಗ ಆದ ದುಃಖ (3)
10.ಗಟ್ಟಿಕುಳನೂ ಆಗಿರುವ ಸಾಹಸಿ (3)
11.ಚಿತ್ರ ನೋಡುತ್ತಲೇ ಈ ವಿಸ್ಮಯ! (3)
13.ಎಳೆತನದಲ್ಲೇ ಮೊಳೆತ ಸ್ನೇಹ (4)
14.ಹಗೆತನ ಮರೆತು ನಿರ್ಮಿಸಿದ ಕಣಜ (3)
15.ಪತಿ ಅನುಸರಿಸಿದ ವ್ರತ ನಿಯಮ (3)
17.ಮಿಟಕಲಾಡಿ ಹಿಡಿದಿರುವ ಕಸುಗಾಯಿ (2)



### 6386ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಹಗಲುಗನಸು 4.ತರತಮ 6.ಗಡಿಪಾರು 8.ಕಟ್ಟಮಸ್ತು 10.ಹರಿವಾಣ 12.ಹಲ್ಲುಪುಡಿ 13.ತರುವಾಯ 15.ಲಲಾಟಲಿಖಿತ

**ಮೇಲಿಂದ ಕೆಳಕ್ಕೆ:** 1.ಹದ್ದುಗಣ್ಣು 2.ಸುತ 3.ಭೀಮ 5.ತಥಾಸ್ತು 7.ಪಾದಾಚಾರಿ 8.ಕರಣ 9.ಮಕಮಲ್ಲು 10.ಹಗರು 11.ಮಡಿವಂತ 13.ತಕ್ರ 14.ಯಲ

## ಸುಡೊಕು 6770

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| | | 1 | | 7 | | 6 | | 2 |
| | 6 | 5 | 2 | | 9 | | | 1 |
| 2 | | | | 1 | | | 9 | |
| | 5 | | 7 | | | 8 | | |
| | | | | 8 | | 5 | | 9 |
| 8 | | 6 | | 9 | | | | |
| 6 | | | | 5 | | 9 | | 7 |
| | | 8 | | | | | 5 | |
| 5 | | 3 | | 6 | | 1 | | 8 |

### 6769 ಸುಡೊಕು

| | | | | | | | | |
|---|---|---|---|---|---|---|---|---|
| 9 | 2 | 1 | 6 | 5 | 7 | 8 | 4 | 3 |
| 8 | 5 | 7 | 3 | 4 | 9 | 6 | 2 | 1 |
| 6 | 4 | 3 | 2 | 1 | 8 | 9 | 5 | 7 |
| 1 | 3 | 2 | 5 | 9 | 4 | 7 | 8 | 6 |
| 5 | 8 | 6 | 1 | 7 | 2 | 3 | 9 | 4 |
| 7 | 9 | 4 | 8 | 3 | 6 | 2 | 1 | 5 |
| 3 | 1 | 8 | 9 | 6 | 5 | 4 | 7 | 2 |
| 2 | 7 | 5 | 4 | 8 | 3 | 1 | 6 | 9 |
| 4 | 6 | 9 | 7 | 2 | 1 | 5 | 3 | 8 |

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**28 ಏಪ್ರಿಲ್ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ:** ವೈಶಾಖ ಶುಕ್ಲ ದ್ವಾದಶಿ ಗಂ. 18-52 ನಕ್ಷತ್ರ : ಉತ್ತರಾ ಗಂ. 22-36 ಯೋಗ: ವ್ಯಾಘಾತ ಗಂ. 21-05 ಕರಣ : ಬವ ಗಂ. 06-31, ಮೇಷ ಮಾಸದ 15 ನೇ ದಿನ. ಮಳೆ ನಕ್ಷತ್ರ : ಭರಣಿ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-14 ಸೂರ್ಯಾಸ್ತ : 06-42, ಮುಸ್ಲಿಂ ದಿನಾಂಕ : 9 ಜುಲ್ಕಾದಾ, ಅದೃಷ್ಟ ಸಂಖ್ಯೆ : 5, 8

**ಮೇಷ:** ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ, ಹೊಸತನದಲ್ಲಿ ಜಯ ಕಾಣುವಿರಿ. ವಿವಿಧ ಮೂಲಗಳಿಂದ ದ್ರವ್ಯಲಾಭ ಇರುವುದು. ಪೊಲೀಸ್ ಅಧಿಕಾರಿಗಳಿಗೆ ವರ್ಗಾವಣೆ ಸಾಧ್ಯತೆ.

**ವೃಷಭ:** ವ್ಯವಹಾರದಲ್ಲಿ ಅಧಿಕ ಲಾಭ ಮಾಡುವ ಉದ್ದೇಶದಲ್ಲಿ ಕೈ ಸುಟ್ಟುಕೊಳ್ಳಬೇಡಿ. ಮೌನವಹಿಸುವ ಬದಲಾಗಿ ಮದುವೆಯ ವಿಚಾರವಾಗಿ ನಿಮ್ಮ ನಿರ್ಧಾರವನ್ನು ಹಿರಿಯರಿಗೆ ತಿಳಿಸಿ.

**ಮಿಥುನ:** ವೃತ್ತಿಯಲ್ಲಿ ಸಂಚಾರವಿರುವುದರಿಂದ ದೈಹಿಕವಾಗಿ ತೊಂದರೆಗಳಾಗಬಹುದು. ಆರ್ಥಿಕವಾಗಿ ಅಧಿಕ ಲಾಭ. ರಾಜಕೀಯ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟ ಅನಿವಾರ್ಯ.

**ಕರ್ಕಾಟಕ:** ಸತಿ–ಪತಿಯರ ನಡುವೆ ಉಡುಗೊರೆ ವಿನಿಮಯದಿಂದ ಸಂಬಂಧಗಳು ಗಟ್ಟಿಯಾಗಲಿವೆ. ಉದ್ಯೋಗಿಗಳಿಗೆ ಸ್ವಲ್ಪ ಮಟ್ಟಿಗಿನ ಅನಿಶ್ಚಿತತೆ ಕಾಡಬಹುದು.

**ಸಿಂಹ:** ಅಮೂಲ್ಯವಾದ ವಸ್ತು, ವಿಚಾರದ ನಷ್ಟವು ಮನಸ್ಸಿಗೆ ನೋವು ಉಂಟುಮಾಡಲಿದೆ. ಸಾಂಸ್ಕೃತಿಕ ರಂಗದಲ್ಲಿ ಮೇಲ್ಮಟ್ಟದ ಸಾಧನೆ ಮಾಡಬಹುದು. ಸಾಲ ಮಾಡಬೇಡಿ.

**ಕನ್ಯಾ:** ಮಾತಿನ ಚತುರತೆಯಿಂದ ಕೆಲಸಗಳು ಸರಾಗವಾಗಿ ನೆರವೇರಲಿವೆ. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಹಳೇಕಾಲದ ಸಂಸ್ಕೃತಿಯನ್ನು ಉಳಿಸಿ.

**ತುಲಾ:** ವಿಶ್ವಾಸದಲ್ಲಿ ಯಾರಿಗೂ ಹಣವನ್ನು ನೀಡಬೇಡಿ. ಪರಿಶ್ರಮದಿಂದ ಆರ್ಥಿಕ ಸ್ಥಿತಿ ಕ್ರಮೇಣ ಉತ್ತಮಗೊಳ್ಳಲಿದೆ. ವಾಣಿಜ್ಯ ವ್ಯವಹಾರಗಳು ಲಾಭವನ್ನು ತರಲಿವೆ. ಬಂಧುಗಳೊಡನೆ ವಿವಾದವನ್ನು ಮಾಡಬೇಡಿ.

**ವೃಶ್ಚಿಕ:** ಅನಗತ್ಯ ವಿಚಾರಗಳಲ್ಲಿ ಸುಮ್ಮನೆ ತಲೆಹಾಕುವುದನ್ನು ಬಿಡುವುದು ಒಳ್ಳೆಯದು. ಮಸಾಲೆ ಪದಾರ್ಥಗಳನ್ನು ಬೆಳೆಯುವವರಿಗೆ ಹಾಗೂ ಮಾರಾಟಗಾರರಿಗೆ ಉತ್ತಮ ವ್ಯಾಪಾರ ಇರಲಿದೆ.


**ಧನು:** ವೃತ್ತಿ ವಿಷಯದಲ್ಲಿ ಒಪ್ಪಂದ ಏರ್ಪಡಿಸುವ ಬಗ್ಗೆ ಅಭಿಪ್ರಾಯ ಬರಲಿದೆ. ಸೂಕ್ಷ್ಮವಾದ ಮತ್ತು ಮಹತ್ವದ ವಿಷಯವಾದ್ದರಿಂದ ಗಂಭೀರ ಚಿಂತನೆ ಅಗತ್ಯ. ಕಾರ್ಮಿಕ ವರ್ಗದವರಿಂದ ಕೆಲಸ ಕಾರ್ಯದಲ್ಲಿ ಮೋಸ ಹೋಗುವಿರಿ.

**ಮಕರ:** ದಾಂಪತ್ಯ ಜೀವನದಲ್ಲಿ ಮಧುರ ಬಾಂಧವ್ಯ ವೃದ್ಧಿ. ಬರವಣಿಗೆ ಕೆಲಸದವರು ಸಾಕ್ಷಿಗಳ ಅಧ್ಯಯನ ಸಮಂಜಸವಾಗಿ ಮಾಡುವುದು ಉತ್ತಮ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯಲಿವೆ.

**ಕುಂಭ:** ಹಿರಿಯರ ಅನುಗ್ರಹದಿಂದ ಇಷ್ಟಸಿದ್ಧಿಯಾಗಿ ಕೃಷಿ ಉತ್ಪನ್ನಗಳ ಅಥವಾ ಪದಾರ್ಥಗಳ ಕ್ರಯ-ವಿಕ್ರಯದಲ್ಲಿ ಲಾಭ ತರಲಿದೆ. ಗುರುಗಳು ನೀಡಿದ ಉಪದೇಶ ದೈನಂದಿನ ಬದುಕಿಗೆ ದಾರಿದೀಪ.

**ಮೀನ:** ಖಾದ್ಯ ತೈಲ ವ್ಯಾಪಾರಿಗಳಿಗೆ ಲಾಭದ ನಿರೀಕ್ಷೆ ಇರುವುದು. ಯತ್ನ ಕಾರ್ಯಗಳು ವಿಳಂಬವಾಗುವ ಸಂಭವವಿದೆ. ರಫ್ತು ಮಾರಾಟಗಾರರು ಹಾಗೂ ದಲ್ಲಾಳಿಗಳು ಅನುಕೂಲವನ್ನು ಪಡೆಯುವಿರಿ.

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ: | 23,897 |
| ಇಂದಿನ ಅಂತ್ಯ: | 24,092 |
| ದಿನದ ಗರಿಷ್ಠ: | 24,130 |
| ▲ | 194 |

**ಮೊಟ್ಟೆ ಧಾರಣೆ** (ಎನ್‌ಇಸಿಸಿ)

| ಬೆಂಗಳೂರು | |
|---|---|
| 100 ಕ್ಕೆ | ₹575 |
| 12 ಕ್ಕೆ | ₹78 |
| ಮೈಸೂರು: 100 ಕ್ಕೆ | ₹580 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹237 |
| ಆರ್‌ಎಸ್‌ಎಸ್-5 | ₹231 |
| ಗುಡ್ ಲಾಟ್ | ₹207 |

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ(ಸಿ.ಬಿ) | ₹258-632 |
| ದ್ವಿತಳಿ (ಬಿ.ವಿ) | ₹333-768 |

**ಮುದ್ರಮನೆ ಕಾಫಿ** (50 ಕೆಜಿಗೆ)

| | |
|---|---|
| ಎಪಿ | ₹24000 |
| ಎಸಿ | ₹14100 |
| ಆರ್‌ಪಿ | ₹18250 |
| ಆರ್‌ಸಿ | ₹9850 |

**ಮುಂಬೈ ಖಾದ್ಯ ತೈಲ** (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1615 (1630) |
| ಸೋಯಾ (ರಿಫೈನ್ಡ್) | ₹1500 (1505) |
| ಸೂರ್ಯಕಾಂತಿ (ರಿಫೈನ್ಡ್) | ₹1660 (1665) |
| ಪಾಮೋಲಿನ್ | ₹1450 (1450) |

## ಚಿಟಿಕೆ ಸುದ್ದಿ

### ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಸನ್ ಫಾರ್ಮಾ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 639 ಅಂಶ ಏರಿಕೆಯಾಗಿ, 77,303ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 194 ಅಂಶ ಹೆಚ್ಚಳವಾಗಿ, 24,092ಕ್ಕೆ ಕೊನೆಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 2.53ರಷ್ಟು ಏರಿಕೆಯಾಗಿ, ಪ್ರತೀ ಬ್ಯಾರಲ್ ಬೆಲೆ 107.9 ಡಾಲರ್ ಆಗಿದೆ.

**ಟೋಲ್ ಸಿಬ್ಬಂದಿ ಮೇಲೆ ಹೆಚ್ಚುತ್ತಿರುವ ಹಲ್ಲೆ, ದಾಳಿ ಪ್ರಕರಣಗಳ ತಡೆಗೆ ಕಾನೂನು ಅವಶ್ಯವಿದೆಯೇ?**

ಬೇಕು ಬೇಡ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

# ಭಾರತ, ನ್ಯೂಜಿಲೆಂಡ್ ಎಫ್‌ಟಿಎ ಅಂಕಿತ

## ವರ್ಷದ ಅಂತ್ಯದ ವೇಳೆಗೆ ಅನುಷ್ಠಾನಕ್ಕೆ ಬರುವ ನಿರೀಕ್ಷೆ

ನವದೆಹಲಿ (ಪಿಟಿಐ): ದ್ವಿಪಕ್ಷೀಯ ವಾಣಿಜ್ಯ ವಹಿವಾಟು ಹಾಗೂ ಹೂಡಿಕೆಯನ್ನು ಐದು ವರ್ಷಗಳಲ್ಲಿ ದುಪ್ಪಟ್ಟು ಮಾಡುವ ಗುರಿ ಹೊಂದಿರುವ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಭಾರತ ಮತ್ತು ನ್ಯೂಜಿಲೆಂಡ್ ಸೋಮವಾರ ಸಹಿ ಹಾಕಿವೆ. ಈ ಒಪ್ಪಂದವು 'ತಲೆಮಾರಿಗೆ ಒಂದು ಬಾರಿ ಮಾತ್ರ ಸಾಧ್ಯವಾಗುವಂಥದ್ದು' ಎಂದು ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೊಫರ್ ಲಕ್ಸನ್ ಬಣ್ಣಿಸಿದ್ದಾರೆ.

ಒಪ್ಪಂದಕ್ಕೆ ನ್ಯೂಜಿಲೆಂಡ್‌ನ ಸಂಸತ್ತು ಒಪ್ಪಿಗೆ ನೀಡಬೇಕಿದೆ, ಹೀಗಾಗಿ ಇದು ಈ ವರ್ಷದ ಅಂತ್ಯದ ಹೊತ್ತಿಗೆ ಅನುಷ್ಠಾನಕ್ಕೆ ಬರುವ ನಿರೀಕ್ಷೆ ಇದೆ.

ಒಪ್ಪಂದದ ಭಾಗವಾಗಿ ಭಾರತಕ್ಕೆ ನ್ಯೂಜಿಲೆಂಡ್‌ನಿಂದ 20 ಬಿಲಿಯನ್ ಅಮೆರಿಕನ್ ಡಾಲರ್ (ಇಂದಿನ ಮೌಲ್ಯದ ಅನ್ವಯ ಅಂದಾಜು ₹1.88 ಲಕ್ಷ ಕೋಟಿ) ನೇರ ಹೂಡಿಕೆ ಹರಿದುಬರಲಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹಾಗೂ ನ್ಯೂಜಿಲೆಂಡ್‌ನ ವ್ಯಾಪಾರ ಮತ್ತು ಹೂಡಿಕೆ ಸಚಿವ ಟಾಡ್ ಮೆಕ್ಲೆ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

ಭಾರತದಿಂದ ನ್ಯೂಜಿಲೆಂಡ್‌ಗೆ ರಫ್ತಾಗುವ ಎಲ್ಲ ಉತ್ಪನ್ನಗಳಿಗೆ ಈ ಒಪ್ಪಂದದ ಪರಿಣಾಮವಾಗಿ ಸುಂಕರಹಿತವಾಗಿ ಅಲ್ಲಿನ ಮಾರುಕಟ್ಟೆ ಪ್ರವೇಶಿಸಲು ಸಾಧ್ಯವಾಗಲಿದೆ. ಇದರಿಂದಾಗಿ ಭಾರತದ ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಗಣನೀಯ ಪ್ರಯೋಜನ ಆಗುವ ನಿರೀಕ್ಷೆ ಇದೆ.

**ಇಲ್ಲಿ ತೆರಿಗೆ ವಿನಾಯಿತಿ ಇಲ್ಲ**

ಭಾರತದ ಹೈನು ಉತ್ಪನ್ನಗಳ ವಲಯ, ಕೃಷಿ ಉತ್ಪನ್ನಗಳು, ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳು, ಹವಳ ಮತ್ತು ಆಭರಣ ಸೇರಿದಂತೆ ಕೆಲವು ವಲಯಗಳು ತೆರಿಗೆ ವಿನಾಯಿತಿಯ ವ್ಯಾಪ್ತಿಯಿಂದ ಹೊರಗಿವೆ.

ಕಾರ್ಮಿಕರ ಅಗತ್ಯ ಹೆಚ್ಚಿನ ಪ್ರಮಾಣದಲ್ಲಿ ಇರುವ ಭಾರತದ ಜವಳಿ, ಸಿದ್ಧ ಉಡುಪು, ಚರ್ಮೋತ್ಪನ್ನಗಳು, ಪಾದರಕ್ಷೆ, ಹವಳ ಮತ್ತು ಆಭರಣ, ಎಂಜಿನಿಯರಿಂಗ್ ಉತ್ಪನ್ನಗಳು ಹಾಗೂ ಸಂಸ್ಕರಿಸಿದ ಆಹಾರ ಉತ್ಪನ್ನಗಳು ನ್ಯೂಜಿಲೆಂಡ್‌ನ ಮಾರುಕಟ್ಟೆಯಲ್ಲಿ ಹೆಚ್ಚು ಸ್ಪರ್ಧಾತ್ಮಕ ಆಗುವ ನಿರೀಕ್ಷೆ ಕೂಡ ಇದೆ.

ಈ ಮೊದಲು ನ್ಯೂಜಿಲೆಂಡ್‌ನಲ್ಲಿ ಭಾರತದ ಸೆರಾಮಿಕ್ ಉತ್ಪನ್ನಗಳಿಗೆ, ನೆಲಹಾಸುಗಳಿಗೆ, ವಾಹನಗಳಿಗೆ ಹಾಗೂ ವಾಹನ ಬಿಡಿಭಾಗಗಳಿಗೆ ಶೇ 10ರವರೆಗೆ ತೆರಿಗೆ ಇತ್ತು.

ಭಾರತದ ತಯಾರಿಕಾ ವಲಯಕ್ಕೆ ಅಗತ್ಯವಿರುವ ಮರದ ದಿಮ್ಮಿಗಳು, ಕಿಟ್ಟಯುಕ್ತ ಕಲ್ಲಿದ್ದಲು, ಲೋಹದ ತ್ಯಾಜ್ಯ ಸುಂಕರಹಿತವಾಗಿ ನ್ಯೂಜಿಲೆಂಡ್‌ನಿಂದ ಬರಲಿವೆ. ಇದರಿಂದಾಗಿ ಭಾರತದಲ್ಲಿ ಕೆಲವು ಉತ್ಪನ್ನಗಳ ತಯಾರಿಕಾ ವೆಚ್ಚವು ಕಡಿಮೆ ಆಗಲಿದೆ ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ. ಮರ, ಕುರಿಮಾಂಸ ಕೂಡ ಸುಂಕರಹಿತವಾಗಿ ಆಮದಾಗಲಿವೆ.

ನ್ಯೂಜಿಲೆಂಡ್‌ನಿಂದ ಆಮದು ಆಗುವ ಶೇ 29.97ರಷ್ಟು ಉತ್ಪನ್ನಗಳಿಗೆ ತೆರಿಗೆ ವಿನಾಯಿತಿಯ ಸೌಲಭ್ಯ ಇರುವುದಿಲ್ಲ. ಭಾರತದ ಸೂಕ್ಷ್ಮ ವಲಯಗಳ ಹಿತ ಕಾಯುವ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ. ನ್ಯೂಜಿಲೆಂಡ್‌ನ ಶೇ 70ರಷ್ಟು ಉತ್ಪನ್ನಗಳ ವಿಚಾರದಲ್ಲಿ ಭಾರತವು ಸುಂಕ ಉದಾರೀಕರಣದ ನೀತಿ ಅನುಸರಿಸಲಿದೆ.

ಕೆಲವು ಉತ್ಪನ್ನಗಳ ಮೇಲಿನ ಸುಂಕವನ್ನು ಭಾರತವು ಹಂತ ಹಂತವಾಗಿ ತಗ್ಗಿಸಲಿದೆ. ನ್ಯೂಜಿಲೆಂಡ್‌ನ ವೈನ್, ಔಷಧ, ಪಾಲಿಮರ್, ಅಲ್ಯುಮಿನಿಯಂ, ಕಬ್ಬಿಣ ಮತ್ತು ಉಕ್ಕಿನ ವಸ್ತುಗಳಿಗೆ ತೆರಿಗೆ ಕಡಿಮೆ ಆಗಲಿದೆ. ಸೇಬು, ಕಿವಿ ಹಣ್ಣುಗಳು ಸೇರಿದಂತೆ ಕೆಲವು ಉತ್ಪನ್ನಗಳಿಗೆ ಕೋಟಾ ಆಧಾರಿತ ಸುಂಕ ವಿನಾಯಿತಿ ಸೌಲಭ್ಯ ಇರಲಿದೆ.

ಎಫ್‌ಟಿಎ ಭಾಗವಾಗಿ ಹೊಸ ಬಗೆಯ ತಾತ್ಕಾಲಿಕ ನೌಕರಿ ವೀಸಾ ಪಡೆಯುವ ಅವಕಾಶವು ಭಾರತದ ವೃತ್ತಿಪರರಿಗೆ ಸಿಗಲಿದೆ. ಆಯುಷ್ ವೈದ್ಯರು, ಯೋಗ ತರಬೇತುದಾರರು, ಬಾಣಸಿಗರು, ಸಂಗೀತ ಕಲಿಸುವವರು, ಐ.ಟಿ. ವೃತ್ತಿಪರರು, ಎಂಜಿನಿಯರಿಂಗ್, ಆರೋಗ್ಯಸೇವೆ, ಶಿಕ್ಷಣ ಮತ್ತು ನಿರ್ಮಾಣ ವಲಯದ ವೃತ್ತಿಪರರು ಇದರ ಪ್ರಯೋಜನ ಪಡೆಯಬಹುದು.



ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಮತ್ತು ನ್ಯೂಜಿಲೆಂಡ್‌ನ ವ್ಯಾಪಾರ ಮತ್ತು ಹೂಡಿಕೆ ಸಚಿವ ಟಿಡ್ ಮೆಕ್ಲೆ ಅವರು ಮುಕ್ತ ವ್ಯಾಪಾರ ಒಪ್ಪಂದಕ್ಕೆ ನವದೆಹಲಿಯಲ್ಲಿ ಸೋಮವಾರ ಸಹಿ ಹಾಕಿದರು—ಪಿಟಿಐ ಚಿತ್ರ

**ರೈತರು, ಯುವಕರಿಗೆ ಅನುಕೂಲ: ಮೋದಿ**

ಮುಕ್ತ ವ್ಯಾಪಾರ ಒಪ್ಪಂದವು ದೇಶದ ರೈತರು, ಯುವಕರು, ಮಹಿಳೆಯರು, ಎಂಎಸ್‌ಎಂಇ ವಲಯ, ಕುಶಲಕರ್ಮಿಗಳು, ನವೋದ್ಯಮಗಳು, ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

'ನ್ಯೂಜಿಲೆಂಡ್‌ನಿಂದ ಹೂಡಿಕೆಯ ಭರವಸೆ ಸಿಕ್ಕಿರುವುದು ಕೃಷಿ, ತಯಾರಿಕೆ, ಆವಿಷ್ಕಾರ ಮತ್ತು ತಂತ್ರಜ್ಞಾನ ವಲಯಗಳಲ್ಲಿ ನಮ್ಮ ಸಹಕಾರವನ್ನು ಬಲಪಡಿಸಲಿದೆ' ಎಂದಿದ್ದಾರೆ.

WAN-IFRA I COLOR QUALITY CLUB 2026-28 I V1

## ಸುದ್ದಿ 2 ನಿಮಿಷ

### ಮೈಸೂರು, ಮಂಗಳೂರಿನಲ್ಲಿ 'ಅಮೆಜಾನ್ ನೌ' ಸೇವೆ

ಬೆಂಗಳೂರು: ಮೈಸೂರು, ಮಂಗಳೂರು ಸೇರಿದಂತೆ ದೇಶದ 100 ನಗರಗಳಲ್ಲಿ ಕ್ವಿಕ್ ಕಾಮರ್ಸ್ ಸೇವೆಯನ್ನು (ವಿವಿಧ ಉತ್ಪನ್ನಗಳನ್ನು ಗ್ರಾಹಕರಿದ್ದಲ್ಲಿಗೆ ಕೆಲವೇ ನಿಮಿಷಗಳಲ್ಲಿ ತಲುಪಿಸುವ ಸೇವೆ) ವಿಸ್ತರಿಸಲಾಗುವುದು ಎಂದು ಇ-ಕಾರ್ಮರ್ಸ್ ಕಂಪನಿ ಅಮೆಜಾನ್ ಸೋಮವಾರ ತಿಳಿಸಿದೆ.

ಆದರೆ, 'ಅಮೆಜಾನ್ ನೌ' ಹೆಸರಿನ ಈ ಸೇವೆಯನ್ನು ಯಾವಾಗ ಆರಂಭಿಸಲಾಗುತ್ತದೆ ಎಂಬುದನ್ನು ಕಂಪನಿಯು ತಿಳಿಸಿಲ್ಲ.

ದೆಹಲಿ–ಎನ್‌ಸಿಆರ್, ಮುಂಬೈ ಮತ್ತು ಬೆಂಗಳೂರಿನಲ್ಲಿ ಈಗ ಕಂಪನಿಯ ಈ ಸೇವೆ ದೊರೆಯುತ್ತಿದೆ. ಕಂಪನಿಯು ₹2,800 ಕೋಟಿ ಹೂಡಿಕೆಯ ಘೋಷಣೆಯನ್ನು ಈಚೆಗೆ ಮಾಡಿದ್ದು, ಈ ಸೇವೆಗಳನ್ನು ವಿಸ್ತರಿಸುವ ಕೆಲಸ ಕೂಡ ಇದರ ಭಾಗವಾಗಿದೆ.

'ಕಂಪನಿಯ ಸೇವೆಗಳನ್ನು ತ್ವರಿತವಾಗಿ ವಿಸ್ತರಿಸಲು 1 ಸಾವಿರಕ್ಕೂ ಅಧಿಕ ಸರಕುಗಳ ದಾಸ್ತಾನು ಮಳಿಗೆಗಳನ್ನು (ಡಾರ್ಕ್ ಸ್ಟೋರ್) ತೆರೆಯಲಾಗುವುದು' ಎಂದು ಅಮೆಜಾನ್ ಇಂಡಿಯಾದ ಹಿರಿಯ ಅಧಿಕಾರಿ ಹರ್ಷ್ ಗೋಯಲ್ ತಿಳಿಸಿದ್ದಾರೆ.

ಈ ವಹಿವಾಟಿನ ವಿಸ್ತರಣೆಯಿಂದ 16 ಸಾವಿರಕ್ಕೂ ಹೆಚ್ಚು ರೈತರು ತಮ್ಮ ಉತ್ಪನ್ನಗಳನ್ನು ಕಂಪನಿಯ ವೇದಿಕೆಯ ಮೂಲಕ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಬಹುದು ಎಂದು ಹೇಳಿದ್ದಾರೆ.

amazon

### ಮುಂಗಾರಿಗೆ ಸಿದ್ಧತೆ: ಅಧಿಕಾರಿಗಳಿಗೆ ಗಡ್ಕರಿ ನಿರ್ದೇಶನ

ನವದೆಹಲಿ: ಕರ್ನಾಟಕದಲ್ಲಿ ಮುಂಬರುವ ಮಳೆಗಾಲಕ್ಕೆ ಸಂಪೂರ್ಣ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ರಾಜ್ಯದ ಹೆದ್ದಾರಿ ಜಾಲದಲ್ಲಿ ಸುರಕ್ಷತೆ ಹಾಗೂ ಮತ್ತು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಸೂಚಿಸಿದರು.

ಮಾಧ್ಯಮ ವರದಿಗಳು ಮತ್ತು ಸಾಮಾಜಿಕ ಮಾಧ್ಯಮಗಳ ಪ್ರತಿಕ್ರಿಯೆಗಳ ಆಧಾರದಲ್ಲಿ, ಕರ್ನಾಟಕದ 7,926 ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟ ಮತ್ತು ನಿರ್ವಹಣೆ ಕುರಿತು ಪರಿಶೀಲನೆಯನ್ನು ಗಡ್ಕರಿ ನಡೆಸಿದರು.







# ಚಿನ್ನದಲ್ಲಿ ಹೂಡಿಕೆಗೆ ಜನರ ಒಲವು

**ಮುಂಬೈ ಧಾರಣೆ (ಶೇಂಗಾ)**

| 27-04-2026 | |
|---|---|
| ಜಾವಾ 70/80(ಹೊಸ) | 11100-11200 |
| ಜಾವಾ 80/90(ಹೊಸ) | 10400-10500 |
| ದಪ್ಪ ಮಧ್ಯಪ್ರದೇಶ (ಹೊಸ) | 8200-8300 |
| ದಪ್ಪ ಗುಜರಾತ್ (ಹೊಸ) | 9300-9400 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1625 (1640) |
| ಒಂದು ವಾರದ ಡೆಲಿವರಿ | 1620 (1635) |
| ಪಾಮ್ ವಾರದ ಡೆಲಿವರಿ | 1448 (1448) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1550 (1560) |
| **ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,43,000 (1,50,900) |
| ಬೆಳ್ಳಿ ಕೆ.ಜಿಗೆ | 2,44,000 (2,44,600) |


ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಮುಂಬೈ (ಪಿಟಿಐ): ಹೂಡಿಕೆಯ ಉದ್ದೇಶಕ್ಕಾಗಿ ಚಿನ್ನವನ್ನು ಖರೀದಿಸುವವರ ಪ್ರಮಾಣವು ಕಳೆದ ವರ್ಷ ಚಿನ್ನದ ಒಟ್ಟು ಖರೀದಿಯ ಶೇ 40ರ ಮಟ್ಟಕ್ಕೆ ಏರಿಕೆಯಾಗಿದೆ. ಇದು ಈಚಿನ ವರ್ಷಗಳಲ್ಲಿ ಕಂಡುಬಂದಿರುವ ಅತಿದೊಡ್ಡ ಪ್ರಮಾಣ ಎಂದು ಕೇರ್‌ಎಜ್ ರೇಟಿಂಗ್ಸ್ ವರದಿ ಸೋಮವಾರ ಹೇಳಿದೆ.

37.5 ಟನ್ ಚಿನ್ನಕ್ಕಾಗುವಷ್ಟು ಹಣ ಕಳೆದ ವರ್ಷ ಚಿನ್ನದ ಇಟಿಎಫ್‌ಗಳಲ್ಲಿ ಹೂಡಿಕೆಯಾಗಿದೆ. ಇದು ದಶಕದ ಗರಿಷ್ಠ ಮಟ್ಟ. ಆಭರಣಗಳ ಖರೀದಿಗೆ ಹೋಲಿಸಿದರೆ, ಚಿನ್ನವನ್ನು ಹೂಡಿಕೆಯ ಉದ್ದೇಶಕ್ಕಾಗಿ ಖರೀದಿಸುವವರ ಪ್ರಮಾಣ ದೇಶದಲ್ಲಿ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಹೂಡಿಕೆಯಲ್ಲಿ ವೈವಿಧ್ಯ ಸಾಧಿಸುವ ಉದ್ದೇಶ, ಕೇಂದ್ರೀಯ ಬ್ಯಾಂಕ್‌ಗಳಿಂದ ಹೆಚ್ಚಿದ ಚಿನ್ನದ ಖರೀದಿ ಕಾರಣದಿಂದಾಗಿ ದೇಶದ ಒಟ್ಟು ಚಿನ್ನದ ಖರೀದಿಯಲ್ಲಿ ಹೂಡಿಕೆಯ ಉದ್ದೇಶಕ್ಕೆ ಚಿನ್ನವನ್ನು ಖರೀದಿಸುವವರ ಪ್ರಮಾಣ ಈ ವರ್ಷದಲ್ಲಿಯೂ ಶೇ 35ರಿಂದ ಶೇ 40ರ ಮಟ್ಟದಲ್ಲಿ ಇರುವ ನಿರೀಕ್ಷೆ ಇದೆ ಎಂದು ಸೋಮವಾರ ತಿಳಿಸಿದೆ.



ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಅನಿಶ್ಚಿತತೆ, ಚಿನ್ನದ ದರದಲ್ಲಿನ ಏರಿಕೆಯಿಂದ ಹೂಡಿಕೆದಾರರು ಚಿನ್ನಾಭರಣಗಳ ಖರೀದಿಸುವ ಬದಲು ಚಿನ್ನದಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದಾರೆ ಎಂದು ಕೇರ್‌ಎಜ್ ರೇಟಿಂಗ್ಸ್ ನಿರ್ದೇಶಕ ಅಖಿಲ್ ಗೋಯಲ್ ಹೇಳಿದ್ದಾರೆ.

ಜನರ ಚಿನ್ನದ ಖರೀದಿ ವಿಧಾನದಲ್ಲಿ ಬದಲಾವಣೆ ಆಗಿದೆ. ಕಳೆದ ಕ್ಯಾಲೆಂಡರ್ ವರ್ಷದಲ್ಲಿ ದೇಶದ ಒಟ್ಟು ಚಿನ್ನದ ಖರೀದಿ ಯಲ್ಲಿ ಚಿನ್ನಾಭರಣಗಳ ಖರೀದಿ ಶೇ 60ಕ್ಕಿಂತ ಕಡಿಮೆ ಆಗಿದೆ. ಇದು ದೀರ್ಘಾವಧಿಯಲ್ಲಿ ಸರಾಸರಿ ಶೇ 70ರಷ್ಟಿತ್ತು ಎಂದು ತಿಳಿಸಿದೆ.

ದೇಶದಲ್ಲಿ ಚಿನ್ನಾಭರಣಗಳ ಬೇಡಿಕೆ ಕಳೆದ ವರ್ಷ ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ಶೇ 10ರಷ್ಟು ಏರಿಕೆಯಾಗಿ, ₹4.8 ಲಕ್ಷ ಕೋಟಿಯಷ್ಟಾಗಿದೆ. ತೂಕದ ಲೆಕ್ಕದಲ್ಲಿ ಶೇ 15ರಷ್ಟು ಇಳಿದಿದೆ ಎಂದಿದೆ.

**ಬೆಳ್ಳಿ ದರ ₹3,500 ಏರಿಕೆ**

ನವದೆಹಲಿ (ಪಿಟಿಐ): ಆಭರಣ ತಯಾರಕರು ಮತ್ತು ಮಾರಾಟಗಾರರಿಂದ ಚಿನ್ನ ಮತ್ತು ಬೆಳ್ಳಿ ಖರೀದಿ ಹೆಚ್ಚಳವಾಗಿದೆ. ಹೀಗಾಗಿ, ಈ ಲೋಹಗಳ ದರದಲ್ಲಿ ಏರಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹3,500ರಷ್ಟು ಏರಿಕೆಯಾಗಿ, ₹2.50 ಲಕ್ಷದಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹200ರಷ್ಟು ಏರಿಕೆಯಾಗಿ, ₹1,56,100ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

# ಗಾಳಿಸುದ್ದಿಗೆ ಪೆಟ್ರೋಲ್, ಡೀಸೆಲ್ ಖರೀದಿ ಏರಿಕೆ

ನವದೆಹಲಿ (ಪಿಟಿಐ): ಆಧಾರವಿಲ್ಲದ ಸುದ್ದಿಗಳ ಕಾರಣದಿಂದಾಗಿ ದೇಶದ ಕೆಲವು ಭಾಗಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೇಡಿಕೆಯಲ್ಲಿ 'ಅಸಾಮಾನ್ಯ' ಹೆಚ್ಚಳ ಕಂಡುಬಂದಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ದೇಶದ ಅಗತ್ಯಕ್ಕೆ ಸಾಕಾಗುವಷ್ಟು ಇಂಧನ ದಾಸ್ತಾನು ಇದೆ ಎಂದು ಸ್ಪಷ್ಟಪಡಿಸಿದೆ.



ಇಂಧನ ಬೆಲೆಯು ಶೀಘ್ರವೇ ಹೆಚ್ಚಳ ಆಗಲಿದೆ ಎಂಬ ಗಾಳಿಸುದ್ದಿಯ ಕಾರಣದಿಂದಾಗಿ ಆಂಧ್ರಪ್ರದೇಶದ ಕೆಲವು ಪಟ್ಟಣಗಳಲ್ಲಿ ಜನ ಭೀತಿಗೆ ಬಿದ್ದು ಭಾನುವಾರ ಪೆಟ್ರೋಲ್, ಡೀಸೆಲ್ ಖರೀದಿಸಿದರು. ಇದರಿಂದಾಗಿ 400ಕ್ಕೂ ಹೆಚ್ಚು ಪೆಟ್ರೋಲ್ ಬಂಕ್‌ಗಳಲ್ಲಿ ಇಂಧನ ದಾಸ್ತಾನು ಖಾಲಿಯಾಯಿತು ಎಂದು ಕೆಲವು ವರದಿಗಳು ಹೇಳಿವೆ.

'ಕೆಲವು ಪ್ರದೇಶಗಳಲ್ಲಿ ಬೇಡಿಕೆಯು ಅಸಾಮಾನ್ಯ ಮಟ್ಟದಲ್ಲಿ ಹೆಚ್ಚಾಗಿದೆ... ಡೀಸೆಲ್ ಬೇಡಿಕೆಯು ಶೇ 30ರಿಂದ ಶೇ 33ರವರೆಗೆ ಹೆಚ್ಚಾಯಿತು. ಹೀಗಾಗಿ ಕೆಲವು ಬಂಕ್‌ಗಳು ಸಮಸ್ಯೆ ಎದುರಿಸಿದವು' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಸೋಮವಾರ ತಿಳಿಸಿದರು.

'ಆದರೆ ಇಂಧನ ಲಭ್ಯತೆಯ ವಿಚಾರದಲ್ಲಿ ಸಮಸ್ಯೆ ಇಲ್ಲ. ನಮ್ಮ ಬಳಿ ಅಗತ್ಯ ಪ್ರಮಾಣದ ದಾಸ್ತಾನು ಇದೆ' ಎಂದು ಅವರು ಸ್ಪಷ್ಟಪಡಿಸಿದರು.

ಗಾಳಿಸುದ್ದಿಗಳು ಯಾವುವು ಎಂಬ ಬಗ್ಗೆ ಅವರು ಹೆಚ್ಚಿನ ವಿವರ ಒದಗಿಸಲಿಲ್ಲ. ಆದರೆ ಪಶ್ಚಿಮ ಬಂಗಾಳದಲ್ಲಿ ಮತದಾನ ಏಪ್ರಿಲ್ 29ರಂದು ಕೊನೆಗೊಂಡ ಬಳಿಕ ಬೆಲೆ ಹೆಚ್ಚಳ ಆಗಬಹುದು ಎಂಬ ಮಾತುಗಳಿವೆ. ಇದರಿಂದಾಗಿ ಜನ ಭೀತಿಗೆ ಬಿದ್ದು ಪೆಟ್ರೋಲ್, ಡೀಸೆಲ್ ಖರೀದಿಸಿರಬಹುದು ಎನ್ನಲಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ತೀವ್ರವಾಗಿ ಏರಿಕೆ ಆಗಿದ್ದರೂ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿಲ್ಲ. ಆದರೆ, ಸರ್ಕಾರದ ಬೆಂಬಲ ಇಲ್ಲದೆ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಎಷ್ಟು ದಿನಗಳವರೆಗೆ ಬೆಲೆ ಹೆಚ್ಚಿಸದೆ ಇರಲು ಸಾಧ್ಯ ಎಂಬ ಪ್ರಶ್ನೆಯನ್ನು ಪರಿಣತರು ಎತ್ತಿದ್ದಾರೆ.

# ಈರುಳ್ಳಿ ದರ ಕುಸಿತ: ಜಮೀನಿಗೆ ಜಾನುವಾರು ನುಗ್ಗಿಸಿ ಬೆಳೆ ನಾಶ

ಪ್ರಜಾವಾಣಿ ವಾರ್ತೆ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಈರುಳ್ಳಿ ಬೆಲೆ ಕುಸಿದ ಕಾರಣ ತಾಲ್ಲೂಕಿನ ಚಿಮ್ಮನಹಳ್ಳಿಯಲ್ಲಿ ರೈತ ವರಕೇರಿ ಹಾಲಪ್ಪ, ಕಟಾವು ಮಾಡಿದ್ದ ಬೆಳೆಯನ್ನು ಸೋಮವಾರ ಜಾನುವಾರುಗಳಿಗೆ ತಿನ್ನಿಸಿದ್ದಾರೆ.

ಹಾಲಪ್ಪ ಅವರು ಒಂದು ಎಕರೆ ಜಮೀನಿನಲ್ಲಿ ₹80 ಸಾವಿರ ಖರ್ಚು ಮಾಡಿ, ಈರುಳ್ಳಿ ಬೆಳೆದಿದ್ದರು. ಉತ್ತಮ ಇಳುವರಿ ಬಂದಿತ್ತು. ಸದ್ಯ ಮಾರುಕಟ್ಟೆಯಲ್ಲಿ ಈರುಳ್ಳಿ ದರ ಕ್ವಿಂಟಲ್‌ಗೆ ₹200 ರಿಂದ ₹300 ಇದೆ.

'ಈ ಧಾರಣೆಯಲ್ಲಿ ಈರುಳ್ಳಿಯನ್ನು ಮಾರುಕಟ್ಟೆಗೆ ಒಯ್ದರೆ, ಸಾಗಣೆ ವೆಚ್ಚವೂ ಸಿಗಲ್ಲ. ಮತ್ತೆ ದೊಡ್ಡ ಸಾಲಗಾರ ಆಗಬೇಕಾಗುತ್ತದೆ. ಅದಕ್ಕೆ ಬೆಳೆ ನಾಶಪಡಿಸಲು ನಿರ್ಧರಿಸಿದೆ' ಎಂದು ಅವರು ನೊಂದು ನುಡಿದರು.

'ತಾಲ್ಲೂಕಿನಲ್ಲಿ ಬೇಸಿಗೆ ಹಂಗಾಮಿನಲ್ಲಿ 80 ಹೆಕ್ಟೇರ್ ವ್ಯಾಪ್ತಿಯಲ್ಲಿ ಈರುಳ್ಳಿ ಬೆಳೆಯಲಾಗಿದೆ. ದರ ಕುಸಿತದಿಂದ ಪಾರಾಗಲು ರೈತರು ಈರುಳ್ಳಿ ಸಂಗ್ರಹ ಘಟಕಗಳನ್ನು ನಿರ್ಮಿಸಿಕೊಳ್ಳಬೇಕು' ಎಂದು ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ವಿಜಯ್ ನಿಚ್ಚಾಪುರ ಅವರು ಪ್ರತಿಕ್ರಿಯಿಸಿದರು.

'ಸರ್ಕಾರ ₹1 ಲಕ್ಷದವರೆಗೂ ಸಹಾಯಧನ ನೀಡುತ್ತದೆ. ಸಂಗ್ರಹ ಘಟಕದಲ್ಲಿ 25 ಮೆಟ್ರಿಕ್ ಟನ್‌ವರೆಗೆ ಆರು ತಿಂಗಳವರೆಗೆ ಕೆಡದಂತೆ ಈರುಳ್ಳಿ ಸಂಗ್ರಹಿಸಬಹುದು' ಎಂದು ಹೇಳಿದ್ದಾರೆ.

**ಅಡಿಕೆ ಧಾರಣೆ**

| ಕುಮಟಾ | |
|---|---|
| ಚಿಪ್ಪು | 32569-36029 |
| ಕೋಕ | 17509-33999 |
| ಫ್ಯಾಕ್ಟರಿ | 10199-27506 |
| ಹಳೆಚಾಲಿ | 47029-49119 |
| ಹೊಸಚಾಲಿ | 42999-46909 |
| **ಪುತ್ತೂರು** | |
| ಕೋಕ | 20000-34500 |
| ಹೊಸತು | 30000-47500 |
| **ಸಾಗರ** | |
| ಬಿಳಿಗೋಟು | 15000-34255 |
| ಚಾಲಿ | 28099-43699 |
| ಕೋಕ | 10229-34699 |
| ಕೆಂಪುಗೋಟು | 28399-40010 |
| ರಾಶಿ | 36999-55899 |
| ಸಿಪ್ಪೆಗೋಟು | 11299-23369 |
| **ಶಿವಮೊಗ್ಗ** | |
| ಸರಕು | 62399-96299 |
| ಬೆಟ್ಟೆ | 51199-64799 |
| ರಾಶಿ | 44599-55799 |
| ಗೊರಬಲು | 19010-44689 |
| **ಸಿದ್ದಾಪುರ** | |
| ಬಿಳಿಗೋಟು | 26069-36389 |
| ಚಾಲಿ | 41800-48500 |
| ಕೋಕ | 23899-34319 |
| ಕೆಂಪುಗೋಟು | 26699-36919 |
| ರಾಶಿ | 49099-53599 |
| ತಟ್ಟಿಬೆಟ್ಟೆ | 36900-44099 |
| **ಶಿರಸಿ** | |
| ಬೆಟ್ಟೆ | 35189-51299 |
| ಬಿಳಿಗೋಟು | 25499-37568 |
| ಚಾಲಿ | 44049-48622 |
| ಕೆಂಪುಗೋಟು | 26699-38324 |
| ರಾಶಿ | 50109-54199 |
| **ಯಲ್ಲಾಪುರ** | |
| ಆಪಿ | 57765-65279 |
| ಬಿಳಿಗೋಟು | 17510-40899 |
| ಚಾಲಿ | 38618-48499 |
| ಕೋಕ | 16109-35499 |
| ಕೆಂಪುಗೋಟು | 18899-37499 |
| ರಾಶಿ | 50179-57699 |

# 'ಯುದ್ಧ: ಹಿಜ್ಬುಲ್ಲಾ ನಡೆ ದೇಶದ್ರೋಹ'

ಬೈರೂತ್ (ಲೆಬನಾನ್) (ಎಎಫ್‌ಪಿ/ರಾಯಿಟರ್ಸ್): 'ಇಸ್ರೇಲ್ ಜೊತೆಗಿನ ನೇರ ಮಾತುಕತೆಗಳು ಸಂಘರ್ಷವನ್ನು ಕೊನೆಗೊಳಿಸುವ ಉದ್ದೇಶವನ್ನು ಹೊಂದಿವೆ' ಎಂದು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ತಿಳಿಸಿದ್ದಾರೆ.



ಜೋಸೆಫ್ ಔನ್

'ದೇಶವನ್ನು ಯುದ್ಧಕ್ಕೆ ಎಳೆದೊಯ್ದ ಹಿಜ್ಬುಲ್ಲಾ ಬಂಡುಕೋರರ ನಡೆಯು ದೇಶದ್ರೋಹದ ಕೆಲಸವಾಗಿದೆ' ಎಂದು ಕಿಡಿಕಾರಿದ್ದಾರೆ.

'1949ರ ಕದನ ವಿರಾಮ ಒಪ್ಪಂದದಂತೆಯೇ ಇಸ್ರೇಲ್ ಜೊತೆಗಿನ ಯುದ್ಧ ಕೊನೆಗೊಳಿಸುವುದೇ ನನ್ನ ಮುಖ್ಯ ಗುರಿಯಾಗಿದೆ. ಆದರೆ, ಅವಮಾನಕರ ಒಪ್ಪಂದಕ್ಕೆ ಬರುವುದನ್ನು ನಾನು ಒಪ್ಪುವುದಿಲ್ಲ ಎಂದು ನಿಮಗೆ ಭರವಸೆ ನೀಡುತ್ತೇನೆ' ಎಂದು ಹೇಳಿದ್ದಾರೆ.

'ನಾವು ಒಪ್ಪಂದಕ್ಕೆ ಹೋದ ಕಾರಣ, ಲೆಬನಾನ್ ಅನ್ನು ಯುದ್ಧಕ್ಕೆ ಎಳೆದೊಯ್ದವರೇ (ಹಿಜ್ಬುಲ್ಲಾ) ನಮ್ಮನ್ನು ಹೊಣೆಗಾರರನ್ನಾಗಿ ಮಾಡುತ್ತಿದ್ದಾರೆ. ನಾವು ಈಗ ಏನು ಮಾಡು ತ್ತಿದ್ದೇವೆಯೋ, ಅದು ದೇಶದ್ರೋಹದ ಕೆಲಸವಲ್ಲ. ವಿದೇಶಿಯರ ಹಿತಕ್ಕಾಗಿ ದೇಶವನ್ನು ಯುದ್ಧಕ್ಕೆ ಕೊಂಡೊಯ್ದವರು ಮಾಡಿದ್ದು ದೇಶದ್ರೋಹದ ಕೆಲಸವಾಗಿದೆ' ಎಂದು ಔನ್ ತಿಳಿಸಿದ್ದಾರೆ.

**ಮಾತುಕತೆ ತಿರಸ್ಕರಿಸಿದ ಹಿಜ್ಬುಲ್ಲಾ**

ಪ್ಯಾರಿಸ್: ಇಸ್ರೇಲ್ ಜತೆ ಲೆಬನಾನ್ ಯೋಜಿಸಿದ್ದ ನೇರ ಮಾತುಕತೆಯನ್ನು ಹಿಜ್ಬುಲ್ಲಾ ನಾಯಕ ನಯೀಮ್ ಖಾಸಿಮ್ ತಿರಸ್ಕರಿಸಿದ್ದಾರೆ.

'ಇಸ್ರೇಲ್ ಜೊತೆಗಿನ ನೇರ ಮಾತುಕತೆಯನ್ನು ನಾವು ಸ್ಪಷ್ಟವಾಗಿ ತಿರಸ್ಕರಿಸುತ್ತೇವೆ. ಅಧಿಕಾರದಲ್ಲಿರುವವರು ತಮ್ಮ ಕ್ರಮಗಳಿಂದ ಲೆಬನಾನ್‌ಗೆ ಆಗಲಿ ಅಥವಾ ಅವರಿಗಾಗಲಿ ಯಾವುದೇ ಪ್ರಯೋಜನವಿಲ್ಲ ಎಂಬುದನ್ನು ತಿಳಿಯಬೇಕು' ಎಂದು ಖಾಸಿಮ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಲೆಬನಾನ್ ಅನ್ನು ಅಸ್ಥಿರತೆಯ ಸುಳಿಗೆ ತಳ್ಳುತ್ತಿರುವ ಈ ಗಂಭೀರ ಪಾಪದ ನಿರ್ಧಾರದಿಂದ ಅಧಿಕಾರಿಗಳು ಹಿಂದೆ ಸರಿಯಬೇಕು' ಎಂದು ಅವರು ಸಲಹೆ ನೀಡಿದ್ದಾರೆ.

**ಲೆಬನಾನ್ ಮೇಲೆ ಇಸ್ರೇಲ್ ದಾಳಿ**

ಪೂರ್ವ ಲೆಬನಾನ್‌ನಲ್ಲಿ ಇಸ್ರೇಲ್ ಸೇನೆಯು ಸೋಮವಾರ ದಾಳಿಯನ್ನು ಆರಂಭಿಸಿದೆ. ಇಸ್ರೇಲ್ ಮತ್ತು ಹಿಜ್ಬುಲ್ಲಾ ನಡುವೆ ಕದನವಿರಾಮ ಜಾರಿಯಲ್ಲಿದ್ದರೂ, ಇಸ್ರೇಲ್ ದಾಳಿ ನಡೆಸುತ್ತಿದೆ.

'ಲೆಬನಾನ್‌ನ ಪೂರ್ವ ಬೆಕ್ಕಾ ಕಣಿವೆ ಮತ್ತು ದಕ್ಷಿಣ ಲೆಬನಾನ್‌ನಲ್ಲಿರುವ ಹಿಜ್ಬುಲ್ಲಾ ಮೂಲಸೌಕರ್ಯಗಳ ಮೇಲೆ ದಾಳಿ ಮಾಡಲಾರಂಭಿಸಿದ್ದೇವೆ' ಎಂದು ಇಸ್ರೇಲ್ ಸೇನೆಯ ವಕ್ತಾರರೊಬ್ಬರು ತಿಳಿಸಿದ್ದಾರೆ.

ಗಡಿಭಾಗದಲ್ಲಿನ ನಬಿ ಚಿಟ್ ನಗರ ಧ್ವಂಸಗೊಂಡಿದೆ ಎಂದು ಭದ್ರತಾ ಮೂಲಗಳು ತಿಳಿಸಿವೆ.

# ಸಬ್ ರಿಜಿಸ್ಟ್ರಾರ್ ವರ್ಗಾವಣೆಗೆ ಕೌನ್ಸೆಲಿಂಗ್

ಒಂದನೇ ಪುಟದಿಂದ...

ವರ್ಗಾವಣೆಗೆ ಯಾರು ಅರ್ಹರಿದ್ದಾರೆ ಮತ್ತು ಅವರು ವರ್ಗಾವಣೆಗೊಳ್ಳಬೇಕಾಗಿರುವ ಸ್ಥಳದ ಲಭ್ಯತೆಯ ಮಾಹಿತಿಯನ್ನು ಸರ್ಕಾರವೇ ನೀಡುತ್ತದೆ. ಆ ಪ್ರಕಾರ ಅವರು ಸ್ಥಳ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಬಳಿಕ ಅವರಿಗೆ ಆಯ್ಕೆ ಮಾಡಿದ ಸ್ಥಳಕ್ಕೆ ವರ್ಗಾವಣೆ ಮಾಡಲಾಗುತ್ತದೆ.

**ಕಳಂಕಿತರಿಗೆ ಅಂಕದ ಲೆಕ್ಕ:** ಇದೇ ಮೊದಲ ಬಾರಿಗೆ ಅಧಿಕಾರಿಗಳ ಮೇಲಿನ ಪ್ರಕರಣಗಳಿಗೆ ಅನುಗುಣವಾಗಿ ಅಂಕ ನೀಡಲಾಗುತ್ತದೆ. ಕ್ರಿಮಿನಲ್ ಪ್ರಕರಣಗಳು ಅಥವಾ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿಗಳಿಗೆ ನಾಲ್ಕು ಅಂಕಗಳು, ಕಾನೂನು ಕ್ರಮಕ್ಕೆ ಒಳಗಾದವರಿಗೆ ಮೂರು ಅಂಕ, ಇಲಾಖಾ ತನಿಖೆಯಲ್ಲಿ ಶಿಕ್ಷೆಗೆ ಒಳಗಾದವರಿಗೆ ಎರಡು ಅಂಕ ಮತ್ತು ತನಿಖೆ ಪ್ರಗತಿಯಲ್ಲಿದ್ದವರಿಗೆ ಒಂದು ಅಂಕ ನೀಡಲಾಗುತ್ತದೆ. ಇದನ್ನು ಆಧರಿಸಿ, ವರ್ಗಾವಣೆಗೆ ಆಯ್ಕೆ ಮಾಡಿಕೊಳ್ಳುವ ಸ್ಥಳ ನಿಗದಿಯಾಗಲಿದೆ.

ಈ ಕುರಿತು ಪ್ರತಿಕ್ರಿಯಿಸಿದ ಕಂದಾಯ ಸಚಿವ ಕೃಷ್ಣಬೈರೇಗೌಡ, 'ಕೆಲವೇ ಅಧಿಕಾರಿಗಳು ಭಾರಿ ಮೌಲ್ಯದ ಸ್ಥಳಗಳಿಗೇ ವರ್ಗಾವಣೆ ಪಡೆದುಕೊಳ್ಳಲು ಸಾಧ್ಯ ಎಂಬ ಗ್ರಹಿಕೆ ಇದೆ. ಇನ್ನು ಮುಂದೆ ಅಧಿಕಾರಿಗಳ ಕ್ಷಮತೆಯೇ ವರ್ಗಾವಣೆಗೆ ಮಾನದಂಡವಾಗಿರುತ್ತದೆ. ಸಭ್ಯ ಅಧಿಕಾರಿಗಳಿಗೆ ಭಾರಿ ಮೌಲ್ಯದ ಸ್ಥಳಗಳಿಗೆ ವರ್ಗಾವಣೆಯಾಗುವ ಅವಕಾಶ ಕಲ್ಪಿಸುತ್ತೇವೆ' ಎಂದು ಹೇಳಿದರು.

'ಬೆಂಗಳೂರು, ಬಿಎಂಆರ್‌ಡಿಎ, ರಾಜ್ಯದ 13 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಎಂಟು ವರ್ಷಗಳಲ್ಲಿ ಐದು ವರ್ಷ ಕೆಲಸ ಮಾಡಿದವರಿಗೆ ಕಡ್ಡಾಯವಾಗಿ ವರ್ಗಾವಣೆ ಮಾಡಲಾಗುವುದು' ಎಂದರು.

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹33500-35000 |
| ದಾವಣಗೆರೆ | ₹12800-13000 |
| ತಿಪಟೂರು | ₹31000-34069 |
| ತುರುವೇಕೆರೆ | ₹33000-33000 |

# ನಿರ್ಬಂಧ ತೆರವಿಗಾಗಿ ಪಟ್ಟು

ಒಂದನೇ ಪುಟದಿಂದ...

ಈ ವೇಳೆ, ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಮಾತನಾಡಿದ ಅವರು, 'ಶಾಂತಿ ಮಾತುಕತೆ ವಿಫಲವಾಗಲು ಅಮೆರಿಕವೇ ಕಾರಣ. ಅಮೆರಿಕ ಮುಂದಿಟ್ಟ ವಿಪರೀತ ಬೇಡಿಕೆಗಳಿಂದಾಗಿ ಶಾಂತಿ ಮಾತುಕತೆಗಾಗಿ ಕರೆದಿದ್ದ ಸಭೆಯು ಯಾವುದೇ ಗುರಿ ಸಾಧಿಸಲು ವಿಫಲವಾಯಿತು' ಎಂದು ಆರೋಪಿಸಿದ್ದಾಗಿ ಇರಾನ್‌ನ ಸರ್ಕಾರಿ ಮಾಧ್ಯಮ ವರದಿ ಮಾಡಿದೆ.

**38 ಹಡಗು ವಾಪಸ್:** 'ತನ್ನ ಬಂದರುಗಳ ಮೇಲಿನ ದಿಗ್ಬಂಧನವನ್ನು ಅಮೆರಿಕ ತೆರವುಗೊಳಿಸಬೇಕು' ಎಂದು ಇರಾನ್ ಒತ್ತಾಯಿಸಿದ ಬಳಿಕ, ಶನಿವಾರ ಇಸ್ಲಾಮಾಬಾದ್‌ಗೆ ಮಾತುಕತೆಗಾಗಿ ತೆರಳಬೇಕಿದ್ದ ಉನ್ನತ ನಿಯೋಗದ ಭೇಟಿಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರದ್ದುಗೊಳಿಸಿದ್ದರು. ಅಮೆರಿಕ ಸೇನೆಯ ಸೆಂಟ್ರಲ್ ಕಮಾಂಡ್ ಸೋಮವಾರ ಮಾಹಿತಿ ನೀಡಿದಂತೆ, ಈ ದಿಗ್ಬಂಧನದ ಅವಧಿಯಲ್ಲಿ ಇದುವರೆಗೆ 38 ಹಡಗುಗಳನ್ನು ವಾಪಸ್ ಕಳುಹಿಸಲಾಗಿದೆ.

ಯುದ್ಧ ಪ್ರಾರಂಭವಾದ ಬಳಿಕ ಈವರೆಗೆ, ಇರಾನ್‌ನಲ್ಲಿ 3,375 ಜನರು, ಲೆಬನಾನ್‌ನಲ್ಲಿ 2,509, ಇಸ್ರೇಲ್‌ನಲ್ಲಿ 23 ಮತ್ತು ಕೊಲ್ಲಿ ಅರಬ್ ರಾಷ್ಟ್ರಗಳಲ್ಲಿ 12 ಜನ ಮೃತಪಟ್ಟಿದ್ದಾರೆ.

ಲೆಬನಾನ್‌ನಲ್ಲಿ ಇಸ್ರೇಲ್‌ನ 15 ಯೋಧರು, ಅಮೆರಿಕದ 13 ಮಂದಿ ಮತ್ತು ದಕ್ಷಿಣ ಲೆಬನಾನ್‌ನಲ್ಲಿ ವಿಶ್ವಸಂಸ್ಥೆಯ ಆರು ಶಾಂತಿಪಾಲಕರು ಮೃತಪಟ್ಟಿದ್ದಾರೆ.

**ಯುದ್ಧ: ಟ್ರಂಪ್ ಚರ್ಚೆ?**

ವಾಷಿಂಗ್ಟನ್: ಇರಾನ್ ವಿರುದ್ಧ ನಡೆಯುತ್ತಿರುವ ಯುದ್ಧದ ಕುರಿತಂತೆ ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿಯ ಉನ್ನತ ಅಧಿಕಾರಿಗಳು ಹಾಗೂ ಸಲಹೆಗಾರರೊಂದಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಸಭೆ ನಡೆಸುವ ಸಾಧ್ಯತೆ ಇದೆ' ಎಂದು ಅಮೆರಿಕದ ಮಾಧ್ಯಮ ಸಂಸ್ಥೆ 'ಆಕ್ಸಿಯೋಸ್' ವರದಿ ಮಾಡಿದೆ.

**ಶಾಂತಿ ಸ್ಥಾಪಿಸಲು ನೆರವು: ಪುಟಿನ್**

ಮಾಸ್ಕೊ: ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಸೋಮವಾರ ಭೇಟಿಯಾಗಿ ಚರ್ಚಿಸಿದರು.

'ಇರಾನ್ ಜನರು ತಮ್ಮ ಸಾರ್ವಭೌಮತ್ವಕ್ಕಾಗಿ ಧೈರ್ಯದಿಂದ ಹೋರಾಡುತ್ತಿದ್ದಾರೆ' ಎಂದು ಶ್ಲಾಘಿಸಿದ ಪುಟಿನ್, 'ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪಿಸಲು ಇರಾನ್ ಮತ್ತು ಈ ಪ್ರದೇಶದ ಇತರ ದೇಶಗಳ ಹಿತದೃಷ್ಟಿಯಿಂದ ರಷ್ಯಾ ಸಾಧ್ಯವಿರುವ ಎಲ್ಲ ನೆರವನ್ನೂ ನೀಡಲಿದೆ' ಎಂದು ಹೇಳಿದ್ದಾರೆ.

### ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ

# 'ಗುಂಡಿನ ದಾಳಿ ನಡೆಸಿದವ ಮಾನಸಿಕ ಅಸ್ವಸ್ಥ'

ವಾಷಿಂಗ್ಟನ್ (ರಾಯಿಟರ್ಸ್): ಶ್ವೇತಭವನದ ವರದಿಗಾರರ ವಾರ್ಷಿಕ ಭೋಜನ ಕೂಟದ ವೇಳೆ ಹೋಟೆಲ್ ಹಿಲ್ಟನ್‌ನ 'ಬಾಲ್ ರೂಂ' ಹೊರಗಡೆ ಗುಂಡಿನ ದಾಳಿ ನಡೆಸಿದ ಬಂದೂಕುಧಾರಿ ವ್ಯಕ್ತಿಯು 'ಮಾನಸಿಕ ಅಸ್ವಸ್ಥ'ನಾಗಿದ್ದ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.



ಡೊನಾಲ್ಡ್ ಟ್ರಂಪ್

ಈ ಕುರಿತಂತೆ ಸಿಬಿಎಸ್ ಸುದ್ದಿವಾಹಿನಿಯ '60 ಮಿನಿಟ್ಸ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,'ಅವನು ಕ್ರೈಸ್ತ ಧರ್ಮದ ವ್ಯಕ್ತಿಯಾಗಿದ್ದು, ಅದರಲ್ಲಿ ನಂಬಿಕೆಯಿಟ್ಟಿದ್ದನು. ನಂತರ ಆತನಲ್ಲಿ ಸಾಕಷ್ಟು ಬದಲಾವಣೆಯಾಗಿ, ಕ್ರೈಸ್ತ ವಿರೋಧಿಯಾಗಿ ಮಾರ್ಪಟ್ಟನು. ಬಹುಶಃ ಅವನು ಮಾನಸಿಕ ಅಸ್ವಸ್ಥ ವ್ಯಕ್ತಿಯಾಗಿರಬಹುದು' ಎಂದು ತಿಳಿಸಿದ್ದಾರೆ.

ಗುಂಡಿನ ದಾಳಿಯಿಂದ ಆತಂಕಕ್ಕೆ ಒಳಗಾಗಿದ್ದೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ನಾನು ಯಾವುದೇ ಚಿಂತೆಗೆ ಒಳಗಾಗಿಲ್ಲ. ನಾನು ಜೀವನವನ್ನು ಅರಿತು ಕೊಂಡಿದ್ದೇನೆ. ನಾವು ವಿಲಕ್ಷಣ ಲೋಕದಲ್ಲಿ ಬದುಕುತ್ತಿದ್ದೇವೆ' ಎಂದು ಹೇಳಿದ್ದಾರೆ.

'ನನ್ನನ್ನು ಸುರಕ್ಷಿತವಾಗಿ ಪಾರುಮಾಡಲು ಸೀಕ್ರೆಟ್ ಸರ್ವೀಸ್ ಸಿಬ್ಬಂದಿ ಕಾರ್ಯೋನ್ಮುಖರಾದ ವೇಳೆ 'ನಾನು ಏನು ನಡೆಯುತ್ತಿದೆ ಎಂಬುದನ್ನು ನೋಡಲು ಬಯಸಿದ್ದೆ. ಆ ಸಂದರ್ಭದಲ್ಲಿ ನಾವು ಕೆಟ್ಟ ಸ್ಥಿತಿಯಲ್ಲಿ ಇದ್ದೇವೆ ಎಂದು ಅರ್ಥವಾಗಿತ್ತು. ಬಾಲ್‌ರೂಂನಿಂದಲೂ ಭಿನ್ನವಾದ ಧ್ವನಿ ಕೇಳಿಸಿತು' ಎಂದು ವಿವರಿಸಿದ್ದಾರೆ.

'ಭದ್ರತಾ ಸಿಬ್ಬಂದಿ ಕೆಳಮಹಡಿಗೆ ಇಳಿಯುವಂತೆ ತಿಳಿಸಿದರು. ಆದರೆ, ನಾನು ವಿಚಲಿತನಾಗಲಿಲ್ಲ. ನನ್ನ ಸುತ್ತಲೂ ಒಳ್ಳೆಯ ಜನರಿದ್ದರು. ಒಂದು ನಿಮಿಷ ಕಾಯುವಂತೆ ತಿಳಿಸಿದೆನು. ಅಲ್ಲಿಂದ ನಿಧಾನವಾಗಿ ನಡೆದು, ನನ್ನ ಪತ್ನಿ ಜೊತೆಗೆ ಕೆಳಗಿಳಿದು ಹೊರಟೆ' ಎಂದು ಟ್ರಂಪ್ ನಡೆದ ಘಟನೆಯನ್ನು ನೆನಪಿಸಿಕೊಂಡಿದ್ದಾರೆ.

**30 ದಿನದಲ್ಲಿ ಮತ್ತೆ ಕಾರ್ಯಕ್ರಮ:** ಶ್ವೇತಭವನದ ವರದಿಗಾರರ ಒಕ್ಕೂಟದ ಜೊತೆಗೆ 30 ದಿನಗಳಲ್ಲಿ ಮತ್ತೊಂದು ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಅದು ರದ್ದಾಗುವುದನ್ನು ನೋಡಲು ಬಯಸುವುದಿಲ್ಲ. ಒಬ್ಬ ಕೆಟ್ಟ ವ್ಯಕ್ತಿಯಿಂದ ಕಾರ್ಯಕ್ರಮವು ರದ್ದಾಗಿದೆ' ಎಂದು ಟ್ರಂಪ್ ತಿಳಿಸಿದ್ದಾರೆ.

**ಏನಾಗಿತ್ತು..?:** ಗುಂಡಿನ ದಾಳಿಯ ಬಳಿಕ ಕಾರ್ಯಕ್ರಮದ ಸ್ಥಳದಿಂದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್, ಅವರ ಪತ್ನಿ ಉಷಾ ವ್ಯಾನ್ಸ್ ಮತ್ತು ಇತರ ಹಿರಿಯ ಅಧಿಕಾರಿಗಳನ್ನು ಸುರಕ್ಷಿತವಾಗಿ ಕರೆದೊಯ್ದಿದ್ದರು.

ದಾಳಿಕೋರನನ್ನು ಕ್ಯಾಲಿಫೋರ್ನಿಯಾದ 31 ವರ್ಷ ವಯಸ್ಸಿನ ಕೋಲ್ ಥಾಮಸ್ ಅಲೆನ್ ಎಂದು ಗುರುತಿಸಲಾಗಿದೆ.

**ಭದ್ರತೆ ಕುರಿತು ಶ್ವೇತಭವನ ಚರ್ಚೆ**

ವಾಷಿಂಗ್ಟನ್ (ಎಎಫ್‌ಪಿ): ಗುಂಡಿನ ದಾಳಿಯ ಬೆನ್ನಲ್ಲೇ, ಅಧ್ಯಕ್ಷರ ಭದ್ರತೆಯ ಕುರಿತಂತೆ ಶ್ವೇತಭವನದ ಸಿಬ್ಬಂದಿ ಮುಖ್ಯಸ್ಥೆ ಸುಸಿ ವೈಲ್ಸ್ ಅವರು ಈ ವಾರ ಸಭೆ ನಡೆಸಲು ನಿರ್ಧರಿಸಿದ್ದಾರೆ ಎಂದು ಶ್ವೇತಭವನದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಟ್ರಂಪ್ ಸೇರಿದಂತೆ ಅತ್ಯುನ್ನತ ನಾಯಕರು ಭಾಗವಹಿಸುವ ಸಮಾರಂಭಗಳಲ್ಲಿ ಅನುಸರಿಸಬೇಕಾದ ಶಿಷ್ಟಾಚಾರ ಕುರಿತಂತೆ ಅಮೆರಿಕದ ಸೀಕ್ರೆಟ್ ಸರ್ವೀಸ್ ಹಾಗೂ ಆಂತರಿಕ ಭದ್ರತಾ ವಿಭಾಗದ ಅಧಿಕಾರಿಗಳ ಜೊತೆಗೆ ಸಭೆ ನಡೆಸಲಿದ್ದಾರೆ' ಎಂದು ಅವರು ಹೇಳಿದ್ದಾರೆ.

## ಮೆಕ್ಸಿಕೊದಿಂದ ಬಂದ ಅಣ್ಣ


ಧನಂಜಯ

ಶಂಕರ್ ಗುರು ನಿರ್ದೇಶನದ 'ಅಣ್ಣ ಫ್ರಂ ಮೆಕ್ಸಿಕೊ' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, ಕೈಯಲ್ಲಿ ಮತ್ತೆ ಮಚ್ಚು ಹಿಡಿದು ಬಂದಿದ್ದಾರೆ ಧನಂಜಯ.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಟೀಸರ್ ಬಿಡುಗಡೆಗೊಳಿಸಿದರು. ಲಕ್ಷ್ಮೀ ಹೆಬ್ಬಾಳ್ಕರ್ ತಮ್ಮ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಲಕ್ಷ್ಮೀ ಹೆಬ್ಬಾಳ್ಕರ್, 'ಟೀಸರ್ ಹೊಸತನದಿಂದ ಕೂಡಿದೆ. ಧನಂಜಯ ಅವರ ನಟನೆ ಚೆನ್ನಾಗಿದೆ. ಟೀಸರ್ ನೋಡಿದರೆ ಸಿನಿಮಾ ಹೇಗಿರಲಿದೆ ಎಂಬ ಕುತೂಹಲ ಹುಟ್ಟುತ್ತದೆ. ನಾವು ಚಿತ್ರರಂಗಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಉದ್ದೇಶದಿಂದ ಚಿತ್ರ ನಿರ್ಮಾಣಕ್ಕಿಳಿದಿದ್ದೇವೆ. ಕನ್ನಡ ಚಲನಚಿತ್ರಗಳನ್ನು ನೋಡಿಕೊಂಡು ಬೆಳೆದಿದ್ದೇವೆ. ಕನ್ನಡ ಚಿತ್ರರಂಗ ಶ್ರೀಮಂತವಾಗಿದೆ. ಈ ಚಿತ್ರದ ಕಥೆ ಇಷ್ಟವಾಯಿತು' ಎಂದಿದ್ದಾರೆ.

ಧನಂಜಯ ಮಾತನಾಡಿ, 'ನಾನು ನಟಿಸಿದ್ದ 'ಹೊಯ್ಸಳ' ಸಿನಿಮಾದ ಚಿತ್ರೀಕರಣ ಬೆಳಗಾವಿಯಲ್ಲಿ ನಡೆಯುವಾಗ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಮನೆಗೆ ಹೋಗಿ ಊಟ ಮಾಡಿದ್ದೆವು. ಆ ಸಂದರ್ಭದಲ್ಲಿ ತಮ್ಮ ಸಹೋದರ ಚನ್ನರಾಜ ಅವರ ಸಿನಿಮಾ ನಿರ್ಮಾಣದ ಆಸಕ್ತಿಯನ್ನು ಹೇಳಿದ್ದರು. ಆ ಬಳಿಕ ಈ ಸಿನಿಮಾದ ಪಯಣ ಆರಂಭವಾಯಿತು. ಚನ್ನರಾಜ ಅವರಿಗೆ ಸಿನಿಮಾ ಆಸಕ್ತಿ ಬಹಳಷ್ಟಿದೆ. ನನ್ನನ್ನು ಸಖತ್ ಸ್ಟೈಲಿಶ್ ಆಗಿ, ಆ್ಯಕ್ಷನ್ ಪ್ರಧಾನ ಸಿನಿಮಾದಲ್ಲಿ ತೋರಿಸಬೇಕು ಎಂದುಕೊಂಡಿದ್ದರು. 'ಅಣ್ಣ ಫ್ರಂ ಮೆಕ್ಸಿಕೊ' ಸಿನಿಮಾದಲ್ಲಿ ಆ್ಯಕ್ಷನ್ ಜೊತೆಗೆ ಕುಟುಂಬ ಸಹಿತ ನೋಡುವ ಕಥೆ ಇದೆ' ಎಂದರು.

ಚಿತ್ರದಲ್ಲಿ ನಾಯಕಿಯಾಗಿ ರೀಷ್ಮಾ ನಾಣಯ್ಯ ನಟಿಸಿದ್ದು, ರಂಗಾಯಣ ರಘು, ನಾಗಭೂಷಣ, ಪೂರ್ಣಚಂದ್ರ ಮೈಸೂರು ಮುಖ್ಯ ಪಾತ್ರಗಳಲ್ಲಿದ್ದಾರೆ. ವಾಸುಕಿ ವೈಭವ್ ಸಂಗೀತ, ಅಜಯ್ ಸಂಕಲನ, ಗುಣ ಕಲಾ ನಿರ್ದೇಶನ ಚಿತ್ರಕ್ಕಿದೆ. ಐರಾ ಫಿಲ್ಮ್ಸ್ ಹಾಗೂ ರಾಯಲ ಸ್ಟುಡಿಯೋಸ್ ಬ್ಯಾನರ್ ಅಡಿ ಚಿತ್ರ ನಿರ್ಮಾಣವಾಗಿದೆ. ಚಿತ್ರವನ್ನು ಜಿ ಸ್ಟುಡಿಯೊಸ್ ಬಿಡುಗಡೆ ಮಾಡಲಿದೆ.

## ಜೂನ್ 5ಕ್ಕೆ 'ಬಂದರ್'


ಬಾಬಿ ಡಿಯೋಲ್

**ಬಾಬಿ ಡಿಯೋಲ್** ಹಾಗೂ ರಾಜ್ ಬಿ.ಶೆಟ್ಟಿ ನಟನೆಯ 'ಬಂದರ್' ಸಿನಿಮಾ ವಿಶ್ವದಾದ್ಯಂತ ಜೂನ್ 5ಕ್ಕೆ ತೆರೆಕಾಣಲಿದೆ ಎಂದು ನಿರ್ಮಾಣ ಸಂಸ್ಥೆಯು ತಿಳಿಸಿದೆ.

ಅನುರಾಗ್ ಕಶ್ಯಪ್ ನಿರ್ದೇಶನದ ಈ ಸಿನಿಮಾದ ಕಥೆಯನ್ನು ಸುದೀಪ್ ಶರ್ಮಾ ಹಾಗೂ ಅಭಿಷೇಕ್ ಬ್ಯಾನರ್ಜಿ ಬರೆದಿದ್ದಾರೆ. 2025ರ ಸೆಪ್ಟೆಂಬರ್‌ನಲ್ಲಿ ಟೊರಾಂಟೊ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಮೊದಲ ಪ್ರದರ್ಶನ ಕಂಡಿದ್ದ ಈ ಸಿನಿಮಾವು ನೈಜ ಘಟನೆ ಆಧರಿಸಿದೆ. ಸಿನಿಮಾ ನಟನೊಬ್ಬನ ವಿರುದ್ಧ ಅತ್ಯಾಚಾರದ ಆರೋಪ ಹಾಗೂ ಕಾನೂನಿನ ವ್ಯವಸ್ಥೆಯ ಸುತ್ತ ಚಿತ್ರದ ಕಥೆ ಇದೆ. ಈಗಾಗಲೇ ಮಲಯಾಳ ಸಿನಿಮಾಗಳಲ್ಲಿ ನಟಿಸಿರುವ ರಾಜ್ ಬಿ.ಶೆಟ್ಟಿ, ಈ ಸಿನಿಮಾ ಮೂಲಕ ಬಾಲಿವುಡ್‌ಗೆ ಮೊದಲ ಹೆಜ್ಜೆ ಇಟ್ಟಿದ್ದಾರೆ.

ನಿಖಿಲ್ ದ್ವಿವೇದಿ ನಿರ್ಮಾಣ ಮಾಡಿರುವ ಈ ಸಿನಿಮಾಗೆ ಜೀ ಸ್ಟುಡಿಯೋಸ್ ಸಹಯೋಗ ನೀಡಿದೆ. ಸಾನ್ಯ ಮಲ್ಹೋತ್ರ, ಜಿತೇಂದ್ರ ಜೋಶಿ, ಸಪ್ನ ಪಬ್ಬಿ, ಇಂದ್ರಜಿತ್ ಸುಕುಮಾರನ್, ರಿದ್ಧಿ ಸೇನ್, ಸಬಾ ಆಜಾದ್, ನಾಗೇಶ್ ಭೋಸ್ಲೆ ಚಿತ್ರದ ತಾರಾ-ಬಳಗದಲ್ಲಿದ್ದಾರೆ. ಈ ಸಿನಿಮಾ ಜೊತೆಗೆ ಶಿವ್ ರವೈಲ್ ನಿರ್ದೇಶನದ 'ಆಲ್ಫಾ' ಹಾಗೂ ವಿಜಯ್ ನಟನೆಯ 'ಜನನಾಯಗನ್' ನಲ್ಲೂ ಬಾಬಿ ಡಿಯೋಲ್ ನಟಿಸಿದ್ದಾರೆ.

## 'ಉನ್ಮಾದಂ' ಸಿನಿಮಾ ಆ.7ಕ್ಕೆ ತೆರೆಗೆ


ಉನ್ಮಾದಂ

**ಕುಂಚಾಕೊ ಬೊಬನ್** ಹಾಗೂ ಲಿಜಿಮೋಳ್ ಜೋಸ್ ಮುಖ್ಯಭೂಮಿಕೆಯಲ್ಲಿರುವ 'ಉನ್ಮಾದಂ' ಮಲಯಾಳ ಸಿನಿಮಾ ಆಗಸ್ಟ್ 7ರಂದು ತೆರೆಕಾಣಲಿದೆ.

ಸೈಕಾಲಜಿಕಲ್ ಥ್ರಿಲ್ಲರ್ ಜಾನರ್‌ನ ಈ ಸಿನಿಮಾವನ್ನು ಟಿ–ಸೀರೀಸ್ ಹಾಗೂ ಪ್ಯಾನೊರಮಾ ಸ್ಟುಡಿಯೋಸ್ ಪ್ರಸ್ತುತಪಡಿಸುತ್ತಿದೆ. ಕಿರಣ್ ದಾಸ್ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದ ಕಥೆ ಓರ್ವ ಪೊಲೀಸ್ ಕಾನ್‌ಸ್ಟೆಬಲ್ ಜೀವನದ ಮೇಲಿದೆ. ದೀರ್ಘಕಾಲದಿಂದ ಪರಿಹರಿಸಲಾಗದೇ ಇರುವ ಪ್ರಕರಣವೊಂದನ್ನು ಈ ಕಾನ್‌ಸ್ಟೆಬಲ್ ಕೈಗೆತ್ತಿಕೊಂಡಾಗ ನಡೆಯುವಂತಹ ಘಟನೆಗಳೇ ಸಿನಿಮಾದ ಕಥಾಹಂದರ.

ಕುಮಾರ್ ಮಂಗತ್ ಪಾಠಕ್ ಹಾಗೂ ಅಭಿಷೇಕ್ ಪಾಠಕ್ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಶಾಹಿ ಕಬೀರ್ ಸಿನಿಮಾದ ಕಥೆ ಬರೆದಿದ್ದಾರೆ.

## ಅರ್ಷ್ ಕೈಹಿಡಿದ ಮೆಹ್ರೀನ್


ಅರ್ಷ್, ಮೆಹ್ರೀನ್ ಪಿರ್ಜಾದಾ

**ತೆಲುಗು** ಹಾಗೂ ತಮಿಳು ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ನಟಿ ಮೆಹ್ರೀನ್ ಪಿರ್ಜಾದಾ ಅವರ ಮದುವೆ ಅರ್ಷ್ ಔಲಾಖ್ ಎಂಬುವವರೊಂದಿಗೆ ಭಾನುವಾರ (ಏ.26) ಹಿಮಾಚಲ ಪ್ರದೇಶದಲ್ಲಿ ನೆರವೇರಿತು.

ಮದುವೆಯಲ್ಲಿ ಕುಟುಂಬದ ಸದಸ್ಯರಷ್ಟೇ ಭಾಗವಹಿಸಿದ್ದರು. ಈ ಕುರಿತು ತಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ಮೆಹ್ರೀನ್ ಮಾಹಿತಿ ಹಂಚಿಕೊಂಡಿದ್ದಾರೆ. 2016ರಲ್ಲಿ ತೆಲುಗಿನ ರೊಮ್ಯಾಂಟಿಕ್ ಕಾಮಿಡಿ ಥ್ರಿಲ್ಲರ್ 'ಕೃಷ್ಣ ಗಾಡಿ ವೀರ ಪ್ರೇಮಗಾಥಾ' ಎಂಬ ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದ ಮೆಹ್ರೀನ್, 'ಎಫ್2–ಫನ್ ಆ್ಯಂಡ್ ಫ್ರಸ್ಟ್ರೇಷನ್', 'ಮಹಾನುಭಾವುಡು', 'ರಾಜಾ ದಿ ಗ್ರೇಟ್' ಮುಂತಾದ ಸಿನಿಮಾಗಳಲ್ಲಿ ನಟಿಸಿದ್ದಾರೆ. ಈ ಹಿಂದೆ 2021ರಲ್ಲಿ ಕಾಂಗ್ರೆಸ್‌ನ ಯುವ ನಾಯಕ ಭವ್ಯ ಬಿಷ್ಣೋಯ್ ಎಂಬುವವರ ಜೊತೆ ಮೆಹ್ರೀನ್ ನಿಶ್ಚಿತಾರ್ಥ ಆಗಿತ್ತು. ಕೆಲ ತಿಂಗಳಲ್ಲಿ ಈ ಸಂಬಂಧ ಮುರಿದುಬಿದ್ದಿತ್ತು.

ಶಿವರಾಜ್‌ಕುಮಾರ್ ಅವರ 'ನೀ ಸಿಗೋವರೆಗೂ' ಸಿನಿಮಾಗೂ ನಾಯಕಿಯಾಗಿ ಮೆಹ್ರೀನ್ ಆಯ್ಕೆಯಾಗಿದ್ದರು. 2021ರಲ್ಲಿ ಬೆಂಗಳೂರಿನಲ್ಲಿ ನಡೆದ ಮುಹೂರ್ತ ಕಾರ್ಯಕ್ರಮದಲ್ಲೂ ಮೆಹ್ರೀನ್ ಭಾಗಿಯಾಗಿದ್ದರು. ಈ ಸಿನಿಮಾ ಸದ್ಯಕ್ಕೆ ಸ್ಥಗಿತಗೊಂಡಿದ್ದು, ಈ ಬಗ್ಗೆ ಚಿತ್ರತಂಡ ಯಾವುದೇ ಮಾಹಿತಿಯನ್ನು ಹಂಚಿಕೊಂಡಿಲ್ಲ.

# 7 ಸಂಸದರ ಬಿಜೆಪಿ ವಿಲೀನಕ್ಕೆ ಒಪ್ಪಿಗೆ

### ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಸಮ್ಮತಿ
### ರಾಜ್ಯಸಭೆಯಲ್ಲಿ 113ಕ್ಕೇರಿದ ಬಿಜೆಪಿ ಬಲ

ಪ್ರಜಾವಾಣಿ ವಾರ್ತೆ/ ಪಿಟಿಐ

**ನವದೆಹಲಿ:** ರಾಘವ್ ಚಡ್ಡಾ ಸೇರಿದಂತೆ ಎಎಪಿಯ ಏಳು ರಾಜ್ಯಸಭಾ ಸದಸ್ಯರ ಬಿಜೆಪಿ ವಿಲೀನಕ್ಕೆ ಉಪರಾಷ್ಟ್ರಪತಿ ಮತ್ತು ರಾಜ್ಯಸಭಾ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರು ಸೋಮವಾರ ಹಸಿರು ನಿಶಾನೆ ತೋರಿದ್ದಾರೆ.

ಇದರಿಂದ, ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿ ಸದಸ್ಯರ ಬಲ ಮೇಲ್ಮನೆಯಲ್ಲಿ ಮೂರಕ್ಕೆ ಕುಸಿದಿದೆ. ಮತ್ತೊಂದೆಡೆ ಬಿಜೆಪಿ ಬಲ 113ಕ್ಕೆ ಏರಿದೆ.

ಚಡ್ಡಾ ಅವರಲ್ಲದೆ ಅಶೋಕ್ ಮಿತ್ತಲ್, ಹರಭಜನ್ ಸಿಂಗ್, ಸಂದೀಪ್ ಪಾಠಕ್, ವಿಕ್ರಮ್‌ಜಿತ್ ಸಾಹ್ನಿ, ಸ್ವಾತಿ ಮಾಲಿವಾಲ್, ರಾಜಿಂದರ್ ಗುಪ್ತಾ ಬಿಜೆಪಿಯೊಂದಿಗೆ ವಿಲೀನಗೊಂಡ ಸದಸ್ಯರಾಗಿದ್ದಾರೆ. ರಾಜ್ಯಸಭಾ ವೆಬ್‌ಸೈಟ್‌ನಲ್ಲಿ ಈ ಏಳು ಸಂಸದರನ್ನು ಬಿಜೆಪಿ ಸದಸ್ಯರ ಪಟ್ಟಿಯಲ್ಲಿ ತೋರಿಸಲಾಗಿದೆ.

ವಿಲೀನದ ಬಳಿಕ ತಮ್ಮನ್ನು ಬಿಜೆಪಿ ಸಂಸದರು ಎಂದು ಪರಿಗಣಿಸುವಂತೆ ಏಳೂ ಸಂಸದರು ರಾಜ್ಯಸಭಾ ಸಭಾಪತಿಗೆ ಮನವಿ ಸಲ್ಲಿಸಿದ್ದರು. ಆ ಅರ್ಜಿ ಅಂಗೀಕಾರವಾಗಿದೆ ಎಂದು ಮೂಲಗಳು ತಿಳಿಸಿವೆ.

**ಸಂಸದರ ಸ್ವಾಗತಿಸಿದ ರಿಜಿಜು:** ಏಳು ಸಂಸದರನ್ನು ಎನ್‌ಡಿಎ ಮೈತ್ರಿಕೂಟಕ್ಕೆ ಸ್ವಾಗತಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ಈ ಸಂಸದರು ತುಕ್ಡೆ–ತುಕ್ಡೆ 'ಇಂಡಿಯಾ' ಮೈತ್ರಿಕೂಟಕ್ಕೆ ವಿದಾಯ ಹೇಳಿದ್ದಾರೆ ಎಂದರು.

'ಈ ಏಳೂ ಸಂಸದರ ಬಿಜೆಪಿ ವಿಲೀನಕ್ಕೆ ರಾಜ್ಯಸಭಾ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರು ಸಮ್ಮತಿಸಿದ್ದಾರೆ. ಹೀಗಾಗಿ ಅವರೆಲ್ಲ ಈಗ ಬಿಜೆಪಿ ಸಂಸದೀಯ ಪಕ್ಷದ ಸದಸ್ಯರಾಗಿದ್ದಾರೆ' ಎಂದು ರಿಜಿಜು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ನಾನು ಬಹಳ ಸಮಯದಿಂದ ಈ ಸದಸ್ಯರನ್ನು ಗಮನಿಸಿದ್ದೇನೆ. ಅವರು ಯಾವುದೇ ನಿಂದನೀಯ ಭಾಷೆಗಳನ್ನು ಬಳಸಿಲ್ಲ. ಅಶಿಸ್ತು ವ್ಯಕ್ತಪಡಿಸಿಲ್ಲ' ಎಂದು ಹೇಳಿದ್ದಾರೆ.

ಈ ಸಂಸದರ ಬಿಜೆಪಿ ವಿಲೀನವನ್ನು ಎಎಪಿ 'ಅಸಾಂವಿಧಾನಿಕ' ಎಂದು ಕರೆದಿತ್ತು. ಅಲ್ಲದೆ ಪಕ್ಷಾಂತರದ ಆರೋಪದ ಮೇಲೆ ಈ ಏಳೂ ಸಂಸದರ ಸದಸ್ಯತ್ವವನ್ನು ಅನರ್ಹಗೊಳಿಸುವಂತೆ ಎಎಪಿ ರಾಜ್ಯಸಭಾ ಸಭಾಪತಿಗೆ ಅರ್ಜಿ ಸಲ್ಲಿಸಿತ್ತು.

ರಾಜ್ಯಸಭೆಯಲ್ಲಿ ಪಂಜಾಬ್ ಅನ್ನು ಪ್ರತಿನಿಧಿಸುವ ಒಟ್ಟು ಏಳು ಸಂಸದರ ಪೈಕಿ ಆರು ಮಂದಿ ಈಗ ಬಿಜೆಪಿಯಲ್ಲಿದ್ದಾರೆ. ಒಬ್ಬರು ಮಾತ್ರ ಎಎಪಿಯಲ್ಲಿ ಉಳಿದಿದ್ದಾರೆ. ದೆಹಲಿಯ ಒಟ್ಟು ಮೂವರು ಸಂಸದರಲ್ಲಿ ಈಗ ಎಎಪಿಯಲ್ಲಿ ಇಬ್ಬರು ಮತ್ತು ಬಿಜೆಪಿಯಲ್ಲಿ (ಸ್ವಾತಿ ಮಾಲಿವಾಲ್) ಒಬ್ಬರಿದ್ದಾರೆ.

**'ಲೋಟಸ್ ಲೂಟಸ್ ಆಗಿದೆ':** ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ಸಭಾಪತಿ ನಿರ್ಧಾರವೇನೂ ಆಶ್ಚರ್ಯ ತರಿಸಿಲ್ಲ. ಆದರೆ ಇಷ್ಟು ತಡ ಮಾಡಿದ್ದು ಆಶ್ಚರ್ಯಕರ. ಕೆಲ ಸಂಸದರ ಮೇಲೆ ಜಾರಿ ನಿರ್ದೇಶನಾಲಯ ದಾಳಿ ಮಾಡುತ್ತಿತ್ತು, ಅದು ನಿಲ್ಲುತ್ತದೆ ಎಂದು ಹೇಳಬಹುದು. ಅಂದರೆ ಈ ಬೆಳವಣಿಗೆಗಳಿಗೂ ಮುನ್ನ ಸರ್ಜಿಕಲ್ ಸ್ಟ್ರೈಕ್ ಮತ್ತು ಪೂರ್ವಭಾವಿ ಕ್ರಮ ಎರಡೂ ಆಗಿವೆ. ಲೋಟಸ್ (ಕಮಲವು) ಲೂಟಸ್ (ಲೂಟಿಕೋರ) ಆಗಿ ಪರಿವರ್ತನೆಯಾಗಿದೆ' ಎಂದು ದೂರಿದ್ದಾರೆ.

**ರಾಜ್ಯಸಭೆಯಲ್ಲಿ ಬಲಾಬಲ:** 245 ಸದಸ್ಯ ಬಲದ ರಾಜ್ಯಸಭೆಯಲ್ಲಿ ಎನ್‌ಡಿಎ ಮೈತ್ರಿ ಕೂಟ 149 ಸದಸ್ಯರನ್ನು (ಬಿಜೆಪಿ ಸೇರಿದ 7 ಸದಸ್ಯರನ್ನು ಸೇರಿ) ಹೊಂದಿದ್ದರೆ, 'ಇಂಡಿಯಾ' ಮೈತ್ರಿಕೂಟ 75 ಸದಸ್ಯರನ್ನು ಹೊಂದಿದೆ. ಮೂರನೇ ಎರಡರಷ್ಟು ಸ್ಥಾನದತ್ತ (163) ಸಾಗಲು ಎನ್‌ಡಿಎಗೆ 14 ಸ್ಥಾನಗಳ ಕೊರತೆಯಿದೆ. ಜೂನ್ ಮತ್ತು ಜುಲೈನಲ್ಲಿ ತೆರವಾಗುವ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಇನ್ನೂ ಐದು ಸ್ಥಾನಗಳನ್ನು ಹೆಚ್ಚಿಸಿಕೊಳ್ಳುವ ನಿರೀಕ್ಷೆಯನ್ನು ಎನ್‌ಡಿಎ ಹೊಂದಿದೆ.

### ಎಎಪಿಯಲ್ಲಿ ವಿಷಮಯ ವಾತಾವರಣ: ರಾಘವ್ ಚಡ್ಡಾ



**ನವದೆಹಲಿ (ಪಿಟಿಐ):** 'ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿ ಪಕ್ಷದಲ್ಲಿ ಕೆಲಸದ ವಾತಾವರಣ ವಿಷಕಾರಿಯಾಗಿದ್ದು, ನಾಯಕರನ್ನು ಕೆಲಸ ಮಾಡದಂತೆ ತಡೆಯಲಾಗಿದೆ' ಎಂದು ಜರಿದಿರುವ ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ, 'ಒಬ್ಬರು ಅಥವಾ ಇಬ್ಬರು ವ್ಯಕ್ತಿಗಳು ತಪ್ಪು ಮಾಡಿರಬಹುದು, ಆದರೆ ಏಳೂ ಜನರು ತಪ್ಪು ಮಾಡಲು ಸಾಧ್ಯವೇ' ಎಂದು ತಮ್ಮ ಪಕ್ಷಾಂತರ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ಹಂಚಿಕೊಂಡಿರುವ ಅವರು, 'ಚಾರ್ಟೆಡ್ ಅಕೌಂಟೆಂಟ್ ಆಗಿ ಯಶಸ್ವಿ ವೃತ್ತಿ ಜೀವನ ನಡೆಸುತ್ತಿದ್ದ ನಾನು ರಾಜಕೀಯ ಪ್ರವೇಶಿಸಲು ವೃತ್ತಿ ಜೀವನ ತೊರೆದು ಎಎಪಿಯ ಸ್ಥಾಪಕ ಸದಸ್ಯನಾದೆ. ಪಕ್ಷ ನಿರ್ಮಾಣಕ್ಕೆ ತಾರುಣ್ಯದ 15 ವರ್ಷಗಳನ್ನು ಸವೆಸಿದ್ದೇನೆ. ವೃತ್ತಿಜೀವನ ರೂಪಿಸಿಕೊಳ್ಳಲಿಕ್ಕಾಗಿ ರಾಜಕೀಯಕ್ಕೆ ಬಂದವನು ನಾನಲ್ಲ' ಎಂದು ಹೇಳಿದ್ದಾರೆ.

'ಎಎಪಿಯು ಕೆಲ ಭ್ರಷ್ಟರು ಮತ್ತು ರಾಜಿ ಮಾಡಿಕೊಂಡ ಜನರ ಕೈಯಲ್ಲಿ ಸಿಲುಕಿದ್ದು, ದೇಶಕ್ಕಾಗಿ ಕೆಲಸ ಮಾಡುತ್ತಿಲ್ಲ. ಬದಲಿಗೆ ಅಲ್ಲಿರುವವರು ತಮ್ಮ ಸ್ವಂತ ಲಾಭಕ್ಕಾಗಿ ಕೆಲಸ ಮಾಡುತ್ತಿದ್ದಾರೆ' ಎಂದು ಚಡ್ಡಾ ಆರೋಪಿಸಿದ್ದಾರೆ.

'ರಾಜಕೀಯ ತೊರೆಯುವ ಅಥವಾ ಅದೇ ಪಕ್ಷದಲ್ಲಿ ಉಳಿದು ಸಮಸ್ಯೆಗಳನ್ನು ಸರಿಪಡಿಸಲು ಯತ್ನಿಸುವ ಅಥವಾ ನನ್ನ ಶಕ್ತಿ ಮತ್ತು ಅನುಭವವನ್ನು ಇನ್ನೊಂದು ವೇದಿಕೆಗೆ ಕೊಂಡೊಯ್ದು ಸಕಾರಾತ್ಮಕ ರಾಜಕೀಯ ಮುಂದುವರಿಸುವ ಆಯ್ಕೆಗಳು ನನ್ನ ಮುಂದಿದ್ದವು' ಎಂದು ಅವರು ವಿವರಿಸಿದ್ದಾರೆ.

ಚಡ್ಡಾ ಅವರ ಹೇಳಿಕೆಯನ್ನು ಖಂಡಿಸಿರುವ ಎಎಪಿಯ ದೆಹಲಿ ಘಟಕದ ಮುಖ್ಯಸ್ಥ ಸೌರಭ್ ಭಾರದ್ವಾಜ್, 'ಯಾವುದೇ ಉದ್ಯೋಗಿಯು ಒಂದು ಕಂಪನಿಯನ್ನು ತೊರೆಯುವಾಗ ವೃತ್ತಿಪರ ನೀತಿ ಅನುಸರಿಸಿ, ನೋಟಿಸ್ ಅವಧಿ ಪೂರೈಸುತ್ತಾರೆ. ಈ ಮೂಲಕ ಅವರು ಕಂಪನಿಗೆ ಗೌರವ ಸೂಚಿಸುತ್ತಾರೆ. ಆದರೆ ಚಡ್ಡಾ ಹಾಗಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

> **ಎಎಪಿ ಸಂಸದರು ಬಿಜೆಪಿಯಲ್ಲಿ ವಿಲೀನವಾಗಿರುವುದು ಅಸಾಂವಿಧಾನಿಕ. ಇದನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆಹೋಗುತ್ತೇವೆ**
> **ಸಂಜಯ್ ಸಿಂಗ್,** ಎಎಪಿ ಸಂಸದ

> **ಎಎಪಿಯನ್ನು ಬಿಜೆಪಿಯ ಬಿ– ಟೀಂ ಎಂದು ಯಾವಾಗಲೂ ಹೇಳುತ್ತಿದ್ದೆವು. ಅದೀಗ ಹಣಕ್ಕಾಗಿ ರಾಜ್ಯಸಭಾ ಸ್ಥಾನಗಳನ್ನು ಬಿಟ್ಟುಕೊಟ್ಟು, ಕೋಟ್ಯಧಿಪತಿಗಳ ಪಕ್ಷವಾಗಿ ರೂಪುಗೊಂಡಿದೆ**
> **ಅಜಯ್ ಮಾಕನ್,** ಕಾಂಗ್ರೆಸ್‌ನ ಹಿರಿಯ ನಾಯಕ

# ಬಿಜೆಪಿ ಗೂಂಡಾಗಳಿಂದ ಕಾರಿನ ಮೇಲೆ ದಾಳಿ: ಮಿತಾಲಿ ಬಾಗ್

**ಕೋಲ್ಕತ್ತ (ಪಿಟಿಐ):** ಬಿಜೆಪಿಯ ಗೂಂಡಾಗಳು ಹೂಗ್ಲಿ ಜಿಲ್ಲೆಯ ಗೋಘಾಟ್ ಬಳಿ ತಮ್ಮ ಕಾರಿನ ಮೇಲೆ ದಾಳಿ ನಡೆಸಿದರು ಎಂದು ಆರಾಮ್‌ಬಾಗ್‌ನ ಟಿಎಂಸಿ ಸಂಸದೆ ಮಿತಾಲಿ ಬಾಗ್ ಆರೋಪಿಸಿದ್ದಾರೆ.

ಸೋಮವಾರ ಪಕ್ಷದ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರ ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ಸಂದರ್ಭದಲ್ಲಿ ದಾಳಿ ನಡೆದಿದೆ ಎಂದು ಅವರು ದೂರಿದ್ದಾರೆ.

ಜೋರಾಗಿ ಅಳುತ್ತಾ 'ಫೇಸ್‌ಬುಕ್ ಲೈವ್' ಮಾಡಿದ ಮಿತಾಲಿ ಅವರು, 'ಬಿಜೆಪಿ ಅಭ್ಯರ್ಥಿಯೊಬ್ಬರ ಚುನಾವಣಾ ಕಚೇರಿ ದಾಟುತ್ತಿದ್ದಂತೆಯೇ ಕಿಡಿಗೇಡಿಗಳು ವಾಹನವನ್ನು ಅಡ್ಡಗಟ್ಟಿ ಕಲ್ಲು ತೂರಾಟ ನಡೆಸಿದರು, ಕಿಟಕಿ ಗಾಜುಗಳನ್ನು ಒಡೆದರು. ನಾನು ಕಾರಿನ ಮುಂಭಾಗ ಕುಳಿತಿದ್ದೆ, ಪಕ್ಷದ ಕೆಲವು ಕಾರ್ಯಕರ್ತರು ಹಿಂಭಾಗ ಕುಳಿತಿದ್ದರು' ಎಂದು ಹೇಳಿದ್ದಾರೆ.

'ಬಿಜೆಪಿಯು ಮಹಿಳೆಯರ ಸುರಕ್ಷತೆಯ ಬಗ್ಗೆ ದೊಡ್ಡ ದೊಡ್ಡ ಮಾತನಾಡುತ್ತದೆ. ಆದರೆ ಸಂಸದೆ, ದಲಿತ ಮಹಿಳೆಯನ್ನು ಕಾಣುವ ರೀತಿ ಹೇಗಿದೆ ನೋಡಿ' ಎಂದು ಹೇಳಿದ್ದಾರೆ.

ಮಿತಾಲಿ ಅವರನ್ನು ಸ್ಥಳೀಯ ಆಸ್ಪತ್ರೆಯೊಳಗೆ ಕರೆದೊಯ್ಯುವ ವಿಡಿಯೊವನ್ನು ಹಂಚಿಕೊಂಡಿರುವ ಟಿಎಂಸಿ, 'ದಲಿತ ಸಂಸದೆಯ ಮೇಲೆ ಬಿಜೆಪಿಯ ಗೂಂಡಾಗಳು ನಡೆಸಿರುವ ದಾಳಿಯು, ಫ್ಯಾಸಿಸ್ಟ್ ಪಕ್ಷದ ನಿಜವಾದ ಸಂಸ್ಕೃತಿಯ ಪ್ರತಿಬಿಂಬ' ಎಂದು ಹೇಳಿದೆ.

ಈ ಆರೋಪವನ್ನು ಅಲ್ಲಗಳೆದಿರುವ ಬಿಜೆಪಿ, 'ಮಿತಾಲಿ ಬಾಗ್ ಅವರು 'ನಾಟಕ' ಮಾಡುತ್ತಿದ್ದಾರೆ. ವಾಸ್ತವವಾಗಿ ಟಿಎಂಸಿ ಕಾರ್ಯಕರ್ತರೇ ಬಿಜೆಪಿಗರ ಮೇಲೆ ದಾಳಿ ನಡೆಸಿದ್ದಾರೆ ಎಂದು ಹೇಳಿದೆ.

'ಘಟನೆಗೆ ಸಂಬಂಧಿಸಿದಂತೆ ವರದಿಯನ್ನು ಕೇಳಲಾಗಿದೆ. ಘಟನಾ ಸ್ಥಳದಲ್ಲಿ ಕೇಂದ್ರೀಯ ಪಡೆಗಳು ಬೀಡುಬಿಟ್ಟಿವೆ' ಎಂದು ಚುನಾವಣಾ ಆಯೋಗದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಪ್ರಜಾಮತ**
ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2026

### ಬಂಗಾಳ ಚುನಾವಣೆ: ವಶಕ್ಕೆ ಪಡೆದಿದ್ದೇನು? (ಕೋಟಿಗಳಲ್ಲಿ)

ಒಟ್ಟು ₹510 ಕೋಟಿ

| | |
|---|---|
| ನಗದು | ₹30 |
| ಮದ್ಯದ ಮೌಲ್ಯ | ₹126.85 |
| ಡ್ರಗ್ಸ್ ಮೌಲ್ಯ | ₹110.12 |
| ಅಮೂಲ್ಯ ವಸ್ತುಗಳ ಮೌಲ್ಯ | ₹58.28 |
| ಇತರೆ ಉಚಿತ ಕೊಡುಗೆಗಳು | ₹184.85 |

### 'ಫಲಿತಾಂಶದ ನಂತರವೂ ಕೇಂದ್ರೀಯ ಪಡೆಗಳ ನಿಯೋಜನೆ'



ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಮುಗಿದ ನಂತರ, ಬಿಜೆಪಿ ಅಧಿಕಾರಕ್ಕೆ ಬಂದರೂ ಕನಿಷ್ಠ 60 ದಿನ ಕೇಂದ್ರೀಯ ಪಡೆಗಳನ್ನು ರಾಜ್ಯದಲ್ಲಿ ನಿಯೋಜಿಸಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ತಿಳಿಸಿದರು.

ರೋಡ್ ಶೋ ಬಳಿಕ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಸಹೋದರ, ಸಹೋದರಿಯರೇ, ಇದೇ 29ರಂದು ಗೂಂಡಾಗಳಿಗೆ ಭಯ ಪಡದೆ ಮತದಾನ ಮಾಡಿ. ಚುನಾವಣಾ ಆಯೋಗವು ಸಾಕಷ್ಟು ಭದ್ರತೆಯನ್ನು ಕಲ್ಪಿಸಿದೆ. ಒಂದು ವೇಳೆ ಬಿಜೆಪಿ ಅಧಿಕಾರಕ್ಕೆ ಬಂದರೂ ಕೇಂದ್ರೀಯ ಪಡೆಗಳು 60 ದಿನ ಇಲ್ಲಿಯೇ ಇರಲಿವೆ' ಎಂದು ಹೇಳಿದರು.

> **ಜನರ ಬೆಂಬಲಕ್ಕಾಗಿ ಬಿಜೆಪಿ ಹಣ ಹಂಚುತ್ತಿದೆ. ಟಿಎಂಸಿ ಕಾರ್ಯಕರ್ತರು ಆ ಹಣವನ್ನು ಪಡೆದು ನಮ್ಮ ಪಕ್ಷಕ್ಕೆ ಮತ ಹಾಕಿ. ಏಕೆಂದರೆ ಆ ಹಣ ನಿಮಗೆ ಸೇರಿದ್ದು**
> **ಅಭಿಷೇಕ್ ಬ್ಯಾನರ್ಜಿ,** ಟಿಎಂಸಿ ಹಿರಿಯ ನಾಯಕ

### ಬಂಗಾಳದಲ್ಲಿ ಬಿಜೆಪಿ ಸರ್ಕಾರ: ಮೋದಿ


'ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ ಚುನಾವಣೆ ಬಳಿಕ ಬಿಜೆಪಿ ಸರ್ಕಾರ ರಚನೆ ಮಾಡಲಿದೆ. ಫಲಿತಾಂಶ ಘೋಷಣೆ ಬಳಿಕ ಪ್ರಮಾಣ ವಚನ ಸ್ವೀಕಾರದ ದಿನ ಪುನಃ ರಾಜ್ಯಕ್ಕೆ ಬರುತ್ತೇನೆ' ಎಂದು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿದರು.

ಬೈರಕಪುರದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಭಾರತದ ಒಟ್ಟಾರೆ ಅಭಿವೃದ್ಧಿಗೆ ಪಶ್ಚಿಮ ಬಂಗಾಳದ ಬೆಳವಣಿಗೆಯು ಅತಿಮುಖ್ಯವಾಗುತ್ತದೆ. ದೇಶದ ಭವಿಷ್ಯಕ್ಕೆ ಪೂರ್ವ ಭಾಗದ ಏಳಿಗೆ ಅಗತ್ಯ' ಎಂದು ಒತ್ತಿ ಹೇಳಿದರು.

'ಒಡಿಶಾ, ಬಿಹಾರದ ಬಳಿಕ ಪಶ್ಚಿಮ ಬಂಗಾಳದಲ್ಲಿಯೂ ಕಮಲ ಅರಳಲಿದೆ. ಟಿಎಂಸಿಪಕ್ಷಕ್ಕೆ ರಾಜ್ಯದ ಅಭಿವೃದ್ಧಿಯ ಬಗ್ಗೆ ದೂರದೃಷ್ಟಿಯೇ ಇಲ್ಲ' ಎಂದು ದೂರಿದರು.

## ತ್ರಿಶ್ಶೂರ್ ಪೂರಂ

ಪಿಟಿಐ ಚಿತ್ರ:



ಕೇರಳದ ತ್ರಿಶ್ಶೂರ್‌ನ ಶ್ರೀ ವಡಕ್ಕುಂನಾಥನ್ ದೇಗುಲದಲ್ಲಿ ಸೋಮವಾರ 'ತ್ರಿಶ್ಶೂರ್ ಪೂರಂ' ಮುಕ್ತಾಯದ ಸಂದರ್ಭದಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು ಭಕ್ತರು ಮೊಬೈಲ್‌ಗಳಲ್ಲಿ ಸೆರೆಹಿಡಿದರು

### ಪಕ್ಷಾಂತರ: ಸ್ಪಷ್ಟನೆ ಕೋರಿ ರಾಜ್ಯಸಭೆ ಕಾರ್ಯದರ್ಶಿಗೆ ಎಎಪಿ ಪತ್ರ

**ನವದೆಹಲಿ (ಪಿಟಿಐ):** ರಾಜ್ಯಸಭೆಯ ದಾಖಲೆಗಳಲ್ಲಿ ಎಎಪಿಯಿಂದ ಪಕ್ಷಾಂತರಗೊಂಡ 7 ಸಂಸದರನ್ನು ಬಿಜೆಪಿ ಪಟ್ಟಿಯಲ್ಲಿ ನಮೂದಿಸಿರುವ ಕುರಿತು ಸ್ಪಷ್ಟನೆ ನೀಡುವಂತೆ ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ ಸಂಜಯ್ ಸಿಂಗ್ ಅವರು ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಎಎಪಿಯ ಯಾವುದೇ ಸೂಚನೆ ಪಡೆಯದೆ ಹಾಗೂ ಒಪ್ಪಿಗೆ ಇಲ್ಲದೆಯೇ ಅಧಿಕೃತ ದಾಖಲೆಗಳಲ್ಲಿ ಸಂಸದರ ಪಕ್ಷವನ್ನು ಬದಲಾಯಿಸಲಾಗಿದೆ. ಯಾವ ಆಧಾರದ ಮೇಲೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂಬುದರ ಕುರಿತು ಲಿಖಿತವಾಗಿ ಪ್ರತಿಕ್ರಿಯೆ ನೀಡಬೇಕು ಮತ್ತು ತಕ್ಷಣ ತನಿಖೆಯನ್ನೂ ನಡೆಸಬೇಕು ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಎಎಪಿ ತೊರೆದು ಬಿಜೆಪಿಗೆ ಸೇರ್ಪಡೆಗೊಂಡಿರುವ ಏಳು ಸಂಸದರನ್ನು, ಬಿಜೆಪಿ ಸಂಸದರ ಪಟ್ಟಿಗೆ ಸೇರಿಸಿರುವ ಕುರಿತು ಎಎಪಿ ಆಕ್ಷೇಪ ವ್ಯಕ್ತಪಡಿಸಿದೆ. ಏಳೂ ಸಂಸದರನ್ನು ಅನರ್ಹಗೊಳಿಸುವಂತೆ ಎಎಪಿಯು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರಿಗೆ ಭಾನುವಾರ ಪತ್ರ ಬರೆದಿತ್ತು.

### ಎಸ್‌ಐಆರ್: ತ್ವರಿತ ನಿರ್ಧಾರಕ್ಕೆ 'ಸುಪ್ರೀಂ' ಸೂಚನೆ

**ನವದೆಹಲಿ:** ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಬಳಿಕ ಮತದಾರರ ಪಟ್ಟಿಯಿಂದ ತಮ್ಮ ಹೆಸರು ತೆಗೆದುಹಾಕಿದ್ದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ತ್ವರಿತವಾಗಿ ವಿಚಾರಣೆ ನಡೆಸಿ ನಿರ್ಧಾರ ಕೈಗೊಳ್ಳುವಂತೆ ಮೇಲ್ಮನವಿ ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ ಶರ್ಮಾ ಮತ್ತು ನ್ಯಾಯಮೂರ್ತಿ ಜಾಲ್‌ಮಾಲ್ಯಾ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠವು ಈ ಆದೇಶವನ್ನು ನೀಡಿದೆ.

ಡೈಮಂಡ್ ಹಾರ್ಬರ್ ಕ್ಷೇತ್ರದ ಮತದಾರರ ಪಟ್ಟಿಯಿಂದ ತಮ್ಮ ಹೆಸರನ್ನು ತೆಗೆದುಹಾಕಲಾಗಿದೆ. ಈ ಬಗ್ಗೆ ಮೇಲ್ಮನವಿ ಪ್ರಾಧಿಕಾರಕ್ಕೆ ದೂರು ನೀಡಲಾಗಿದೆ ಎಂದು ಅರ್ಜಿದಾರರು ದೂರಿದ್ದರು.

### ವಿಷಾಹಾರ ಶಂಕೆ: ಒಂದೇ ಕುಟುಂಬದ ನಾಲ್ವರ ಸಾವು

**ಮುಂಬೈ:** ಶಂಕಿತ ವಿಷಾಹಾರ ಸೇವಿಸಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿರುವ ಆಘಾತಕಾರಿ ಘಟನೆ ಮುಂಬೈನ ಪಾಯಧುನಿ ಪ್ರದೇಶದಲ್ಲಿ ನಡೆದಿದೆ.

ಸಾವಿಗೆ ನಿಖರವಾದ ಕಾರಣ ತಿಳಿಯಲು ಪೊಲೀಸರು ತನಿಖೆ ಪ್ರಾರಂಭಿಸಿದ್ದಾರೆ. ಪ್ರಾಥಮಿಕ ವರದಿಗಳ ಪ್ರಕಾರ, ಕುಟುಂಬದ ನಾಲ್ವರು ಹಾಗೂ ಅವರ ಆಪ್ತ ಸಂಬಂಧಿಕರು ಸೇರಿ ಒಟ್ಟು 9 ಜನರು ಶನಿವಾರ ರಾತ್ರಿ 10.30ಕ್ಕೆ ಒಟ್ಟಾಗಿ ಬಿರಿಯಾನಿ ಸೇವಿಸಿದ್ದರು. ನಂತರ ರಾತ್ರಿ ಸುಮಾರು 1.00–1.30ರ ವೇಳೆಗೆ ಕಲ್ಲಂಗಡಿ ಹಣ್ಣನ್ನು ತಿಂದಿದ್ದರು. ಮುಂಜಾನೆ 6 ಗಂಟೆಯ ವೇಳೆ ವಾಂತಿ–ಭೇದಿ ಪ್ರಾರಂಭವಾಗಿತ್ತು.

ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿ ಚಿಕಿತ್ಸೆಯ ವೇಳೆ ನಾಲ್ವರು ಮೃತಪಟ್ಟಿದ್ದಾರೆ.

### ಮುಖ್ಯಮಂತ್ರಿ, ಪ್ರಧಾನಿ ಪದಚ್ಯುತಿ ಮಸೂದೆ: ಜೆಪಿಸಿ ಸಭೆ


ಅಪರಾಜಿತಾ ಸಾರಂಗಿ

**ಮುಂಬೈ (ಪಿಟಿಐ):** ಕ್ರಿಮಿನಲ್ ಆರೋಪ ಹೊತ್ತ ಪ್ರಧಾನಿ ಹಾಗೂ ಮುಖ್ಯಮಂತ್ರಿಗಳನ್ನು ಪದಚ್ಯುತಗೊಳಿಸುವ ಮಸೂದೆ ಪರಿಶೀಲಿಸುತ್ತಿರುವ ಅಪರಾಜಿತಾ ಸಾರಂಗಿ ಸಾರಥ್ಯದ ಜಂಟಿ ಸದನ ಸಮಿತಿಯು (ಜೆಪಿಸಿ) ಮಹಾರಾಷ್ಟ್ರದಲ್ಲಿ ಸೋಮವಾರ ಅಭಿಪ್ರಾಯ ಸಂಗ್ರಹಿಸಿತು.

ಮಹಾರಾಷ್ಟ್ರ ಸರ್ಕಾರದೊಂದಿಗೆ ಚರ್ಚಿಸಿದ ಸಾರಂಗಿ ಅವರು, 'ಪ್ರಸ್ತಾವಿತ ಶಾಸನವು ಭಾರತದ ಪ್ರಜಾಪ್ರಭುತ್ವದ ಚೌಕಟ್ಟನ್ನು ಬಲಪಡಿಸುವಲ್ಲಿ ಒಂದು ಮೈಲಿಗಲ್ಲು' ಎಂದು ಹೇಳಿದರು.

ಸಂವಿಧಾನ (130ನೇ ತಿದ್ದುಪಡಿ) ಮಸೂದೆ– 2025, ಪ್ರಧಾನಿ, ಮುಖ್ಯಮಂತ್ರಿ ಹಾಗೂ ಸಚಿವರು ಐದು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳ ಅವಧಿ ಜೈಲು ಶಿಕ್ಷೆಗೆ ಗುರಿಯಾಗುವ ಅಪರಾಧಕ್ಕೆ ಸಂಬಂಧಿಸಿದಂತೆ ಸತತ 30 ದಿನ ಬಂಧನದಲ್ಲಿದ್ದರೆ ಪದಚ್ಯುತಗೊಳ್ಳಲಿದ್ದಾರೆ.

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಸಮಿತಿಗೆ ಮೂರು ಪ್ರಮುಖ ಸಲಹೆ ನೀಡಿದ್ದಾರೆ. ಅವನ್ನು ಪರಿಶೀಲಿಸಲಾಗುವುದು ಎಂದು ಸಾರಂಗಿ ತಿಳಿಸಿದರು.

ಮಹಾರಾಷ್ಟ್ರ ಸರ್ಕಾರ, ರಾಜಕೀಯ ಪಕ್ಷಗಳು, ಅಧಿಕಾರಿಗಳು, ಮಾನವ ಹಕ್ಕುಗಳ ಆಯೋಗ ಹಾಗೂ ವಿವಿಧ ಸಂಘಟನೆಗಳ ಜೊತೆ ಸಮಿತಿಯು ಮುಂಬೈನಲ್ಲಿ ಸಭೆ ನಡೆಸಿ ಚರ್ಚಿಸಿತು.

ಜೆಪಿಸಿ ಎಲ್ಲರಿಂದಲೂ ಸಲಹೆ ಆಲಿಸುತ್ತಿದೆ. ಇವನ್ನು ಕ್ರೋಢೀಕರಿಸಿ, ವಿಶ್ಲೇಷಣೆಗೊಳಪಡಿಸಿದ ನಂತರ ಸಮಗ್ರ ವರದಿಯೊಂದನ್ನು ಸಿದ್ಧಗೊಳಿಸಿ ಲೋಕಸಭಾ ಸ್ಪೀಕರ್ ಓಂಬಿರ್ಲಾ ಅವರಿಗೆ ಸಲ್ಲಿಸಲಿದೆ ಎಂದು ಅಪರಾಜಿತಾ ಹೇಳಿದರು.

#### ಒತ್ತಡ ತಗ್ಗಿಸಲು ಕುಲಪತಿಗೆ ಪತ್ರ ಬರೆದ ವಿಶ್ವಭಾರತಿ ವಿಶ್ವವಿದ್ಯಾಲಯದ ಸಿಬ್ಬಂದಿ
## ಚುನಾವಣಾ ಕಾರ್ಯ: ಅಧ್ಯಾಪಕರ ಅಳಲು

**ಕೋಲ್ಕತ್ತ (ಪಿಟಿಐ):** ಚುನಾವಣಾ ಕಾರ್ಯಗಳಿಂದ ಅಧಿಕ ಒತ್ತಡ ಉಂಟಾಗುತ್ತಿರುವ ಬಗ್ಗೆ ಪಶ್ಚಿಮ ಬಂಗಾಳದ ವಿಶ್ವಭಾರತಿ ವಿಶ್ವವಿದ್ಯಾಲಯದ ಅಧ್ಯಾಪಕರು ಸಂಸ್ಥೆಯ ಕುಲಪತಿಗೆ ಪತ್ರ ಬರೆದಿದ್ದಾರೆ. ಚುನಾವಣಾ ಆಯೋಗ ತಕ್ಷಣ ಮಧ್ಯ ಪ್ರವೇಶಿಸುವಂತೆ ಒತ್ತಾಯಿಸಿದ್ದಾರೆ.

ಚುನಾವಣಾ ಕಾರ್ಯಕ್ಕೆ ನಿರಂತರವಾಗಿ ನಿಯೋಜನೆ ಮಾಡುತ್ತಿರುವುದ ರಿಂದ ಮಾನಸಿಕ ಮತ್ತು ದೈಹಿಕ ಒತ್ತಡ ಉಂಟಾಗುತ್ತಿದೆ ಎಂದು ಹಲವು ಅಧ್ಯಾಪಕರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ತುರ್ತಾಗಿ ನೀವು ಈ ಬಗ್ಗೆ ಗಮನಹರಿಸಬೇಕು. ಹಲವರನ್ನು 24 ಪರಗಣ ಜಿಲ್ಲೆಯಲ್ಲಿ ಚುನಾವಣಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಏಪ್ರಿಲ್ 28 ಮುಂಜಾನೆ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿದೆ. ಅದರ ಹಿಂದಿನ ದಿನವಷ್ಟೇ ಬೀರ್‌ಭೂಮ್ ಜಿಲ್ಲೆಯಲ್ಲಿ ಕರ್ತವ್ಯ ಪೂರ್ಣಗೊಳ್ಳುತ್ತದೆ. ಕೆಲವರು ಸಾಗರದ ದ್ವೀಪದವರೆಗೆ ಪ್ರಯಾಣಿಸ ಬೇಕಾಗುತ್ತದೆ. ಕಡಿಮೆ ಅವಧಿಯಲ್ಲಿ ಅಷ್ಟು ದೂರ ಪ್ರಯಾಣಿಸುವುದು ಕಷ್ಟಕರವಾಗುತ್ತದೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಪತ್ರ ನಮಗೆ ತಲುಪಿದೆ. ಆದರೆ ಈ ಪರಿಸ್ಥಿತಿಯಲ್ಲಿ ಚುನಾವಣಾ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲು ಸಾಧ್ಯವಿಲ್ಲ. ನಾವು ಎಲ್ಲರ ಸಹಕಾರ ಬಯಸುತ್ತೇವೆ. ಆಯೋಗವು ವಸತಿ, ಪ್ರಯಾಣ ವ್ಯವಸ್ಥೆಯನ್ನು ಮಾಡುತ್ತದೆ ಮತ್ತು ಸುರಕ್ಷತೆ ಬಗ್ಗೆ ಗಮನ ಹರಿಸುತ್ತದೆ' ಎಂದು ಚುನಾವಣಾ ಆಯೋಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

### ಟಿಎಂಸಿ ದೂರು ಇತ್ಯರ್ಥಗೊಳಿಸಿ: ಕಲ್ಕತ್ತ ಹೈಕೋರ್ಟ್

**ಕೋಲ್ಕತ್ತ (ಪಿಟಿಐ):** ಪೊಲೀಸ್ ವೀಕ್ಷಕ ಹಾಗೂ ಬಿಜೆಪಿ ಸ್ಪರ್ಧಿಯೊಬ್ಬರ ಭೇಟಿಗೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಸಲ್ಲಿಸಿರುವ ದೂರನ್ನು ಇತ್ಯರ್ಥಗೊಳಿಸುವಂತೆ ಚುನಾವಣಾ ಆಯೋಗವನ್ನು ಕಲ್ಕತ್ತ ಹೈಕೋರ್ಟ್ ಕೇಳಿಕೊಂಡಿದೆ.

ವಿಧಾನಸಭಾ ಚುನಾವಣೆ ನಿಮಿತ್ತ ಇಲ್ಲಿನ 24 ಪರಗಣ ಜಿಲ್ಲೆಯಲ್ಲಿ 4 ವಿಧಾನಸಭಾ ಕ್ಷೇತ್ರಗಳ ಪೊಲೀಸ್ ವೀಕ್ಷಕರಾಗಿ ನೇಮಕಗೊಂಡಿರುವ ಅಧಿ-ಕಾರಿಯೊಬ್ಬರು ಬಿಜೆಪಿ ಅಭ್ಯರ್ಥಿಯನ್ನು ಪ್ರತ್ಯೇಕವಾಗಿ ಭೇಟಿಯಾಗಿ ಸಭೆ ನಡೆಸುವ ಮೂಲಕ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಟಿಎಂಸಿ ಆರೋಪಿಸಿದೆ.

ಜತೆಗೆ ಅವರನ್ನು ತಕ್ಷಣವೇ ಚುನಾವಣಾ ವೀಕ್ಷಕ ಸ್ಥಾನದಿಂದ ವಜಾಗೊಳಿಸಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದೆ.

'ಅಧಿಕಾರಿಯು ರಾಜ್ಯ ಸರ್ಕಾರದ ಒಡೆತನದಲ್ಲಿರುವ ಪ್ರವಾಸಿ ಗೃಹದಲ್ಲಿ ಸಭೆಗಳಿಗೆಂದೇ ನಿಗದಿಪಡಿಸಿರುವ ಕೊಠಡಿಯಲ್ಲಿ ಅಧಿಕೃತವಾಗಿ ಕೆಲಸದ ನಿಮಿತ್ತವೇ ಬಿಜೆಪಿ ಅಭ್ಯರ್ಥಿಯನ್ನು ಭೇಟಿಯಾಗಿದ್ದಾರೆ. ಸಾರ್ವಜನಿಕರನ್ನು, ಅಭ್ಯರ್ಥಿಗಳನ್ನು ಭೇಟಿ ಆಗಿ, ಇದಕ್ಕೆ ಸಂಬಂಧಿಸಿದ ವರದಿಗಳನ್ನು ಅಧಿಕಾರಿ ಆಯೋಗಕ್ಕೆ ಸಲ್ಲಿಸಬೇಕಿರುತ್ತದೆ. ಇದರಲ್ಲಿ ಟಿಎಂಸಿ ಆರೋಪಿಸಿದಂತೆ ಯಾವುದೇ ಗೋಪ್ಯತೆ, ಲೋಪ ಇಲ್ಲ' ಎಂದು ಆಯೋಗವು ನ್ಯಾಯಪೀಠಕ್ಕೆ ತಿಳಿಸಿದೆ.

ಟಿಎಂಸಿ ಹಾಗೂ ಆಯೋಗದ ವಾದ–ಪ್ರತಿವಾದವನ್ನು ಆಲಿಸಿದ ಬಳಿಕ ನ್ಯಾಯಮೂರ್ತಿ ಕೃಷ್ಣ ರಾವ್ ಅವರು ಟಿಎಂಸಿ ದೂರನ್ನು ಇತ್ಯರ್ಥಗೊಳಿಸಿ, ಈ ಸಂಬಂಧಿಸಿದ ನಿರ್ಧಾರವನ್ನು ಅರ್ಜಿದಾರರಿಗೆ ತಿಳಿಸುವಂತೆ ಆಯೋಗಕ್ಕೆ 'ಮನವಿ' ಮಾಡಿದ್ದಾರೆ.

### ಕೋರ್ಟ್ ವಿಚಾರಣೆಗೆ ಹಾಜರಾಗಲ್ಲ: ಎಎಪಿ

**ನವದೆಹಲಿ (ಪಿಟಿಐ):** 'ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ಅವರಿಗೆ ಪತ್ರ ಬರೆದು, ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಗೆ ವೈಯಕ್ತಿಕವಾಗಿ ಅಥವಾ ವಕೀಲರ ಮೂಲಕವಾಗಲೀ ಹಾಜರಾಗುವುದಿಲ್ಲ ಎಂದು ತಿಳಿಸಿದ್ದಾರೆ' ಎಂದು ಪಕ್ಷವು ತಿಳಿಸಿದೆ.

ನಾಲ್ಕು ಪುಟಗಳ ಪತ್ರದಲ್ಲಿ ನ್ಯಾಯಾಂಗ ವ್ಯವಸ್ಥೆಯ ವೈಫಲ್ಯವನ್ನು ಉಲ್ಲೇಖಿಸಿರುವ ಕೇಜ್ರಿವಾಲ್, ವಿಷಯಕ್ಕೆ ಸಂಬಂಧಿಸಿದಂತೆ ಗಂಭೀರ ಆಕ್ಷೇಪಣೆಗಳಿರುವುದಾಗಿ ತಿಳಿಸಿದ್ದಾರೆ. 'ಪ್ರಕರಣಕ್ಕೆ ಸಂಬಂಧಿಸಿದ ಮುಂದಿನ ವಿಚಾರಣೆಗಳಿಗೆ ಹಾಜರಾಗದಿರಲು ನಿರ್ಧರಿಸಿದ್ದೇನೆ. ಗಂಭೀರವಾಗಿ ಚಿಂತಿಸಿ ಈ ಹೆಜ್ಜೆ ಇಟ್ಟಿದ್ದೇನೆ' ಎಂದಿದ್ದಾರೆ.

'ನ್ಯಾಯ ಸಲ್ಲಬೇಕು ಎನ್ನುವುದಷ್ಟೇ ಅಲ್ಲ, ನ್ಯಾಯ ಸಲ್ಲುವಂತೆ ಮಾಡುವ ಪ್ರಕ್ರಿಯೆಯೂ ಇರಬೇಕು. ನ್ಯಾಯಾಂಗವನ್ನು ಬಲಪಡಿಸುವುದು ಮತ್ತು ದುರ್ಬಲಗೊಳ್ಳುವುದನ್ನು ತಡೆಯುವುದು ನನ್ನ ಉದ್ದೇಶ' ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.



# ಆರ್‌ಸಿಬಿ 'ವೇಗ'ಕ್ಕೆ ಡೆಲ್ಲಿ ಚೆಲ್ಲಾಪಿಲ್ಲಿ

## ರಜತ್ ಪಾಟೀದಾರ್ ಪಡೆಗೆ 9 ವಿಕೆಟ್‌ಗಳ ನಿರಾಯಾಸ ಗೆಲುವು

ನವದೆಹಲಿ (ಪಿಟಿಐ): ಭುವನೇಶ್ವರ್ ಕುಮಾರ್ (5ಕ್ಕೆ3) ಮತ್ತು ಜೋಶ್ ಹೇಝಲ್‌ವುಡ್ (12ಕ್ಕೆ4) ಅವರ ಸ್ವಿಂಗ್ ಮತ್ತು ವೇಗದ ದಾಳಿಗೆ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಅಗ್ರ ಬ್ಯಾಟರ್‌ಗಳು ತರಗೆಲೆಗಳಂತೆ ಉದುರಿದರು. ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ತವರಿನಲ್ಲಿ ಡೆಲ್ಲಿ ತಂಡ ಐಪಿಎಲ್ ಇತಿಹಾಸದಲ್ಲೇ ನಾಟಕೀಯ ರೀತಿಯಲ್ಲಿ ಆರಂಭಿಕ ಕುಸಿತ ಅನುಭವಿಸಿತು.

ಭುವಿ ಮತ್ತು ಜೋಶ್ ತಲಾ ಮೂರು ಓವರುಗಳಲ್ಲಿ ಡೆಲ್ಲಿ ತಂಡದ ಬ್ಯಾಟಿಂಗ್ ಬೆನ್ನೆಲುಬು ಮುರಿದುಹಾಕಿದರು. ಪವರ್‌ಪ್ಲೇ ಅವಧಿಯಲ್ಲಿ ತತ್ತರಿಸಿ 6 ವಿಕೆಟ್‌ಗೆ 13 ರನ್ ಗಳಿಸಿದ್ದ ತಂಡ ನಂತರ ಸ್ವಲ್ಪ ಚೇತರಿಸಿಕೊಂಡಿತು. ಅಂತಿಮವಾಗಿ 16.3 ಓವರುಗಳಲ್ಲಿ 75 ರನ್ನಿಗೆ ಆಲೌಟ್ ಆಯಿತು. ಐಪಿಎಲ್ ಇತಿಹಾಸದಲ್ಲೇ ಅತಿ ಕಡಿಮೆ ಮೊತ್ತಕ್ಕೆ (49) ಆಲೌಟ್ ಆಗುವ ಮುಖಭಂಗದಿಂದ ಪಾರಾಯಿತು.

ಇಂಪ್ಯಾಕ್ಟ್ ಆಟಗಾರ ಅಭಿಷೇಕ್ ಪೊರೆಲ್ (30, 33 ಎಸೆತ), ಡೇವಿಡ್ ಮಿಲ್ಲರ್ (19) ಮತ್ತು ಕೈಲ್ ಜೇಮಿಸನ್ (12) ಮಾತ್ರ ಎರಡಂಕಿ ಮೊತ್ತ ಗಳಿಸಿದರು.

ಗೆಲುವಿಗೆ ಬೇಕಿದ್ದ 75 ರನ್‌ಗಳನ್ನು ಹಾಲಿ ಚಾಂಪಿಯನ್ ತಂಡ 6.3 ಓವರುಗಳಲ್ಲೇ (1 ವಿಕೆಟ್‌ಗೆ 77) ಗಳಿಸಿತು. 'ದೆಹಲಿಯ ಹುಡುಗ' ವಿರಾಟ್ ಕೊಹ್ಲಿ (ಔಟಾಗದೇ 23, 15 ಎಸೆತ) ಮತ್ತು ದೇವದತ್ತ ಪಡಿಕ್ಕಲ್ (ಔಟಾಗದೇ 34, 13 ಎಸೆತ) ಔಪಚಾರಿಕತೆ ಪೂರೈಸಿದರು. ಜೇಕಬ್ ಬೆಥೆಲ್ (20) ಬೌಂಡರಿ ಲೈನ್ ಬಳಿ ನಟರಾಜನ್ ಹಿಡಿದ ಅಮೋಘ ಕ್ಯಾಚಿಗೆ ನಿರ್ಗಮಿಸಿದ್ದರು.

ನಟರಾಜನ್ ಬೌಲಿಂಗ್‌ನಲ್ಲಿ ಸತತ ಸಿಕ್ಸರ್‌ಗಳನ್ನು ಎತ್ತುವ ಮೂಲಕ ಕೊಹ್ಲಿ ಅವರು ಡೆಲ್ಲಿ ಗೋಳಿಗೆ ಕೊನೆಹಾಡಿದರು. ರಜತ್ ಪಾಟೀದಾರ್ ಪಡೆಯು ಇದೇ 18ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅನುಭವಿಸಿದ ಸೋಲಿಗೆ ಮುಯ್ಯಿ ತೀರಿಸಿಕೊಂಡಿತು.

**ನಾಟಕೀಯ ಕುಸಿತ:** ಸ್ವಿಂಗ್, ವೇಗ ಮತ್ತು ಕರಾರುವಾಕ್ ದಾಳಿಯಿಂದ ಡೆಲ್ಲಿ ತಂಡದ ಬ್ಯಾಟರ್‌ಗಳಿಗೆ ಬೇರೂರಲು ಆರ್‌ಸಿಬಿ ವೇಗಿಗಳು ಅವಕಾಶ ನೀಡಲಿಲ್ಲ. ಆಟಗಾರರು ನಿರುತ್ತರರಾಗಿ ಪೆವಿಲಿಯನ್‌ಗೆ ಪರೇಡ್ ನಡೆಸಿದರು.

ಪಂದ್ಯದ ಎರಡನೇ ಎಸೆತದಲ್ಲೇ ಭುವಿ ಅವರ ಯಾರ್ಕರ್‌ಗೆ ಸಾಹಿಲ್ ಪರಖ್ ಅವರ ಮಿಡ್ಲ್ ಸ್ಟಂಪ್ ಬುಡಮೇಲಾಯಿತು. 18 ವರ್ಷ ವಯಸ್ಸಿನ ಎಡಗೈ ಬ್ಯಾಟರ್ ಪರಖ್ ಅವರಿಗೆ ಪದಾರ್ಪಣೆ ಪಂದ್ಯ ದುಃಸ್ವಪ್ನ ವಾಯಿತು. ಅಷ್ಟೇ ಅಲ್ಲ, ಯಾರೂ ಊಹಿಸದ ರೀತಿ ಡೆಲ್ಲಿ ಕುಸಿತಕ್ಕೂ ನಾಂದಿಯಾಯಿತು.

ಈ ಹಿಂದಿನ ಪಂದ್ಯದಲ್ಲಿ ಸಿಡಿಲಬ್ಬರದ ಶತಕ ಬಾರಿಸಿದ್ದ ರಾಹುಲ್ ಅವರು ಹೇಝಲ್‌ವುಡ್ ಅವರ ಮುಂದಿನ ಓವರಿನ ಮೊದಲ ಎಸೆತದಲ್ಲೇ ನಿರ್ಗಮಿಸಿದರು. ಬೌನ್ಸ್ ಆದ ಚೆಂಡನ್ನು ಪುಲ್ ಮಾಡುವ ಯತ್ನದಲ್ಲಿ ರಾಹುಲ್ ವಿಕೆಟ್ ಕೀಪರ್‌ಗೆ ಕ್ಯಾಚಾದರು. ನಂತರದ ಎಸೆತದಲ್ಲಿ ಸಮೀರ್ ರಿಜ್ವಿ ಕೂಡ ನಿರ್ಗಮಿಸಿದರು.

ಭುವಿ ಅವರ ಮುಂದಿನ ಓವರಿನಲ್ಲಿ ಟ್ರಿಸ್ಟನ್ ಸ್ಟಬ್ಸ್ (5) ಅವರು ಸ್ವಿಂಗ್ ಆದ ಚೆಂಡನ್ನು ಆಡಲು ಹೋಗಿ ಸ್ಲಿಪ್‌ನಲ್ಲಿದ್ದ ದೇವದತ್ತ ಪಡಿಕ್ಕಲ್‌ಗೆ ಕ್ಯಾಚಿತ್ತರು. ಕ್ಷಣಗಳ ನಂತರ, ನಾಯಕ ಅಕ್ಷರ್ ಪಟೇಲ್ ಕೂಡ ಭುವಿ ಅವರ ಔಟ್‌ಸ್ವಿಂಗರ್ ಎಸೆತದಲ್ಲಿ ವಿಕೆಟ್ ಕೀಪರ್‌ಗೆ ಕ್ಯಾಚಿತ್ತರು. ಪ್ರೇಕ್ಷಕರ ಗ್ಯಾಲರಿಯಲ್ಲಿ ಗಾಢ ಮೌನ ಆವರಿಸಿತ್ತು. ಹೇಝಲ್‌ವುಡ್ ತಮ್ಮ ಮುಂದಿನ ಓವರಿನಲ್ಲಿ ನಿತೀಶ್ ರಾಣಾ ಅವರ ವಿಕೆಟ್ ಪಡೆದಾಗ ಮೊತ್ತ 8 ರನ್ನಿಗೆ 6 ವಿಕೆಟ್! ಪವರ್‌ಪ್ಲೇಯಲ್ಲಿ ಬಂದಿದ್ದು ಒಂದೇ ಬೌಂಡರಿ!

ಆದರೆ ಇನ್ನೊಂದೆಡೆ ಪರಖ್ ಬದಲಿಗೆ ಇಂಪ್ಯಾಕ್ಟ್ ಆಟಗಾರನಾಗಿ ಬಂದಿದ್ದ ಅಭಿಷೇಕ್ ಪೊರೆಲ್ ಅವರು ಡೇವಿಡ್ ಮಿಲ್ಲರ್ ಜೊತೆಗೂಡಿ ಏಳನೇ ವಿಕೆಟ್‌ಗೆ 35 ರನ್ ಸೇರಿಸಿದರು. ಪೊರೆಲ್ ಅವರು ಕೊನೆಯವರಾಗಿ ಹೇಝಲ್‌ವುಡ್ ಬೌಲಿಂಗ್‌ನಲ್ಲಿ ಬೌಲ್ಡ್ ಆಗಿ ನಿರ್ಗಮಿಸಿದರು.

**9,012 ರನ್**
ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ ಗಳಿಸಿದ ರನ್. 9,000 ರನ್ ಮೈಲಿಗಲ್ಲು ತಲುಪಿದ ಮೊದಲ ಬ್ಯಾಟರ್ ಅವರಾಗಿದ್ದಾರೆ.

**152**
ಈ ಪಂದ್ಯದಲ್ಲಿ ದಾಖಲಾದ ಒಟ್ಟು ರನ್. ಇದು ಐಪಿಎಲ್‌ನಲ್ಲಿ ಆರ್‌ಸಿಬಿ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಿನ ಪಂದ್ಯದಲ್ಲಿ ದಾಖಲಾದ ಕನಿಷ್ಠ ಮೊತ್ತ.

**6ಕ್ಕೆ13**
ಪವರ್‌ಪ್ಲೇನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ಗಳಿಸಿದ ರನ್. ಇದು, ಐಪಿಎಲ್ ಇತಿಹಾಸದಲ್ಲಿ ಪವರ್‌ಪ್ಲೇನಲ್ಲಿ ತಂಡವೊಂದರ ಕನಿಷ್ಠ ಮೊತ್ತವಾಗಿದೆ.



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರ ಸಂಭ್ರಮ ಪಿಟಿಐ ಚಿತ್ರ

### ಸ್ಕೋರ್ ಕಾರ್ಡ್

**ಡೆಲ್ಲಿ ಕ್ಯಾಪಿಟಲ್ಸ್: 75 (16.3 ಓವರ್‌ಗಳಲ್ಲಿ)**
ಸಾಹಿಲ್ ಬಿ ಭುವನೇಶ್ವರ್ 0 (2ಎ)
ರಾಹುಲ್ ಬಿ ಜಿತೇಶ್ ಬಿ ಹೇಝಲ್‌ವುಡ್ 1 (3ಎ)
ನಿತೀಶ್ ಸಿ ಪಡಿಕ್ಕಲ್ ಬಿ ಹೇಝಲ್‌ವುಡ್ 1 (9ಎ)
ಸಮೀರ್ ಸಿ ಜಿತೇಶ್ ಬಿ ಹೇಝಲ್‌ವುಡ್ 0 (1ಎ)
ಟ್ರಿಸ್ಟನ್ ಸಿ ಪಡಿಕ್ಕಲ್ ಬಿ ಭುವನೇಶ್ವರ್ 5 (3ಎ, 4x1)
ಅಕ್ಷರ್ ಸಿ ಜಿತೇಶ್ ಬಿ ಭುವನೇಶ್ವರ್ 0 (3ಎ)
ಪೊರೆಲ್ ಬಿ ಹೇಝಲ್‌ವುಡ್ 30 (33ಎ, 4x3)
ಮಿಲ್ಲರ್ ಸಿ ಜಿತೇಶ್ ಬಿ ರಸಿಕ್ 19 (18ಎ, 4x3)
ಜೇಮಿಸನ್ ಎಲ್‌ಬಿಡಬ್ಲ್ಯು ಬಿ ಕೃಣಾಲ್ 12 (13ಎ, 4x1, 6x1)
ಕುಲದೀಪ್ ಬಿ ಸುಯಶ್ 3 (11ಎ)
ದುಷ್ಮಂತ ಚಮೀರ ಔಟಾಗದೇ 0 (3ಎ)
**ಇತರೆ:** 4 (ವೈಡ್ 4)
**ವಿಕೆಟ್ ಪತನ:** 1-0 (ಸಾಹಿಲ್ ಪರಖ್, 0.2), 2-2 (ಕೆ.ಎಲ್. ರಾಹುಲ್, 1.1), 3-2 (ಸಮೀರ್ ರಿಜ್ವಿ, 1.2), 4-7 (ಟ್ರಿಸ್ಟನ್ ಸ್ಟಬ್ಸ್, 2.1), 5-7 (ಅಕ್ಷರ್ ಪಟೇಲ್, 2.4), 6-8 (ನಿತೀಶ್ ರಾಣಾ, 3.5), 7-43 (ಡೇವಿಡ್ ಮಿಲ್ಲರ್, 8.6), 8-62 (ಕೈಲ್ ಜೇಮಿಸನ್, 12.3), 9-71 (ಕುಲದೀಪ್ ಯಾದವ್, 15.3), 10-75 (ಅಭಿಷೇಕ್ ಪೊರೆಲ್, 16.3)
**ಬೌಲಿಂಗ್:** ಭುವನೇಶ್ವರ್ ಕುಮಾರ್ 3-0-5-3, ಜೋಶ್ ಹೇಝಲ್‌ವುಡ್ 3.3-0-12-4, ರಸಿಕ್ ಸಲಾಂ ದಾರ್ 2-0-21-1, ರೊಮಾರಿಯೊ ಶೆಫರ್ಡ್ 2-0-21-0, ಸುಯಶ್ ಶರ್ಮಾ 4-1-7-1, ಕೃಣಾಲ್ ಪಾಂಡ್ಯ 2-0-9-1

**ರಾಯಲ್ ಚಾಲೆಂಜರ್ಸ್ ಬೆಂಗಳೂರು: 1 ವಿಕೆಟ್‌ಗೆ 77 (6.3 ಓವರ್‌ಗಳಲ್ಲಿ)**
ಬೆಥೆಲ್ ಸಿ ನಟರಾಜನ್ ಬಿ ಜೇಮಿಸನ್ 20 (11ಎ, 4x1, 6x2)
ವಿರಾಟ್ ಕೊಹ್ಲಿ ಔಟಾಗದೇ 23 (15ಎ, 4x1, 6x2)
ದೇವದತ್ತ ಪಡಿಕ್ಕಲ್ ಔಟಾಗದೇ 34 (13ಎ, 4x3, 6x3)
**ವಿಕೆಟ್ ಪತನ:** 1-26 (ಜೇಕಬ್ ಬೆಥೆಲ್, 2.5)
**ಬೌಲಿಂಗ್:** ಕೈಲ್ ಜೇಮಿಸನ್ 3-0-42-1, ದುಷ್ಮಂತ ಚಮೀರ 2-0-18-0, ಅಕ್ಷರ್ ಪಟೇಲ್ 1-0-5-0, ಟಿ.ನಟರಾಜನ್ 0.3-0-12-0
**ಪಂದ್ಯದ ಆಟಗಾರ:** ಜೋಶ್ ಹೇಝಲ್‌ವುಡ್

**ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 9 ವಿಕೆಟ್ ಗೆಲುವು**

**ಐಪಿಎಲ್‌ನಲ್ಲಿ ವೇಗದ ಚೇಸ್ (ಓವರ್‌ಗಳಲ್ಲಿ)**

| ಓವರ್ | ಗುರಿ | ತಂಡ | ಎದುರಾಳಿ | ತಾಣ | ವರ್ಷ |
|---|---|---|---|---|---|
| 5.3 | 68 | ಎಂ ಐ | ಕೆಕೆಆರ್ | ವಾಂಖೆಡೆ | 2008 |
| 6.3 | 76 | ಆರ್‌ಸಿಬಿ | ಡಿ ಸಿ | ದೆಹಲಿ | 2026 |
| 7.2 | 98 | ಕೆಟಿಕೆ | ಆರ್‌ಆರ್ | ಇಂದೋರ್ | 2021 |
| 7.5 | 68 | ಪಿಬಿಕೆಎಸ್ | ಡಿ ಸಿ | ಮೊಹಾಲಿ | 2017 |

ಅಯ್ಯರ್ ಬಳಗಕ್ಕೆ ಸಾಟಿಯಾಗುವುದೇ ಪರಾಗ್ ಪಡೆ?

# ಕಿಂಗ್ಸ್‌ಗೆ ಇಂದು ರಾಯಲ್ಸ್ ಸವಾಲು

ಮುಲ್ಲನಪುರ (ಪಿಟಿಐ): ಅಪ್ರತಿಮ ಆಟವಾಡುತ್ತಿರುವ ಪಂಜಾಬ್ ಕಿಂಗ್ಸ್ ತಂಡವು ಮಂಗಳವಾರ ನಡೆಯುವ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ಸತತವಾಗಿ ವಿಫಲರಾಗಿರುವ ನಾಯಕ ರಿಯಾನ್ ಪರಾಗ್ ಲಯಕ್ಕೆ ಮರಳಿ ಪ್ರಬಲ ಎದುರಾಳಿಗೆ ಸವಾಲೊಡ್ಡಲು ಸ್ಫೂರ್ತಿ ತುಂಬಬೇಕಾಗಿದೆ.

ಹೋದ ವರ್ಷ ಪಂಜಾಬ್ ಕಿಂಗ್ಸ್‌ನಲ್ಲಿ ಶ್ರೇಯಸ್ ಅಯ್ಯರ್–ಕೋಚ್ ರಿಕಿ ಪಾಂಟಿಂಗ್ ಯುಗ ಆರಂಭವಾದ ನಂತರ ಈ ತಂಡ ಸ್ಥಿರ ಪ್ರದರ್ಶನ ನೀಡುತ್ತಾ ಬಂದಿದೆ.

ಮೊತ್ತ ಬೆನ್ನಟ್ಟುವಲ್ಲಿ ಸ್ಥಿರತೆ ಸಾಧಿಸುತ್ತಿದ್ದ ವಿರಾಟ್ ಕೊಹ್ಲಿ ಅವರಿಗೆ 'ಚೇಸ್ ಮಾಸ್ಟರ್' ಎಂಬ ಖ್ಯಾತಿ ಇದೆ. ಈಗ ಶ್ರೇಯಸ್ ಅಯ್ಯರ್ ಸಹ ಅದೇ ಹಾದಿಯಲ್ಲಿದ್ದಾರೆ. ನಾಯಕ ಮತ್ತು ಬ್ಯಾಟರ್ ಆಗಿ ಅವರು ಒತ್ತಡದ ಸನ್ನಿವೇಶದಲ್ಲೂ ಸಂಯಮ ವಹಿಸಿ ಆಡುತ್ತಿರುವುದು ತಂಡದ ಬಲ ಹೆಚ್ಚಿಸಿದೆ. ಪಂಜಾಬ್ ಕಿಂಗ್ಸ್ ಈ ಋತುವಿನ ಐಪಿಎಲ್‌ನಲ್ಲಿ ಏಕೈಕ ಅಜೇಯ ತಂಡವಾಗಿದೆ.

ಅಯ್ಯರ್ ತಂಡವನ್ನು ಅಮೋಘವಾಗಿ ಮುನ್ನಡೆಸಿದ್ದಾರೆ. ತಂಡವೂ ಸಾಂಘಿಕವಾಗಿ ಪ್ರದರ್ಶನ ನೀಡುತ್ತಿದೆ. ಕಳೆದ ಋತುವಿನಲ್ಲಿ ಅತಿ ಕಡಿಮೆ ಮೊತ್ತ (111) ರಕ್ಷಿಸಿಕೊಂಡರೆ, ಈ ಬಾರಿ ನವದೆಹಲಿಯ ಉರಿಸೆಕೆಯಲ್ಲಿ ಅತಿ ದೊಡ್ಡ ಮೊತ್ತವನ್ನು (265) ಯಶಸ್ವಿಯಾಗಿ ಬೆನ್ನಟ್ಟಿದೆ.

ಏಳು ಪಂದ್ಯಗಳಲ್ಲಿ ಆರರಲ್ಲಿ ತಂಡ ಗೆದ್ದಿದ್ದು, ಒಂದು ಮಳೆಯ ಪಾಲಾಗಿದೆ. ಆರಂಭ ಆಟಗಾರರಾದ ಪ್ರಿಯಾಂಶ್ ಆರ್ಯ ಮತ್ತು ಪ್ರಭಸಿಮ್ರನ್ ಸಿಂಗ್ ಅವರು ಎದುರಾಳಿ ದಾಳಿಯನ್ನು ಪುಡಿಗಟ್ಟುವ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಕೋಟ್ಲಾದ ಪಂದ್ಯದಲ್ಲಿ ಪವರ್‌ಪ್ಲೇ ಅವಧಿಯಲ್ಲೇ 116 ರನ್ ಚಚ್ಚಿದ್ದಾರೆ.

ಬ್ಯಾಟಿಂಗ್ ಪಿಚ್‌ನಲ್ಲಿ ಕಿಂಗ್ಸ್ ಬೌಲರ್‌ಗಳೂ ಸಖತ್ತಾಗಿ ದಂಡಿಸಿಕೊಂಡಿದ್ದರು. ತಂಡ ಈ ಬಾರಿಯ ಋತುವಿನಲ್ಲಿ ಮುಲ್ಲನಪುರದಲ್ಲಿ ಕೊನೆಯ ಪಂದ್ಯ ಆಡುತ್ತಿದೆ. ತಂಡವು ತವರಿನ ಇತರ ಮೂರು ಪಂದ್ಯಗಳನ್ನು ಧರ್ಮಶಾಲಾದಲ್ಲಿ ಆಡಲಿದೆ.

ಹಾಲಿ ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ತಂಡ ಭರ್ಜರಿ ಆರಂಭ ಮಾಡಿತ್ತು. ಆದರೆ ಮಧ್ಯಮ ಹಂತದಲ್ಲಿ ಎಡವುತ್ತಿದೆ. ಹದಿಹರೆಯದ ವೈಭವ್ ಸೂರ್ಯವಂಶಿ ಮೈನವಿರೇಳಿಸುವಂಥ ಇನಿಂಗ್ಸ್ ಆಡಿದ್ದಾರೆ. ಆದರೆ ಹಿಂದಿನ ಕೆಲವು ಪಂದ್ಯಗಳಲ್ಲಿ ತಂಡದಿಂದ ಸ್ಥಿರ ಪ್ರದರ್ಶನ ಮೂಡಿಬಂದಿಲ್ಲ.

ಪರಾಗ್ ಎಂಟು ಪಂದ್ಯಗಳಲ್ಲಿ ಕೇವಲ 88 ರನ್ ಗಳಿಸಿದ್ದಾರೆ. ಸ್ಟ್ರೈಕ್ ರೇಟ್ ಸಹ 113 ದಾಟಿಲ್ಲ. ಹೀಗಾಗಿ ಪ್ರತಿ ಪಂದ್ಯಕ್ಕೆ ಅವರ ಮೇಲಿನ ಒತ್ತಡ ಏರುತ್ತಿದೆ. ಸನ್‌ರೈಸರ್ಸ್ ಹೈದರಾಬಾದ್ ತಂಡವು ಶನಿವಾರ 229 ರನ್‌ಗಳ ಗುರಿ ಆರಾಮವಾಗಿ ಬೆಂಬತ್ತಿತ್ತು. ರಾಯಲ್ಸ್ ತಂಡದ ಫೀಲ್ಡಿಂಗ್ ಸಹ ಸುಧಾರಿಸಬೇಕಾಗಿದೆ.



ವೈಭವ್ ಸೂರ್ಯವಂಶಿ



ಶ್ರೇಯಸ್ ಅಯ್ಯರ್

**ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ**

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಅಂಕ | ಎನ್‌ಆರ್‌ಆರ್ |
|---|---|---|---|---|---|---|
| ಪಿಬಿಕೆಎಸ್ | 7 | 6 | 0 | 1 | 13 | 1.333 |
| ಆರ್‌ಸಿಬಿ | 8 | 6 | 2 | 0 | 12 | 1.919 |
| ಎಸ್‌ಆರ್‌ಎಚ್ | 8 | 5 | 3 | 0 | 10 | 0.815 |
| ಆರ್ ಆರ್ | 8 | 5 | 3 | 0 | 10 | 0.602 |
| ಜಿ ಟಿ | 8 | 4 | 4 | 0 | 8 | - 0.475 |
| ಸಿಎಸ್‌ಕೆ | 8 | 3 | 5 | 0 | 6 | - 0.121 |
| ಡಿ ಸಿ | 8 | 3 | 5 | 0 | 6 | - 1.060 |
| ಕೆಕೆಆರ್ | 8 | 2 | 5 | 1 | 5 | - 0.751 |
| ಎಂ ಐ | 7 | 2 | 5 | 0 | 4 | - 0.736 |
| ಎಲ್‌ಎಸ್‌ಜಿ | 8 | 2 | 6 | 0 | 4 | - 1.106 |

ಆರೆಂಜ್ ಕ್ಯಾಪ್–ಅಭಿಷೇಕ್ ಶರ್ಮಾ, ಎಸ್‌ಆರ್‌ಎಚ್ (380 ರನ್)
ಪರ್ಪಲ್ ಕ್ಯಾಪ್–ಭುವನೇಶ್ವರ್ ಕುಮಾರ್, ಆರ್‌ಸಿಬಿ (14 ವಿಕೆಟ್)

**ಬಲಾಬಲ** ಒಟ್ಟು ಪಂದ್ಯ 30
ರಾಯಲ್ಸ್ ಗೆಲುವು 17
ಪಂಜಾಬ್ ಜಯ 13

**ಇಂದಿನ ಪಂದ್ಯ**
ಪಂಜಾಬ್ ಕಿಂಗ್ಸ್ V/s ರಾಜಸ್ಥಾನ ರಾಯಲ್ಸ್
ತಾಣ: ಮುಲ್ಲನಪುರ, ಪಂದ್ಯ ಆರಂಭ: ರಾತ್ರಿ 7.30
ಲೈವ್
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

# ಭಾರತಕ್ಕೆ ಪ್ರಾಬಲ್ಯ ಸಾಧಿಸುವ ಗುರಿ

## ವಿಶ್ವ ತಂಡ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಇಂದಿನಿಂದ

ಲಂಡನ್ (ಪಿಟಿಐ): ಭಾರತ ಪುರುಷರ ಮತ್ತು ಮಹಿಳೆಯರ ತಂಡಗಳು, ಮಂಗಳವಾರ ಇಲ್ಲಿ ಆರಂಭವಾಗುವ ವಿಶ್ವ ಟೀಮ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಎಂದಿನಂತೆ ಭರವಸೆ ಮತ್ತು ಒತ್ತಡದ ಸಮ್ಮಿಶ್ರಣದೊಡನೆ ಕಣಕ್ಕಿಳಿಯಲಿವೆ.

ಏಳನೇ ಗುಂಪಿನಲ್ಲಿರುವ ಭಾರತ ಪುರುಷರ ತಂಡದಲ್ಲಿ ಮಾನವ್ ಠಕ್ಕರ್ (ವಿಶ್ವ ಕ್ರಮಾಂಕ: 38), ಜಿ.ಸತ್ಯನ್ (42), ಮಾನುಷ್ ಶಾ (51), ಹರ್ಮೀತ್ ದೇಸಾಯಿ (80) ಮತ್ತು ಪಾಯಸ್ ಜೈನ್ (127) ಅವರನ್ನು ಒಳಗೊಂಡಿದೆ. ರ‍್ಯಾಂಕಿಂಗ್ ಗಣನೆಗೆ ತೆಗೆದುಕೊಂಡರೆ, ಗುಂಪಿನ ಇತರ ತಂಡಗಳಾದ ಸ್ಲೊವಾಕಿಯಾ, ಟ್ಯುನೀಷಿಯಾ ಮತ್ತು ಗ್ವಾಟೆಮಾಲಾ ಎದುರು ಭಾರತ ಗೆಲ್ಲುವ ಫೇವರಿಟ್ ಆಗಿದೆ.

ತಂಡಕ್ಕಿರುವ ಹಿನ್ನಡೆ ಎಂದರೆ ಅನುಭವಿ ಆಟಗಾರ ಶರತ್ ಕಮಲ್ ಅವರ ನಿವೃತ್ತಿ. ಒತ್ತಡದ ಸಂದರ್ಭಗಳಲ್ಲಿ ಅವರ ಅನುಭವ ತಂಡದ ಬೆನ್ನಿಗಿರುತಿತ್ತು.

ಯುವ ಉತ್ಸಾಹಿಗಳಿರುವ ಮಹಿಳೆಯರ ತಂಡವು ಆರನೇ ಗುಂಪಿನಲ್ಲಿದ್ದು, ಉಕ್ರೇನ್, ಉಗಾಂಡ ಮತ್ತು ರ‍್ವಾಂಡಾ ಗುಂಪಿನ ಇತರ ತಂಡಗಳಾಗಿವೆ. ಮಣಿಕಾ ಬಾತ್ರ (ವಿಶ್ವ ಕ್ರಮಾಂಕ 49), ಯಶಸ್ವಿನಿ ಘೋರ್ಪಡೆ (88), ದಿಯಾ ಚಿತಳೆ (92), ಸುತೀರ್ಥ ಮುಖರ್ಜಿ (120), ಸಿಂಡರೆಲಾ ದಾಸ್ (175) ಅವರು ತಂಡದಲ್ಲಿದ್ದಾರೆ. 16 ವರ್ಷ ವಯಸ್ಸಿನ ಸಿಂಡ್ರೆಲಾ ತಂಡದ ಕಿರಿಯಾ ಆಟಗಾರ್ತಿ.

ಗುಂಪಿನಲ್ಲಿ ಅಗ್ರಸ್ಥಾನ ಪಡೆದ ತಂಡಗಳು ನೇರವಾಗಿ ಮುಖ್ಯ ಡ್ರಾಕ್ಕೆ ಪ್ರವೇಶಪಡೆಯಲಿವೆ. ಎರಡನೇ ಸ್ಥಾನ ಪಡೆದ ತಂಡಗಳು ಸಂಕೀರ್ಣ ಕ್ವಾಲಿಫಿಕೇಷನ್ ಪ್ರಕ್ರಿಯೆ ಮುಖಾಂತರ (ಪಂದ್ಯ ಅನುಪಾತ) ಅರ್ಹತೆ ಗಳಿಸಬೇಕಾಗುತ್ತದೆ.

ಈ ವರ್ಷ ಈ ಚಾಂಪಿಯನ್‌ಷಿಪ್ ಶತಮಾನೋತ್ಸವ ಕಾಣುತ್ತಿದೆ. ಮೊದಲ ಆವೃತ್ತಿ 1926ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದಿತ್ತು.



ಭಾರತ ತಂಡದಲ್ಲಿರುವ ಕರ್ನಾಟಕದ ಯಶಸ್ವಿನಿ ಘೋರ್ಪಡೆ

ಆಸ್ಟ್ರೇಲಿಯಾ ವಿರುದ್ಧ ಪಾರಮ್ಯ: ಚೀನಾ ವಿರುದ್ಧ ಪಂದ್ಯ ನಾಳೆ

# ಥಾಮಸ್ ಕಪ್: ಕ್ವಾರ್ಟರ್‌ಗೆ ಭಾರತ

ಹಾರ್ಸೆನ್ಸ್, ಡೆನ್ಮಾರ್ಕ್ (ಪಿಟಿಐ): ಅಮೋಘ ಪ್ರದರ್ಶನ ನೀಡಿದ ಭಾರತ ಪುರುಷರ ತಂಡವು ಸೋಮವಾರ 'ಎ' ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು 5-0 ಅಂತರದಿಂದ ಸೋಲಿಸುವ ಮೂಲಕ ಥಾಮಸ್ ಕಪ್ ಫೈನಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿತು.

ಗುಂಪಿನಲ್ಲಿ ಕ್ರಮವಾಗಿ ಮೊದಲೆರಡು ಸ್ಥಾನ ಪಡೆದ ಭಾರತ ಮತ್ತು ಚೀನಾ ತಂಡಗಳು ಎಂಟರ ಘಟ್ಟಕ್ಕೆ ಅರ್ಹತೆ ಪಡೆದವು. 2022ರ ಚಾಂಪಿಯನ್ ಭಾರತ ತಂಡವು 4-1ರಿಂದ ಕೆನಡಾ ತಂಡವನ್ನು ಮಣಿಸಿ ಶುಭಾರಂಭ ಮಾಡಿತ್ತು.

ಚೀನಾ ತಂಡವು 5-0 ಅಂತರದಿಂದ ಆಸ್ಟ್ರೇಲಿಯಾ ತಂಡವನ್ನು ಮಣಿಸಿ ಅಭಿಯಾನ ಆರಂಭಿಸಿತ್ತು. ನಂತರ ಕೆನಡಾ ತಂಡವನ್ನು 4–1ರಿಂದ ಮಣಿಸಿದೆ. ಬುಧವಾರ ತಮ್ಮ ಕೊನೆಯ ಗುಂಪು ಪಂದ್ಯದಲ್ಲಿ ಭಾರತ ಮತ್ತು ಚೀನಾ ಮುಖಾಮುಖಿಯಾಗಲಿದ್ದು, ಗೆದ್ದ ತಂಡವು ಅಗ್ರಸ್ಥಾನಕ್ಕೇರಲಿದೆ.

ಭಾರತದ ಅಗ್ರ ಸಿಂಗಲ್ಸ್ ಆಟಗಾರ, ಒಲಿಂಪಿಯನ್ ಲಕ್ಷ್ಯ ಸೇನ್ 21-14, 21-16 ಅಂತರದಿಂದ ಎಫ್ರೈಮ್ ಸ್ಟೀಫನ್ ಸ್ಯಾಮ್ ಅವರನ್ನು ಸೋಲಿಸಿ ಭಾರತಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು.

ಈಚೆಗೆ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದ ಕನ್ನಡಿಗ ಆಯುಷ್ ಶೆಟ್ಟಿ 21-8, 21-6ರಿಂದ ಶ್ರೇ ಧಂಡ್ ವಿರುದ್ಧ ಸುಲಭ ಗೆಲುವು ಸಾಧಿಸಿ, ಭಾರತದ ಮುನ್ನಡೆಯನ್ನು ದ್ವಿಗುಣಗೊಳಿಸಿದರು.

ಏಷ್ಯನ್ ಗೇಮ್ಸ್ ಚಾಂಪಿಯನ್ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ 21-14, 21-16ರಿಂದ ರಿಜ್ಕಿ ಹಿದಾಯತ್ ಮತ್ತು ಜ್ಯಾಕ್ ಯು ಅವರನ್ನು ಹಿಮ್ಮೆಟ್ಟಿಸಿ, ಮುನ್ನಡೆಯನ್ನು ಮತ್ತಷ್ಟು (3-0) ವಿಸ್ತರಿಸಿದರು.

ಏಷ್ಯನ್ ಕ್ರೀಡಾಕೂಟದ ಕಂಚು ವಿಜೇತ ಎಚ್.ಎಸ್. ಪ್ರಣಯ್ 21-11, 21-17ರಿಂದ ರಿಷಿ ಹೋಂಡಾ ಭೂಪತಿ ವಿರುದ್ಧ ಗೆಲುವು ಸಾಧಿಸಿದರು. ಎರಡನೇ ಡಬಲ್ಸ್ ಪಂದ್ಯದಲ್ಲಿ ಹರಿಹರನ್ ಅಂಶಕರುಣನ್ ಮತ್ತು ಎಂ.ಆರ್.ಅರ್ಜುನ್ ಜೋಡಿಯು 21-12, 21-10ರಿಂದ ಆ್ಯಂಡಿಕಾ ರಾಮಡಿಯನ್ಸ್ಯಾ ಮತ್ತು ಎಫ್ರೈಮ್ ಸ್ಟೀಫನ್ ಸ್ಯಾಮ್ ಅವರನ್ನು ಸೋಲಿಸಿತು. ಇದರೊಂದಿಗೆ ಭಾರತ ಯಾವುದೇ ಪಂದ್ಯವನ್ನು ಕಳೆದುಕೊಳ್ಳದೆ ಕ್ಲೀನ್‌ಸ್ವೀಪ್ ಮಾಡಿತು.



ಭಾರತದ ಲಕ್ಷ್ಯ ಸೇನ್ 'ಎಕ್ಸ್' ಚಿತ್ರ

# ಕೊಡವ ಹಾಕಿ: ಪಳಂಗಂಡ, ನೆಲ್ಲಮಕ್ಕಡಕ್ಕೆ ಜಯ

ನಾಪೋಕ್ಲು (ಕೊಡಗು ಜಿಲ್ಲೆ): ಪಳಂಗಂಡ, ಪೆಮ್ಮಂಡ, ಕುಲ್ಲೇಟಿರ ಹಾಗೂ ನೆಲ್ಲಮಕ್ಕಡ ತಂಡಗಳು ಚೇನಂಡ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಸೋಮವಾರ ಎಂಟರ ಘಟ್ಟಕ್ಕೆ ಲಗ್ಗೆ ಇಟ್ಟವು.

ಇಲ್ಲಿನ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಪ್ರಿಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಪಳಂಗಂಡ 3–0ಯಿಂದ ಪಾಡೆಯಂಡ ವಿರುದ್ಧ, ಪೆಮ್ಮಂಡ 4-3 ರಿಂದ ಪುಲ್ಲಂಗಡ ವಿರುದ್ಧ; ಕುಲ್ಲೇಟಿರ 6–2ರಿಂದ ಸಣ್ಣುವಂಡ ವಿರುದ್ಧ ಹಾಗೂ ನೆಲ್ಲಮಕ್ಕಡ 4–0ಯಿಂದ ಬಿದ್ದಾಟಂಡ ವಿರುದ್ಧ ಜಯ ಗಳಿಸಿದವು.

ಪೆಮ್ಮಂಡ ಮತ್ತು ಪುಲ್ಲಂಗಡ ತಂಡಗಳ ನಡುವೆ ಸ್ಪರ್ಧೆ ರೋಚಕವಾಗಿತ್ತು. ಎರಡೂ ತಂಡಗಳು ನಿಗದಿತ ಅವಧಿಯದಲ್ಲಿ 1–1 ಗೋಲು ಗಳಿಸಿ ಸಮಬಲ ಸಾಧಿಸಿದ್ದವು. ನಂತರ ಟೈ ಬ್ರೇಕರ್‌ನಲ್ಲಿ ಪೆಮ್ಮಂಡ 4–3ರಿಂದ ಪುಲ್ಲಂಗಡ ವಿರುದ್ಧ ಗೆಲುವು ಸಾಧಿಸಿತು.

### ಸಂಕ್ಷಿಪ್ತ ಸುದ್ದಿ

## ಮ್ಯಾರಥಾನ್: ಕೆನ್ಯಾದ ಸಾವೆ ವಿಶ್ವದಾಖಲೆ


ಲಂಡನ್ (ಎಎಫ್‌ಪಿ): ಕೆನ್ಯಾದ ದೂರ ಅಂತರದ ಓಟಗಾರ ಸೆಬಾಸ್ಟಿಯನ್ ಸಾವೆ ಅವರು ಪುರುಷರ ಮ್ಯಾರಥಾನ್ ಸ್ಪರ್ಧೆಯಲ್ಲಿ ಎರಡು ಗಂಟೆಯೊಳಗೆ ಗುರಿ ತಲುಪಿ ವಿಶ್ವದಾಖಲೆ ಬರೆದರು. ಇಥಿಯೋಪಿಯಾದ ಟಿಗ್ಸ್ಟ್ ಅಸೆಫಾ ಅವರು ಮಹಿಳೆಯರ ವಿಭಾಗದಲ್ಲಿ ತಮ್ಮದೇ ವಿಶ್ವದಾಖಲೆಯನ್ನು ಉತ್ತಮಪಡಿಸಿಕೊಂಡರು.

ಹಾಲಿ ಚಾಂಪಿಯನ್ ಸಾವೆ ಅವರು 42.195 ಕಿಲೋ ಮೀಟರ್ ದೂರವನ್ನು 1 ಗಂಟೆ 59 ನಿಮಿಷ 30 ಸೆಕೆಂಡುಗಳಲ್ಲಿ ಕ್ರಮಿಸಿದರು. ಈ ಸ್ಪರ್ಧೆಯಲ್ಲಿ ಎರಡು ಗಂಟೆಗಳಿಗೂ ಮೊದಲು ಗುರಿ ಮುಟ್ಟಿದ ಮೊದಲ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.

ಸ್ಪರ್ಧೆಯಲ್ಲಿ 31 ವರ್ಷದ ಸಾವೆ ಅವರಿಗೆ ಇಥಿಯೋಪಿಯಾದ ಯೋಮಿಫ್ ಕೆಜೆಲ್ಚಾ (1:59:41) ಮತ್ತು ಉಗಾಂಡಾದ ಜೇಕಬ್ ಕಿಪ್ಲೋಮೊ (2:00:28) ಅವರಿಂದ ಪ್ರಬಲ ಪೈಪೋಟಿ ಎದುರಾಯಿತು. ಅವರಿಬ್ಬರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಈ ಮೂವರೂ ಹಿಂದಿನ ವಿಶ್ವದಾಖಲೆಯ ಸಮಯಕ್ಕಿಂತ ಬೇಗ ಗುರಿ ತಲುಪಿದ್ದು ವಿಶೇಷವಾಗಿತ್ತು. 2023ರ ಷಿಕಾಗೊ ಮ್ಯಾರಥಾನ್‌ನಲ್ಲಿ ಕೆನ್ಯಾದ ಕೆಲ್ವಿನ್ ಕಿಪ್ಟಮ್ (2:00:35) ವಿಶ್ವದಾಖಲೆ ನಿರ್ಮಿಸಿದ್ದರು. 24 ವರ್ಷದ ಕೆಲ್ವಿನ್ 2024ರಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಮಹಿಳೆಯರ ಓಟದಲ್ಲಿ ಹಾಲಿ ಒಲಿಂಪಿಕ್ ಅಸೆಫಾ 2 ಗಂಟೆ 15 ನಿಮಿಷ 41 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. 29 ವರ್ಷದ ಓಟಗಾರ್ತಿ 2025ರ ಲಂಡನ್ ಮ್ಯಾರಥಾನ್‌ನಲ್ಲಿ (2:15:50) ವಿಶ್ವದಾಖಲೆ ನಿರ್ಮಿಸಿದ್ದರು.



ಟಿಗ್ಸ್ಟ್ ಅಸೆಫಾ ಎಎಫ್‌ಪಿ ಚಿತ್ರ

## ಮಾಸ್ಟರ್ಸ್ ಟಿ.ಟಿ: ಆಡುತ್ತಿದ್ದಾಗಲೇ ಕುಸಿದು ಸಾವು

ಪುಣೆ (ಪಿಟಿಐ): ಇಲ್ಲಿ ನಡೆಯುತ್ತಿರುವ 32ನೇ ರಾಷ್ಟ್ರೀಯ ಮಾಸ್ಟರ್ಸ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಆಡಲು ಬಂದಿದ್ದ ತಮಿಳುನಾಡಿನ ಆಟಗಾರ ಐ.ಎಂ. ಲೂಯಿಸ್ ರಾಜ್ ಅವರು ಭಾನುವಾರ ಹೃದಯಸ್ತಂಭನದಿಂದಾಗಿ ಕುಸಿದುಬಿದ್ದು ಮೃತಪಟ್ಟರು.

65 ವರ್ಷ ದಾಟಿದ ಪುರುಷರ ಸಿಂಗಲ್ಸ್‌ನಲ್ಲಿ ಸ್ಪರ್ಧಿಸಿದ್ದ ರಾಜ್ ಅವರು ಶ್ರೀ ಶಿವ ಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಪಂದ್ಯ ಆಡುವಾಗ ಈ ಘಟನೆ ನಡೆದಿದೆ. ಘಟನೆಗೆ ಮೊದಲು ಅವರು ಆಂಧ್ರ ಪ್ರದೇಶದ ವಿ.ವಿ.ರಾಮಣ್ಣ ಅವರ ವಿರುದ್ಧ 2–0 ಮುನ್ನಡೆ ಸಾಧಿಸಿದ್ದರು. ಮೂರನೇ ಸೆಟ್‌ನಲ್ಲಿ 5–4 ಮುನ್ನಡೆಯಲ್ಲಿದ್ದರು.

ತಕ್ಷಣವೇ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸದ ಕಾರಣ ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ರಾಜ್ ಅವರು ಮೃತಪಟ್ಟಿರುವುದಾಗಿ ಅಲ್ಲಿನ ವೈದ್ಯರು ಘೋಷಿಸಿದರು.

## ವಿಶ್ವ ರ‍್ಯಾಲಿ: ಮಸ್ಕರೇನಾಸ್–ಗಗನ್ ಜೋಡಿಗೆ 48ನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಜೋಡಿ ಡೀನ್ ಮಸ್ಕರೇನಾಸ್ ಮತ್ತು ಗಗನ್ ಕರುಂಬಯ್ಯ ಅವರು ಸ್ಪೇನ್‌ನ ಕೆನರಿ ದ್ವೀಪದಲ್ಲಿ ನಡೆದ ವಿಶ್ವ ರ‍್ಯಾಲಿ ಚಾಂಪಿಯನ್‌ಷಿಪ್‌ನ ಕ್ಲಾಸ್–3 ಸ್ಪರ್ಧೆಯಲ್ಲಿ ಭಾನುವಾರ 7 ಸ್ಥಾನದೊಂದಿಗೆ ರೇಸ್ ಪೂರ್ಣಗೊಳಿಸಿದರು.

ಮಂಗಳೂರಿನ ಮಸ್ಕರೇನಾಸ್ ಅವರು ಚಾಲಕರಾಗಿ ಹಾಗೂ ಕೊಡಗಿನ ಗಗನ್ ಅವರು ಇದೇ ಮೊದಲ ಬಾರಿಗೆ ವಿಶ್ವ ರ‍್ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿದಿದ್ದರು. ಈ ಜೋಡಿಯು ಯುರೋಪ್ ಮೂಲದ 'ಪಿಎಚ್ ಸ್ಪೋರ್ಟ್ಸ್' ಸಂಸ್ಥೆ ಸಿದ್ಧಪಡಿಸಿದ ಫೋರ್ಡ್ ಫಿಯೆಸ್ಟಾ ರ‍್ಯಾಲಿ–3 ಕಾರನ್ನು ಚಲಾಯಿಸಿತು. ರ‍್ಯಾಲಿಯಲ್ಲಿ ಒಟ್ಟಾರೆ 48ನೇ ಸ್ಥಾನ ಪಡೆಯಿತು.

ಟಿಎಸ್‌ಐ ರೇಸಿಂಗ್‌ನ ಮಸ್ಕರೇನಾಸ್ ಅವರು ನರೇನ್‌ಕುಮಾರ್ ಹಾಗೂ ಗೌರವ್ ಗಿಲ್ ಅವರ ಬಳಿಕ ಈ ಪ್ರತಿಷ್ಠಿತ ರ‍್ಯಾಲಿಯಲ್ಲಿ ಭಾಗವಹಿಸಿದ ಭಾರತದ ಮೂರನೇ ಚಾಲಕ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

# ಹೊಸ ಪಾತ್ರದಲ್ಲಿ ಪಯಣ ಆರಂಭಿಸಿದ ಸಿಂಧು

ಹಾರ್ಸೆನ್ಸ್ (ಡೆನ್ಮಾರ್ಕ್), (ಪಿಟಿಐ): ಸಕ್ರಿಯ ಆಟಗಾರ್ತಿಯಾಗಿರುವ ಪಿ.ವಿ.ಸಿಂಧು ಅವರು ಈಗ ಮತ್ತೊಂದು ಪಾತ್ರವನ್ನೂ ವಹಿಸುತ್ತಿದ್ದಾರೆ. ಈಗ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ನ (ಬಿಡಬ್ಲ್ಯುಎಫ್) ಆಡಳಿತ ಸಮಿತಿ ಸದಸ್ಯೆಯೂ ಆಗಿರುವ ಅವರು 'ವಿಶ್ವದಾದ್ಯಂತ ಶಟ್ಲರ್‌ಗಳ ಧ್ವನಿಗೆ ಪ್ರತಿನಿಧಿಯಾಗುವುದಾಗಿ' ಭರವಸೆ ನೀಡಿದ್ದಾರೆ.



ಒಲಿಂಪಿಕ್ಸ್‌ನಲ್ಲಿ ಎರಡು ಬಾರಿ ಪದಕ ಗೆದ್ದಿರುವ ಸಿಂಧು ಅವರು ಬಿಡಬ್ಲ್ಯುಎಫ್ ಕೌನ್ಸಿಲ್‌ನಲ್ಲಿ ಮತದಾನದ ಹಕ್ಕನ್ನೂ ಹೊಂದಿದ್ದಾರೆ. ಅವರು 2025ರ ಡಿಸೆಂಬರ್‌ನಲ್ಲಿ ಬಿಡಬ್ಲ್ಯುಎಫ್ ಅಥ್ಲೀಟ್ಸ್ ಕಮಿಷನ್‌ನ ಮುಖ್ಯಸ್ಥೆ ಆಗಿ ಆಯ್ಕೆಯಾಗಿದ್ದರು.

ಶನಿವಾರ (ಏಪ್ರಿಲ್ 25) ಅವರು ಬಿಡಬ್ಲ್ಯುಎಫ್‌ನ ವಾರ್ಷಿಕ ಸಭೆಯಲ್ಲಿ ಮೊದಲ ಬಾರಿ ಭಾಗವಹಿಸುವ ಮೂಲಕ ತಮ್ಮ ಅಧಿಕಾರಾವಧಿಯನ್ನು ಔಪಚಾರಿಕವಾಗಿ ಆರಂಭಿಸಿದರು. ಆಟಗಾರ್ತಿಯೊಬ್ಬರು ಸಕ್ರಿಯವಾಗಿರುವಾಗಲೇ ಆಡಳಿತದಲ್ಲಿ ಭಾಗಿಯಾಗಿರುವ ವಿರಳ ಅವಕಾಶ ಸಿಂಧು ಅವರಿಗೆ ಒಲಿದಿದೆ. ಅವರು ಆಡಳಿತ ಮಂಡಳಿಯಲ್ಲಿ ಆಟಗಾರರ ಅಹವಾಲುಗಳಿಗೆ ಧ್ವನಿಯಾಗುವ ಜೊತೆಗೆ ಮತಾಧಿಕಾರದ ಹಕ್ಕನ್ನೂ ಹೊಂದಿದ್ದಾರೆ.

# ಚೆಸ್: ಆದ್ಯ, ಶ್ರೇಯಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ಆದ್ಯ ಗೌಡ, ಶ್ರೇಯಾ ರಾಜೇಶ್ ಅವರು ಭಾನುವಾರ ಇಲ್ಲಿ ಮುಕ್ತಾಯಗೊಂಡ ಕರ್ನಾಟಕ ರಾಜ್ಯ 13 ವರ್ಷದೊಳಗಿನವರ ಚೆಸ್ ಟೂರ್ನಿಯ ಮುಕ್ತ ಹಾಗೂ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆದರು.

'ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ'ಯು ಮೈಸೂರು ಚೆಸ್ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ಟೂರ್ನಿಯಲ್ಲಿ ನಡೆದ 9 ಸುತ್ತುಗಳಲ್ಲಿ ಪಾರಮ್ಯ ಮೆರೆದ ಈ ಇಬ್ಬರೂ ಆಟಗಾರ್ತಿಯರು ಕ್ರಮವಾಗಿ 8 ಮತ್ತು 7.5 ಅಂಕ ಗಳಿಸಿ ಟ್ರೋಫಿಗೆ ಮುತ್ತಿಟ್ಟರು.

ಮುಕ್ತ ವಿಭಾಗದಲ್ಲಿ ಸ್ಪರ್ಧಿಸಿದ್ದ 260 ಆಟಗಾರರನ್ನು ಹಿಂದಿಕ್ಕಿದ ಆದ್ಯ ಗೌಡ, ಸಮೀಪದ ಸ್ಪರ್ಧಿ ಇಶಾನ್ ಬನ್ಸಾಲಿ ಅವರಿಗಿಂತ ಅರ್ಧ ಅಂಕ ಹೆಚ್ಚು ಪಡೆದರು. ಬೆಂಗಳೂರಿನವರೇ ಆದ ಇಶಾನ್ (7.5) ರನ್ನರ್‌ಅಪ್ ಆದರು.

ಬಾಲಕಿಯರ ವಿಭಾಗದ ಸ್ಪರ್ಧೆಯಲ್ಲಿ ಇಂದೂ ಶೀತಲ್ ಅವರನ್ನು ಟೈಬ್ರೇಕರ್‌ನಲ್ಲಿ ಸೋಲಿಸಿದ ಬೆಂಗಳೂರು ನಗರದ ಶ್ರೇಯಾ ರಾಜೇಶ್ ಚಾಂಪಿಯನ್ ಆದರು. ಇಬ್ಬರೂ 9 ಸುತ್ತುಗಳಿಂದ ತಲಾ 7.5 ಪಾಯಿಂಟ್ ಗಳಿಸಿದ್ದರು.

ಎರಡೂ ವಿಭಾಗದ ನಾಲ್ವರು ವಿಜೇತರಿಗೆ ₹ 1 ಲಕ್ಷ ನಗದು ಬಹುಮಾನ ಹಾಗೂ ಟ್ರೋಫಿ ನೀಡಲಾಯಿತು. ಇವರು ಸೆಪ್ಟೆಂಬರ್‌ನಲ್ಲಿ ಪುದುಚೇರಿಯಲ್ಲಿ ನಡೆಯುವ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.



ರಾಜ್ಯ ಮಟ್ಟದ 13 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ವಿಜೇತರಾದ ಇಶಾನ್ ಭನ್ಸಾಲಿ, ಆದ್ಯಾ ಗೌಡ, ಶ್ರೇಯಾ ರಾಜೇಶ್, ಇಂದೂ ಶೀತಲ್ ಅವರಿಗೆ ಟ್ರೋಫಿ ನೀಡಲಾಯಿತು

# ವೋಲ್ವಾರ್ಟ್ ಆಟಕ್ಕೆ ಒಲಿದ ಜಯ

ಬೆನೋನಿ (ಪಿಟಿಐ): 156 ರನ್‌ಗಳ ಸಾಧಾರಣ ಗುರಿ ಬೆನ್ನಟ್ಟುವಲ್ಲಿ ಭಾರತ ಮಹಿಳೆಯರ ತಂಡ ಮತ್ತೊಮ್ಮೆ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ನಾಯಕಿ ಲಾರಾ ವೋಲ್ವಾರ್ಟ್ ಅವರ ಅಜೇಯ 92 (56ಎ) ರನ್‌ಗಳ ನೆರವಿನಿಂದ ದಕ್ಷಿಣ ಆಫ್ರಿಕಾ 23 ರನ್‌ಗಳ ಭರ್ಜರಿ ಗೆಲುವು ಸಾಧಿಸಿತು. ಇದರೊಂದಿಗೆ ಐದು ಪಂದ್ಯಗಳ ಟಿ20 ಸರಣಿಯನ್ನು ಆತಿಥೇಯ ತಂಡವು 4-1 ಅಂತರದಿಂದ ವಶಪಡಿಸಿಕೊಂಡಿತು.

ಮೊದಲ ಮೂರು ಪಂದ್ಯಗಳನ್ನು ದಕ್ಷಿಣ ಆಫ್ರಿಕಾ ಗೆದ್ದಿತ್ತು. ನಾಲ್ಕನೇ ಪಂದ್ಯವನ್ನು ಆಲ್‌ರೌಂಡರ್ ದೀಪ್ತಿ ಶರ್ಮಾ ಅವರ ಆಟದ ನೆರವಿನಿಂದ ಭಾರತ ಜಯಿಸಿತ್ತು. ಗೆಲುವಿನೊಂದಿಗೆ ಅಭಿಯಾನ ಮುಗಿಸುವ ನಿರೀಕ್ಷೆಯಲ್ಲಿದ್ದ ಹರ್ಮನ್‌ಪ್ರೀತ್ ಕೌರ್ ಪಡೆಗೆ ನಿರಾಸೆಯಾಯಿತು.

ಟಾಸ್ ಗೆದ್ದ ಆತಿಥೇಯ ತಂಡ ಬ್ಯಾಟಿಂಗ್ ಆಯ್ದುಕೊಂಡು, 6 ವಿಕೆಟ್‌ಗೆ 155 ರನ್ ಪೇರಿಸಿತು. ಇದಕ್ಕೆ ಉತ್ತರವಾಗಿ ಭಾರತ 8 ವಿಕೆಟ್‌ಗೆ 132 ರನ್ ಗಳಿಸಿ ಹೋರಾಟ ಮುಗಿಸಿತು.

ತಂಡವು 38 ರನ್ ಗಳಿಸುವಷ್ಟರಲ್ಲಿ ಶಫಾಲಿ ವರ್ಮಾ (4), ಅನುಷ್ಕಾ ಶರ್ಮಾ (17) ಮತ್ತು ಜೆಮಿಮಾ ರಾಡ್ರಿಗಸ್ (1) ಪೆವಿಲಿಯನ್ ಸೇರಿದರು. ಹರ್ಮನ್‌ಪ್ರೀತ್ (22), ಭಾರತಿ ಫುಲ್ಮಾಲಿ (40) ಮತ್ತು ರಿಚಾ ಘೋಷ್ (ಔಟಾಗದೇ 25) ಕೊಂಚ ಹೋರಾಟ ತೋರಿದರೂ ಗೆಲುವಿಗೆ ಸಾಕಾಗಲಿಲ್ಲ.

**ವೋಲ್ವಾರ್ಟ್ ಅಬ್ಬರ:** ದಕ್ಷಿಣ ಆಫ್ರಿಕಾದ ಆರಂಭಿಕ ಜೋಡಿ ವೋಲ್ವಾರ್ಟ್ ಮತ್ತು ಸುನೆ ಲೂಸ್ (23) ಅವರು ಮೊದಲ ವಿಕೆಟ್‌ಗೆ 75 ರನ್ (54ಎ) ಸೇರಿಸಿ ಉತ್ತಮ ಆರಂಭ ಒದಗಿಸಿದರು. ಈ ಜೊತೆಯಾಟವನ್ನು ಶ್ರೀಚರಣಿ ಮುರಿದರು. ಸುನೆ ಅವರನ್ನು ವಿಕೆಟ್ ಕೀಪರ್ ಸ್ಟಂಪ್ ಔಟ್ ಮಾಡಿದರು.

ನಂತರ ಒಂದೆಡೆ ನಿಯಮಿತವಾಗಿ ವಿಕೆಟ್‌ಗಳು ಉರುಳಿದರೆ, ಮತ್ತೊಂದೆಡೆ ವೋಲ್ವಾರ್ಟ್ ಜವಾಬ್ದಾರಿಯುತವಾಗಿ ಆಡಿದರು. ಅವರ ಇನಿಂಗ್ಸ್‌ನಲ್ಲಿ 11 ಬೌಂಡರಿ ಮತ್ತು ಎರಡು ಸಿಕ್ಸರ್‌ಗಳಿದ್ದವು. ಕೇವಲ ಎಂಟು ರನ್‌ಗಳಿಂದ ಶತಕ ವಂಚಿತರಾದರು. ಅಮೋಘ ಲಯದಲ್ಲಿರುವ ಅವರು ಈ ಸರಣಿಯಲ್ಲಿ ಒಂದು ಶತಕ ಮತ್ತು ಮೂರು ಅರ್ಧಶತಕ ಸೇರಿದಂತೆ 330 ರನ್ ಪೇರಿಸಿದ್ದಾರೆ.

ಅವರು ಪಂದ್ಯದ ಮತ್ತು ಸರಣಿಯ ಆಟಗಾರ್ತಿ ಗೌರವಕ್ಕೂ ಪಾತ್ರರಾದರು.



ಲಾರಾ ವೋಲ್ವಾರ್ಟ್ 'ಎಕ್ಸ್' ಚಿತ್ರ